ಮಂಗಳೂರು ಶನಿವಾರ, 30 ಮೇ 2026 ಸಂಪುಟ 48, ಸಂಚಿಕೆ 72, ಪುಟಗಳು 12+6 hosadigantha.com ₹5
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಈ ಬಾರಿ ಮುಂಗಾರು ದುರ್ಬಲ: ಐಎಂಡಿ
• ಪುಟ ೨



ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶುಕ್ರವಾರ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿರುವ ಶ್ರೀ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ರವಿಶಂಕರ್ ಗುರೂಜಿ ಜತೆಯಲ್ಲಿದ್ದರು.

ಕಿರುಸುದ್ದಿ

ಭೀಮಾ ತೀರದಲ್ಲಿ 6 ಜನರ ಭೀಕರ ಹತ್ಯೆ
• ಪುಟ ೫

ನೀಟ್ ಪರೀಕ್ಷೆ: ಮೋದಿ ಖುದ್ದು ಮೇಲ್ವಿಚಾರಣೆ
• ಪುಟ ೨

ಮದುವೆಯಾಗುವುದೇಕೆ? ವಧು ಅವಮಾನಿಸುವುದೇಕೆ?
• ಪುಟ ೨

ಹೈಕೋರ್ಟ್‌ಗಳಲ್ಲಿ ತೀರ್ಪು ವಿಳಂಬಕ್ಕೆ ಸುಪ್ರೀಂಕೋರ್ಟ್ ಬ್ರೇಕ್
• ಪುಟ ೨

ಇಂದು ಸಂಜೆ 4 ಗಂಟೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ
ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪಿಸಲಿರುವ ಸಿದ್ದರಾಮಯ್ಯ

ಡಿಕೆಶಿಗೆ ಇಂದು ಪಟ್ಟ

• **ಬೆಂಗಳೂರು:** ರಾಜ್ಯ ರಾಜಕೀಯ ಬೆಳವಣಿಗೆ ಅಂತಿಮ ಹಂತ ತಲುಪಿದ್ದು, ಶನಿವಾರ(ಮೇ 30) ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆಗಾಗಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗುವುದು ಖಚಿತವಾಗಿದ್ದು, ಸಿದ್ದರಾಮಯ್ಯ ಅವರ ಮುಖಾಂತರವೇ ಶಿವಕುಮಾರ್ ಹೆಸರು ಪ್ರಸ್ತಾಪಿಸಿ ಅನುಮೋದನೆ ಪಡೆಯಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದೆ.

ಹೊಸದಿಲ್ಲಿಗೆ ತೆರಳಿರುವ ಸಿದ್ದರಾಮಯ್ಯ ಶುಕ್ರವಾರವೇ ಬೆಂಗಳೂರಿಗೆ ವಾಪಸ್ಸಾಗಿದ್ದು, ಡಿ.ಕೆ. ಶಿವಕುಮಾರ್ ಇಂದು (ಶನಿವಾರ) ದಿಲ್ಲಿಯಿಂದ ಮರಳಿದ ಬಳಿಕ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ನಿಗದಿಪಡಿಸಲಾಗಿದೆ. ಶನಿವಾರ ಸಂಜೆ ನಾಲ್ಕು ಗಂಟೆಗೆ ಸಭೆ ನಡೆಯಲಿದ್ದು, ಸದ್ಯ ದಿಲ್ಲಿಗೆ ಹೋಗಿರುವ ಹಾಗೂ ಮತಕ್ಷೇತ್ರದಲ್ಲಿರುವ ಶಾಸಕರಿಗೆ ಬೆಂಗಳೂರಿನಲ್ಲಿರುವಂತೆಯೇ ಸೂಚಿಸಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಅಲ್ಲಮಪ್ರಭು ಪಾಟೀಲ್ ತಿಳಿಸಿದ್ದಾರೆ.

ಸಿಎಲ್‌ಪಿ ಸಭೆಯಲ್ಲಿ ಎಐಸಿಸಿ ವೀಕ್ಷಕರಾಗಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗಿಯಾಗಲಿದ್ದಾರೆ. ಈ ಶಾಸಕಾಂಗ ಸಭೆಯಲ್ಲಿ ಧನ್ಯವಾದ ಭಾಷಣದ ಬಳಿಕ ಸಿದ್ದರಾಮಯ್ಯ ಈ ನೂತನ ನಾಯಕನ ಹೆಸರು ಸೂಚಿಸಲಿದ್ದು, ಶಾಸಕರ ಅನುಮೋದನೆ ಪಡೆದು ಶಿಷ್ಟಾಚಾರದ ಪ್ರಕಾರ ಒಗ್ಗಟ್ಟಿನಿಂದ ನೂತನ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ➡ಪುಟ ೪

ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ

ವೈಯಕ್ತಿಕ ಕಾರಣದಿಂದ ಮಧ್ಯಪ್ರದೇಶಕ್ಕೆ ತೆರಳಿದ್ದ ರಾಜ್ಯಪಾಲ ಗೆಹಲೋತ್ ಅವರು ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ನೀಡಿದ್ದ ರಾಜೀನಾಮೆ ಅಂಗೀಕರಿಸಿದ್ದಾರೆ. ➡ಪುಟ ೪



ಸೋನಿಯಾ ಗಾಂಧಿಯ ದಿಲ್ಲಿ ನಿವಾಸದಲ್ಲಿ ಶುಕ್ರವಾರ ರಾಹುಲ್‌ರನ್ನು ಭೇಟಿಯಾದ ಡಿ.ಕೆ.ಶಿವಕುಮಾರ್.

> ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ, ಪ್ರಭಾವಶಾಲಿ ಹಾಗೂ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಜನಮಾನಸದಲ್ಲಿ ನೆಲೆಸಿರುವ ಸಿದ್ದರಾಮಯ್ಯನವರು ರಾಜಕಾರಣದ ಧೀಮಂತ ನಾಯಕ.
> ■ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸಿದ್ದರಾಮಯ್ಯ-ರಾಹುಲ್ ಆಲಿಂಗನ

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಭೇಟಿಯ ವೇಳೆ ಸಿದ್ದರಾಮಯ್ಯ ಅವರು ಅತ್ಯಂತ ಭಾವನಾತ್ಮಕವಾಗಿ ಆಲಿಂಗನ ಮಾಡಿದ ಪ್ರಸಂಗವೂ ನಡೆಯಿತು. ಸೋನಿಯಾ ಅವರ ನಿವಾಸದಲ್ಲಿಯೇ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಿದ್ದರಾಮಯ್ಯ ಅವರು, ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅಲ್ಲದೇ ರಾಹುಲ್ ಗಾಂಧಿ ಕೂಡಾ ಮುಂದಿನ ದಿನಗಳಲ್ಲಿ ಪಕ್ಷ ನಿಮ್ಮನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತದೆ ಎಂಬ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ➡ಪುಟ ೪

ಸಿದ್ದರಾಮಯ್ಯ ಜತೆ ಡಿ.ಕೆ.ಶಿವಕುಮಾರ್ ಊಟ

ದಿಲ್ಲಿ ಖಾಸಗಿ ಹೊಟೇಲ್‌ನಲ್ಲಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ ಡಿ.ಕೆ.ಶಿವಕುಮಾರ್, ಅವರೊಂದಿಗೆ ಊಟ ಸವಿದಿದ್ದಾರೆ. ಜತೆಗೆ ಯತೀಂದ್ರ, ಕೆ.ಎಚ್. ಮುನಿಯಪ್ಪ ಸಹ ಉಪಸ್ಥಿತರಿದ್ದು, ಈ ವೇಳೆ ಮಹತ್ವದ ವಿಷಯಗಳು ಚರ್ಚೆಯಾಗಿವೆ ಎನ್ನಲಾಗಿದೆ.

ಪದಗ್ರಹಣಕ್ಕೆ ಭದ್ರತೆ ಬಿಗಿ

ರಾಜ್ಯದ ನೂತನ ಸಿಎಂ ಪ್ರಮಾಣವಚನ ಸ್ವೀಕಾರ ಸಮಾರಂಭದ ಹಿನ್ನಲೆ ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಮಹತ್ವದ ಸಭೆ ನಡೆದಿದೆ. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಜಂಟಿ ಆಯುಕ್ತರು, ಡಿಸಿಪಿಗಳು ಭಾಗಿಯಾಗಿದ್ದು, ಸಮಾರಂಭಕ್ಕೆ ಬಿಗಿ ಭದ್ರತೆ ಒದಗಿಸಲು ಸಕಲ ಸಿದ್ಧತೆ ಕೈಗೊಂಡಿದ್ದಾರೆ.

ಯುವಜನರ ಆತಂಕಗಳ ಬಗ್ಗೆ ಕೇಂದ್ರ ಕಾಳಜಿ

ನೀಟ್ ಪರೀಕ್ಷೆ: ಮೋದಿ ಖುದ್ದು ಮೇಲ್ವಿಚಾರಣೆ

• ಹೊಸದಿಲ್ಲಿ: ಕೇಂದ್ರ ಸರ್ಕಾರ ಯುವಜನರ ಆತಂಕಗಳ ಬಗ್ಗೆ ಗಂಭೀರವಾಗಿ ಕಾಳಜಿ ವಹಿಸುತ್ತಿದೆ. ಯಾವುದೇ ಲೋಪವಾಗದಂತೆ ನೋಡಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ವೈಯಕ್ತಿಕವಾಗಿ ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಕೇಂದ್ರ ಪರವಾಗಿ ಹಾಜರಾದ ಸಾಲಿಸಿಟರಿ ಜನರಲ್ ತುಷಾರ್ ಮೆಹ್ತಾ ಸುಪ್ರೀಂ ಕೋರ್ಟ್ ಪೀಠಕ್ಕೆ ತಿಳಿಸಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರನ್ನೊಳಗೊಂಡ ಪೀಠ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದೆ. ಇದೇವೇಳೆ ನಾವು ನಮ್ಮ ಯುವಕರನ್ನು ನಿರಾಶೆಗೊಳಿಸಬಾರದು. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಅವರ ಕುಟುಂಬಗಳ ಮೇಲೂ ಇದು ನಕರಾತ್ಮಕವಾಗಿ ಪರಿಣಮಿಸುತ್ತದೆ ಎಂದು ಪೀಠ ಕಳವಳ ವ್ಯಕ್ತಪಡಿಸಿದೆ. ಇದಕ್ಕೆ ಕೇಂದ್ರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಯುವಜನರ ಕಾಳಜಿಯ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವೈಯಕ್ತಿಕವಾಗಿ ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಅಂತೆಯೇ ಜೂ.21ಕ್ಕೆ ನಿಗದಿಪಡಿಸಲಾದ ನೀಟ್-ಯುಜಿ ಮರು ಪರೀಕ್ಷೆಗೆ ಕೆಲವು ಹೊಸ ಕಾರ್ಯವಿಧಾನಗಳನ್ನು ಜಾರಿಗೆ ತರಲಾಗಿದೆ ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

ಪುನರಾವರ್ತಿತ ಲೋಪ ಸಲ್ಲ: ವಿಚಾರಣೆ ವೇಳೆ ಪೀಠವು ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣವಾದ ಲೋಪಗಳ ಹೊಣೆಗಾರಿಕೆಯನ್ನು ಪ್ರಶ್ನಿಸಿದ್ದು, ಉನ್ನತ ಮಟ್ಟದ ಸಮಿತಿ ಇದ್ದರೂ ಈ ರೀತಿ ಅವ್ಯವಸ್ಥೆ ಸಂಭವಿಸಿದೆ ಎಂದರೆ ಮೂಲ ಶಿಫಾರಸ್ಸಿನಲ್ಲೇ ಏನೋ ತಪ್ಪಿದೆ ಎಂದೇ ಅರ್ಥ ಎಂದು ಹೇಳಿದೆ. ಅಂತೆಯೇ ದೊಡ್ಡ ಪ್ರಮಾಣದ ಪರೀಕ್ಷೆಗಳನ್ನು ನಡೆಸುವಲ್ಲಿ ಪುನರಾವರ್ತಿತ ವೈಫಲ್ಯಗಳಿಗಾಗಿ ನ್ಯಾಯಾಲಯವು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿತು. ಇದರಲ್ಲಿ ಭಾಗಿಯಾಗಿರುವ ಯಾವುದೇ ಅಧಿಕಾರಿಗಳು ಅಥವಾ ಮಧ್ಯವರ್ತಿಗಳು ಸೇರಿದಂತೆ ತಪ್ಪಿತಸ್ಥರೆಂದು ಕಂಡುಬಂದವರನ್ನು ಬಿಡಬಾರದು ಎಂದು ಪೀಠ ಸೂಚಿಸಿದೆ.

ಟಿಇಟಿಯಲ್ಲಿ ಉತ್ತೀರ್ಣಕ್ಕೆ ಅವಧಿ ವಿಸ್ತರಿಸಿದ ಕೋರ್ಟ್

ಸೇವೆಯಲ್ಲಿರುವ ಶಿಕ್ಷಕರಿಗೆ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ(ಟಿಇಟಿ) ಉತ್ತೀರ್ಣರಾಗುವುದು ಕಡ್ಡಾಯವಾಗಿದೆ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ. ಸೇವೆಯಲ್ಲಿ ಉಳಿಯಲು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು 2028 ಆಗಸ್ಟ್ 31ವರೆಗೆ ಸಮಯವನ್ನು ವಿಸ್ತರಿಸಿದೆ. ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ಮನಮೋಹನ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು ಅಂಜುಮಾನ್ ಇಶಾತ್-ಎ-ತಲೀಮ್ ಟ್ರಸ್ಟ್ ಪ್ರಕರಣದಲ್ಲಿ ನ್ಯಾಯಾಲಯದ ಹಿಂದಿನ ತೀರ್ಪನ್ನು ಪ್ರಶ್ನಿಸಿ ಹಲವಾರು ರಾಜ್ಯ ಸರ್ಕಾರಗಳು, ಶಿಕ್ಷಕರ ಸಂಘಗಳು ಮತ್ತು ವೈಯಕ್ತಿಕ ಶಿಕ್ಷಕರು ಸಲ್ಲಿಸಿದ್ದ 65ಕ್ಕೂ ಹೆಚ್ಚು ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಿದೆ.

ದುರ್ಗಾ ಮಂದಿರದ ಮೇಲೆ ಧ್ವಜಾರೋಹಣ



• ಅಯೋಧ್ಯೆ: ಸರಿಯೂ ನದಿಯ ನೀರು ಕರಸೇವಕರ ರಕ್ತದಿಂದ ಕೆಂಪಾಗಿದೆ. ಸಾವಿರಾರು ತಾಯಂದಿರು ತಮ್ಮ ಲಕ್ಷಾಂತರ ಮಕ್ಕಳನ್ನು ರಾಮ ಜನ್ಮಭೂಮಿ ಆಂದೋಲನದಲ್ಲಿ ಸಮರ್ಪಣೆ ಮಾಡಿದ್ದರ ಫಲವಾಗಿ ಇಂದು ಭವ್ಯ ಮಂದಿರ ನಿರ್ಮಾಣವಾಗಿದೆ ಎಂದು ಸಾಧ್ವಿ ರಿತಂಬರ ಹೇಳಿದ್ದಾರೆ.

ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿರುವ ದುರ್ಗಾ ಮಂದಿರದ ಮೇಲೆ ಶುಕ್ರವಾರ ಸಂಜೆ ಸಾಧ್ವಿ ನಿರಂಜನ ಜ್ಯೋತಿ ಹಾಗೂ ಸಾಧ್ವಿ ರಿತಂಬರಾ ಧ್ವಜಾರೋಹಣ ನೆರವೇರಿಸಿದ್ದಾರೆ.

ಈ ವೇಳೆ ಮಾತನಾಡಿದ ಸಾಧ್ವಿ ರಿತಂಬರಾ ಅವರು, ನಾವು ನದಿ,ಗೋವು, ಪರಿಸರವನ್ನು ತಾಯಿ ಎಂದು ಕರೆಯುತ್ತೇವೆ ಅದಕ್ಕೆ ಗೌರವ ಕೊಡುವುದನ್ನು ಕಲಿಯಬೇಕು. ದೇಶದಲ್ಲಿ ಗೋವು ಹತ್ಯೆ ನಿಲ್ಲಬೇಕು ಹಾಗೂ ಲವ್ ಜೆಹಾದ್ ನಂತಹ ಕೃತ್ಯಗಳಿಗೆ ಕಡಿವಾಣ ಹಾಕಬೇಕು ಎಂದರು.

ತಮ್ಮ ಭಾಷಣದುದ್ದಕ್ಕೂ ಶ್ರೀ ರಾಮ ಜನ್ಮಭೂಮಿ ಆಂದೋಲನದಲ್ಲಿ ಮಹತ್ತರ ಪಾತ್ರ ವಹಿಸಿದ ಅಶೋಕ್ ಸಿಂಘಲ್, ಪರಮಹಂಸ ಮಹಾರಾಜ್, ಯುಗಪುರುಷ ಮಹಾರಾಜ್ ಹೀಗೆ ಅನೇಕರ ಹೆಸರನ್ನು ಪ್ರಸ್ತಾಪಿಸಿದ ಸಾಧ್ವಿ ನಿರಂಜನ ಜ್ಯೋತಿ ನಾನು ಇಲ್ಲಿ ಸಾಮಾನ್ಯ ಹಿಂದೂ ಕಾರ್ಯಕರ್ತೆಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದರು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂಪತರಾಯ್, ಟ್ರಸ್ಟಿಗಳಾದ ಅನಿಲ ಮಿಶ್ರಾ, ಕೃಷ್ಣ ಮೋಹನ್ ,ಮಹಂತ ದಿನೇಂದ್ರ ದಾಸ ಮಹಾರಾಜ್, ಗೋಪಾಲ ಜಿ, ಹಾಗೂ ದುರ್ಗಾವಾಹಿನಿಯ ಕಾರ್ಯಕರ್ತೆಯರು ಸೇರಿದಂತೆ 4000 ಕ್ಕೂ ಮಹಿಳೆಯರು ಈ ಕಾರ್ಯಕ್ರಮ ಉಪಸ್ಥಿತರಿದ್ದರು.

ಅಯ್ಯೋ ಅಬ್ರಹಾಂ ಒಪ್ಪಂದ

ಸುದ್ದಿ ಸಮಗ್ರ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಮಧ್ಯಪ್ರಾಚ್ಯ ರಾಜತಾಂತ್ರಿಕತೆಯನ್ನು ಚುರುಕುಗೊಳಿಸುವ ಪ್ರಯತ್ನ ಆರಂಭಿಸಿದ್ದು, ಪಾಕಿಸ್ತಾನ ಸೇರಿದಂತೆ ಹಲವು ಮುಸ್ಲಿಂ ರಾಷ್ಟ್ರಗಳು ಅಬ್ರಹಾಂ ಒಪ್ಪಂದಕ್ಕೆ ಸೇರ್ಪಡೆಯಾಗಬೇಕೆಂದು ಕರೆ ನೀಡಿದ್ದಾರೆ. ಆದರೆ ಈ ಪ್ರಸ್ತಾಪ ಪಾಕಿಸ್ತಾನವನ್ನು ಅಪರೂಪದ ರಾಜತಾಂತ್ರಿಕ ದ್ವಂದ್ವಕ್ಕೆ ತಳ್ಳಿದೆ. ಕಾರಣ, ಇಸ್ರೇಲ್ ಜತೆಗೆ ಸಂಬಂಧ ಸಾಮಾನ್ಯೀಕರಿಸುವ ಯಾವುದೇ ನಿರ್ಧಾರವು ಕೇವಲ ವಿದೇಶಾಂಗ ನೀತಿಗೆ ಸೀಮಿತವಾಗದೇ ದೇಶದ ಪಾಸ್‌ಪೋರ್ಟ್, ಕಾನೂನು ಮತ್ತು ಸಾಂಪ್ರದಾಯಿಕ ರಾಜಕೀಯ ನಿಲುವಿನ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ.





ಅಬ್ರಹಾಂ ಒಪ್ಪಂದ ಎಂದರೇನು?

2020ರಲ್ಲಿ ಅಮೆರಿಕದ ಮಧ್ಯಸ್ಥಿಕೆಯಲ್ಲಿ ರೂಪುಗೊಂಡ ಒಪ್ಪಂದಗಳ ಸರಣಿಯೇ ಅಬ್ರಹಾಂ ಒಪ್ಪಂದ. ಇದರ ಉದ್ದೇಶ ಇಸ್ರೇಲ್ ಮತ್ತು ಹಲವು ಅರಬ್ ಅಥವಾ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ, ಆರ್ಥಿಕ ಹಾಗೂ ಭದ್ರತಾ ಸಂಬಂಧಗಳನ್ನು ಸಾಮಾನ್ಯೀಕರಿಸುವುದು. ಈ ಒಪ್ಪಂದಕ್ಕೆ ಯೆಹೂದಿ, ಕ್ರೈಸ್ತ ಮತ್ತು ಇಸ್ಲಾಂಗಳ ಸಾಮಾನ್ಯ ಪೂರ್ವಜ ಎಂದು ಪರಿಗಣಿಸಲ್ಪಡುವ ಅಬ್ರಹಾಂ ಹೆಸರನ್ನು ನೀಡಲಾಗಿದೆ.

ಟ್ರಂಪ್‌ಗೆ ಈಗ ಏಕೆ ಮುಖ್ಯ?

ಇರಾನ್ ಜತೆ ನಡೆಯುತ್ತಿರುವ ಶಾಂತಿ ಮಾತುಕತೆಗಳಿಗೆ ಪೂರಕವಾಗಿ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಸ್ವೀಕಾರಾರ್ಹತೆಯನ್ನು ಹೆಚ್ಚಿಸಲು ಟ್ರಂಪ್ ಪ್ರಯತ್ನಿಸುತ್ತಿದ್ದಾರೆ. ಹೊಸ ದೇಶಗಳು ಅಬ್ರಹಾಂ ಒಪ್ಪಂದಕ್ಕೆ ಸೇರಿದರೆ ಅದು ಪ್ರಾದೇಶಿಕ ಸ್ಥಿರತೆಗೆ ಸಹಕಾರಿ ಎಂದು ಅವರು ವಾದಿಸಿದ್ದಾರೆ. ವಿಶೇಷವಾಗಿ ಸೌದಿ ಅರೇಬಿಯಾ ಸೇರ್ಪಡೆಯಾದರೆ ಅದು ದೊಡ್ಡ ರಾಜತಾಂತ್ರಿಕ ಯಶಸ್ಸಾಗಲಿದೆ ಎಂದು ಅಮೆರಿಕದ ವಲಯಗಳು ಪರಿಗಣಿಸುತ್ತಿವೆ.

ಈ ಒಪ್ಪಂದದಿಂದ ಏನು ಲಾಭ?

ಅಬ್ರಹಾಂ ಒಪ್ಪಂದದ ಬಳಿಕ ಇಸ್ರೇಲ್ ಮತ್ತು ಸಹಿ ಹಾಕಿದ ರಾಷ್ಟ್ರಗಳ ನಡುವೆ ನೇರ ವಿಮಾನ ಸೇವೆಗಳು ಆರಂಭವಾದವು. ವ್ಯಾಪಾರ ಹಾಗೂ ಹೂಡಿಕೆ ಹೆಚ್ಚಾಯಿತು. ತಂತ್ರಜ್ಞಾನ, ರಕ್ಷಣಾ ಹಾಗೂ ಗುಪ್ತಚರ ಸಹಕಾರ ವಿಸ್ತರಿಸಿತು. ಪ್ರವಾಸೋದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ಸೃಷ್ಟಿಯಾದವು. ಮಧ್ಯಪ್ರಾಚ್ಯದಲ್ಲಿ ಇರಾನ್ ಪ್ರಭಾವಕ್ಕೆ ಪ್ರತಿರೋಧವಾಗಿ ಹೊಸ ಸಹಕಾರದ ವೇದಿಕೆಯೂ ರೂಪುಗೊಂಡಿತು.

ಪಾಕ್ ಪಾಸ್ ಪೋರ್ಟ್ ಬದಲಾಗಬೇಕೇ?

ಪ್ರಸ್ತುತ ಪಾಕಿಸ್ತಾನದ ಪಾಸ್‌ಪೋರ್ಟ್‌ನಲ್ಲಿ ಇಸ್ರೇಲ್ ಹೊರತುಪಡಿಸಿ ವಿಶ್ವದ ಎಲ್ಲ ರಾಷ್ಟ್ರಗಳಿಗೆ ಮಾನ್ಯ ಎಂಬ ಉಲ್ಲೇಖವಿದೆ. ಹೀಗಾಗಿ ಒಂದು ವೇಳೆ ಇಸ್ರೇಲ್‌ಗೆ ಅಧಿಕೃತ ಮಾನ್ಯತೆ ನೀಡಿದರೆ ಈ ನಿರ್ಬಂಧವನ್ನು ತೆಗೆದುಹಾಕುವುದು ಅನಿವಾರ್ಯವಾಗಲಿದೆ. ಪರಿಣಾಮವಾಗಿ ಹೊಸ ಪಾಸ್ ಪೋರ್ಟ್ ಮುದ್ರಣ, ವಲಸೆ ನಿಯಮಗಳ ಪರಿಷ್ಕರಣೆ ಹಾಗೂ ಕೆಲವು ಕಾನೂನು ತಿದ್ದುಪಡಿಗಳ ಅಗತ್ಯವೂ ಎದುರಾಗಬಹುದು.

ಪಾಕಿಸ್ತಾನ ಏಕೆ ವಿರೋಧಿಸುತ್ತಿದೆ?

ಪಾಕಿಸ್ತಾನವು ತನ್ನ ಸ್ಥಾಪನೆಯಿಂದಲೂ ಇಸ್ರೇಲ್ ಅನ್ನು ಅಧಿಕೃತವಾಗಿ ಮಾನ್ಯತೆ ನೀಡಿಲ್ಲ. ಪ್ಯಾಲೆಸ್ತೀನ್‌ಗೆ ಸ್ವತಂತ್ರ ರಾಷ್ಟ್ರದ ಮಾನ್ಯತೆ ದೊರೆಯುವವರೆಗೆ ಇಸ್ರೇಲ್ ಜತೆ ಸಂಬಂಧ ಸ್ಥಾಪಿಸುವ ಪ್ರಶ್ನೆಯೇ ಇಲ್ಲ ಎಂಬುದು ಅದರ ಸಾಂಪ್ರದಾಯಿಕ ನಿಲುವು. ಗಾಜಾ ಯುದ್ಧದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜನಾಭಿಪ್ರಾಯವೂ ಇಸ್ರೇಲ್ ವಿರುದ್ಧ ತೀವ್ರವಾಗಿದೆ. ಹೀಗಾಗಿ ಅಬ್ರಹಾಂ ಒಪ್ಪಂದಕ್ಕೆ ಸೇರ್ಪಡೆಯಾಗುವ ಯಾವುದೇ ನಿರ್ಧಾರ ದೇಶೀಯ ರಾಜಕೀಯವಾಗಿ ದೊಡ್ಡ ಪ್ರತಿಕ್ರಿಯೆ ಹುಟ್ಟುಹಾಕುವ ಸಾಧ್ಯತೆಯಿದೆ.

ಅರಬ್ ಮತ್ತು ಇಸ್ರೇಲ್

1979ರಲ್ಲಿ ಈಜಿಪ್ಟ್ ಹಾಗೂ 1994ರಲ್ಲಿ ಜೋರ್ಡನ್ ಇಸ್ರೇಲ್ ಜತೆ ಶಾಂತಿ ಒಪ್ಪಂದ ಮಾಡಿಕೊಂಡ ಬಳಿಕ, ಅರಬ್ ಜಗತ್ತಿನಲ್ಲಿ ಇಸ್ರೇಲ್ ಜತೆ ಸಂಬಂಧ ಸಾಮಾನ್ಯೀಕರಣದ ಅತಿದೊಡ್ಡ ಹೆಜ್ಜೆಯಾಗಿ ಅಬ್ರಹಾಂ ಒಪ್ಪಂದವನ್ನು ಪರಿಗಣಿಸಲಾಗುತ್ತದೆ. ಮಧ್ಯಪ್ರಾಚ್ಯದ ಭೌರಾಜಕೀಯ ಸಮೀಕರಣಗಳನ್ನು ಬದಲಿಸಿದ ಈ ಒಪ್ಪಂದ ಈಗ ಮತ್ತೊಮ್ಮೆ ಜಾಗತಿಕ ರಾಜತಾಂತ್ರಿಕ ಚರ್ಚೆಯ ಕೇಂದ್ರಬಿಂದುವಾಗಿದೆ.



ಪ್ರಮುಖ ದೇಶಗಳ ನಿಲುವು

ದೇಶ	ಪ್ರಸ್ತುತ ನಿಲುವು
ಯುಎಇ	ಒಪ್ಪಂದಕ್ಕೆ ಸಹಿ
ಬಹ್ರೇನ್	ಒಪ್ಪಂದಕ್ಕೆ ಸಹಿ
ಮೊರಾಕೊ	ಒಪ್ಪಂದಕ್ಕೆ ಸಹಿ
ಸೂಡಾನ್	ಪ್ರಕ್ರಿಯೆಯಲ್ಲಿ, ಪೂರ್ಣ ಜಾರಿಯಾಗಿಲ್ಲ
ಸೌದಿ ಅರೇಬಿಯಾ	ಪ್ಯಾಲೆಸ್ತೀನ್ ಪ್ರಶ್ನೆ ಬಗೆಹರಿದ ಬಳಿಕ ಮಾತ್ರ
ಪಾಕಿಸ್ತಾನ	ಸ್ಪಷ್ಟ ವಿರೋಧ
ಕತಾರ್	ಇನ್ನೂ ನಿರ್ಧಾರವಿಲ್ಲ
ಟರ್ಕಿಯೆ	ಒಪ್ಪಂದಕ್ಕೆ ಸೇರಿಲ್ಲ
ಈಜಿಪ್ಟ್	ಈಗಾಗಲೇ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ
ಜೋರ್ಡನ್	ಈಗಾಗಲೇ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ

ಸೌದಿ ಅರೇಬಿಯಾ ಯಾಕೆ ಇನ್ನೂ ಕಾಯುತ್ತಿದೆ?

ಅಬ್ರಹಾಂ ಒಪ್ಪಂದದ ವಿಸ್ತರಣೆಯಲ್ಲಿ ಸೌದಿ ಅರೇಬಿಯಾವನ್ನು ಕ್ರೌನ್ ಜುವೆಲ್ ಎಂದು ಕರೆಯಲಾಗುತ್ತದೆ. ಆದರೆ ರಿಯಾದ್ ಸ್ಪಷ್ಟವಾಗಿ ಹೇಳಿರುವುದು ಏನೆಂದರೆ, ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆಗೆ ಸ್ಪಷ್ಟ ಮಾರ್ಗಸೂಚಿ ಸಿಗದೆ ಇಸ್ರೇಲ್ ಜತೆ ಪೂರ್ಣ ಪ್ರಮಾಣದ ಸಂಬಂಧ ಸಾಮಾನ್ಯೀಕರಣ ಸಾಧ್ಯವಿಲ್ಲ. 2023ರ ಬಳಿಕ ಗಾಜಾ ಸಂಘರ್ಷ ತೀವ್ರಗೊಂಡಿರುವುದು ಸೌದಿ ನಿಲುವನ್ನು ಇನ್ನಷ್ಟು ಕಠಿಣಗೊಳಿಸಿದೆ.

ಯಾವ ದೇಶಗಳು ಈಗಾಗಲೇ ಸೇರಿವೆ?

2020ರಲ್ಲಿ ಮೊದಲಿಗೆ ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ಮತ್ತು ಬಹ್ರೈನ್ ಇಸ್ರೇಲ್ ಜತೆ ಸಂಬಂಧ ಸಾಮಾನ್ಯೀಕರಣ ಒಪ್ಪಂದಕ್ಕೆ ಸಹಿ ಹಾಕಿದವು. ನಂತರ ಮೊರಾಕೊ ಮತ್ತು ಸೂಡಾನ್ ಸಹ ಪ್ರಕ್ರಿಯೆಯಲ್ಲಿ ಭಾಗಿಯಾದವು. ಇದರಿಂದ ದಶಕಗಳ ಕಾಲ ಇಸ್ರೇಲ್ ವಿರುದ್ಧದ ನಿಲುವು ಹೊಂದಿದ್ದ ಕೆಲವು ಅರಬ್ ರಾಷ್ಟ್ರಗಳು ಹೊಸ ರಾಜತಾಂತ್ರಿಕ ಅಧ್ಯಾಯ ಆರಂಭಿಸಿದವು.

ಕಿರುಸುದ್ದಿ

ಪುಣೆಯಲ್ಲಿ ನಕಲಿ ಮದ್ಯ ಸೇವಿಸಿ 14 ಮಂದಿ ಸಾವು

• ಪುಣೆ: ಮಹಾರಾಷ್ಟ್ರದ ಪುಣೆಯ ಪಿಂಪ್ರಿ ಚಿಂಚ್ ವಾಡ್ ಪ್ರದೇಶದಲ್ಲಿ ನಕಲಿ ಮದ್ಯ ಸೇವನೆಯಿಂದ ಕನಿಷ್ಠ ಪಕ್ಷ 14 ಮಂದಿ ಸಾವಿಗೀಡಾಗಿದ್ದಾರೆ. ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಪೊಲೀಸರು ಈ ಸಂಬಂಧ ಎಂಟು ಮಂದಿಯನ್ನು ಬಂಧಿಸಿದ್ದು, ಇನ್ನಷ್ಟು ಮಂದಿಯ ಬಂಧನವಾಗಲಿದೆ ಎಂದಿದ್ದಾರೆ.

ಪ್ರಕರಣ ಸಂಬಂಧ 8 ಮಂದಿ ಬಂಧನ

ಪಿಂಪ್ರಿ ಚಿಂಚ್‌ವಾಡ್‌ನ ಫುಗೆವಾಡ್ ಪ್ರದೇಶದಲ್ಲಿ 7 ಮಂದಿ ಬಲಿಯಾಗಿದ್ದು, ಹಡಪ್ಸಾರ್‌ನ ಪಂಧಾರೆಮಾಲಾ ಪ್ರದೇಶದಲ್ಲಿ ಐವರು ಮೃತಪಟ್ಟಿದ್ದಾರೆ. ಈ ಸಾವಿಗೆ ನಿಖರ ಕಾರಣ ಏನೆಂಬ ಬಗ್ಗೆ ಪರೀಕ್ಷಾ ವರದಿಗಾಗಿ ಕಾಯಲಾಗುತ್ತಿದ್ದು, ಇಂತಹ ಪಿಡುಗಿನ ಹಿಂದೆ ಇರುವ ಇಡಿ ವ್ಯವಸ್ಥೆಯನ್ನು ಗುರುತಿಸಲಾಗಿದ್ದು, ಇದನ್ನು ಸದೆಬಡಿಯಲಾಗುವುದು ಎಂದು ಘೋಷಿಸಿದ್ದಾರೆ. ಈ ಪ್ರದೇಶಗಳಿಗೆ ಮದ್ಯ ಪೂರೈಕೆದಾರನಾಗಿರುವ ಯೋಗೀಶ್ ವಾಂಖೇಡೆಯನ್ನು ಬಂಧಿಸಲಾಗಿದ್ದು, ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದು ರಾಜ್ಯ ಅಬಕಾರಿ ಆಯುಕ್ತ ಆತುಲ್ ಕನಾಡೆ ತಿಳಿಸಿದರು.

ಎಲ್-ನಿನೋ ಪ್ರಭಾವ ಎದುರಿಸಲು ಸಿದ್ಧ: ಕೇಂದ್ರ

• ಹೊಸದಿಲ್ಲಿ :ಈ ವರ್ಷ ಎಲ್-ನಿನೋ ಪ್ರಭಾವ ಮತ್ತು ಅದರಿಂದ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಹವಾಮಾನ ಇಲಾಖೆಯ ಮುನ್ಸೂಚನೆಯ ಹಿನ್ನೆಲೆಯಲ್ಲಿ , ಇಂತಹ ಯಾವುದೇ ಪ್ರತಿಕೂಲ ಹವಾ ಮಾನ ಪರಿಸ್ಥಿತಿಗಳನ್ನು ಎದುರಿಸಲು ಸಜ್ಜಾಗುವಂತೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ರಾಜ್ಯ ಸರಕಾರಗಳಿಗೆ ಸೂಚಿಸಿದ್ದಾರೆ. ಇಂತಹ ಯಾವುದೇ ಸಂಭವನೀಯತೆಯನ್ನು ಪರಿಹರಿಸುವಲ್ಲಿ ಕೇಂದ್ರ ಕೃಷಿ ಸಚಿವಾಲಯವು ಯೋಜನೆ ಗಳನ್ನು ರೂಪಿಸುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಜೂನ್‌ನಲ್ಲಿ ನೈಋತ್ಯ ಮುಂಗಾರಿನೊಂದಿಗೆ ಪ್ರಾರಂಭವಾಗುವ ಮುಂಬರುವ ಖಾರಿಫ್ ಋತುವಿನಲ್ಲಿ ಬೇಡಿಕೆಯನ್ನು ಪೂರೈಸಲು ಅಗತ್ಯವಿರುವ ಬೀಜಗಳು ಮತ್ತು ರಸಗೊಬ್ಬರಗಳ ಲಭ್ಯತೆ ಸಾಕಷ್ಟಿದೆ ಎಂದು ಅವರು ತಿಳಿಸಿದ್ದಾರೆ. ರಾಷ್ಟ್ರೀಯ ಕೃಷಿ ಸಮ್ಮೇಳನ - ಖಾರಿಫ್ ಅಭಿಯಾನ 2026ರ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಎಲ್-ನಿನೋ ಅಪಾಯದ ಕುರಿತು ಕೇಂದ್ರ ಸರಕಾರ ಸತತ ನಿಗಾ ಇಟ್ಟಿದೆ. ನಮಗೆ ಈಗ ಆ ಬಗ್ಗೆ ಖಚಿತವಿಲ್ಲ. ಆದರೆ ಅಂತಹ ಪರಿಸ್ಥಿತಿ ಉದ್ಭವಿಸಿದರೆ ಈ ಬಾರಿಯ ಮುಂಗಾರಿನಲ್ಲಿ ಮಳೆ ವಿಳಂಬವಾದರೆ ಅದನ್ನು ಎದುರಿಸಲು ನಾವು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಎಲ್- ನಿನೋ ಎಂಬುದು ಪೂರ್ವ ಪೆಸಿಫಿಕ್ ಮಹಾಸಾಗರದಲ್ಲಿ ಮೇಲ್ಮೈ ನೀರಿನ ಅಸಹಜ ತಾಪಮಾನದಿಂದ ಉಂಟಾಗುವ ಹವಾಮಾನ ವೈಪರೀತ್ಯವಾಗಿದ್ದುಫಿ, ಇದು ಜಾಗತಿಕ ಮಟ್ಟದಲ್ಲಿ ಸಹಜ ಹವಾಮಾನಕ್ಕೆ ತೊಡಕುಂಟು ಮಾಡುತ್ತದೆ.ಇದರಿಂದ ಮುಂಗಾರು ದುರ್ಬಲವಾಗಿ ಭಾರತದಂತಹ ದೇಶಗಳಲ್ಲಿ ಬರ ಪರಿಸ್ಥಿತಿಗಳಿಗೆ ಕಾರಣವಾಗಬಹುದು.

ಯಾವುದೇ ಪ್ರತಿಕೂಲ ಪರಿಸ್ಥಿತಿಯನ್ನು ನಿಭಾಯಿಸಲು ಸಚಿವಾಲಯ ಸಂಪೂರ್ಣವಾಗಿ ಸಿದ್ಧವಾಗಿದೆ. ಕಡಿಮೆ ಮಳೆ ಅಥವಾ ಇತರ ಸವಾಲಿನ ಪರಿಸ್ಥಿತಿಗಳಿಗೆ ಜಿಲ್ಲಾ ಮಟ್ಟದಲ್ಲಿ ಸಿದ್ಧರಾಗಿರಲು ರಾಜ್ಯಗಳಿಗೆ ಸೂಚಿಸಲಾಗಿದೆ.ಪ್ರಸ್ತುತ ಸನ್ನಿವೇಶದ ಹಿನ್ನೆಲೆಯಲ್ಲಿ, ಜೂನ್ 1ಕ್ಕೆ ಮುಂಗಾರು ಆರಂಭಕ್ಕೆ ಪರಿಸ್ಥಿತಿಗಳು ಅನುಕೂಲಕರವಾಗಿ ಗೋಚರಿಸುತ್ತಿಲ್ಲಫಿ.ಗಾಳಿ ಪ್ರಬಲವಾಗಿದ್ದರೆ ಈ ಹೊತ್ತಿಗೆ ಇಡೀ ಸಮಭಾಜಕ ಪ್ರದೇಶ ಮತ್ತು ನೈಋತ್ಯ ಕರಾವಳಿಯಲ್ಲಿ ಮಳೆಯಾಗುತ್ತಿತ್ತು. ಆದರೆ ಗಾಳಿ ಈಗ ದುರ್ಬಲವಾಗಿದೆ ಎಂದು ಭವಿಷ್ಯ ನುಡಿದ ಭಾರತೀಯ ಹವಾಮಾನ ಇಲಾಖೆಯ ನವೀಕೃತ ಮುನ್ಸೂಚನೆ ಕುರಿತಂತೆ ಅವರು ಪ್ರತಿಕ್ರಿಯಿಸಿದರು.

ದೇಶದ ಆಹಾರ ಉತ್ಪಾದನೆ ಈಗ 376ಮಿ.ಟ.ಗೆ ಏರಿಕೆ

ದೇಶದ ಆಹಾರ ಉತ್ಪಾದನೆ ಇಂದು 376.56ಮಿ.ಟನ್ ಗೆ ಏರಿದ್ದುಫಿ,ಗೋದಿ , ಮೆಕ್ಕೆ ಜೋಳ, ಧಾನ್ಯಗಳು, ಖಾದ್ಯತೈಲ ಬೀಜಗಳ ಉತ್ಪಾದನೆ ಹೆಚ್ಚಳವಾಗಿದ್ದುಫಿ, ಪ್ರಧಾನಿ ನರೇಂದ್ರ ಮೋದಿ ನಾಯಕತ್ವದ ಕೇಂದ್ರ ಸರಕಾರದ ಯೋಜನೆಗಳಿಂದ ಇದು ಸಾಧ್ಯವಾಗಿದೆ.ಈ ಕ್ಷೇತ್ರದಲ್ಲಿ ಭಾರತ ಇಂದು ಜಾಗತಿಕ ನಾಯಕನಾಗಿ ಮೂಡಿಬಂದಿದೆ ಎಂದರು.ಬಿತ್ತನೆ ಬೀಜ ಒಟ್ಟು 173 ಲಕ್ಷ ಕ್ವಿಂಟಾಲ್‌ಗಳ ಅಗತ್ಯತೆ ಇದ್ದು ಪ್ರಸ್ತುತ 192 ಲಕ್ಷ ಕ್ವಿಂಟಾಲ್‌ಗಳು ಲಭ್ಯವಿದೆ. ರಾಜ್ಯಗಳು ರೈತರಿಗೆ ಸಕಾಲಿಕ ವಿತರಣೆಯನ್ನು ಖಚಿತಪಡಿಸಿಕೊಳ್ಳುವಂತೆ ಕೇಳಲಾಗಿದೆ. ಖಾರಿಫ್ ಋತುವಿನ ಒಟ್ಟು ಬೇಡಿಕೆ 390 ಲಕ್ಷ ಟನ್ ಆಗಿದ್ದು, ರಸಗೊಬ್ಬರಗಳ ದಾಸ್ತಾನು ಪ್ರಸ್ತುತ 200 ಲಕ್ಷ ಟನ್‌ಗಳಷ್ಟಿದೆ ಎಂದರು.

ಭಾರತದ ಬೆಂಬಲ ಉಲ್ಲೇಖಿಸಿದ ಇಸ್ರೇಲ್

• ಹೊಸದಿಲ್ಲಿ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಭಾರತದೊಂದಿಗಿನ ದೃಢವಾದ ದ್ವಿಪಕ್ಷೀಯ ಸಂಬಂಧವನ್ನು ಒತ್ತಿಹೇಳಿದ್ದು, ಭಾರತದಿಂದ ಸಿಗುತ್ತಿರುವ ವ್ಯಾಪಕ ಸಾರ್ವಜನಿಕ ಬೆಂಬಲವನ್ನು ಶ್ಲಾಘಿಸಿದ್ದಾರೆ. ವಿಶ್ವದ ಹಲವು ರಾಷ್ಟ್ರಗಳು ಇಸ್ರೇಲ್ ಅನ್ನು ಕಾನೂನುಬಾಹಿರ ಎಂದು ಬಿಂಬಿಸಲು ಪ್ರಯತ್ನಿಸುತ್ತಿರುವ ವೇಳೆಯಲ್ಲಿ, ಭಾರತದಿಂದ ಇಸ್ರೇಲ್‌ಗೆ ಅನನ್ಯ ಬೆಂಬಲ ಸಿಗುತ್ತಿದೆ. ಜಾಗತಿಕವಾಗಿ ತಮಗೆ ಬೇರೆಲ್ಲಾ ಪ್ರದೇಶಗಳಿಗಿಂತ ಭಾರತದಲ್ಲೇ ಹೆಚ್ಚಿನ ಅನುಯಾಯಿಗಳಿದ್ದಾರೆ ಎಂದು ತಾವು ನಂಬುವುದಾಗಿ ನೆತನ್ಯಾಹು ತಿಳಿಸಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿಯಲ್ಲಿ ಇಸ್ರೇಲ್‌ಗೆ ಕೈಗೊಂಡಿದ್ದ ಅಧಿಕೃತ ಪ್ರವಾಸದ ಬೆನ್ನಲ್ಲೇ ಈ ಹೇಳಿಕೆಗಳು ಹೊರಬಿದ್ದಿವೆ. ಆ ಭೇಟಿಯ ಸಂದರ್ಭದಲ್ಲಿ ಉಭಯ ನಾಯಕರು ಆತ್ಮೀಯ ಸೌಹಾರ್ದತೆ ಪ್ರದರ್ಶಿಸಿದ್ದರು ಮತ್ತು ಪ್ರಧಾನಿ ಮೋದಿಗೆ ಇಸ್ರೇಲ್‌ನ ಅತ್ಯುನ್ನತ ಸಂಸದೀಯ ಗೌರವ 'ಸ್ಪೀಕರ್ ಆಫ್ ದಿ ಕೆನೆಸೆಟ್' ಪದಕವನ್ನು ನೀಡಿ ಗೌರವಿಸಲಾಗಿತ್ತು.



ಫೆಬ್ರವರಿ ಪ್ರವಾಸದ ವೇಳೆ, ನೆತನ್ಯಾಹು ತಮ್ಮ ಪತ್ನಿ ಸಾರಾ ಅವರೊಂದಿಗಿನ ಮೊದಲ ಭೇಟಿಗಳು, ಟೆಲ್ ಅವಿವ್‌ನ ಭಾರತೀಯ ಉಪಹಾರ ಗೃಹವೊಂದರಲ್ಲಿ ನಡೆದಿದ್ದವು, ಎಂಬ ವೈಯಕ್ತಿಕ ನೆನಪನ್ನೂ ಹಂಚಿಕೊಂಡಿದ್ದರು. ಇದೇ ವೇಳೆ ನೆತನ್ಯಾಹು, ಭಾರತದ ಸಾಮಾಜಿಕ ಮಾಧ್ಯಮ ಬಳಕೆದಾರರು ಇಸ್ರೇಲ್ ಪರವಾಗಿ ಸಕ್ರಿಯವಾಗಿ ನಿಂತಿರುವುದನ್ನು ಕೃತಜ್ಞತೆಯಿಂದ ಸ್ಮರಿಸಿದರು.

ನೌಕಾಪಡೆಗೆ 48ನೇ ವೈಸ್‌ಚೀಫ್ ಆಗಿ ಅಜಯ್ ಅಧಿಕಾರ

• ಹೊಸದಿಲ್ಲಿ: ಆಪರೇಷನ್ ಸಿಂದೂರ ವೇಳೆ ಉನ್ನತ ಮಟ್ಟದಲ್ಲಿ ನೌಕಾ ಯುದ್ಧ ಸನ್ನದ್ಧತೆಯನ್ನು ನಿರ್ವಹಿಸಿದ ವೈಸ್ ಅಡ್ಮಿರಲ್ ಅಜಯ್ ಕೊಚ್ಚರ್ ಅವರು ಭಾರತೀಯ ನೌಕಾಪಡೆಯ 48ನೇ ಉಪಮುಖ್ಯಸ್ಥರಾಗಿ ಶುಕ್ರವಾರ ಅಧಿಕಾರ ವಹಿಸಿಕೊಂಡರು. ಈ ಮೂಲಕ ನೌಕಾಪಡೆಯ ಕೇಂದ್ರಕಚೇರಿಗೆ ಮುಂಚೂಣಿ ಅನುಭವದ ಸಂಪತ್ತು ಬಂದಂತಾಗಿರುವುದಾಗಿ ವಿಶ್ಲೇಷಿಸಲಾಗಿದೆ. ನೌಕಾಪಡೆಯ ಸೆಕೆಂಡ್ -ಇನ್ -ಕಮಾಂಡ್ ಆಗಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಅವರು, ಭಾರತದ ಮೊದಲ ಮತ್ತು ಏಕೈಕ ಜಂಟಿ ತ್ರಿ-ಸೇವೆಗಳ ಥಿಯೇಟರ್ ಕಮಾಂಡ್ ಆದ ಅಂಡಮಾನ್ ಮತ್ತು ನಿಕೋಬಾರ್‌ನ(ಎಎನ್‌ಸಿ) ಕಮಾಂಡರ್ -ಇನ್-ಚೀಫ್ ಆಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಅದಕ್ಕೂ ಮುನ್ನ, ಪಶ್ಚಿಮ ನೌಕಾ ಕಮಾಂಡ್‌ನ ಸಿಬ್ಬಂದಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಆಪರೇಷನ್ ಸಿಂದೂರ್‌ನ ವೇಳೆ, ಪಶ್ಚಿಮದ ಕಡಲ ತೀರದಲ್ಲಿ ಎದುರಾದ ಭದ್ರತಾ ಸವಾಲು ಎದುರಿಸುವಲ್ಲಿ, ನೌಕಾ ಪಡೆ ಪ್ರಮುಖ ಯುದ್ಧೋಪಕರಣಗಳನ್ನು ಮುಂಚೂಣಿಯಲ್ಲಿ ನಿಯೋಜಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಸಂವಿಧಾನದ 142ನೇ ವಿಧಿ ಪ್ರಯೋಗಿಸಿದ ಸುಪ್ರೀಂ ಕೋರ್ಟ್

ಹೈಕೋರ್ಟ್‌ಗಳಲ್ಲಿ ತೀರ್ಪು ವಿಳಂಬಕ್ಕೆ ಬ್ರೇಕ್

• ಹೊಸದಿಲ್ಲಿ: ಹೈಕೋರ್ಟ್‌ಗಳಲ್ಲಿ ವಾದ ಮುಗಿದ ಬಳಿಕ ತೀರ್ಪು ಪ್ರಕಟಿಸಲು ಆಗುತ್ತಿರುವ ದೀರ್ಘ ವಿಳಂಬಕ್ಕೆ ಕಡಿವಾಣ ಹಾಕಲು ಸುಪ್ರೀಂ ಕೋರ್ಟ್ ಮಹತ್ವದ ಹೆಜ್ಜೆ ಇಟ್ಟಿದೆ. ಸಂವಿಧಾನದ 142ನೇ ವಿಧಿಯ ವಿಶೇಷ ಅಧಿಕಾರವನ್ನು ಬಳಸಿಕೊಂಡಿರುವ ಸುಪ್ರೀಂ ಕೋರ್ಟ್, ಕಾಯ್ದಿರಿಸಿದ 3 ತಿಂಗಳ ಒಳಗೆ ತೀರ್ಪು ಪ್ರಕಟ ಮಾಡಬೇಕು ಎಂದು ಹೇಳಿದೆ. ನ್ಯಾಯಮೂರ್ತಿಗಳ ಪೀಠವು, 'ನ್ಯಾಯ ವಿಳಂಬವಾದರೆ ಅದು ನ್ಯಾಯ ನಿರಾಕರಣೆಯಂತೆಯೇ' ಎಂದು ಸ್ಪಷ್ಟಪಡಿಸಿದ್ದು, ಕಾಯ್ದಿರಿಸಿದ ತೀರ್ಪುಗಳನ್ನು ಅನಗತ್ಯವಾಗಿ ಬಾಕಿ ಇಡುವುದು ನ್ಯಾಯಾಂಗ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತದೆ ಎಂದು ಕಳವಳ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್ ದೇಶದ ವಿವಿಧ ಹೈಕೋರ್ಟ್‌ಗಳಿಂದ ಮಾಹಿತಿ ಸಂಗ್ರಹಿಸಿ, ನ್ಯಾಯಾಧೀಶರು ತೀರ್ಪು ಕಾಯ್ದಿರಿಸಿದ ಬಳಿಕ ಅದನ್ನು ಪ್ರಕಟಿಸಲು ತೆಗೆದುಕೊಳ್ಳುವ ಸಮಯದ ಕುರಿತು ಪರಿಶೀಲನೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಎಲ್ಲ ಹೈಕೋರ್ಟ್‌ಗಳಿಗೆ ಏಕರೂಪದ ನಿಯಮಗಳನ್ನು ರೂಪಿಸುವ ಅಗತ್ಯವಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಹಾಗೆಯೇ, ಹೈಕೋರ್ಟ್‌ಗಳು ಜಾಮೀನು ಅರ್ಜಿ ಬಗ್ಗೆ ಅಂದೇ ತೀರ್ಪು ನೀಡಬೇಕು, ಒಂದು ವೇಳೆ ತೀರ್ಪು ಕಾಯ್ದಿಟ್ಟರೆ ಮಾರನೇ ದಿನವೇ ಪ್ರಕಟಿಸಬೇಕು ಎಂದಿದೆ. ಒಂದು ವೇಳೆ ಜಾಮೀನು ನೀಡಿದಲ್ಲಿ ಅಂದೇ, ಕೆಳ ಹಂತದ ನ್ಯಾಯಾಲಯಗಳಿಗೆ ಮಾಹಿತಿ ನೀಡಬೇಕು. ಇದರಿಂದಾಗಿ ಜಾಮೀನು ಸಿಕ್ಕವರು ಅಂದೇ ಜೈಲಿನಿಂದ ಬಿಡುಗಡೆಯಾಗುವ ಅವಕಾಶ ಸಿಗುತ್ತದೆ ಎಂದಿದೆ.

ಹೈಕೋರ್ಟ್‌ಗಳು ತೀರ್ಪುಗಳನ್ನು ಪ್ರಕಟಿಸಿದ 24 ಗಂಟೆಗಳಲ್ಲಿ ತಮ್ಮ ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡಬೇಕು ಎಂಬಿತ್ಯಾದಿ ಅಂಶಗಳ ಬಗ್ಗೆಯೂ ಅದು ಸೂಚನೆ ನೀಡಿದೆ. ಹಾಗೆಯೇ, ಈ ಆದೇಶಗಳು ಯಾರೋ ಒಬ್ಬ ನ್ಯಾಯಮೂರ್ತಿ ಅಥವಾ ನ್ಯಾಯ ಸಂಸ್ಥೆಗಳಿಗೆ ಸೂಚಿಸಿ ಹೇಳಿರುವಂಥದ್ದಲ್ಲ ಎಂದು ಸ್ಪಷ್ಟಪಡಿಸಿರುವ ಕೋರ್ಟ್, ತೀರ್ಪು ಪ್ರಕಟಿಸುವಲ್ಲಿ ಆಗುತ್ತಿದ್ದ ದೀರ್ಘಾವಧಿ ವಿಳಂಬದಿಂದಾಗಿ ದೇಶಕ್ಕೇ ಅನ್ವಯವಾಗುವಂತೆ ರಚಿಸಲಾಗಿದೆ ಎಂದು ಹೇಳಿದೆ ಎಂಬುದಾಗಿ ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಹೈಕೋರ್ಟ್‌ಗಳಿಗೆ ಸುಪ್ರೀಂ ಸೂಚನೆ

- ಕಾಯ್ದಿರಿಸಿದ ತೀರ್ಪುಗಳ ಕುರಿತು ನಿಯಮಿತ ಮೇಲ್ವಿಚಾರಣೆ ನಡೆಸಬೇಕು.
- ತೀರ್ಪು ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು ಪಾರದರ್ಶಕವಾಗಿ ನಿರ್ವಹಿಸಬೇಕು.
- ತೀರ್ಪು ಪ್ರಕಟಣೆಗೆ ಅನಗತ್ಯ ವಿಳಂಬವಾಗದಂತೆ ಮುಖ್ಯ ನ್ಯಾಯಮೂರ್ತಿಗಳು ಕ್ರಮ ಕೈಗೊಳ್ಳಬೇಕು.
- ನ್ಯಾಯಾಂಗ ಆಡಳಿತದಲ್ಲಿ ಉತ್ತರದಾಯಿತ್ವ ಹೆಚ್ಚಿಸಲು ವ್ಯವಸ್ಥೆ ರೂಪಿಸಬೇಕು.

ವರದಕ್ಷಿಣೆಗಾಗಿ ಸೊಸೆ ಅವಮಾನಿಸುವುದು ಅಮಾನವೀಯ: ಸುಪ್ರೀಂ

ಮದುವೆ ಏಕೆ? ವಧು ಅವಮಾನಿಸುವುದೇಕೆ?

• ಹೊಸದಿಲ್ಲಿ: ವರದಕ್ಷಿಣೆ ಕಿರುಕುಳ ಮತ್ತು ಸಾವು ಪ್ರಕರಣಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಒಬ್ಬ ಹುಡುಗಿಯನ್ನು ಮದುವೆಯಾಗಿ, ಆಕೆಯನ್ನು ಹಾಗೂ ಆಕೆಯ ಕುಟುಂಬವನ್ನು ಅವಮಾನಿಸುವುದು ಏಕೆ? ಎಂದು ಪ್ರಶ್ನಿಸಿದೆ. ಜತೆಗೆ, ಮದುವೆ ಎನ್ನುವುದು ಪರಸ್ಪರ ಗೌರವ, ವಿಶ್ವಾಸ ಮತ್ತು ಸಹಜೀವನದ ಪವಿತ್ರ ಬಂಧವಾಗಿದ್ದು, ಅದನ್ನು ಹಣ ಮತ್ತು ಆಸ್ತಿಗಾಗಿ ನಡೆಸುವ ವ್ಯವಹಾರವನ್ನಾಗಿ ಪರಿವರ್ತಿಸಿರುವುದು ಸಮಾಜದ ದುರಂತ ಎಂದು ನ್ಯಾಯಾಲಯ ಕಿಡಿಕಾರಿದೆ.

ವರದಕ್ಷಿಣೆ ಸಾವಿನ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿದ ವೇಳೆ ನ್ಯಾಯಮೂರ್ತಿಗಳ ಪೀಠ ಈ ಕಠಿಣ ಅಭಿಪ್ರಾಯ ವ್ಯಕ್ತಪಡಿಸಿದೆ. ಇಂತಹ ಗಂಭೀರ ಪ್ರಕರಣಗಳಲ್ಲಿ ನ್ಯಾಯಾಲಯಗಳು ಜಾಮೀನು ನೀಡುವಾಗ ಅತ್ಯಂತ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ಸಮಾಜದಲ್ಲಿ ತಪ್ಪು ಸಂದೇಶ ಹೋಗುವುದರ ಜತೆಗೆ ಅಪರಾಧಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಾಲಯದ ಪ್ರಕಾರ, ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗು ಮದುವೆಯ ಪಾವಿತ್ರ್ಯವನ್ನಷ್ಟೇ ಹಾಳುಮಾಡುತ್ತಿಲ್ಲ; ಮಹಿಳೆಯರ ಮೇಲೆ ವ್ಯವಸ್ಥಿತ ದೌರ್ಜನ್ಯ ಮತ್ತು ಶೋಷಣೆಯನ್ನೂ ಮುಂದುವರಿಸುತ್ತಿದೆ. ವರದಕ್ಷಿಣೆ ಬೇಡಿಕೆಗಳು ಕ್ರೌರ್ಯಕ್ಕೆ, ಅಂತಿಮವಾಗಿ ಯುವ ವಧುವಿನ ಅಸಹಜ ಸಾವಿಗೆ ಕಾರಣವಾದಾಗ ಅದು ಕೇವಲ ಒಂದು ಕುಟುಂಬದ ಖಾಸಗಿ ಸಮಸ್ಯೆಯಾಗಿ ಉಳಿಯುವುದಿಲ್ಲ. ಅದು ಇಡೀ ಸಮಾಜದ ಆತ್ಮಸಾಕ್ಷಿಗೆ ಸವಾಲಾಗುವ ಗಂಭೀರ ಸಾಮಾಜಿಕ ಅಪರಾಧವಾಗುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿಗಳು, ವಧುವಿನ ಕುಟುಂಬದಿಂದ ಹಣ, ವಾಹನ ಅಥವಾ ಇತರೆ ಆಸ್ತಿ ಪಡೆಯುವ ಉದ್ದೇಶದಿಂದ ಮದುವೆ ಮಾಡಿಕೊಳ್ಳುವುದು ಸಮಾಜದಲ್ಲಿ ಇನ್ನೂ ಮುಂದುವರಿದಿರುವ ಕಳವಳಕಾರಿ ಪ್ರವೃತ್ತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮದುವೆಯ ನಂತರ ಸೊಸೆ ಮತ್ತು ಆಕೆಯ ಕುಟುಂಬವನ್ನು ಹೀನಾಯವಾಗಿ ನಡೆಸಿಕೊಳ್ಳುವುದು ನಾಗರಿಕ ಸಮಾಜಕ್ಕೆ ಶೋಭೆ ತರುವುದಿಲ್ಲ ಎಂದು ಹೇಳಿದರು.

ನ್ಯಾಯಾಲಯವು ವರದಕ್ಷಿಣೆ ಸಾವು ಕೇವಲ ಒಬ್ಬ ಮಹಿಳೆಯ ವಿರುದ್ಧದ ಅಪರಾಧವಲ್ಲ, ಇಡೀ ಸಮಾಜದ ವಿರುದ್ಧದ ಅಪರಾಧ ಎಂದು ಪುನರುಚ್ಚರಿಸಿದೆ. ಇಂತಹ ಪ್ರಕರಣಗಳಲ್ಲಿ ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನ ಅಗತ್ಯವಾಗಿದ್ದು, ನ್ಯಾಯಾಂಗವು ಯಾವುದೇ ರೀತಿಯ ಮೃದು ಧೋರಣೆ ತೋರಬಾರದು ಎಂದು ಸ್ಪಷ್ಟಪಡಿಸಿದೆ.

ಕಿರುಸುದ್ದಿ

ಸರಕಾರಿ ಶಾಲೆಗಳ 20 ಸಾವಿರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ನೀಡಿ ಸ್ವಾಗತ: ಯಶಪಾಲ್ ಸುವರ್ಣ

ಉಡುಪಿ: ಉಡುಪಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಸರಕಾರಿ, ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಯ 20,000 ವಿದ್ಯಾರ್ಥಿಗಳಿಗೆ ಜೂನ್ 1 ಶಾಲಾ ಪುನರಾರಂಭದಂದು ತಮ್ಮ ಪುಷ್ಪಾನಂದ ಫೌಂಡೇಶನ್ ವತಿಯಿಂದ ಸಿಹಿತಿಂಡಿ ನೀಡಿ ಸ್ವಾಗತಿಸುವುದಾಗಿ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ತಿಳಿಸಿದ್ದಾರೆ.



ಪುಷ್ಪಾನಂದ ಫೌಂಡೇಶನ್ ವತಿಯಿಂದ ಜೂನ್ 1 ರಂದು ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 125 ಶಾಲೆಯ 20 ಸಾವಿರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಶಾಲಾ ಪುನರಾರಂಭದ ಅಂಗವಾಗಿ ಉಡುಪಿ ಕ್ಷೇತ್ರದ ವಿವಿಧ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಸ್ವಾಗತಿಸಲಿದ್ದು, ಸ್ಥಳೀಯ ಜನಪ್ರತಿನಿಧಿಗಳು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಶಿಕ್ಷಣ ಪ್ರೇಮಿಗಳು ತಮ್ಮ ವ್ಯಾಪ್ತಿಯ ಶಾಲೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳ ಸಂಭ್ರಮಕ್ಕೆ ಸಾಕ್ಷಿಯಾಗುವಂತೆ ಮನವಿ ಮಾಡಿದ್ದಾರೆ.

ಉಡುಪಿ ಜಿಲ್ಲಾ ಬಿಜೆಪಿಯ ವಿವಿಧ ಪ್ರಕೋಷ್ಠಗಳ ಸಂಚಾಲಕರು, ಸಹ ಸಂಚಾಲಕರ ನಿಯುಕ್ತಿ

ಉಡುಪಿ: ಜಿಲ್ಲಾ ಬಿಜೆಪಿಯ ವಿವಿಧ ಪ್ರಕೋಷ್ಠಗಳ ಸಂಚಾಲಕರುಗಳು ಮತ್ತು ಸಹ ಸಂಚಾಲಕರುಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಪ್ರಕೋಷ್ಠಗಳ ಸಂಯೋಜಕರುಗಳಾದ ದಿಲ್ಲೇಶ್ ಶೆಟ್ಟಿ ಬೆಳ್ಳಂಪಳ್ಳಿ ಮತ್ತು ವಿಜಯ ಕೊಡವೂರು ಅವರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ. ನಗರಾಡಳಿತ ಪ್ರಕೋಷ್ಠದ ಸಂಚಾಲಕರಾಗಿ ಕಾರ್ಕಡ ರಾಜು ಪೂಜಾರಿ, ಸಹ ಸಂಚಾಲಕರಾಗಿ ಸಂತೋಷ್ ಜತ್ತನ್ ನಿಟ್ಟೂರು, ಮೀನುಗಾರ ಪ್ರಕೋಷ್ಠದ ಸಂಚಾಲಕರಾಗಿ ಶರತ್ ಕುಮಾರ್ ಬೈಲಕೆರೆ, ಸಹ ಸಂಚಾಲಕರಾಗಿ ಸಂದೀಪ್ ಅಮೀನ್ ಕೊರಾಡಿ, ವೈದ್ಯಕೀಯ ಪ್ರಕೋಷ್ಠದ ಸಂಚಾಲಕರಾಗಿ ಡಾ! ವಿದ್ಯಾಧರ ಶೆಟ್ಟಿ, ಸಹ ಸಂಚಾಲಕರಾಗಿ ಡಾ! ರಾಮಚಂದ್ರ ಕಾಮತ್, ಹಿರಿಯ ನಾಗರಿಕರ ಪ್ರಕೋಷ್ಠದ ಸಂಚಾಲಕರಾಗಿ ಮದ್ದನಗರ ಶಂಕರ ಪೂಜಾರಿ, ಸಹ ಸಂಚಾಲಕರಾಗಿ ಕೃಷ್ಣಪ್ಪ ಜತ್ತನ್, ಪ್ರಕಾಶನ ಪ್ರಕೋಷ್ಠದ ಸಂಚಾಲಕರಾಗಿ ದುರ್ಗಾಪ್ರಸಾದ್ ಸಿ.ಹೆಚ್., ಸಹ ಸಂಚಾಲಕರಾಗಿ ಸತೀಶ್ ಎಸ್., ಸಾಮಾಜಿಕ ಜಾಲತಾಣ ಪ್ರಕೋಷ್ಠದ ಸಂಚಾಲಕರಾಗಿ ವಸಂತ ಕಿಣಿ, ಸಹ ಸಂಚಾಲಕರಾಗಿ ಯೋಗೀಶ್ ಗುಡ್ರಿ, ಮಾಹಿತಿ ತಂತ್ರಜ್ಞಾನ ಪ್ರಕೋಷ್ಠದ ಸಂಚಾಲಕರಾಗಿ ಅಕ್ಷಯ್ ಪಿ. ಶೆಟ್ಟಿ, ಸಹ ಸಂಚಾಲಕರಾಗಿ ನರಸಿಂಹ ಗಾಣಿಸ್ಕರ್, ಮಾಧ್ಯಮ ವಿಭಾಗದ ಸಹ ಸಂಚಾಲಕರಾಗಿ ಮಂಜುನಾಥ್ ಮಣಿಪಾಲ ಇವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆಗಾಲ: ಅಗತ್ಯ ಸಿದ್ಧತೆಗೆ ದ.ಕ. ಜಿಲ್ಲಾಧಿಕಾರಿ ಸೂಚನೆ

ಮಂಗಳೂರು: ಭಾರೀ ಮಳೆ ಪ್ರವಾಹದಿಂದಾಗಿ ರಸ್ತೆ ಹಾನಿ, ಗುಡ್ಡ ಕುಸಿತ, ಮನೆ ಕುಸಿತದಂತಹ ಅಹಿತಕರ ಘಟನೆಗಳು ಸಂಭವಿಸುತ್ತಿದ್ದು, ಮೂಲ ಸೌಕರ್ಯಗಳಿಗೆ ಹಾನಿಯಾಗುವ ಸಾಧ್ಯತೆ ಇರುವುದರಿಂದ, ಮಳೆಗಾಲದಲ್ಲಿ ಯಾವುದೇ ರೀತಿಯ ಅವಘಡಗಳಾಗದಂತೆ ಇಲಾಖೆಗಳು ಸನ್ನದ್ಧರಾಗಿರಬೇಕು. ಕಳೆದ ಬಾರಿ ಹೆಚ್ಚಿನ ಪ್ರವಾಹ ಬಂದಿರುವ ಪ್ರದೇಶಗಳಲ್ಲಿ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಸೂಚಿಸಿದ್ದಾರೆ. ಶಾಲೆಗಳ ಪಕ್ಕದಲ್ಲಿರುವ ಅಪಾಯಕಾರಿ ಕೆರೆಕಟ್ಟೆ, ಗುಂಡಿಗಳ ಸ್ಥಳಗಳಿಗೆ ರೆಡ್ ರಿಬ್ಬನ್ ಕಟ್ಟಿ, ಮಕ್ಕಳು ಅಪಾಯಕಾರಿ ಸ್ಥಳಗಳತ್ತ ಹೋಗದಂತೆ ಶಿಕ್ಷಣ ಇಲಾಖೆ ಅಗತ್ಯ ಕ್ರಮ ವಹಿಸಬೇಕು. ಪೋಷಕರ ಸಭೆ ಕರೆದು ಮಕ್ಕಳ ಸುರಕ್ಷತೆಯ ಬಗ್ಗೆ ಸೂಚನೆ ನೀಡಬೇಕು ಎಂದು ಅವರು ಹೇಳಿದರು.



ನಗರದಲ್ಲಿ ಜಲಸಿರಿ ಕಾಮಗಾರಿಗೆ ರಸ್ತೆಗಳನ್ನು ಅಗೆದಿದ್ದು, ಸರಿಯಾಗಿ ಗುಂಡಿಗಳನ್ನು ಮುಚ್ಚದಿರುವುದರಿಂದ ವಾಹನ ಸವಾರರು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಈ ಸಮಸ್ಯೆಯ ಕುರಿತು ನಗರಪಾಲಿಕೆ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಸೂಚಿಸಿದರು. ಗಣಿಗಾರಿಕೆ ನಡೆದಂತಹ ಪ್ರದೇಶದಲ್ಲಿ ಆಗಿರುವ ಗುಂಡಿಗಳಲ್ಲಿ ನಿಂತ ನೀರಿನಲ್ಲಿ ಈಜಾಡಲು ಹೋಗುವುದರಿಂದ ಜೀವಹಾನಿ ಆಗುತ್ತಿರುವುದರಿಂದ ಗಣಿಗಾರಿಕೆ ನಡೆಸಿದ ಪ್ರದೇಶದಲ್ಲಿ ಆಗಿರುವ ಗುಂಡಿಗಳಲ್ಲಿ ಈಜಾಟವನ್ನು ನಿಷೇಧಿಸಿದೆ ಎಂಬ ಬಗ್ಗೆ ಎಚ್ಚರಿಕಾ ಫಲಕವನ್ನು ಅಳವಡಿಸಬೇಕು. ಗಣಿಗಾರಿಕೆ ಗುಂಡಿಯಲ್ಲಿ ನಿಂತ ನೀರಲ್ಲಿ ಈಜಲು ಹೋಗಿ ಏನಾದರೂ ಅವಘಡ ಸಂಭವಿಸಿದಲ್ಲಿ ಸಂಬಂಧಪಟ್ಟ ಗಣಿ ಮಾಲಕರು/ಗುತ್ತಿಗೆದಾರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಯೋಗಾಸನ ಶಿಬಿರ

ಮಂಗಳೂರು: ಮಂಗಳೂರಿನ ಮಂಗಳಾದೇವಿಯಲ್ಲಿರುವ ರಾಮಕೃಷ್ಣ ಮಠದಲ್ಲಿ ಇದೇ ಜೂನ್ 3ನೇ ತಾರೀಕಿನಿಂದ ಸಂಜೆ 5.00 ರಿಂದ 6.30 ರ ವರೆಗೆ ಯೋಗಾಸನ ಶಿಬಿರ ನಡೆಯಲಿದೆ. ಯೋಗರತ್ನ ಶ್ರೀ ಗೋಪಾಲಕೃಷ್ಣದೇಲಂಪಾಡಿಯವರು ಯೋಗಾಸನ, ಮುದ್ರೆಗಳು, ಕ್ರಿಯೆಗಳು, ಪ್ರಾಣಾಯಾಮ, ಸೂರ್ಯನಮಸ್ಕಾರ, ಧ್ಯಾನ ಮಾಡುವ ವಿಧಾನ ತಿಳಿಸಿಕೊಡುವರು. ಅಂತರಾಷ್ಟ್ರೀಯ ಯೋಗದಿನಾಚರಣೆಯ ಪೂರ್ವಭಾವಿ ತಯಾರಿಯ ಯೋಗಾಭ್ಯಾಸ. ಆಸಕ್ತರು ತಮ್ಮ ಹೆಸರುಗಳನ್ನು ಆಶ್ರಮದ ಕಾರ್ಯಾಲಯದಲ್ಲಿ ನೋಂದಾಯಿಸಬಹುದು. ಹೆಚ್ಚಿನ ವಿವರಗಳಿಗಾಗಿ 2414412 ಸಂಪರ್ಕಿಸಿ.

ನಾಳೆ ರಾಗಧನ ಉಡುಪಿ ಸಂಸ್ಥೆಯ ವಾರ್ಷಿಕ ಮಹಾಸಭೆ

ಉಡುಪಿ: ಮೇ 31 ರಂದು ರಾಗ ಧನ ಸಂಸ್ಥೆಯ 37ನೆಯ ವಾರ್ಷಿಕ ಮಹಾಸಭೆ ಉಡುಪಿಯ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಅಪರಾಹ್ನ 3.00ರಿಂದ ನಡೆಯಲಿದೆ. ಸಂಜೆ 4ರಿಂದ ಇತ್ತೀಚೆಗೆ ನಮ್ಮನ್ನಗಲಿದ ಹಿರಿಯ ಸಂಗೀತ ಗುರು ಹಾಗೂ ಕೊಳಲು ವಿದ್ವಾನ್ ಕೆ.ಯು.ರಾಘವೇಂದ್ರ ರಾಯರಿಗೆ ನುಡಿ ನಮನ, ನಂತರ ಹೇರಂಭ್ ಹಾಗೂ ಹೇಮಂತ್ ಅವರ ದ್ವಂದ್ವ ಕೊಳಲು ವಾದನ ಕಛೇರಿ ನಡೆಯಲಿದೆ. ಇವರಿಗೆ ಕೆ.ಯು.ಜಯಚಂದ್ರ ರಾವ್ ಮೃದಂಗದಲ್ಲಿ ಹಾಗೂ ವಾಳಪ್ಪಳ್ಳಿ ಕೃಷ್ಣಕುಮಾರ್ ಮೃದಂಗದಲ್ಲಿ ಸಹಕರಿಸಲಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಉಮಾಶಂಕರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶತಮಾನ ಸಮೀಪಿಸುತ್ತಿರುವ ಅಶೋಕನಗರ ಸರಕಾರಿ ಕನ್ನಡ ಶಾಲೆಗೆ ಸೇರಿಸಿದರೆ ರೂ.5 ಸಾವಿರ ನಿರಖು ಠೇವಣಿ

ಕನ್ನಡ ಉಳಿಸಿ ಇಲ್ಲಿ ಮಾತಿನಲ್ಲಷ್ಟೇ ಉಳಿದಿಲ್ಲ..!

ಐ.ಬಿ. ಸಂದೀಪ್ ಕುಮಾರ್

ದಿಗಂತ ವಿಶೇಷ

ಮಂಗಳೂರು: ಇನ್ನೇನು ಕೆಲ ದಿನಗಳಲ್ಲೇ ಶಾಲೆಗಳಲ್ಲಿ ಮಕ್ಕಳ ಚಿಲಿಪಿಲಿ ಸದ್ದು ಕೇಳಿ ಬರಲಿದೆ. ಹೊಸದಾಗಿ (1ನೇ ತರಗತಿ) ಶಾಲೆಗೆ ಪಾದಾರ್ಪಣೆ ಮಾಡುವ ಪುಟಾಣಿಗಳಲ್ಲಿ ಎಲ್ಲಿಲ್ಲದ ಸಂಭ್ರಮ, ಕುತೂಹಲ, ಆತಂಕ. ತಮ್ಮ ಮಕ್ಕಳನ್ನು ಪ್ರತಿಷ್ಠಿತ ಶಾಲೆಗಳಿಗೆ ಸೇರಿಸಲು ತವಕಿಸುವ ಹೆತ್ತವರು ಒಂದೆಡೆಯಾದರೆ, ಸರಕಾರಿ ಶಾಲೆಗಳತ್ತ ಮುಖ ಮಾಡುವವರು ಇನ್ನೊಂದೆಡೆ. ಸರಕಾರಿ ಶಾಲೆಗಳು ಕನ್ನಡ ಮಾಧ್ಯಮ ಎಂಬ ಅಸಡ್ಡೆ, ಇಂಗ್ಲೀಷ್ ಮೀಡಿಯಂ ಶಾಲೆಗಳೆಂದರೆ ಭವಿಷ್ಯ ರೂಪಿಸುವ ಶಿಕ್ಷಣ ಸಂಸ್ಥೆಗಳು ಎಂಬ ಆಶಾಭಾವನೆ ಹೆತ್ತವರಲ್ಲಿ. ಈ ಹಿನ್ನಲೆಯಲ್ಲೇ ಇಲ್ಲೊಬ್ಬರು ದಾನಿ ಸರಕಾರಿ ಕನ್ನಡ ಶಾಲೆಗೆ ಸೇರುವ ಮಕ್ಕಳಿಗೆ ಆರ್ಥಿಕವಾಗಿ ಪ್ರೋತ್ಸಾಹ ನೀಡುತ್ತಾ ಎಲೆಮರೆಯಕಾಯಿಯಂತೆ ಇದ್ದುಕೊಂಡು ಕನ್ನಡಮ್ಮನ ಸೇವೆ ಸಲ್ಲಿಸುತ್ತಿದ್ದಾರೆ.

ಕಾರ್ಯಕರ್ತೃಗಳು

ಮಂಗಳೂರಿನ ಅಶೋಕನಗರದಲ್ಲಿ ಕಳೆದ 97 ವರ್ಷಗಳಿಂದ ಸರಕಾರಿ ಶಾಲೆಯೊಂದು ಲಕ್ಷಾಂತರ ಮಂದಿಗೆ ಶಿಕ್ಷಣವನ್ನು ನೀಡಿ ಉಜ್ವಲ ಬದುಕನ್ನು ಕಟ್ಟಿ ಕೊಟ್ಟಿದೆ. ಶತಮಾನೋತ್ಸವದತ್ತ ದಾಪುಗಾಲಿಕ್ಕುತ್ತಿರುವ ಅಶೋಕನಗರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 1ರಿಂದ 3ನೇ ತರಗತಿಗೆ ಹೊಸದಾಗಿ ಸೇರುವ ಮಕ್ಕಳ ಹೆಸರಿನಲ್ಲಿ ರೂ.5 ಸಾವಿರ ನಗದು ಮೊತ್ತವನ್ನು ದಾನಿಯೋರ್ವರು ನಿರಖು ಠೇವಣಿಯನ್ನಾಗಿ ಇರಿಸಿದ್ದಾರೆ. ಈ ಶಾಲೆಯಲ್ಲಿ ಶಿಕ್ಷಣ ಪೂರ್ಣಗೊಂಡ ಬಳಿಕ ನಿರಖು ಠೇವಣಿ ಇರಿಸಿದ ಮೊತ್ತ ಬಡ್ಡಿ ಸಹಿತ ವಿದ್ಯಾರ್ಥಿಗೆ ಲಭಿಸುತ್ತದೆ. ಅಶೋಕನಗರದ ಚಾರ್ಟೆಡ್ ಅಕೌಂಟೆಂಟ್ ದಿನಕರ ರಾವ್-ಉಷಾ ರಾವ್ ದಂಪತಿ ಇಂತಹ ಒಂದು ವಿಶಿಷ್ಟ ಸೇವಾ ಕಾರ್ಯಕರ್ತೃಗಳು.

ವಿದ್ಯಾವರ್ಧಕ ಸಂಘ

ಪ್ರಸ್ತುತ ಶಾಲೆಯಲ್ಲಿ 7 ಮಂದಿ ಶಿಕ್ಷಕರು, 99 ವಿದ್ಯಾರ್ಥಿಗಳಿದ್ದಾರೆ. ಶಿಕ್ಷಕರಿಗೆ ಅಶೋಕನಗರ ವಿದ್ಯಾವರ್ಧಕ ಸಂಘ, ದಾನಿಗಳ ಮೂಲಕ ಸಂಬಳವನ್ನು ನೀಡಲಾಗುತ್ತಿದೆ. ಶಾಲಾ ಮಕ್ಕಳಿಗೆ ಪ್ರತೀ ಗುರುವಾರ ಪಠ್ಯೇತರ ಚಟುವಟಿಕೆ, ಮಂಗಳವಾರ ಆಸಕ್ತ ಮಕ್ಕಳಿಗೆ ಯಕ್ಷಗಾನ ತರಬೇತಿಯನ್ನು ನೀಡಲಾಗುತ್ತಿದೆ. ದಾನಿ ದಿನಕರ ರಾವ್ ಅವರು ಇದಕ್ಕೆ ಸ್ಥಳಾವಕಾಶ ಒದಗಿಸಿ ಕೊಟ್ಟಿದ್ದಾರಲ್ಲದೆ ಯಕ್ಷಗಾನ ಕಲಿಯುವ ಮಕ್ಕಳಿಗೆ ಚಹಾ ತಿಂಡಿಯ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ದಾನಿಗಳ ನೆರವಿನಿಂದ ಶಾಲೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಅಶೋಕನಗರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಕಲ್ಲಾವಿ ರಾಜೇಂದ್ರ ಅಧ್ಯಕ್ಷರಾಗಿ, ಸೀತಾರಾಮ ಪುರಾಣಿಕ್ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಂಘ ಸಂಸ್ಥೆಗಳ ಸಹಕಾರ

ಶಾಲೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವಲ್ಲಿ ಸ್ಥಳೀಯ ಸಂಘ ಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ. ಶಾಲೆಯ ಅಭಿವೃದ್ಧಿಯಲ್ಲಿ ಹಳೆ ವಿದ್ಯಾರ್ಥಿ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ, ಬಿಎಸ್ಎನ್ನೆಲ್ ನಿವೃತ್ತ ಉದ್ಯೋಗಿ ಶ್ರೀನಿವಾಸಸುವರ್ಣ ಅವರ ಅವಿರತ ಪರಿಶ್ರಮ ಇದೆ. ಇಂದಿನ ಹಂಗಾಮಿ ಅಧ್ಯಕ್ಷ ಬಿ. ಆನಂದ ಕರ್ಕೇರ ಅವರ ಮುಂದಾಳತ್ವದಲ್ಲಿ ಶಾಲೆಗೆ ಹೊಸ ಆಯಾಮ ಕಲ್ಪಿಸುವ ಕುರಿತು ಚಿಂತನೆ ನಡೆಸಲಾಗುತ್ತಿದೆ. ಜತೆಗೆ, ಹೊಸದಾಗಿ ಸೇರ್ಪಡೆಗೊಳ್ಳುವ ವಿದ್ಯಾರ್ಥಿಗಳಿಗೆ ಸಹಾಯಧನ ಒದಗಿಸಲು ದಾನಿಗಳ ಜತೆ ಕೈ ಜೋಡಿಸಲು ಮುಂದಾಗಿದೆ. ಪ್ರಸ್ತುತ, ಜೋಯ್ಸ್ ಹೆನ್ರಿಟಾ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.





ಸ್ಥಾಪನೆ-ಬೆಳವಣಿಗೆ

ಅಶೋಕನಗರ ಹಿರಿಯ ಪ್ರಾಥಮಿಕ ಶಾಲೆ ಪಿ. ಶಂಕರನಾರಾಯಣ ರಾಯರಿಂದ 3-7-1928ರಂದು ಅವರ ಮನೆಯ ಸಮೀಪದ ಚಿಕ್ಕ ಕೋಣೆಯಲ್ಲಿ 'ಶ್ರೀ ಶಾರದಾ ಪ್ರಸಾದಿಕ ಮೂಲ ಪಾಠ ಶಾಲೆ' ಎಂಬ ಹೆಸರಿನಿಂದ ಸ್ಥಾಪಿಸಲ್ಪಟ್ಟಿತು. ಈ ಶಾಲೆ ಸ್ಥಾಪನೆಗೊಂಡಾಗ ಪಿ. ವೆಂಕಟ್ರಾಯರು ಮತ್ತು ಎಸ್. ವೆಂಕಟ್ರಾಯರು ಶಿಕ್ಷಕರಾಗಿದ್ದರು. ಅವರ ಪೈಕಿ ಎಸ್. ವೆಂಕಟ್ರಾಯರು ಮುಖ್ಯೋಪಾಧ್ಯಾಯರಾಗಿದ್ದರು. ಅವರ ತರುವಾಯ ಎನ್. ಪದ್ಮನಾಭ ಭಟ್ಟರು ಮುಖ್ಯೋಪಾಧ್ಯಾಯರಾಗಿ 4 ವರ್ಷ ದುಡಿದರು. ಶಾಲೆ ಸ್ಥಾಪನೆಗೊಂಡಾಗ ಕೇವಲ 8-10 ವಿದ್ಯಾರ್ಥಿಗಳಿದ್ದರು. ಪಾಷ್ತಿಮಾರು ಶಂಕರನಾರಾಯಣ ರಾಯರು ಮನೆ ಮನೆಗೆ ಹೋಗಿ ವಿದ್ಯೆಯ ಮಹತ್ವವನ್ನು ವಿವರಿಸಿ ಜನರನ್ನು ಪ್ರಬೋಧಿಸಿ ಮಕ್ಕಳ ಸಂಖ್ಯೆ ಹೆಚ್ಚುವಂತೆ ಮಾಡಿದರು. ಕೆಲವೇ ಸಮಯದಲ್ಲಿ ಮಕ್ಕಳ ಸಂಖ್ಯೆ 100ಕ್ಕೂ ಮಿಕ್ಕಿತು. ಸ್ಥಳ ಅಭಾವ ಎದುರಾದಾಗ ಶಾಲೆಯ ಹಂಗಾಮಿ ಮೆನೇಜರ್ ಆಗಿದ್ದ ದಿ। ಉಗ್ರಾಣಿ ಕೃಷ್ಣಯ್ಯನವರು ತಮಗೆ ಸೇರಿದ 10 ಸೆಂಟ್ಸ್ ಸ್ಥಳವನ್ನು ಶಾಲೆಗಾಗಿ ಕೊಟ್ಟರು. ಗುಡ್ಡೆಯ ಮೇಲಿದ್ದ ಈ ಸ್ಥಳದಲ್ಲಿ ಒಂದು ಚಿಕ್ಕ ಕಟ್ಟಡವನ್ನು ನಿರ್ಮಿಸಿ ಶಾಲೆ ಯನ್ನು ಆ ಕಟ್ಟಡಕ್ಕೆ 1-6-1931 ರಂದು ವರ್ಗಾಯಿಸಲಾಯಿತು. ಅಂದಿನಿಂದ ಈ ಶಾಲೆಯು ಜನರ ಬಾಯಿಯಲ್ಲಿ 'ಗುಡ್ಡೆ ಶಾಲೆ' ಎಂದು ಪ್ರಸಿದ್ಧಿ ಗಳಿಸಿತು.

ನೂತನ ಕಟ್ಟಡ ಉದ್ಘಾಟನೆ

22-9-1932ರಲ್ಲಿ ಈ ಶಾಲೆಗೆ 5ನೇ ತರಗತಿಯವರೆಗೆ ಖಾಯಂ ಮಂಜೂರಾತಿ ದೊರೆಯಿತು. ಶಾಲಾ ಕಟ್ಟಡ ಶಿಥಿಲಾವಸ್ಥೆಗೆ ತಲುಪಿದಾಗ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ನೂತನ ಕಟ್ಟಡ ಸಮಿತಿ ರಚಿಸಿ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರಿಂದ 11-10-1973ರಂದು ಶಂಕುಸ್ಥಾಪನೆಯನ್ನು ನೆರವೇರಿಸಲಾಗಿತ್ತು. 25-1-1976ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರಿಂದ ಶಾಲಾ ನೂತನ ಕಟ್ಟಡ ಉದ್ಘಾಟನೆಗೊಂಡಿತು. ಈ ಸಂದರ್ಭ ಶಾಲೆಯಲ್ಲಿ 1072 ವಿದ್ಯಾರ್ಥಿಗಳಿದ್ದು, 28 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದರು.

2022-23ನೇ ಸಾಲಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಕಾಶೀರಾಯ ಪಾಟೀಲ್ ಸರಕಾರದಿಂದ ವೇತನ ಪಡೆಯುತ್ತಿದ್ದ ಕೊನೆಯ ಶಿಕ್ಷಕರಾಗಿದ್ದಾರೆ. ಆ ಬಳಿಕ ಸರಕಾರ ಈ ಶಾಲೆಗೆ ಶಿಕ್ಷಕರನ್ನು ಒದಗಿಸಿಲ್ಲ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಹೆಚ್ಚಿನ ಮುತುವರ್ಜಿ ವಹಿಸಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಸರಕಾರಿ ವೇತನವನ್ನು ನೀಡಬೇಕು.

■ **ಶ್ರೀನಿವಾಸ ಸುವರ್ಣ,** ಮಾಜಿ ಪ್ರ. ಕಾರ್ಯದರ್ಶಿ, ಶಾಲಾ ಹಳೆ ವಿದ್ಯಾರ್ಥಿ ಸಂಘ

ನಮ್ಮ ಮಾತೃ ಭಾಷೆ ಕನ್ನಡ ಆಗಿರುವ ಕಾರಣ ಕನ್ನಡ ಶಾಲಾ ಮಕ್ಕಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮಕ್ಕಳ ಹೆಸರಿನಲ್ಲಿ ನಿರಖು ಠೇವಣಿ ಇರಿಸುವ ಯೋಜನೆಗೆ ಅಡಿಪಾಯ ಹಾಕಿದ್ದೇನೆ. ಮುಂದಕ್ಕೆ ಸಂಘ ಸಂಸ್ಥೆಗಳು ಇದನ್ನು ಮುಂದುವರಿಸಲಿದೆ. ನಾನು ಶಾಲೆಯ ಅಭಿವೃದ್ಧಿ ಇತರೇ ಯೋಜನೆಗಳನ್ನು ಹಾಕಿಕೊಂಡಿದ್ದೇನೆ.

■ **ದಿನಕರ ರಾವ್,** ದಾನಿಗಳು

ವಾಹನ ವ್ಯವಸ್ಥೆ

ಅಶೋಕನಗರ ಸರಕಾರಿ ಶಾಲೆಯಲ್ಲಿ ಪರವೂರ ಮಕ್ಕಳೇ ಅಧಿಕ. ವಿದ್ಯಾರ್ಥಿಗಳನ್ನು ಶಾಲೆಗೆ ಕರೆತರಲು-ಬಿಡಲು ವಾಹನ ವ್ಯವಸ್ಥೆಯಿದೆ. ಸ್ಥಳಿಯ ಸಂಘ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಪುಸ್ತಕ, ಸಮವಸ್ತ್ರ, ಬ್ಯಾಗ್ ಮತ್ತಿತರ ಶೈಕ್ಷಣಿಕ ಸಾಮಾಗ್ರಿಗಳನ್ನು ಒದಗಿಸಿ ಪ್ರೋತ್ಸಾಹಿಸುತ್ತಿದೆ.



ಕೇರಳ ರಾಜ್ಯ ಕಾರ್ಮಿಕ ಕಲ್ಯಾಣ ನಿಧಿ ಮಂಡಳಿಯಲ್ಲಿ ಸದಸ್ಯರಾಗಿರುವ ಕಾರ್ಮಿಕರ ಮಕ್ಕಳಿಗಾಗಿ ಒದಗಿಸಲಾದ ಕಲಿಕೋಪಕರಣಗಳನ್ನು ಕಾರ್ಮಿಕ ಇಲಾಖೆ ಸಚಿವೆ ಬಿಂದು ಕೃಷ್ಣ ಅವರು ತಿರುವನಂತಪುರದಲ್ಲಿ ವಿತರಿಸಿದರು.

ಇಂಜಿನಿಯರ್ ಪ್ರಮೋದ್ ಕುಮಾರ್‌ಗೆ ಎಮಿನೆಂಟ್ ಇಂಜಿನಿಯರ್ ಅವಾರ್ಡ್

ಕಡಬ: ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ಗಣನೀಯ ಸಾಧನೆಗಾಗಿ ನೀಡಲಾಗುವ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ 'ಎಮಿನೆಂಟ್ ಇಂಜಿನಿಯರ್ ಅವಾರ್ಡ್-2026' ಪ್ರಶಸ್ತಿಗೆ ಲೋಕೋಪಯೋಗಿ ಇಲಾಖಾ ಇಂಜಿನಿಯರ್ ಪ್ರಮೋದ್ ಕುಮಾರ್ ಕೆ.ಕೆ. ಭಾಜನರಾಗಿದ್ದಾರೆ.

ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್(ಇಂಡಿಯಾ) ಎಸಿಸಿಇ(ಐ) ವತಿಯಿಂದ ನೀಡಲಾಗುವ ಈ ಪ್ರಶಸ್ತಿಯನ್ನು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಸಲ್ಲಿಸಿದ ಅಪೂರ್ವ ಸೇವೆ, ಗುಣಮಟ್ಟದ ಕಾಮಗಾರಿ ನಿರ್ವಹಣೆ, ತಾಂತ್ರಿಕ ಪರಿಣತಿ, ಸಂಘಟನಾ ನಾಯಕತ್ವ ಹಾಗೂ ಸಮಾಜಮುಖಿ ಚಿಂತನೆಗಳನ್ನು ಪರಿಗಣಿಸಿ ನೀಡಲಾಗಿದೆ. ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಮೋದ್ ಕುಮಾರ್ ಅವರು ಪ್ರಸ್ತುತ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಕುಕ್ಕೆ ಸುಬ್ರಹ್ಮಣ್ಯ ವಿಶೇಷ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಪುತ್ತೂರು ಮತ್ತು ಸುಳ್ಯ ಉಪವಿಭಾಗಗಳ ಹಲವು ಪ್ರಮುಖ ಕಾಮಗಾರಿಗಳ ಹೆಚ್ಚುವರಿ ಜವಾಬ್ದಾರಿಯನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಎಸಿಸಿಇ ಪುತ್ತೂರು ಕೇಂದ್ರದ ಸ್ಥಾಪಕ ಅಧ್ಯಕ್ಷರೂ ಆಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಪುತ್ತೂರು ಮಿನಿ ವಿಧಾನಸೌಧ, ಹೊಸ ನ್ಯಾಯಾಲಯ ಸಂಕೀರ್ಣ, ಕುಕ್ಕೆ ಸುಬ್ರಹ್ಮಣ್ಯ ಮಾಸ್ಟರ್ ಪ್ಲಾನ್, ಪುತ್ತೂರು-ಕಾಣಿಯೂರು ರಸ್ತೆ ಅಭಿವೃದ್ಧಿ, ಪುತ್ತೂರು-ಉಪ್ಪಿನಂಗಡಿ ರಸ್ತೆ ಅಭಿವೃದ್ಧಿ, ಸುಬ್ರಹ್ಮಣ್ಯ-ಉಡುಪಿ ರಸ್ತೆ ಅಗಲೀಕರಣ, ಗುಂಡ್ಯ-ಸುಬ್ರಹ್ಮಣ್ಯ ರಸ್ತೆ ಅಭಿವೃದ್ಧಿ ಪಾಲೋಳಿ ಸೇತುವೆ ಸೇರಿದಂತೆ ಅನೇಕ ಮೂಲಸೌಕರ್ಯ ಯೋಜನೆಗಳು ಯಶಸ್ವಿಯಾಗಿವೆ. ಪ್ರಸ್ತುತ ಕುಕ್ಕೆ ಸುಬ್ರಹ್ಮಣ್ಯ ಮಾಸ್ಟರ್ ಪ್ಲಾನ್ 3ನೇ ಹಂತದ ಡಿಪಿಆರ್ ತಯಾರಿಯಲ್ಲಿ ತೊಡಗಿದ್ದಾರೆ.



ಬೋಳೂರು ಮಠದ 'ಅಮೃತ ಸಂಗಮ 2026'ದಲ್ಲಿ ಅಮ್ಮ ಕರೆ

ಬದುಕಿನಲ್ಲಿ ಮೌಲ್ಯಗಳಿರಲಿ

ಮಂಗಳೂರು: ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿದಾಗ ಬದುಕಿಗೆ ನಿಜವಾದ ಅರ್ಥ ಬರಲು ಸಾಧ್ಯ ಎಂದು ವಿಶ್ವದ ಅಗ್ರಗಣ್ಯ ಆಧ್ಯಾತ್ಮಿಕ ನಾಯಕಿ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿ ಹೇಳಿದರು.

ಇಲ್ಲಿನ ಬೋಳೂರು ಮಠದ ಆವರಣದಲ್ಲಿ ಮಾತಾ ಅಮೃತಾನಂದಮಯಿ ಸೇವಾ ಸಮಿತಿ ಮಂಗಳೂರು ಇದರ ನೇತೃತ್ವದಲ್ಲಿ ಎರಡು ದಿನಗಳ ಕಾಲ ನಡೆದ ಬ್ರಹ್ಮ ಸ್ಥಾನ ಮಹೋತ್ಸವ 'ಅಮೃತ ಸಂಗಮ 2026' ಕಾರ್ಯಕ್ರಮದಲ್ಲಿ ಶುಕ್ರವಾರ ಅವರು ಪ್ರವಚನ ನೀಡಿದರು.

ಸೇವೆಯೇ ಶ್ರೇಷ್ಠ ಧರ್ಮ. ಸೇವೆಯ ಮೂಲಕ ಭಗವಂತನಿಗೆ ಹತ್ತಿರವಾಗಬೇಕು. ಸಮಾಜದಲ್ಲಿ ನೊಂದವರು, ಅಶಕ್ತರ ಧ್ವನಿಯಾಗಿ ಕೆಲಸ ಮಾಡಬೇಕು. ನಾವು ಮಾಡುವ ಕೆಲಸಗಳು ತೋರಿಕೆಗೆ ಸೀಮಿತವಾಗಿರಬಾರದು. ಮನಸ್ಸಿಂದ ಮಾಡುವ ಕೆಲಸಗಳಿಗೆ ಭಗವಂತನ ಆಶೀರ್ವಾದವೂ ಇರುತ್ತದೆ ಎಂದು ಅವರು ಹೇಳಿದರು.



ಹೂವಿನ ಸುಗಂಧ ಗಾಳಿ ಬೀಸಿದ ದಿಕ್ಕಿನಲ್ಲಿಯೇ ಸಾಗುತ್ತದೆ. ಅದೇ ರೀತಿ ನಾವು ಪರಸ್ಪರ ಪ್ರೀತಿ ಪ್ರೇಮದಿಂದ ಬಾಳಿದರೆ ಸುತ್ತಲಿನ ಪರಿಸರವೂ ಸ್ವಚ್ಛಂದವಾಗಿರುತ್ತದೆ. ಕಲ್ಮಶ, ದ್ವೇಷ, ಅಸೂಯೆಗೆ ಜಾಗವೇ ಇರುವುದಿಲ್ಲ. ಬದುಕಿನಲ್ಲಿ ಕಷ್ಟಗಳು ಬಂದಾಗ ಕುಗ್ಗದೆ ಎದುರಿಸಬೇಕು. ಧ್ಯಾನ, ಸತ್ಸಂಗ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತದೆ. ಇದು ಭಗವಂತನಿಗೆ ಹತ್ತಿರವಾಗುವ ಮಾರ್ಗವೂ ಹೌದು. ನಾನು, ನನ್ನದು ಎಂಬ ಅಹಂ ನಮ್ಮಲ್ಲಿ ರಬಾರದು ಎಂದು ಅಮ್ಮ ಹೇಳಿದರು.

ದ್ವೇಷ, ಅಸೂಯೆಯಿಂದ ಏನನ್ನೂ ಸಾಧಿಸಲಾಗದು. ಪರಸ್ಪರ ಪ್ರೀತಿಸುವ ಮನೋಭಾವ ಬೆಳೆಯಬೇಕು. ಪರಿಸರದ ಬಗ್ಗೆ ಕಾಳಜಿ, ಪರೋಪಕಾರ, ತ್ಯಾಗ ಮನೋಭಾವ ನಮ್ಮಲ್ಲಿ ರಬೇಕು. ಈ ರೀತಿಯ ಸತ್ ಚಿಂತನೆಗಳು ನಮ್ಮನ್ನು ಸದಾ ಆರೋಗ್ಯಕರವಾಗಿರಿಸುವುದಲ್ಲದೆ ಸಮಾಜವೂ ಉತ್ತಮ ರೀತಿಯಲ್ಲಿ ಸಾಗಲು ಕಾರಣವಾಗುತ್ತದೆ.

■ **ಮಾತಾ ಅಮೃತಾನಂದಮಯಿ**

ನೃತ್ಯೋಪಾಸನಾ ಅಕಾಡೆಮಿಯ ಪೃಥ್ವಿಶ್ರೀ ದೂರದರ್ಶನ 'ಬಿ' ಗ್ರೇಡ್ ಕಲಾವಿದೆ

ಪುತ್ತೂರು: ಪುತ್ತೂರಿನ ನೃತ್ಯೋಪಾನಾ ಕಲಾ ಅಕಾಡೆಮಿಯ ವಿದ್ಯಾರ್ಥಿನಿ ಪೃಥ್ವಿಶ್ರೀ ಕೆ. ಅವರು ದೂರದರ್ಶನದ 'ಬಿ' ಗ್ರೇಡ್ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರು ದೂರದರ್ಶನ ಕೇಂದ್ರ 2025 ನವೆಂಬರ್‌ನಲ್ಲಿ ನಡೆಸಿದ ಭರತನಾಟ್ಯ ವಿಭಾಗದ ಆಡಿಷನ್‌ಗೆ ಹಾಜರಾದ ಪೃಥ್ವಿಶ್ರೀ ಅವರು 'ಬಿ' ಗ್ರೇಡ್ ಪಡೆದುಕೊಂಡಿದ್ದಾರೆ. ನೃತ್ಯೋಪಾಸನಾ ಕಲಾ ಅಕಾಡೆಮಿಯ ನೃತ್ಯಗುರು ವಿದುಷಿ ಶಾಲಿನಿ ಆತ್ಮಭೂಷಣ್ ಅವರಲ್ಲಿ ಕಳೆದ 14 ವರ್ಷಗಳಿಂದ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಅವರು ಈ ವರ್ಷ ವಿದ್ವತ್ ಅಂತಿಮ ಪರೀಕ್ಷೆ ಬರೆದಿದ್ದಾರೆ. ಪೃಥ್ವಿಶ್ರೀ ಅವರು ಪ್ರಸ್ತುತ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಎಂ.ಕಾಂ. ಕಲಿಯುತ್ತಿದ್ದಾರೆ. ನೃತ್ಯೋಪಾಸನಾ ಕಲಾ ಅಕಾಡೆಮಿಯ ತಂಡದಲ್ಲಿ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ ಲಕ್ಷ ದೀಪೋತ್ಸವ, ಹಂಪಿ ಉತ್ಸವ, ಬನವಾಸಿ ಕದಂಬೋತ್ಸವ, ಮೈಸೂರು ದಸರಾ, ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನ, ಮಂತ್ರಾಲಯ ಮಹೋತ್ಸವ ಮತ್ತಿತರ ಕಡೆಗಳಲ್ಲಿ ನೃತ್ಯ ಕಾರ್ಯಕ್ರಮ ನೀಡಿದ್ದಾರೆ. ಅವರು ಕಾಸರಗೋಡು ಪೈಕ ನಿವಾಸಿ ಬಾಲಸುಬ್ರಹ್ಮಣ್ಯ ಮತ್ತು ಶ್ರೀದೇವಿ ದಂಪತಿ ಪುತ್ರಿ.




ಹಿಂದೆ ಅರ್ಜಿ ಸಲ್ಲಿಸಿ ಕಾಮಗಾರಿ ಕೈಗೆತ್ತಿಕೊಂಡಿದ್ದ ಕೆಲಸಕ್ಕೆ ಕಾಡುತ್ತಿದೆ ಸಮಸ್ಯೆ | ಸಿಬ್ಬಂದಿಗಳಿಗೆ, ಫಲಾನುಭವಿಗಳಿಗೆ ತಲೆನೋವು

ಮನ್ ರೇಗಾ ಆ್ಯಪ್: ದಿನಗೂಲಿ ರಿಜಿಸ್ಟರ್‌ನಲ್ಲಿ ಸಮಸ್ಯೆಗಳ ಸರಮಾಲೆ

ಮಿಥುನ್ ಕರ್ಲಪ್ಪಾಡಿ

ಸುಳ್ಯ: ಉದ್ಯೋಗ ಖಾತರಿ ಯೋಜನೆಯು ಇದೀಗ ಕೊನೆಯ ಹಂತಕ್ಕೆ ಬಂದಿದ್ದು ಜುಲೈ ಬಳಿಕ ಉದ್ಯೋಗ ಖಾತರಿ ಯೋಜನೆಯು 'ವಿಬಿ ಜಿ ರಾಮ್ ಜಿ' ಆಗಿ ಬದಲಾವಣೆಗೊಳ್ಳಲಿದ್ದು, ಈ ಹಿಂದೆ ಅರ್ಜಿ ಸಲ್ಲಿಸಿ ಕಾಮಗಾರಿ ಕೈಗೆತ್ತಿಕೊಂಡಿದ್ದ ಕೆಲಸಕ್ಕೆ ಆ್ಯಪ್ ಒಂದಲ್ಲ ಒಂದು ಸಮಸ್ಯೆಗಳು ಉದ್ಭವಾಗುತ್ತಿದ್ದು ಸಿಬ್ಬಂದಿ ಹಾಗೂ ಫಲಾನುಭವಿಗಳ ಪಾಡು ಹೇಳತೀರದಾಗಿದೆ.

ಹೌದು ಇತ್ತೀಚೆಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಅಪ್ಲಿಕೇಶನ್ ಮೂಲಕ ಮುಂಜಾನೆ ಮತ್ತು ಸಂಜೆ ಎರಡು ಹೊತ್ತು ಕಾಮಗಾರಿ ನಡೆಸುವ ನಿಗದಿತ ಸ್ಥಳದಲ್ಲಿ ಜಿಪಿಎಸ್ ಆಧಾರಿತವಾಗಿ ದಿನಗೂಲಿ ಕಾರ್ಮಿಕರ ಚಿತ್ರ ಸೆರೆ ಹಿಡಿದು ಆ ಬಳಿಕ ಅಪ್ಲೋಡ್ ಮಾಡಬೇಕಿದೆ. ಆದರೆ, ಈ ಹಿಂದೆ ಅತೀ ಸರಳವಾಗಿ ಈ ಕೆಲಸಗಳು ನಡೆಯುತ್ತಿದ್ದವು. ಆದರೆ, ಇತ್ತೀಚಿನ ಮೂರು ದಿನಗಳಿಂದ ಎನ್‌ಎಂಎಂಎಸ್ 3.7.8 ಆ್ಯಪ್ ಇದೀಗ ಎಲ್ಲರನ್ನು ಕಂಗೆಡಿಸುವಂತೆ ಮಾಡಿದೆ. ಈ ಅಪ್ಲಿಕೇಶನ್ ದ.ಕ. ಜಿಲ್ಲೆಯ ಸುಳ್ಯ ತಾಲೂಕಿನ ನಾನಾ ಗ್ರಾಮ ಪಂಚಾಯತ್‌ಗಳಲ್ಲಿ ಈ ಹಿಂದೆ ಅರ್ಜಿ ಸಲ್ಲಿಸಿ ಕಾಮಗಾರಿ ಪ್ರಾರಂಭಿಸಲಾದ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದು, ಜಿಪಿಎಸ್ ಇದೀಗ ನೌಕರರು ಮತ್ತು ಫಲಾನುಭವಿಗಳ ಫಜೀತಿ ಹೇಳ ತೀರದಾಗಿದೆ.



ಜು.1ರಿಂದ ಹೊಸ ಕಾಯ್ದೆ ಅನ್ವಯ

ಅಧಿಕಾರಿಗಳ ಮಾಹಿತಿಯಂತೆ ಈ ಹಿಂದೆ ಪ್ರಾರಂಭಿಸಲಾದ ಕಾಮಗಾರಿಗಳನ್ನು ಜೂನ್ ಅಂತ್ಯಕ್ಕೆ ಮುಕ್ತಾಯಗೊಳಿಸಬೇಕಿದ್ದು, ಆ್ಯಪ್ ಸಮಸ್ಯೆಗಳ ಹಿನ್ನೆಲೆಯಲ್ಲಿ ಇದೀಗ ವ್ಯತ್ಯಯವಾಗುತ್ತಿದೆ. ಜು.1ರಿಂದ ಹೊಸ ಕಾಯ್ದೆಯ ಪ್ರಕಾರ ಕಾಮಗಾರಿ ನಡೆಯಲಿದೆ. ಪ್ರಸ್ತುತ ಕೂಲಿ ಕಾರ್ಮಿಕರು ಮತ್ತು ಗ್ರಾ.ಪಂ. ಉದ್ಯೋಗ ಖಾತರಿ ಇಂಜಿನಿಯರ್, ಸಿಬ್ಬಂದಿಗಳು ಮತ್ತು ಗ್ರಾ.ಪಂ. ಸಿಬ್ಬಂದಿಗಳಿಗೆ ಇದೀಗ ಚಾಲನೆಯಲ್ಲಿ ಇರುವ ಆ್ಯಪ್ ಸಮಸ್ಯೆ ತಲೆನೋವಾಗಿ ಪರಿಣಮಿಸಿದೆ.

ಅಪ್ಲಿಕೇಶನ್‌ನಲ್ಲಿ ಸಮಸ್ಯೆಗಳ ಸರಮಾಲೆ

ಎನ್‌ಎಂಎಂಎಸ್ 3.7.8 ಇತ್ತೀಚಿನ ನೂತನವಾದ ಆ್ಯಪ್ ಆಗಿದ್ದು, ಈ ಹಿಂದೆ ಇದೇ ಮಾದರಿಯ ಆ್ಯಪ್‌ಗಳಲ್ಲಿ ಕೂಲಿ ಕಾರ್ಮಿಕರು ಮುಂಜಾನೆ ಸ್ವತಃ ತಮ್ಮದೇ ಮೊಬೈಲ್ ಮೂಲಕ ಸುಲಲಿತವಾಗಿ ಜಿಪಿಎಸ್ ಮಾಡುತ್ತಿದ್ದರು. ಕಾಮಗಾರಿಯ ಪ್ರಥಮ ದಿನ ಗ್ರಾ.ಪಂ. ಸಿಬ್ಬಂದಿ ಜಿಪಿಎಸ್ ಮಾಡಿದ ಬಳಿಕ ಕಾರ್ಮಿಕರ ಮೊಬೈಲ್‌ಗಳಿಗೆ ನೀಡಲಾಗುತ್ತಿತ್ತು. ಆದರೆ, ಕಳೆದ ಕೆಲ ದಿನಗಳಿಂದ ಈ ಆ್ಯಪ್ ಒಂದಲ್ಲ ಒಂದು ರೀತಿಯ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಇಂಜಿನಿಯರ್ ವಿಭಾಗದಲ್ಲಿ ಮಾಹಿತಿ ಸಂಗ್ರಹಿಸಿದಾಗ ಮಸ್ಟರ್ ರೋಲ್ ಸಂಗ್ರಹವಾಗದೇ ಇದ್ದು, ಜೊತೆಗೆ ಸೆರೆ ಹಿಡಿಯಲಾದ ಚಿತ್ರಗಳು ಅಪ್ಲೋಡ್ ಸಂದರ್ಭದಲ್ಲಿ ಎರರ್ ಎಂಬಿತ್ಯಾದಿ ಸಮಸ್ಯೆಗಳು ಉದ್ಭವಿಸುತ್ತಿದೆ. ಈ ನಿಟ್ಟಿನಲ್ಲಿ ಸಮಸ್ಯೆ ಪರಿಹಾರಕ್ಕೆ ರಾಜ್ಯ ಸರಕಾರ ಮುಂದಾಗಬೇಕಿದ್ದು, ಜೊತೆಗೆ ಸಿಬ್ಬಂದಿ ಮತ್ತು ಫಲಾನುಭವಿಗಳಿಗೆ ನೆರವಾಗಬೇಕಿದೆ.

ಮೂರಿನಕಟ್ಟೆ ಮತ್ತೊಂದು ದತ್ತಪೀಠ ಆಗದಿರಲಿ: ಅಶೋಕ



• **ಭಟ್ಕಳ:** ಹಿಂದುಗಳ ಶ್ರದ್ಧಾಕೇಂದ್ರವಾದ ಮೂರಿನಕಟ್ಟೆಯನ್ನು ಮತ್ತೊಂದು ದತ್ತಪೀಠದಂತೆ ವಿವಾದಿತ ಪ್ರದೇಶವನ್ನಾಗಿ ಮಾಡಬೇಡಿ ಎಂದು ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದ ರಾಜ್ಯದ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು, ಕಟ್ಟಣ ಇದನ್ನು ಸರ್ಕಾರ ಮರು ನಿರ್ಮಾಣ ಮಾಡದೇ ಇದ್ದರೆ ನಾನೇ ಬಂದು ನಿರ್ಮಿಸುವೆ ಎಂದು ಎಚ್ಚರಿಸಿದ್ದಾರೆ.

ಅವರು ಶುಕ್ರವಾರ ಮೂರಿನಕಟ್ಟೆ ಧ್ವಂಸ ಖಂಡಿಸಿ ಇಲ್ಲಿನ ಬಿಜೆಪಿ ಮತ್ತು ಹಿಂದೂ ಸಂಘಟನೆಗಳ ವತಿಯಿಂದ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಮೂರಿನಕಟ್ಟೆ ಪ್ರದೇಶ ಹಿಂದೂಗಳ ಶ್ರದ್ಧಾ ಭಕ್ತಿಯ ಸ್ಥಳವಾಗಿದೆ. ಈ ಪ್ರದೇಶ ದಲ್ಲಿ ನಿರ್ಮಿಸಿದ್ದ ಕಟ್ಟೆಯನ್ನು ಧ್ವಂಸ ಮಾಡಿದವರನ್ನು ಗೂಂಡಾ ಕಾಯ್ದೆ ಹಾಕಿ ಗಡಿಪಾರು ಮಾಡಬೇಕು. ಕಟ್ಟೆ ಧ್ವಂಸ ಮಾಡಿದವರು ದೇಶದ್ರೋಹಿಗಳು ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಕಟ್ಟೆಯನ್ನು ಇದ್ದ ಸ್ಥಳದಲ್ಲೇ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಇದ್ದ ಸ್ಥಳದಲ್ಲೇ ಕಟ್ಟೆ ಕಟ್ಟುತ್ತೇವೆ. ಮುಸ್ಲಿಮರಿಗೆ ಮೂರಿನಕಟ್ಟೆ ಸಂಬಂಧ ಇಲ್ಲದಿದ್ದರೂ ಧ್ವಂಸ ಮಾಡುವುದರ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಿದ್ದಾರೆ. ಕಟ್ಟೆ ಧ್ವಂಸಕ್ಕೆ ಕುಮ್ಮಕ್ಕು ನೀಡಿದ ಮುಖಂಡರ ಮೇಲೂ ಕೇಸು ದಾಖಲಿಸಿ ಬಂಧಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ, ಬಿಜೆಪಿ ಮುಖಂಡ ಗೋವಿಂದ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಮಾಜಿ ಅಧ್ಯಕ್ಷ ಸಿದ್ಧರಾಮಯ್ಯ ಸೇರಿದಂತೆ ಸಾವಿರಾರು ಜನರು ಪಾಲ್ಗೊಂಡಿದ್ದರು.

ರಾಮಬಾಣ



ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರ: ಬೊಮ್ಮಾಯಿ



• **ಹಾವೇರಿ:** ನಿರ್ಗಮಿತ ಸಿಎಂ ಸಿದ್ದರಾಮಯ್ಯ ರಾಜ್ಯ ರಾಜಕಾರಣದಲ್ಲಿಯೇ ಇರುತ್ತೇನೆ ಎಂದಿರುವುದು ಡಿ.ಕೆ.ಶಿವಕುಮಾರ್‌ಗೆ ತೂಗುಗತ್ತಿ. ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲಿ ಚುನಾವಣೆ ನಡೆದರೂ ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯನವರು 4 ದಶಕಗಳ ಕಾಲ ಸುದೀರ್ಘ ರಾಜಕಾರಣದಲ್ಲಿದ್ದಾರೆ. 1983ರಲ್ಲಿ ರಾಜಕೀಯಕ್ಕೆ ಬಂದಿದ್ದರು. ಅವರು ನಮ್ಮ ತಂದೆಯವರಿಗೆ ಆತ್ಮೀಯರು, ನಮ್ಮ ತಂದೆಯವರ ಕ್ಯಾಬಿನೆಟ್‌ನಲ್ಲಿ ಸ್ಟೇಟ್ ಮಿನಿಸ್ಟರ್ ಆಗಿದ್ದರು. ನಂತರ ಕ್ಯಾಬಿನೆಟ್ ಮಂತ್ರಿ ಮಾಡಿದರು. ಎಲ್ಲಕ್ಕಿಂತ ಹೆಚ್ಚು ಅವರು ಅಹಿಂದ ಮಾಡಿದಾಗ ನಾನೊಬ್ಬನೇ ಅಹಿಂದ ವರ್ಗ ಬಿಟ್ಟು ಮುಖ್ಯ ಭಾಷಣ ಮಾಡಿದ್ದೆ. ಸಭಾಪತಿ ಬಸವರಾಜ ಹೊರಟ್ಟಿ ಅವರ ಸನ್ಮಾನ ಸಮಾರಂಭಕ್ಕೆ ಬಂದಾಗ ಅವರೇ ನೆನಪು ಮಾಡಿದ್ದರು. 2007ರಲ್ಲಿ ಜೆಡಿಎಸ್‌ನಿಂದ ಹೊರ ಬಂದು ಕಾಂಗ್ರೆಸ್‌ನಿಂದ ಉಪ ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಆಗ ನಾನು ಅವರಿಗೆ ಸಹಾಯ ಮಾಡಿದ್ದೆ. ಯಾವಾಗ ಅವರಿಗೆ ಕಷ್ಟ ಕಾಲ ಬಂದಿದೆ ಆಗ ಸಹಾಯ ಮಾಡಿದ್ದೇನೆ. ಯಾವಾಗ ಅವರು ಕಾಂಗ್ರೆಸ್‌ಗೆ ಹೋದರೋ ಆಗ ಅವರ ರಾಜಕೀಯ ಸಿದ್ಧಾಂತ ಬೇರೆಯಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರ ಬೆಂಬಲಿಗರಿಗೆ ಎಷ್ಟು ಜನರಿಗೆ ಸಚಿವ ಸ್ಥಾನ ಸಿಗುತ್ತದೆ ಅವರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎನ್ನುವುದರ ಮೇಲೆ ಭವಿಷ್ಯ ನಿಂತಿದೆ. ಈ ಮೂರು ವರ್ಷದ ಕಾಂಗ್ರೆಸ್ ಆಡಳಿತದ ಬಗ್ಗೆ ಜನರು ಭ್ರಮ ನಿರಸನಗೊಂಡಿದ್ದಾರೆ. ಎಸ್ಸಿ ಎಸ್ಟಿ, ಒಬಿಸಿ ಜನರು ಬೇಸರಗೊಂಡಿದ್ದಾರೆ. ಅಭಿವೃದ್ಧಿ ಶೂನ್ಯವಾಗಿದೆ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಶ್ಯೇಕರ್

ಡಿಕೆಶಿಯವರು ಬಾಂಗ್ಲಾದವರನ್ನು ಬ್ರದರ್ ಎನ್ನುತ್ತಾರೆ, ಅವರು ಇವರಿಗೆ ಯಾವ ರೀತಿ ಬ್ರದರ್ ಅಂತ ತಿಳಿಯುತ್ತಿಲ್ಲ
– ವೃತ್ತಾದ ಜೋಡಿ
– ಯಾವ ರೀತಿಯಲ್ಲೂ ಬ್ರದರ್ ಅಲ್ಲವಾದರೂ ಯಾವುದೋ ಭೇಟಿಯಿಂದ ಬ್ರದರ್ ಆಗಲು ಸಾಧ್ಯವಾಗಿದೆ!

ದಿನ ಭವಿಷ್ಯ

ಮೇಷ
ಕೆಲಸದ ಒತ್ತಡ ಹೆಚ್ಚಾದರೂ ನಿಮ್ಮ ಉತ್ಸಾಹಕ್ಕೆ ಕೊರತೆಯಿಲ್ಲ. ವೃತ್ತಿಯಲ್ಲಿ ಪೂರಕ ಬೆಳವಣಿಗೆ. ಕೌಟುಂಬಿಕ ಹೊಣೆ ಅಧಿಕ.

ತುಲಾ
ಹಣದ ವಿಚಾರದಲ್ಲಿ ಎಚ್ಚರದ ಹೆಜ್ಜೆಯಿಡಿ. ರಿಸ್ಕ್ ಇರುವ ಕ್ಷೇತ್ರದಲ್ಲಿ ಹಣ ಹೂಡಬೇಡಿ. ಕೆಲವರ ಟೀಕೆ ಎದುರಿಸುವಿರಿ. ಕುಟುಂಬಸ್ಥರ ಬೆಂಬಲ.

ವೃಷಭ
ಕೆಲಸದಲ್ಲಿ ಸಂಕಷ್ಟ. ಆದರೆ ಹಾನಿ ಬರದು. ತೊಂದರೆ ಉಂಟಾಗದು. ಕುರುಡಾಗಿ ಅನ್ಯರನ್ನು ಅನುಸರಿಸಬೇಡಿ. ಸ್ವಂತಿಕೆಗೆ ಗಮನ ಕೊಡಿ.

ವೃಶ್ಚಿಕ
ನಿಮ್ಮ ಕ್ರಿಯಾಶೀಲತೆ ಎಲ್ಲರ ಗಮನವನ್ನು ಸೆಳೆಯುವುದು. ವೃತ್ತಿ ಕ್ಷೇತ್ರದಲ್ಲಿ ಬಿಕ್ಕಟ್ಟಿಗೆ ಆಸ್ಪದ ನೀಡದಿರಿ. ಆರೋಗ್ಯ ಸುಸ್ಥಿರ.

ಮಿಥುನ
ವೃತ್ತಿಯಲ್ಲಿ ಹೆಚ್ಚುವರಿ ಹೊಣೆ. ಆಪ್ತಮಿತ್ರರ ಜತೆಗಿನ ಯೋಜನೆಗೆ ಅನುಕೂಲ ಸಮಯ. ಬಂಧುಗಳ ಸಹಕಾರ. ಹೊಟ್ಟೆ ನೋವು ಕಾಡೀತು.

ಧನು
ವೃತ್ತಿಯಲ್ಲಿ ಒತ್ತಡ. ಹಣಕಾಸು ಆಸಕ್ತಿ ಹೆಚ್ಚು. ಉದ್ಯಮ ಕ್ಷೇತ್ರ ವಿಸ್ತರಣೆ ಆಶಾದಾಯಕ. ಎಲ್ಲದರ ಮಧ್ಯೆ ಮನಸ್ಸಾಂತಿಗೆ ಕುಂದು.

ಕಟಕ
ವೃತ್ತಿಯಲ್ಲಿ ಒತ್ತಡ ಸರಿಸಿ. ಆದರೆ ಕುಟುಂಬದಲ್ಲಿ ಅಭಿಪ್ರಾಯ ಭೇದ, ವಾಗ್ವಾದ ಸಂಭವ. ಮುಖ್ಯ ವಿಷಯದಲ್ಲಿ ಇಬ್ಬಂದಿತನ ಕಾಡಲಿದೆ.

ಮಕರ
ಕೆಲಸದಲ್ಲಿ ಅಡ್ಡಿ. ಮಾನಸಿಕ ಖಿನ್ನತೆ. ಇತರರ ವಿಷಯದಲ್ಲಿ ಕೊರತೆ. ದಂಪತಿ ಮಧ್ಯೆ ವಾಗ್ವಾದ ನಡೆದೀತು. ಹಣಕಾಸು ಪರಿಸ್ಥಿತಿ ಸ್ಥಿರ.

ಸಿಂಹ
ಧಾರ್ಮಿಕ ಕ್ಷೇತ್ರದಲ್ಲಿ ಸಕ್ರಿಯರಾಗುವ ಅವಕಾಶ. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಆರೋಗ್ಯ ಸಮಸ್ಯೆ ಶಮನ. ಸಂಗಾತಿಯ ಸೌಹಾರ್ದ.

ಕುಂಭ
ದೀರ್ಘಕಾಲದ ಬಳಿಕ ಆರ್ಥಿಕ ವೃದ್ಧಿ. ಹೂಡಿಕೆಯಿಂದ ಲಾಭ. ಇತರರು ಹೇಳುವುದನ್ನು ಬೇಗ ನಂಬುತ್ತೀರಿ. ಜಲಮರ್ಮ ಜಳಿತ.

ಕನ್ಯಾ
ಪ್ರಮುಖ ವ್ಯಕ್ತಿಯ ಸಂಪರ್ಕ ಸಾಧಿಸುವಿರಿ. ನಿಮ್ಮ ಕಾರ್ಯಕ್ಕೆ ನೆರವು ದೊರಕಲಿದೆ. ಧೈಹಿಕ ನೋವು ಇದ್ದರೆ ಇಂದು ಶಮನವಾದೀತು.

ಮೀನ
ಫಲಪ್ರದ ದಿನ. ಆದರೂ ದಿನವಿಡೀ ಒತ್ತಡ. ದಿನಾಂತ್ಯದ ಆಹ್ಲಾದದಲ್ಲಿ ಪ್ರೀತಿಪಾತ್ರರ ಸಂಗದಲ್ಲಿ ಸಂಭ್ರಮಿಸುವ ಅವಕಾಶ. ಖರ್ಚು ಹೆಚ್ಚಳಿದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,7,0,4

ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅಭಿಮತ

ಯುವಕರಿಗೆ ರವಿಶಂಕರ್ ಗುರೂಜಿ ಮಾದರಿ

• **ಬೆಂಗಳೂರು:** ಯುವ ಮನಸ್ಸುಗಳು ಆತ್ಮನಿಯಂತ್ರಣದಿಂದ ಮುನ್ನಡೆಯಬೇಕೇ ಹೊರತು ವ್ಯಸನಗಳಿಂದಲ್ಲ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಬೆಂಗಳೂರಿನಲ್ಲಿ ನಡೆದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಹಾಗೂ ರವಿಶಂಕರ್ ಗುರೂಜಿ ಅವರ 70ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, ಯುವ ಮನಸ್ಸುಗಳು ಹಾನಿಕಾರಕ ವ್ಯಸನಗಳಿಗಿಂತ ಹೆಚ್ಚಾಗಿ ಆತ್ಮನಿಯಂತ್ರಣ ಮತ್ತು ಸಕಾರಾತ್ಮಕ ಮೌಲ್ಯಗಳಿಂದ ಮಾರ್ಗ ದರ್ಶನ ಪಡೆಯಬೇಕು ಎಂದರು. ಆಧುನಿಕತೆ ಮತ್ತು ಪ್ರಾಚೀನ ಪರಂಪರೆ ಪರಸ್ಪರ ಪೂರಕವಾಗಿವೆ. ಯುವಜನರು ಪ್ರಾಚೀನ ಮತ್ತು ಆಧುನಿಕತೆಯನ್ನು ಒಟ್ಟಿಗೆ ಕೊಂಡೊಯ್ಯಬಹುದಾದ ಸ್ಫೂರ್ತಿದಾಯಕ ಮಾದರಿಯನ್ನು ರವಿಶಂಕರ್ ಗುರೂಜಿ ಸಮಾಜದ ಮುಂದೆ ಇಟ್ಟಿದ್ದಾರೆ. ಸಂಸ್ಥೆಯ ಸೇವಾ ಆಧಾರಿತ ಉಪಕ್ರಮಗಳಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಭಕ್ತಿ ಎಂದರೆ ಕೇವಲ ಆರಾಧನೆಯಲ್ಲ. ಭಕ್ತಿ ಎಂದರೆ ಸ್ವತಃ ತನ್ನ ಬಗ್ಗೆ, ಕುಟುಂಬ, ಸಮಾಜ, ರಾಷ್ಟ್ರ ಮತ್ತು ಮಾನವೀಯತೆಯೆಡೆಗಿನ ಸಮರ್ಪಣೆಯಾಗಿದೆ. ನಿಜವಾದ ಭಕ್ತಿ ಎಂದರೆ ಮಾನವೀಯತೆಗೆ ಸಮರ್ಪಿಸಿಕೊಳ್ಳುವುದು. ಆಧ್ಯಾತ್ಮಿಕತೆಯು ಜನರು ಇತರರೊಂದಿಗೆ ಶಾಂತಿಯಿಂದ ಬದುಕುವುದನ್ನು ಕಲಿಸುತ್ತದೆ ಮತ್ತು ಜೀವನವನ್ನು ಅರ್ಥಪೂರ್ಣ ಹಾಗೂ ಪರಿಪೂರ್ಣವಾಗಿಸುತ್ತದೆ ಎಂದು ಉಪ ರಾಷ್ಟ್ರಪತಿಯವರು ಹೇಳಿದರು.

ಸಂಘರ್ಷ ಮತ್ತು ಅನಿಶ್ಚಿತತೆಯಿಂದ ಕೂಡಿದ ಜಗತ್ತಿನಲ್ಲಿ ರವಿಶಂಕರ್ ಅವರು ಧ್ಯಾನ, ಜಾಗೃತಿ, ಶಾಂತಿ ಮತ್ತು ಸಾಮರಸ್ಯದ ಮೌಲ್ಯಗಳೊಂದಿಗೆ ಮಾನವಕುಲಕ್ಕೆ ಪ್ರೇರಣೆ ನೀಡುತ್ತಿದ್ದಾರೆ. ಧ್ಯಾನ, ಸೇವೆ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಪರಿಸರ ಉಪಕ್ರಮ ಗಳು ಮತ್ತು ಸರ್ವಧರ್ಮ ಸಂವಾದಗಳ ಮೂಲಕ ಸಾಮಾಜಿಕ ಪರಿವರ್ತನೆಯಲ್ಲಿ ಆಧ್ಯಾತ್ಮಿಕತೆಯು ವಹಿಸಬಹುದಾದ ಪ್ರಮುಖ ಪಾತ್ರವನ್ನು ಆರ್ಟ್ ಆಫ್ ಲಿವಿಂಗ್ ಪ್ರದರ್ಶಿಸಿದೆ. ಆರ್ಟ್ ಆಫ್ ಲಿವಿಂಗ್ ಆಂದೋಲನವು ಖಂಡಗಳು, ಸಂಸ್ಕೃತಿಗಳು ಮತ್ತು ತಲೆಮಾರುಗಳಾದ್ಯಂತ ಲಕ್ಷಾಂತರ ಜನರ ಜೀವನವನ್ನು ಸ್ಪರ್ಶಿಸಿದೆ. 181 ದೇಶಗಳಲ್ಲಿ ಕೇಂದ್ರಗಳನ್ನು ಹೊಂದಿದೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ಪ್ರೀತಿ, ಶಾಂತಿ, ಸೇವೆ, ಸಾಮರಸ್ಯದ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಿಂಸಾ ಮುಕ್ತ ಮತ್ತು ಒತ್ತಡ- ಮುಕ್ತ ಸಮಾಜ ನಿರ್ಮಾಣಕ್ಕೆ ಆಧ್ಯಾತ್ಮಿಕತೆ, ಮಾನವೀಯ ಸೇವೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಜಾಗತಿಕ ಚಳವಳಿ ಕರ್ನಾಟಕದ ಪವಿತ್ರ ನೆಲದಲ್ಲಿ ಬೇರು ಬಿಟ್ಟಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿ. ಮಾನವೀಯ ಸೇವೆಯೊಂದಿಗೆ ಪರಿಸರ ಸಂರಕ್ಷಣೆಯಲ್ಲಿಯೂ ಸಂಸ್ಥೆಯು ಮಹತ್ವದ ಕೊಡುಗೆ ನೀಡುತ್ತಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳು, ಸ್ವಚ್ಛ ಮರುಬಳಕೆ ನವೀನತೆಗಳು ಹಾಗೂ ಗ್ರಾಮೀಣ ವಿದ್ಯುದ್ದೀಕರಣ ಉಪಕ್ರಮಗಳ ಮೂಲಕ ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ ಎಂದರು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ರವಿಶಂಕರ್ ಗುರೂಜಿ ಉಪಸ್ಥಿತರಿದ್ದರು.

ನರೇಂದ್ರ ಮೋದಿಯಿಂದ ಡಿಜಿಟಲ್ ಇಂಡಿಯಾ



• **ದಾವಣಗೆರೆ:** ಭಾರತವನ್ನು ತಾಂತ್ರಿಕ ಪ್ರಗತಿ ಮತ್ತು ಜಾಗತಿಕ ಜ್ಞಾನದ ನಾಯಕತ್ವದತ್ತ ಮುನ್ನಡೆಸುವ ಯುವ ಪ್ರತಿಭೆಗಳನ್ನು ರೂಪಿಸುವಲ್ಲಿ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶುಕ್ರವಾರ ಕಾಲೇಜಿನ ಅಮೃತ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಭಾರತವು ತಂತ್ರಜ್ಞಾನ, ನಾವೀನ್ಯತೆ ಮತ್ತು ತನ್ನ ಯುವಶಕ್ತಿಯ ಅಪಾರ ಬಲದಿಂದ ಪ್ರೇರಿತವಾದ ಪರಿವರ್ತನಾ ಯುಗಕ್ಕೆ ಸಾಕ್ಷಿಯಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಸ್ಕಿಲ್ ಇಂಡಿಯಾ, ಸೆಮಿಕಂಡಕ್ಟರ್ ತಯಾರಿಕೆ, ಹಸಿರು ಇಂಧನ ಮತ್ತು ಆತ್ಮನಿರ್ಭರ ಭಾರತದಂತಹ ಉಪಕ್ರಮಗಳು ಯುವ ಇಂಜಿನಿಯರ್, ಸಂಶೋಧಕರು ಮತ್ತು ಉದ್ಯಮಿಗಳಿಗೆ ಅಭೂತಪೂರ್ವ ಅವಕಾಶ ಸೃಷ್ಟಿಸುತ್ತಿವೆ. 2047ರೊಳಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಭಾರತದ ಆಶಯವು ಬಹುಮಟ್ಟಿಗೆ ಇಂಜಿನಿಯರ್, ವಿಜ್ಞಾನಿಗಳು, ಸಂಶೋಧಕರು ಮತ್ತು ಉದ್ಯಮಿಗಳ ಮೇಲೆ ಅವಲಂಬಿತವಾಗಿದೆ ಎಂದರು.

ಯುಬಿಡಿಟಿ ಕಾಲೇಜಿನ 75 ವರ್ಷಗಳ ಪಯಣವು ದೃಷ್ಟಿಕೋನ, ಪರಿಶ್ರಮ, ಶೈಕ್ಷಣಿಕ ಶ್ರೇಷ್ಠತೆ ಮತ್ತು ಸಮಾಜಸೇವೆಯ ಪ್ರತಿಬಿಂಬವಾಗಿದೆ. ದೂರದೃಷ್ಟಿಯ ಸಂಸ್ಥಾಪಕರು, ಬದ್ಧತೆಯುಳ್ಳ ಶಿಕ್ಷಕರು, ಸಮರ್ಪಿತ ಆಡಳಿತಗಾರರು, ಪರಿಶ್ರಮಿ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳ ಕೊಡುಗೆಗಳಿಂದ ಶ್ರೇಷ್ಠ ಸಂಸ್ಥೆಗಳು ತಲೆಮಾರುಗಳ ಅವಧಿಯಲ್ಲಿ ನಿರ್ಮಾಣವಾಗುತ್ತವೆ. ಬ್ರಹ್ಮಶ್ರೀ ದೇವೇಂದ್ರಪ್ಪ ತಪನಪ್ಪನವರ್ ರವರ ದೂರದೃಷ್ಟಿಯ ದಾನಶೀಲತೆ ಮತ್ತು ಸಂಸ್ಥೆಯ ಸ್ಥಾಪನೆಗೆ ಆಶೀರ್ವಾದ ನೀಡಿದ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರ ಕೊಡುಗೆ ಸ್ಮರಣೀಯ. ಇಂತಹ ಸಂಸ್ಥೆಗಳು ಶಿಕ್ಷಣ ಮತ್ತು ರಾಷ್ಟ್ರ ನಿರ್ಮಾಣದತ್ತ ತಮ್ಮ ಶಾಶ್ವತ ಬದ್ಧತೆಯ ಮೂಲಕ ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತವೆ ಎಂದು ಪ್ರಶಂಸಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮಾಜಿ ಸಚಿವರಾದ ಎಂ.ಸಿ.ಸುಧಾಕರ್, ಎಸ್.ಎಸ್.ಮಲ್ಲಿಕಾರ್ಜುನ್, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇದ್ದರು.

ಡಿ.ಕೆ.ಶಿವಕುಮಾರ್‌ಗೆ ಇಂದು ಪಟ್ಟ

ಪುಟ 1➡ ಬಳಿಕ ಲೋಕಭವನಕ್ಕೆ ಮಾಹಿತಿ ರವಾನಿಸಲಾಗುತ್ತದೆ.

ದಿಲ್ಲಿಯಲ್ಲಿ ಬಿರುಸಿನ ಚಟುವಟಿಕೆ: ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಹೊಸದಿಲ್ಲಿಗೆ ತೆರಳಿದ್ದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಶುಕ್ರವಾರ ದಿನವಿಡಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು. ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಭಾವನೀಯ ಸಿಎಂ ಡಿ.ಕೆ.ಶಿವಕುಮಾರ್ ಇಬ್ಬರೂ ಪ್ರತ್ಯೇಕವಾಗಿ ತಮ್ಮದೇ ಆದ ಕಾರ್ಯತಂತ್ರಗಳಲ್ಲಿ ತೊಡಗಿಸಿಕೊಂಡಿದ್ದರು.

ಸೋನಿಯಾ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ: 10 ಜನಪಥ್‌ನಲ್ಲಿರುವ ಸೋನಿಯಾ ಗಾಂಧಿ ನಿವಾಸದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದ ಸಿದ್ದರಾಮಯ್ಯ ಅವರು, ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದ ತಿಳಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ನನ್ನನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಂಡಿದ್ದೀರಿ. ನಾನು ನಿಮಗೆ ನೀಡಿದ ಮಾತಿನಂತೆ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರ ಬಳಿ ಹೇಳಿದ್ದಾರೆ.

ಸಿದ್ದರಾಮಯ್ಯ-ರಾಹುಲ್ ಆಲಿಂಗನ

ಪುಟ 1➡ ಬಳಿಕ ರಾಜಾಜಿ ಮಾರ್ಗದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ ನೀಡಿ, ತಮಗೆ ಸಹಕಾರ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಬಳಿಕ ಲೋಧಿ ರಸ್ತೆಯಲ್ಲಿರುವ ಕೆ.ಸಿ.ವೇಣುಗೋಪಾಲ್ ನಿವಾಸಕ್ಕೆ ತೆರಳಿ ವೇಣುಗೋಪಾಲರನ್ನು ಭೇಟಿಯಾಗಿ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಹೈಕಮಾಂಡ್ ನಾಯಕರ ಭೇಟಿಯ ಸಿದ್ದರಾಮಯ್ಯ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ.



ಖರ್ಗೆ ಆಶೀರ್ವಾದ ಪಡೆದ ಡಿಕೆಶಿ

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್ ಇಬ್ಬರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಅಲ್ಲದೇ ಮಲ್ಲಿಕಾರ್ಜುನ ಖರ್ಗೆ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡರು. ಅಂತೆಯೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್, ಹೊಸ ಸರ್ಕಾರ ರಚನೆ ಬಗ್ಗೆ ಮಾತುಕತೆ ನಡೆಸಿದ್ದಾರೆ.

ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ

ಪುಟ 1➡ ಈ ಮೂಲಕ ಸಿದ್ದರಾಮಯ್ಯ ನೇತೃತ್ವದ ಸಂಪುಟ ವಿಸರ್ಜನೆಗೊಂಡಿದೆ. ಆದರೆ, ಮುಂದಿನ ಸರ್ಕಾರ ರಚನೆಯಾಗುವವರೆಗೂ ಹಂಗಾಮಿಯಾಗಿ ಮುಂದುವರಿಯುವಂತೆ ರಾಜ್ಯಪಾಲರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ. ರಾಜ್ಯ ಸಚಿವ ಸಂಪುಟ ವಿಸರ್ಜನೆಗೊಂಡಿರುವ ಬಗ್ಗೆ ಗೆಜೆಟ್ ಅಧಿಸೂಚನೆ ಪ್ರಕಟವಾಗಿದ್ದು, ಸಚಿವರಿಗೆ ಹಂಚಿಕೆಯಾಗಿದ್ದ ಸರ್ಕಾರಿ ವಾಹನಗಳನ್ನು ವಾಪಸ್ ತೆಗೆದುಕೊಳ್ಳಲಾಗಿದೆ. ಹೀಗಾಗಿ ಮಾಜಿ ಸಚಿವರೆಲ್ಲರೂ ಖಾಸಗಿ ವಾಹನಗಳಿಗೆ ಶಿಫ್ಟ್ ಆಗಿದ್ದಾರೆ. ಇನ್ನೊಂದೆಡೆ ಸಚಿವರ ಸರ್ಕಾರಿ ನಾಮಫಲಕಗಳನ್ನು ತೆರವುಗೊಳಿಸಲಾಗಿದೆ.

ಆಪ್ತರ ಪಟ್ಟಿ ಹಿಡಿದು ದಿಲ್ಲಿಗೆ ತೆರಳಿದ್ದ ಡಿಕೆಶಿ: ಡಿ.ಕೆ.ಶಿವಕುಮಾರ್, ತಮ್ಮ ಕ್ಯಾಬಿನೆಟ್ ಸಚಿವರ ಅಂತಿಮ ಪಟ್ಟಿಯೊಂದಿಗೆ ದಿಲ್ಲಿಗೆ ತೆರಳಿದ್ದರು. ವಿಮಾನದಲ್ಲೇ ಕುಳಿತು ಆಪ್ತ ಶಾಸಕರ ಪಟ್ಟಿಯನ್ನು ಪರಿಶೀಲಿಸಿರುವ ಅವರು, ಹೈಕಮಾಂಡ್ ನಾಯಕರಿಗೆ ಇದನ್ನೇ ಸಲ್ಲಿಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಹೈಕಮಾಂಡ್ ಒಪ್ಪಿಗೆ ನೀಡಿದರೆ, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರದ ಜತೆ ಜತೆಯಲ್ಲೇ ಸಚಿವರ ಪದಗ್ರಹಣವೂ ನಡೆಯುವ ಸಾಧ್ಯತೆಯಿದೆ.

> ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ 2 ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಕರ್ನಾಟಕ ಹಾಗೂ ಕಾಂಗ್ರೆಸ್ ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ.
> ■ **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಸಂಸದರಿಂದ ಸೇತುವೆ ಕಾಮಗಾರಿ ಪರಿಶೀಲನೆ

• **ಬೈಂದೂರು:** ಕರಾವಳಿ ಹಾಗೂ ಮಲೆನಾಡು ಭಾಗದ ಸಂಪರ್ಕ ಕ್ರಾಂತಿಗೆ ಅತ್ಯಂತ ನಿರ್ಣಾಯಕವಾಗಿರುವ ರಾಷ್ಟ್ರೀಯ ಹೆದ್ದಾರಿ-766ಸಿ ರಸ್ತೆ ಅಭಿವೃದ್ಧಿ ಯೋಜನೆಯಡಿ, ಕರಾವಳಿ ಹಿನ್ನೀರಿನ ಬೆಳ್ಳೂಡಿ ಪ್ರದೇಶದಲ್ಲಿ ತಲೆಎತ್ತಲಿರುವ ಎರಡು ಪ್ರಮುಖ ಬೃಹತ್ ಸೇತುವೆಗಳ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಸಂಸದ ಬಿ. ವೈ. ರಾಘವೇಂದ್ರ ಅವರು ಸಂಬಂಧಿಸಿದ ರಾಷ್ಟ್ರೀಯ ಹೆದ್ದಾರಿ ವಲಯದ ಹಿರಿಯ ಇಲಾಖಾ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ಜಂಟಿ ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಒಟ್ಟು 13.832 ಕಿ.ಮೀ ಉದ್ದದ ಸಂಪೂರ್ಣ ಮರು-ಜೋಡಣೆ ಒಳಗೊಂಡಿರುವ ಈ ಬೃಹತ್ ಯೋಜನೆಯ ಒಟ್ಟು ಮಂಜೂರಾದ ವೆಚ್ಚ ರೂ. 313.56 ಕೋಟಿ. ಮಲೆನಾಡಿನ ಸಾರಿಗೆ ವ್ಯವಸ್ಥೆಯನ್ನೇ ಬದಲಾಯಿಸಲಿರುವ ಈ ಯೋಜನೆಯ ಪ್ರಗತಿಯನ್ನು ವೇಗಗೊಳಿಸಲು ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರೊಂದಿಗೆ ಸವಿಸ್ತಾರವಾಗಿ ಚರ್ಚಿಸಿದರು.

ಮಾಜಿ ಸಚಿವ ವೆಂಕಟರಮಣಪ್ಪ ನಿಧನ

• **ಬೆಂಗಳೂರು:** ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ವೆಂಕಟರಮಣಪ್ಪ (80) ಶುಕ್ರವಾರ ನಿಧನರಾಗಿದ್ದಾರೆ. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದು, ಪುತ್ರ ಶಾಸಕ ಹೆಚ್.ವಿ. ವೆಂಕಟೇಶ್, ಕುಮಾರಸ್ವಾಮಿ, ಪುತ್ರಿ ಪದ್ಮಾವತಿ ಅವರನ್ನು ಅಗಲಿದ್ದಾರೆ. ಅನಾರೋಗ್ಯಕ್ಕೀಡಾಗಿದ್ದ ವೆಂಕಟರಮಣಪ್ಪ ಅವರನ್ನು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೆಂಕಟರಮಣಪ್ಪ ಅವರು 2008ರ ಅವಧಿಯಲ್ಲಿ ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ, 2018ರಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಒಟ್ಟು ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾಗಿದ್ದರು. ಪಟ್ಟಣದ ಗುರುಭವನದಲ್ಲಿ ಇಂದು ಮಧ್ಯಾಹ್ನ ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕ ಅಂತಿಮ ದರ್ಶನಕ್ಕೆ ಇಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಣ್ಯರ ಕಂಬನಿ

ಮಾಜಿ ಸಚಿವ ವೆಂಕಟರಮಣಪ್ಪ ನಿಧನಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವರಾದ ಡಾ.ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್, ಶಿವರಾಜ್ ತಂಗಡಗಿ, ಕೃಷ್ಣ ಬೈರೇಗೌಡ ಸೇರಿದಂತೆ ಹಲವು ನಾಯಕರು ಕಂಬನಿ ಮಿಡಿದಿದ್ದಾರೆ.

ಕಟ್ಟಿಣ ಹಳ್ಳದಲ್ಲಿ ಪತ್ತೆಯಾದ ಚಾಲುಕ್ಯರ ಹೊಸ ಶಾಸನ | ಲಕ್ಕುಂಡಿ ಅಭಿವೃದ್ಧಿಗೆ ವಿಶೇಷ ಒತ್ತು

ಪ್ರಾಧಿಕಾರಕ್ಕೆ 300ಕ್ಕೂ ಹೆಚ್ಚು ಪ್ರಾಚ್ಯಾವಶೇಷ ಹಸ್ತಾಂತರ

▸ ರುದ್ರಗೌಡ ಪಾಟೀಲ

• **ಗದಗ:** ದಕ್ಷಿಣ ಭಾರತದ ಶಿಲ್ಪ ಕಲೆಯ ತೊಟ್ಟಿಲು ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಐತಿಹ್ಯವಿರುವ 101 ಗುಡಿ, 101 ಭಾವಿಗಳನ್ನು ಪತ್ತೆ ಹಚ್ಚಿ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವ ಕನಸು ಕಂಡಿರುವ ಸರ್ಕಾರಕ್ಕೆ ಮತ್ತಷ್ಟು ಬಲ ಬಂದಿದೆ. ರೈತನೋರ್ವ ತಮ್ಮ ಜಮೀನಿನಲ್ಲಿ ಕಾಣಲಾಗಿದ್ದ 300ಕ್ಕೂ ಹೆಚ್ಚು ಪ್ರಾಚ್ಯಾವಶೇಷ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದ್ದಾರೆ.

ಗ್ರಾಮದ ಪ್ರಸಿದ್ಧ ಮಾಣಿಕೇಶ್ವರ ಮತ್ತು ಮುಸ್ಕಿನ ಭಾವಿ ಕಲ್ಯಾಣಿಯ ಕೂಗಳತೆಯ ದೂರದಲ್ಲಿರುವ ರೈತ ಬಸಪ್ಪ ಮುಸ್ಕಿನಭಾವಿ ಜಮೀನಿನ ಬದುವಿನಲ್ಲಿ ಹೂತು ಹೋಗಿದ್ದ 300 ಪ್ರಾಚ್ಯಾವಶೇಷಗಳನ್ನು ಬಯಲು ವಸ್ತು ಸಂಗ್ರಾಲಯಕ್ಕೆ ಹಸ್ತಾಂತರಿಸಿದ್ದು ಮುಕ್ತಿಗೆ ವ್ಯಕ್ತವಾಗಿದೆ.

3 ಬಾವಿ, ಶಾಸನ ತೋರಿಸಿದ ಬಸಪ್ಪ: ತನ್ನ ಜಮೀನಿನಲ್ಲಿ 300 ಪ್ರಾಚ್ಯಾವಶೇಷಗಳು ಸೇರಿದಂತೆ ಪ್ರಾಚ್ಯಾವಶೇಷಗಳಿಂದ ನಿರ್ಮಾಣವಾದ ಗ್ರಾಮದ ವಿವಿಧ ಭಾಗಗಳಲ್ಲಿದ್ದ ಕಳ್ಳಿಮಠ, ಉಪಾಧ್ಯಾಯ, ಮತ್ತು ಕಟ್ಟರ ಭಾವಿಗಳನ್ನು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ತಂದಿರುವ ಬಸಪ್ಪ ಅವರು ಕಟ್ಟಿಣ ಹಳ್ಳದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದನ್ನು ತೋರಿಸಿದ್ದು ಈ ಶಾಸನವು ಅತ್ಯಂತ ಮಹತ್ವದ್ದಾಗಿದೆ.



ಎಚ್‌ಕೆಪಿ ಶ್ಲಾಘನೆ

ಮಾಜಿ ಸಚಿವ ಎಚ್.ಕೆ.ಪಾಟೀಲ ರೈತ ಬಸಪ್ಪ ಮುಸ್ಕಿನಭಾವಿಗೆ ದೂರವಾಣಿ ಮೂಲಕ ಸಂಪರ್ಕ ಮಾಡಿ ರೈತನ ಕಾರ್ಯವನ್ನು ಶ್ಲಾಘಿಸಿ ಪ್ರಾಚ್ಯಾವಶೇಷಗಳ ಅನ್ವೇಷಣೆಗೆ ಸರ್ಕಾರ ಜತೆಗೆ ಕೈಜೋಡಿಸಿದ್ದು ಉತ್ತಮ ಕಾರ್ಯವಾಗಿದೆ. ಸರ್ಕಾರದಿಂದ ನಿಮಗೆ ಬಹುಮಾನ ನೀಡುವ ಕಾರ್ಯವನ್ನು ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಚಾಲುಕ್ಯ ಚಕ್ರವರ್ತಿ ಶಾಸನ: ಲಕ್ಕುಂಡಿಯಿಂದ ಸುಮಾರು 2-3 ಕಿ.ಮೀ. ದೂರದಲ್ಲಿರುವ ಕಟ್ಟಿ ಹಳದಲ್ಲಿ ನಾಥವಾಗಿ ಬಿದ್ದಿರುವ ಶಾಸನವು ಕಲ್ಯಾಣ ಚಾಲುಕ್ಯರಸರ ಕಾಲದ್ದಾಗಿದೆ. ಇದೊಂದು ಹೊಸ ಶಾಸನವಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಒಂದು ತುಂಡು ಶಾಸನವಾಗಿದ್ದು 13 ಸಾಲುಗಳನ್ನು ಒಳಗೊಂಡಿದೆ. ಚಾಲುಕ್ಯ ಪ್ರಶಸ್ತಿ ಹೆಸರಿರುವ ಈ ಶಾಸನವು ಚಾಲುಕ್ಯ ಚಕ್ರವರ್ತಿ 2ನೇ ಜಗದೇಕಮಲ್ಲ ನಾಳ್ಗೆಯನ್ನು ಸೂಚಿಸುತ್ತದೆ. ಇದರಲ್ಲಿ ಕುಂತಳನಾಡು, ಮಾಸವಾಡಿ ಆಡಳಿತದ ಘಟಕಗಳ ಉಲ್ಲೇಖವಿದೆ.

ಜಗದೇಕಮಲ್ಲ ದೇವನು ಒಬ್ಬ ಮಹಾಮಂಡಲೇಶ್ವರನ ಪ್ರಶಸ್ತಿಯನ್ನು ಹೊಗಳಿದೆ. ಆದರೆ, ಅವನ ಹೆಸರು ಲಭ್ಯವಿಲ್ಲ. ಶಾಸನದ ಭಾಗ ಬಹುತೇಕ ತುಂಡಾಗಿಹೋಗಿರುವುದರಿಂದ ಹೆಚ್ಚಿನ ವಿವರಗಳು ಅಲಭ್ಯ. ಶಾಸನದ ಆರಂಭದಲ್ಲಿ ಶಿವಸ್ತುತಿ ಇರುವುದರಿಂದ ಶಿವಾಲಯಕ್ಕೆ ಭೂದಾನ ಕೊಟ್ಟ ಶಾಸನವಾಗಿರಬಹುದು. ಶಾಸನದ ಸ್ಪಷ್ಟ ಕಾಲ ಲಭ್ಯವಿಲ್ಲ. ಜಗದೇಕಮಲ್ಲನ ಆಳ್ವಿಕೆಯ ಕಾಲ ಕ್ರಿಶ 1139-1149 ಹಾಗಾಗಿ ಹತ್ತು ವರ್ಷದ ರಾಜ್ಯಾಡಳಿತ ಅವಧಿಯಲ್ಲಿ ಈ ಶಾಸನ ರಚನೆಯಾಗಿದೆ. ಲಿಪಿ ದೃಷ್ಟಿಯಿಂದ ಶಾಸನದ ಕಾಲ 12ನೇ ಶತಮಾನದ ರಚನೆ ಎಂದು ಶಾಸನ ಸಂಶೋಧಕ ಡಾ.ರವಿಕುಮಾರ ನವಲಗುಂದ ಸಂಶೋಧಿಸಿದ್ದಾರೆ ಎಂದು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಲಹಾ ಸಮಿತಿಯ ಸದಸ್ಯ ಸಿದ್ದಲಿಂಗೇಶ್ವರ ಪಾಟೀಲ ಹಾಗೂ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

> ಲಕ್ಕುಂಡಿ ಜತೆ ತಮ್ಮೂರಿನ ಇತಿಹಾಸ ಬೆಳಕಿಗೆ ಬರಲು ಪ್ರಾಚ್ಯಾವಶೇಷಣೆಯಲ್ಲಿ ಪಾಲ್ಗೊಂಡು ಇಲ್ಲಿಯ ಸಂಸ್ಕೃತಿ, ಸಂಪ್ರದಾಯ ಎತ್ತರಕ್ಕೆ ಬೆಳೆಯಲು ಸಹಕರಿಸುತ್ತಿದೆ.
> ■ **ಎಚ್.ಕೆ.ಪಾಟೀಲ,** ಮಾಜಿ ಸಚಿವ

> ಗ್ರಾಮದ ಹಿರಿಯರು, ಯುವಕರು ಪ್ರಾಚ್ಯಾವಶೇಷಗಳ ಅನ್ವೇಷಣೆಯಲ್ಲಿ ಭಾಗವಹಿಸಿ ಈವರೆಗೂ 3 ಸಾವಿರಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆಯಾಗಲು ಬೆನ್ನೆಲುಬಾಗಿ ನಿಂತಿದ್ದು ಸಂತಸ ತಂದಿದೆ.
> ■ **ಸಿದ್ದಲಿಂಗೇಶ್ವರ ಪಾಟೀಲ,** ಸದಸ್ಯ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ

> ನಮ್ಮ ಜಮೀನಿನ ಬದುವಿನಲ್ಲಿ ಹಳೆಯ ಕಾಲದ ಗುಡಿಯ ಕಲ್ಲುಗಳು ಹಲವಾರು ವರ್ಷಗಳಿಂದ ಇದ್ದಿದ್ದವು ಅವುಗಳನ್ನು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಸಿದ್ದು ಪಾಟೀಲ ಅವರಿಗೆ ತಿಳಿಸಿ ಹಸ್ತಾಂತರ ಮಾಡಿದ್ದೇವೆ.
> ■ **ಬಸಪ್ಪ ಮುಸ್ಕಿನಭಾವಿ,** ರೈತ


ಜೂ.5ರಿಂದ 21ರವರೆಗೆ ವಿಶೇಷ ಕಾರ್ಯಕ್ರಮ



ಕಲಬುರಗಿ: ಪ್ರಧಾನಮಂತ್ರಿ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರವು ದೇಶ ಮೊದಲು ಎಂಬ ಧ್ಯೇಯದೊಂದಿಗೆ ಕಳೆದ 12 ವರ್ಷಗಳಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಜೂನ್ 7ಕ್ಕೆ 12 ವರ್ಷಗಳನ್ನು ಪೂರ್ಣಗೊಳಿಸಲಿದೆ. ಈ ನಿಟ್ಟಿನಲ್ಲಿ ದೇಶಾದ್ಯಂತ ಜೂನ್ 5ರಿಂದ 21ರ ವರೆಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪಕ್ಷದ ಸಂಘಟನೆ ಹಾಗೂ ಮುಂಬರುವ ದಿನಗಳಲ್ಲಿ ನಡೆಸುವ ಹೋರಾಟಗಳ ಕುರಿತಾದ ಜಿಲ್ಲಾ ಮಟ್ಟದ ಸಂಘಟನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಕೇಂದ್ರ ಸರ್ಕಾರವು ಬಡವರು, ಶೋಷಿತರು ಮತ್ತು ವಂಚಿತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು, ರೈತರ ಹಿತಾಸಕ್ತಿ ರಕ್ಷಣೆ, ಮಹಿಳಾ ಸಬಲೀಕರಣ, ದೇಶದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದೆ ಎಂದರು.

ಜಾಗತಿಕ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿ ವಿಕಸಿತ ಭಾರತ ಗುರಿಯತ್ತ ಸರ್ಕಾರ ವೇಗವಾಗಿ ಸಾಗುತ್ತಿದೆ.ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ದೀರ್ಘಕಾಲ ಸೇವೆ ಸಲ್ಲಿಸುತ್ತಿರುವ ನಿರಂತರವಾಗಿ ಚುನಾಯಿತ ಪ್ರಧಾನಮಂತ್ರಿಗಳಲ್ಲಿ ಒಬ್ಬರಾಗಿದ್ದು, ಸಾರ್ವಜನಿಕ ಸೇವೆಯಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲು ಸಾಧಿಸಿದ್ದು, ಎನ್‌ಡಿಎ ಸರ್ಕಾರದ 12 ವರ್ಷಗಳ ವಿಶ್ವಾಸ ಅಭಿವೃದ್ಧಿ ಮತ್ತು ಜನಕಲ್ಯಾಣ ಕಾರ್ಯಕ್ರಮದ ಅಂಗವಾಗಿ ಜೂನ್ 5ರಿಂದ 21ರವರೆಗೆ ದೇಶಾದ್ಯಂತ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಸೂಚನೆ ನೀಡಿದ್ದಾರೆ ಎಂದರು. ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಮಾಜಿ ಸಂಸದ ಡಾ.ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯ ಬಿ.ಜಿ. ಪಾಟೀಲ್ ಇದ್ದರು.



ಚಿಕ್ಕಬಳ್ಳಾಪುರದಲ್ಲಿ ಶುಕ್ರವಾರ ಸೇವಂತಿಗೆ ಹೂ ಬಿಡಿಸುವ ಕಾರ್ಯದಲ್ಲಿ ನಿರತರಾದ ಮಹಿಳೆಯರು.

ಭೀಮಾತೀರದಲ್ಲಿ 6 ಮಂದಿ ಹತ್ಯೆ

ವಿಜಯಪುರ/ಚಡಚಣ: ಕೆಲ ದಿನಗಳಿಂದ ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದಿದ್ದು, ಒಂದೇ ಕುಟುಂಬದ ಐದು ಜನ ಸೇರಿ 6 ಜನರನ್ನು ಕಬ್ಬು ಕಡಿಯುವ ಕೊಯ್ತಾದಿಂದ ಕೊಚ್ಚಿ ಬರ್ಬರ ಹತ್ಯೆ ಮಾಡಿರುವ ಘಟನೆ ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ಚಂದು ರೇವಣಸಿದ್ದಪ್ಪ ನಿರಾಳೆ (55), ದುಂಡಪ್ಪ ರೇವಣಸಿದ್ದ ನಿರಾಳೆ (65), ಶಿವಪುತ್ರ ರೇವಣಸಿದ್ದಪ್ಪ ನಿರಾಳೆ (58), ರಾಹುಲ್ ಶಿವಪುತ್ರ ನಿರಾಳೆ (25), ಸಮರ್ಥ ಶಿವಪುತ್ರ ನಿರಾಳೆ (23) ಹಾಗೂ ಶಬ್ಬೀರ್ ಬಾಬುಸಾಬ್ ಅತ್ತಾರ (45) ಮೃತಪಟ್ಟವರು. ಇನ್ನು ಈ ಘಟನೆಯಲ್ಲಿ ಅರವಿಂದ ಯಶವಂತ ಕಟಗೆ (72), ಸಂದೀಪ ಭಾರತೆ ಮಾನೆ (33) ಗಾಯಗೊಂಡಿದ್ದಾರೆ. ಚಡಚಣದ ನಿರಾಳೆ ಕುಟುಂಬವು ನೀವರಗಿಯ ತೇಲಿ ಕುಟುಂಬದಿಂದ ಗೋವಿಂದಪುರ ಗ್ರಾಮದ ಸುಮಾರು 25 ಎಕರೆ ಭೂಮಿಯನ್ನು ಖರೀದಿಸಿದ್ದರು. ನೀವರಗಿ ಗ್ರಾಮದ ತೇಲಿ ಕುಟುಂಬ ಮತ್ತು ಆರೋಪಿಗಳು ಎನ್ನಲಾದ ಗೋಳಗಿ ಎಂಬವರ ಮಧ್ಯೆ ಕಳೆದ 15– 16 ವರ್ಷಗಳಿಂದ ಈ ಜಮೀನಿನ ಕುರಿತು ವಿವಾದವಿತ್ತು. ತೇಲಿ ಕುಟುಂಬ ಕಳೆದ 15 ವರ್ಷಗಳಿಂದ ಈ ಜಮೀನಿನಲ್ಲಿ ಕೃಷಿ ಮಾಡುತ್ತಿರಲಿಲ್ಲ. ಅಲ್ಲದೆ ಅದನ್ನು ಚಡಚಣದ ನಿರಾಳೆ ಕುಟುಂಬಕ್ಕೆ ಮಾರಾಟ ಮಾಡಿತ್ತು. ಈ ಜಮೀನಿನ ವ್ಯಾಜ್ಯವೇ 6 ಜನರ ಕೊಲೆಗೆ ಕಾರಣವಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಆರೋಪಿಗಳ ಪತ್ತೆಗೆ ವಿಶೇಷ ತಂಡ

ಶುಕ್ರವಾರ ನಡೆದ ಘಟನೆಯಲ್ಲಿ ಒಂದೇ ಕುಟುಂಬದ ಐವರು ಸೇರಿದಂತೆ ಒಟ್ಟು ಆರು ಮಂದಿ ಮೃತಪಟ್ಟಿರುವುದು ಭೀಮಾತೀರ ಪ್ರದೇಶವನ್ನು ಬೆಚ್ಚಿ ಬೀಳಿಸಿದೆ. ಘಟನೆ ಗ್ರಾಮದಲ್ಲಿ ಆತಂಕದ ವಾತಾವರಣ ಸೃಷ್ಟಿಸಿದ್ದು, ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಆರೋಪಿಗಳ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಕಿರುಸುದ್ದಿ

ಒತ್ತಡಕ್ಕೆ ಮಣಿದು ಸಿಎಂ ರಾಜೀನಾಮೆ: ಅಶೋಕ



ಭಟ್ಕಳ: ರಾಜ್ಯ ಕಾಂಗ್ರೆಸ್ ಹೈಕಮಾಂಡಿಗೆ ಎ.ಟಿ.ಎಂ ಯಂತ್ರ ಆಗಲಿದೆ ಎಂದು ರಾಜ್ಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಭಟ್ಕಳದಲ್ಲಿ ಮೂರಿನಕಟ್ಟೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹುದ್ದೆಯನ್ನು ಸಿದ್ದರಾಮಯ್ಯ ಬಿಟ್ಟು ಕೊಟ್ಟಿಲ್ಲ ಡಿ.ಕೆ.ಶಿವಕುಮಾರ ಅವರು ಅದನ್ನು ಕಿತ್ತುಕೊಂಡಿದ್ದಾರೆ. ಅವರ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಸ್ವಲ್ಪವೂ ಕಾಲಾವಕಾಶ ನೀಡದೆ ರಾಜೀನಾಮೆ ಪಡೆದಿದೆ ಎಂದರೆ ಕಾಂಗ್ರೆಸ್ ಹೈಕಮಾಂಡ್ ಕಣ್ಣಟ್ಟ ಎ.ಟಿ.ಎಂಗೆ ಡಿ.ಕೆ. ಶಿವಕುಮಾರ ಮುಖ್ಯಸ್ಥರಾಗಲಿದ್ದಾರೆ ಎಂದು ವ್ಯಂಗ್ಯವಾಡಿದರು. ಸಿದ್ದರಾಮಯ್ಯ ಅವರ ಅವಧಿಯಲ್ಲಿದ್ದ ಭ್ರಷ್ಟಾಚಾರ ಈಗ ಇನ್ನಷ್ಟು ಹೆಚ್ಚಲಿದ್ದು, ರಾಜ್ಯದ ಜನತೆ ಸಮಸ್ಯೆ ಹೆಚ್ಚಲಿದೆ.ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಇಬ್ಬರೂ ಒಂದೇ ಮನಸ್ಥಿತಿಯವರಾಗಿದ್ದು, ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಕ್ಕೆ ಯತ್ನಿಸಿದ ಉಗ್ರನನ್ನು ಬ್ರದರ್ ಎಂದು ಕರೆದ ಡಿ.ಕೆ.ಶಿವಕುಮಾರ ಸಿಎಂ ಆದರೆ ಯಾವ ಪರಿಸ್ಥಿತಿ ಇರಲಿದೆ ಎನ್ನುವುದನ್ನು ಯೋಚಿಸಬೇಕಿದೆ ಎಂದು ಹೇಳಿದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ ಇದ್ದರು.

ಹಣ ದುರುಪಯೋಗ; ಮೂವರು ಇಒ ಅಮಾನತು

ಮಧುಗಿರಿ: ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೃತ್ತ, ಸ್ವಯಂ ನಿವೃತ್ತಿ ಹಾಗೂ ಮರಣ ಹೊಂದಿದ ಸರ್ಕಾರಿ ನೌಕರರ ಗಳಿಕೆ ರಜೆ ನಗದೀಕರಣದಲ್ಲಿ ಬರೋಬ್ಬರಿ 4,24,06,997ರೂ. ಗಳ ಬೃಹತ್ ಆರ್ಥಿಕ ಅಕ್ರಮ ನಡೆದಿರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಮೂವರು ಕಾರ್ಯನಿರ್ವಾಹಕ ಅಧಿಕಾರಿಗಳನ್ನು (ಇಒ) ಸೇವೆಯಿಂದ ತಕ್ಷಣವೇ ಅಮಾನತುಗೊಳಿಸಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ಕಾರ್ಯದರ್ಶಿ ಜಯಲಕ್ಷ್ಮಿ ಆದೇಶ ಹೊರಡಿಸಿದ್ದಾರೆ. ವಿಶೇಷ ಲೆಕ್ಕ ಪರಿಶೋಧನಾ ತಂಡವು ನಡೆಸಿದ ಪರಿಶೀಲನೆಯಲ್ಲಿ ಈ ಭ್ರಷ್ಟಾಚಾರ ಬೆಳಕಿಗೆ ಬಂದಿದೆ.
ಅಮಾನತುಗೊಂಡ ಅಧಿಕಾರಿಗಳು: ದೊಡ್ಡಸಿದ್ದಯ್ಯ ಹಿಂದಿನ ಇಒ, ಮಧುಗಿರಿ – ಹಾಲಿ ಇಒ, ಚಿಕ್ಕನಾಯಕನಹಳ್ಳಿ, ಲಕ್ಷ್ಮಣ್ ಹಾಲಿ ಇಒ, ಮಧುಗಿರಿ, ಶಶಿಧರ್ ಎಚ್ ಹಿಂದಿನ ಇಒ, ಮಧುಗಿರಿ – ಹಾಲಿ ಇಒ, ಚಳ್ಳಕೆರೆ, ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ.

ರಸ್ತೆ ಅಪಘಾತ: ಐವರು ಸಾವು

ಚಿತ್ರದುರ್ಗ: ಕಾರಿನ ಟೈರ್ ಸ್ಫೋಟಗೊಂಡ ಪರಿಣಾಮ ಲಾರಿಗೆ ಕಾರಿಗೆ ಡಿಕ್ಕಿ ಹೊಡೆದು ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಐದು ಜನ ಮೃತಪಟ್ಟಿರುವ ಘಟನೆ ಮೊಳಕಾಲ್ಮೂರು ತಾಲೂಕಿನ ತುಮಕೂರ್ಲಹಳ್ಳಿ ಬಳಿಯ ಶ್ರೀನಿವಾಸ ಡಾಬಾ ಬಳಿ ಗುರುವಾರ ರಾತ್ರಿ ಸಂಭವಿಸಿದೆ. ಮೃತರನ್ನು ಚಳ್ಳಕೆರೆ ನಗರದ ನಿವಾಸಿಗಳಾದ ಕಾರಿನ ಚಾಲಕ ರಘು (40), ರುದ್ರೇಶ್ (36), ಮಲ್ಲಿಕಾರ್ಜುನ (38), ಚಳ್ಳಕೆರೆ ನಗರಸಭೆ ಸದಸ್ಯ ಪ್ರಮೋದ್ (35) ಹಾಗೂ ಚಳ್ಳಕೆರೆ ತಾಲ್ಲೂಕಿನ ಮೀರದಿಮ್ಮನಹಳ್ಳಿ ನಿವಾಸಿ ಸೋಮಶೇಖರ (35) ಎಂದು ಗುರುತಿಸಲಾಗಿದೆ.

ಸಿಎಂ ರಾಜೀನಾಮೆ ಕುರಿತು ಡಿ.ಕೆ.ಶಿವಕುಮಾರ್ ಎಕ್ಸ್‌ನಲ್ಲಿ ಭಾವನಾತ್ಮಕ ಪೋಸ್ಟ್

ಮೇರು ನಾಯಕ ಸಿದ್ದು

ಬೆಂಗಳೂರು: ದೇವರು ವರನೂ ಕೊಡಲ್ಲ, ಶಾಪನೂ ಕೊಡಲ್ಲ. ಅವಕಾಶ ಮಾತ್ರ ಕೊಡುತ್ತಾನೆ. ಆ ಕೊಟ್ಟಿರುವ ಅವಕಾಶದಲ್ಲಿ ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಮುಖ್ಯ. ಇದಕ್ಕೆ ಅತ್ಯುತ್ತಮ ಉದಾಹರಣೆಯೇ ನಮ್ಮ ಸಿದ್ದರಾಮಯ್ಯನವರು ಎಂದು ಸಿದ್ದರಾಮಯ್ಯ ರಾಜೀನಾಮೆ ಕುರಿತು ಡಿ.ಕೆ. ಶಿವ ಕುಮಾರ್ ಭಾವನಾತ್ಮಕವಾಗಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮೈಸೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದು, ಹೋರಾಟದ ಮೂಲಕ ರಾಜಕೀಯಕ್ಕೆ ಬಂದು, ಸಾಮಾಜಿಕ ನ್ಯಾಯದ ಹರಿಕಾರ ಹಾಗೂ ಬಡವರ ಬಂಧುವಾಗಿ ಕರ್ನಾಟಕದ ಮುಖ್ಯಮಂತ್ರಿ ಯಾಗಿ ಸೇವೆ ಸಲ್ಲಿಸಿದ ನನ್ನ ಆತ್ಮೀಯರಾದ ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ, ಪ್ರಭಾವಶಾಲಿ ಹಾಗೂ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಜನಮಾನಸದಲ್ಲಿ ನೆಲೆಸಿರುವ ಅವರು, ಭಾರತೀಯ ರಾಜಕಾರಣದ ಧೀಮಂತ ನಾಯಕ.

ಜನಪರ ಯೋಜನೆಗಳಿಂದ ಹಿಡಿದು ರಾಜ್ಯದಲ್ಲಿ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಅವಿಸ್ಮರಣೀಯ. ಸುಮಾರು ಐವತ್ತು ವರ್ಷಗಳ ಅವರ ಅಗಾಧ ರಾಜಕೀಯ ಅನುಭವ, ಸಾಮಾಜಿಕ ಕಳಕಳಿ ಮತ್ತು ಜನಪರ ಯೋಜನೆಗಳು ಸದಾ ಸ್ಮರಣೀಯ. 2020ರಲ್ಲಿ ನಾನು ಕೆಪಿಸಿಸಿ ಅಧ್ಯಕ್ಷ ನಾಗಿ ಆಯ್ಕೆಯಾದ ದಿನದಿಂದಲೂ ಇಂದಿನವರೆಗೆ, ಸಿದ್ದರಾಮಯ್ಯನವರು ನನ್ನ ಹೆಗಲಿಗೆ ಹೆಗಲು ಕೊಟ್ಟು ಪಕ್ಷ ಸಂಘಟನೆಯಲ್ಲಿ ಜೊತೆಯಾಗಿ ನಿಂತಿದ್ದಾರೆ.

ಅವರ ಆಡಳಿತದಲ್ಲಿ ನಾನು ಸಚಿವನಾಗಿ, ಡಿಸಿಎಂ ಆಗಿ ಮಾರ್ಗದರ್ಶನ ಪಡೆದು ಕೊಂಡಿದ್ದು ನನ್ನ ಭಾಗ್ಯ. ಮುಂದಿನ ದಿನಗಳಲ್ಲೂ ರಾಜ್ಯದ ಹಿತದೃಷ್ಟಿಯಿಂದ ಹಾಗೂ ನಮ್ಮ ಪಕ್ಷದ ಬಲವರ್ಧನೆಗೆ ಅವರ ಮಾರ್ಗದರ್ಶನ, ಹಿರಿಯ ಅನುಭವ ನಮಗೆ ಹೀಗೆಯೇ ಮುಂದುವರಿಯಲಿ ನಾವೆಲ್ಲರೂ ಒಟ್ಟಾಗಿ ನಡೆಯೋಣ ಎಂದು ಆಶಿಸುತ್ತೇನೆ. ಕರ್ನಾಟಕದ ಪ್ರಗತಿಗಾಗಿ ಎಂದು ಪೋಸ್ಟ್ ಮಾಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಶ್ಲಾಘಿಸಿದ ಮಲ್ಲಿಕಾರ್ಜುನ ಖರ್ಗೆ



ಹೊಸದಿಲ್ಲಿ/ಬೆಂಗಳೂರು: ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಶ್ಲಾಘಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿರುವ ಅವರು, ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನ ಸದಾ ಗೌರವ, ಕರುಣೆ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಯನ್ನು ಪ್ರತಿಬಿಂಬಿಸಿದೆ ಎಂದು ಖರ್ಗೆ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಜೀವನದ ಆರಂಭದಿಂದಲೇ ಸಮಾನತೆ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಿದ್ದಾರೆ. ಸರಳ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಎರಡು ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ತಿಳಿಸಿದ್ದಾರೆ. ಕರ್ನಾಟಕ ಹಾಗೂ ಕಾಂಗ್ರೆಸ್ ಪಕ್ಷವು ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಸಿದ್ದರಾಮಯ್ಯ ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾರೈಸಿದ್ದಾರೆ.

ಅಹಿಂದ ಧ್ವಜ ಹಿಡಿದು ಮುನ್ನಡೆಯುತ್ತೇನೆ: ಸತೀಶ್

ಬೆಂಗಳೂರು: ಅಹಿಂದ ಅಂದರೆ ಸುಮಾರು 500 ಜಾತಿಗಳಿವೆ. ನಾನು ಅಹಿಂದ ಧ್ವಜ ಹಿಡಿದು ಮುನ್ನಡೆಯುತ್ತೇನೆ. ಯಾರಾದರೂ ಒಬ್ಬರು ಅಹಿಂದ ಧ್ವಜ ಒಯ್ಯಲೇಬೇಕಲ್ವಾ? ಹೊಸ ಅಹಿಂದ ನಾಯಕ ಉದಯ ಆಗಲೇಬೇಕು, ಆ ವ್ಯವಸ್ಥೆ ರಾಜ್ಯದಲ್ಲಿದೆ ಎಂದು ಸತೀಶ್ ಜಾರಕಿಹೊಳಿ ತಿಳಿಸಿದರು.

ಸಚಿವ ಸ್ಥಾನಕ್ಕಾಗಿ ಶಾಸಕರಿಂದ ಲಾಬಿ

ಬೆಂಗಳೂರು: ರಾಜೀನಾಮೆ ಪ್ರಹಸನ ಮುಗಿಯುತ್ತಿದ್ದಂತೆ ಸಿಎಂ ಮತ್ತು ಡಿಸಿಎಂ ದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದಂತೆ ಬೆಂಬಲಿಗ ಶಾಸಕರು ಮತ್ತು ಕೆಲ ವಿಧಾನ ಪರಿಷತ್ತಿನ ಸದಸ್ಯರು ಕೂಡ ಅವರನ್ನು ಹಿಂಬಾಲಿಸಿದ್ದಾರೆ. ಡಜನ್‌ಗೂ ಹೆಚ್ಚು ಶಾಸಕರು ಅಲ್ಲಿಯೇ ಬೀಡುಬಿಟ್ಟು, ಸಂಪುಟದಲ್ಲಿ ಸೇರಲು ಲಾಬಿ ಶುರು ಮಾಡಿದ್ದಾರೆ.

ಕೆಲ ಶಾಸಕರು ಶುಕ್ರವಾರ ಬೆಳಿಗ್ಗೆ ದೆಹಲಿಗೆ ಹಾರಿದ್ದರೆ, ಹಲವರು ರಾತ್ರಿಯೇ ತೆರಳಿದ್ದಾರೆ. ಜಾತಿ, ಪ್ರದೇಶ, ಪಕ್ಷನಿಷ್ಠೆ, ವ್ಯಕ್ತಿನಿಷ್ಠೆ ಹೀಗೆ ವಿವಿಧ ನೆಲೆಗಳಲ್ಲಿ ತಮ್ಮ ನಾಯಕರ ಮೇಲೆ ಪ್ರಭಾವ ಬೀರಲು ಕಸರತ್ತು ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ದೆಹಲಿ ನಾಯಕರನ್ನೂ ಭೇಟಿಯಾಗಲು ಯತ್ನಿಸುತ್ತಿದ್ದಾರೆ.

ಕ್ಷೇತ್ರದ ಪ್ರಮುಖ ಮುಖಂಡರೊಂದಿಗೆ ದೆಹಲಿ ಪ್ರಯಾಣ ಬೆಳೆಸಿರುವ ಶಾಸಕರು ಮತ್ತು ಮೂರ್ನಾಲ್ಕು ಜನ ಮೇಲ್ಮನೆ ಸದಸ್ಯರು, ತಮ್ಮ ರಾಜಕೀಯ ಪಯಣ ಸೇರಿದಂತೆ ಯುಕ್ತ ಮಾಹಿತಿಯ ಪ್ರತಿ ಹಿಡಿದುಕೊಂಡು ನಾಯಕರ ಸಂಪರ್ಕಕ್ಕೆ ಯತ್ನಿಸುತ್ತಿದ್ದಾರೆ. ಈ ತಂಡದಲ್ಲಿ 3 ಮತ್ತು ಅದಕ್ಕಿಂತ ಹೆಚ್ಚು ಸಲ ಶಾಸಕರಾದವರು ಹಾಗೂ ಯುವ ಶಾಸಕರೂ ಇದ್ದಾರೆ. ಇದರಲ್ಲಿ ಕೆಲವರು ಡಿ.ಕೆ. ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡವರಿದ್ದರೆ, ಹಲವರು ಸಿದ್ದರಾಮಯ್ಯ ಅವರಿಗೆ ನಿಷ್ಠರಾದವರು ಆಗಿದ್ದಾರೆ.

ಈ ಎರಡೂ ಬಣಗಳ ಹೊರತಾಗಿ ಪಕ್ಷಕ್ಕೆ ನಿಷ್ಠರಾಗಿದ್ದು, ವರಿಷ್ಠರ ಕೋಟಾದಲ್ಲಿ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ಹವಣಿಕೆಯಲ್ಲೂ ಕೆಲವರಿದ್ದಾರೆ. ಸಂಪುಟದಲ್ಲಿ ಸ್ಥಾನ ಸಿಗದಿದ್ದರೂ, ಕೊನೆಪಕ್ಷ ನಿಗಮ–ಮಂಡಳಿಯಾದರೂ ಸಿಗಬಹುದು ಎಂಬ ಲೆಕ್ಕಾಚಾರವೂ ಇದರ ಹಿಂದಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಒಳಗೊಂಡಂತೆ ಸಂಪುಟ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ ನಾಯಕರು ಈಗಾಗಲೇ ತಮ್ಮದೇ ಆದ ಪಟ್ಟಿ ಸಿದ್ಧಪಡಿಸಿಟ್ಟುಕೊಂಡಿದ್ದಾರೆ. ಅದನ್ನು ಕ್ರೋಢೀಕರಿಸಿ, ಅಂತಿಮ ಪಟ್ಟಿಯನ್ನು ವರಿಷ್ಠರ ಮುಂದಿಡಲಾಗುತ್ತದೆ ಎಂದು ಹೇಳಲಾಗಿದೆ.

ಕೋಲಾರಕ್ಕೆ ಮೂರು ಸಚಿವ ಸ್ಥಾನ ಕೊಡಿ

ಈ ಮಧ್ಯೆ ಕೋಲಾರ ಜಿಲ್ಲೆಯ ಕಾಂಗ್ರೆಸ್ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದು, ಜಿಲ್ಲೆಗೆ ಒಟ್ಟು ಮೂರು ಸಚಿವ ಸ್ಥಾನಗಳನ್ನು ನೀಡುವಂತೆ ಒತ್ತಾಯಿಸಿದ್ದಾರೆ. ಕೋಲಾರ ಜಿಲ್ಲೆಯ ಶಾಸಕರಿಗೆ ಸಾಮಾಜಿಕನ್ಯಾಯ ಮತ್ತು ಜಾತಿ ಸಮೀಕರಣದ ಆಧಾರದ ಮೇಲೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿರುವ ಮುಖಂಡರು, ಈ ಪೈಕಿ ಸತತ ಮೂರು ಬಾರಿ ಗೆದ್ದಿರುವ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಪರಿಶಿಷ್ಟ ಜಾತಿ (ಬಲಗೈ) ಕೋಟಾದಡಿ ಸಚಿವ ಸ್ಥಾನ ನೀಡಬೇಕು. ಅದೇ ರೀತಿ, ಎರಡನೇ ಬಾರಿ ಆಯ್ಕೆಯಾದ ಮಾಲೂರಿನ ಶಾಸಕ ಕೆ.ವೈ. ನಂಜೇಗೌಡ ಮತ್ತು ಕೋಲಾರ ಶಾಸಕ ಕೊತ್ತೂರು ಜಿ. ಮಂಜುನಾಥ್ ಅವರಿಗೆ ಸಾಮಾನ್ಯ ಕೋಟಾದಡಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಒಬಿಸಿಗೆ ರಾಹುಲ್ ಅಪಮಾನ: ಶ್ರೀರಾಮುಲು



ಬಳ್ಳಾರಿ: ಒಬಿಸಿ ನಾಯಕರ ಬಗ್ಗೆ ಮಾರುದ್ದ ಮಾತನಾಡುತ್ತಿದ್ದ ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಒಬಿಸಿ ಪ್ರಬಲ ನಾಯಕ ಸಿಎಂ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಒಬಿಸಿ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನ ಮಂತ್ರಿ ಮೋದಿ ಅವರ ಸಂಪುಟದಲ್ಲಿ ಎಷ್ಟು ಜನರು ಒಬಿಸಿ ಅವರಿದ್ದಾರೆ ಎಂದು ಪ್ರಶ್ನಿಸುತ್ತಿದ್ದ ರಾಹುಲ್ ಗಾಂಧಿ ಮಾಡಿದ್ದೇನು?. ಕುರುಬ ಸಮಾಜದ, ಒಬಿಸಿ ವರ್ಗದ ಪ್ರಭಾವಿ ನಾಯಕ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಅವರನ್ನು ಅಪಮಾನ ಮಾಡಿದ್ದಾರೆ. ಇದು ರಾಜ್ಯದ ಒಬಿಸಿ ಎಲ್ಲ ನಾಯಕರ ಕಣ್ಣನ್ನು ಕೆಂಪಾಗಿಸಿದೆ ಎಂದರು.

ಕುರುಬ ಸಮುದಾಯದವರು ಹೋರಾಟದ ಹಾದಿ ತುಳಿದಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ಕೆಳಗಿಳಿಸಲಾಗಿದೆ. ಸಿದ್ದರಾಮಯ್ಯ ಅವರ ಮೊಗದಲ್ಲಿ ತೀವ್ರ ದುಃಖ ಕಾಣಿಸುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯನ್ನಾಗಿ ಮುಂದುವರಿಯಲು ಕೈ ನಾಯಕರು ಬಿಡಲಿಲ್ಲ. ಒತ್ತಾಯದಿಂದ ಅವರನ್ನು ರಾಹುಲ್ ರಾಜೀನಾಮೆ ಕೊಡಿಸಿದ್ದಾರೆ. ಕಾಂಗ್ರೆಸ್‌ನ ಈ ಬೆಳವಣಿಗೆ ಇಡೀ ಒಬಿಸಿ ಸಮುದಾಯವರನ್ನು ಕೆರಳಿಸಿದೆ ಎಂದರು.

3 ವರ್ಷ ಸಿದ್ದರಾಮಯ್ಯ ಅವರನ್ನು ನೆಮ್ಮದಿಯಿಂದ ಆಡಳಿತ ನಡೆಸಲು ಬಿಡಲಿಲ್ಲ. ಅವರ ಕುರ್ಚಿ ಕಾಲನ್ನು ಡಿಕೆಶಿ, ಖರ್ಗೆ ಅವರು ಎಳೆಯುತ್ತಿದ್ದರು. ಬಹುತೇಕ ಆಕಾಂಕ್ಷಿಗಳು ಸಿಎಂ ಕುರ್ಚಿಯನ್ನು ಎಳೆದಾಡಿ,ಎಳೆದಾಡಿ ಕುರ್ಚಿ ಸಡಿಲವಾಗಿತ್ತು. ಬ್ಯಾಲೆನ್ಸ್ ತಪ್ಪಿರುವ ಕುರ್ಚಿಯನ್ನು ಡಿ.ಕೆ.ಶಿವಕುಮಾರ ಅವರಿಗೆ ಕೊಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಅಧಿಕಾರಕ್ಕೆ ತರಲು ಸಂಕಲ್ಪ

ರಾಜ್ಯದಿಂದ ಕಾಂಗ್ರೆಸ್ ತೊಲಗಬೇಕು ಎಂದು ಜನರು ಸಂಕಲ್ಪ ಮಾಡಿದ್ದಾರೆ. 2028ರಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ. ಇದರಲ್ಲಿ ಅನುಮಾನವೇ ಬೇಡ. ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಕಾಂಗ್ರೆಸ್ ದೊಡ್ಡ ತಪ್ಪು ಮಾಡಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಿದ್ದರಾಮಯ್ಯ ಅವರಿಂದಲೇ ಹೆಚ್ಚು ಶಾಸಕರು ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ನಿಂದ ಸಿದ್ದರಾಮಯ್ಯ ಅಲ್ಲ, ಸಿದ್ದರಾಮಯ್ಯ ಅವರಿಂದಲೇ ಕಾಂಗ್ರೆಸ್ ಇದೆ. ಇದನ್ನು ವರಿಷ್ಠರು ಮರೆತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎಲ್ಲ ಸಮುದಾಯದವರು ಸೇರಿ ಕಾಂಗ್ರೆಸ್ ಮುಗಿಸುವ ಕೆಲಸ ಮಾಡಲಿದ್ದಾರೆ ಎಂದರು.

ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ಧ

ಬೆಂಗಳೂರು: ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಪಕ್ಷ ನೀಡುವ ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ಧ ಎಂದು ಮಾಜಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಈ ಹಿಂದೆ ಪೌರಾಡಳಿತ ಸಚಿವನಾಗಿ ಹಲವು ಸುಧಾರಣೆ ತಂದಿದ್ದೇನೆ. ಸಮ್ಮಿಶ್ರ ಸರ್ಕಾರದ ಸಮಯದಲ್ಲಿ ಮತ್ತು ಬಿಜೆಪಿ ಆಡಳಿತ ಇದ್ದಾಗ 5 ವರ್ಷಗಳ ಕಾಲ ಕೆಪಿಸಿಸಿ ಕಾರ್ಯಾಧ್ಯಕ್ಷನಾಗಿ ಪಕ್ಷ ಸಂಘಟನೆಗಾಗಿ ಶ್ರಮಿಸಿದ್ದೇನೆ. ವರಿಷ್ಠರು ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧ ಎಂದರು. ಪಕ್ಷ ನಿಷ್ಠರು ಮತ್ತು ದಕ್ಷತೆಯಿಂದ ಕೆಲಸ ಮಾಡಿದವರನ್ನು ಕಾಂಗ್ರೆಸ್ ಪಕ್ಷ ಸದಾ ಗುರುತಿಸಿ, ಸ್ಥಾನಮಾನ ನೀಡಿದೆ. ನಾನು ಪ್ರಸ್ತುತ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷನೂ ಆಗಿದ್ದು, ನಮ್ಮ ಸಮುದಾಯಕ್ಕೆ ಸೂಕ್ತ ಸ್ಥಾನ ಮಾನ ದೊರಕಬೇಕು. ಹೆಚ್ಚಿನ ಶಾಸಕರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂಬುದು ನನ್ನ ಆಶಯ ಎಂದರು.

ಪಕ್ಷ ಯಾವುದೇ ಜವಾಬ್ದಾರಿ ನೀಡಿದರೂ ಕಾಯ, ವಾಚ, ಮನಸಾ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುತ್ತೇನೆ. ಪಕ್ಷದ ವರಿಷ್ಠರು, ಸಮಾಜದ ವಿವಿಧ ಸ್ತರಗಳ ಜನರು ಅರಣ್ಯ ಸಚಿವನಾಗಿ ನಾನು ಮಾಡಿರುವ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಘಟಿತ ಪ್ರಯತ್ನದಿಂದ ಪಕ್ಷಕ್ಕೆ ಬಲ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ಸ್ವಇಚ್ಛೆಯಿಂದ ರಾಜೀನಾಮೆ ನೀಡಿರುವುದಾಗಿ ಹೇಳಿದ್ದಾರೆ. ಜೊತೆಗೆ ರಾಜ್ಯ ರಾಜಕಾರಣದಲ್ಲೇ ಇದ್ದು ಪಕ್ಷ ಬೆಳೆಸುವುದಾಗಿ ತಿಳಿಸಿದ್ದಾರೆ. ಕಳೆದ 3 ವರ್ಷಗಳಲ್ಲಿ ಅವರು ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿ ಉತ್ತಮವಾಗಿ ಸರ್ಕಾರ ಕೊಟ್ಟಿದ್ದಾರೆ. ಅವರ ಹೆಗಲಿಗೆ ಹೆಗಲು ಕೊಟ್ಟು ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಗಳಾಗಿ ಉತ್ತಮ ಕಾರ್ಯ ಮಾಡಿದ್ದಾರೆ. ಉಪ ಚುನಾವಣೆಗಳಲ್ಲಿ ಪಕ್ಷ ಜಯಭೇರಿ ಬಾರಿಸಿದೆ. ತಾವೂ ಉಪ ಚುನಾವಣೆಗಳಲ್ಲಿ ಪಕ್ಷದ ಪರ ಪ್ರಚಾರ ಮಾಡಿದ್ದೇನೆ ಎಂದ ಅವರು ಕಳೆದ ಸಚಿವ ಸಂಪುಟದಲ್ಲಿದ್ದ ಎಲ್ಲ ಸಚಿವರೂ ತಮ್ಮ ಜವಾಬ್ದಾರಿ ನಿಭಾಯಿಸಿದ್ದಾರೆ. ಎಲ್ಲರ ಸಂಘಟಿತ ಪ್ರಯತ್ನದಿಂದ ಪಕ್ಷಕ್ಕೆ ಹೆಚ್ಚಿನ ಬಲ ಬರಲಿದೆ ಎಂದರು.

ಕೆಂಗಲ್ ಹನುಮಂತಯ್ಯ ಬಳಿಕ ಸಿಎಂ ಹುದ್ದೆಗೇರಿದ ಜಿಲ್ಲೆಯ 2ನೇ ನಾಯಕ ಡಿ.ಕೆ.ಶಿವಕುಮಾರ್!

ಬೆಂ.ದಕ್ಷಿಣ ಜಿಲ್ಲೆಗೆ ಐದು ಬಾರಿ ಮುಖ್ಯಮಂತ್ರಿ ಸ್ಥಾನ

ಎಸ್. ರುದ್ರೇಶ್ವರ

ರಾಮನಗರ: ರಾಜ್ಯಕ್ಕೆ ನಾಲ್ವರು ಮುಖ್ಯಮಂತ್ರಿಗಳನ್ನು ಕೊಡುಗೆಯಾಗಿ ನೀಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೂಲಕ ಐದನೇ ಬಾರಿಗೆ ಮುಖ್ಯಮಂತ್ರಿ ಸ್ಥಾನ ಸಿಗುವ ನಿರೀಕ್ಷೆ ದಟ್ಟವಾಗಿದೆ.

ಬೆಂ.ದಕ್ಷಿಣ (ರಾಮನಗರ) ಜಿಲ್ಲೆಯಿಂದ ಕಾಂಗ್ರೆಸ್ ಸರ್ಕಾರದಲ್ಲಿ ಸಿಎಂ ಗಾದಿ ಅಲಂಕರಿಸಿದವರಲ್ಲಿ 2ನೇ ನಾಯಕ ಎಂಬ ಪ್ರಶಂಸೆಗೆ ಪಾತ್ರರಾಗಲಿದ್ದಾರೆ. ಈ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಕೆಂಗಲ್ ಹನುಮಂತಯ್ಯ ಮುಖ್ಯ ಮಂತ್ರಿಯಾಗಿದ್ದರು. ಆ ನಂತರ ಜನತಾ ಪಕ್ಷ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ, ಜನತಾದಳ ಸರ್ಕಾರದಲ್ಲಿ ಎಚ್.ಡಿ. ದೇವೇಗೌಡ ಹಾಗೂ ಜೆಡಿಎಸ್–ಬಿಜೆಪಿ, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರಗಳಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯ ಮಂತ್ರಿಗಳಾಗಿ ಆಡಳಿತ ನಡೆಸಿದ್ದರು.

ವಿಧಾನಸೌಧದ ನಿರ್ಮಾತೃ ಮಾಜಿ ಸಿಎಂ ಕೆಂಗಲ್ ಹನುಮಂತಯ್ಯ ಮೂಲತಃ ರಾಮನಗರ ತಾಲ್ಲೂಕಿನವರು. 1952 ಮತ್ತು 1957ರ ಚುನಾವಣೆಗಳಲ್ಲಿ ರಾಮನಗರ ಕ್ಷೇತ್ರದಿಂದ ಕೆಂಗಲ್ ಆಯ್ಕೆ ಯಾಗಿದ್ದರು. 1952ರ ಮೊದಲ ವಿಧಾನಸಭೆಯಲ್ಲಿ ಮೈಸೂರು ರಾಜ್ಯದ ಪ್ರಭಾವಿ ನಾಯಕರಾಗಿದ್ದ ಕೆಂಗಲ್ ಅವರಿಗೆ ಮುಖ್ಯಮಂತ್ರಿ ಪದವಿ ಒಲಿದು 4 ವರ್ಷ 5 ತಿಂಗಳು ಆಡಳಿತ ನಡೆಸಿದ್ದರು.



ಎಚ್‌ಡಿಡಿಗೆ ಪ್ರಧಾನಮಂತ್ರಿ ಹುದ್ದೆ

ಆ ಚುನಾವಣೆಯಲ್ಲಿ ರಾಮನಗರದಿಂದಲೇ ಗೆದ್ದ ದೇವೇಗೌಡರು ಮುಖ್ಯಮಂತ್ರಿ ಹುದ್ದೆಗೇರಿ 17 ತಿಂಗಳು ಆಡಳಿತ ನಡೆಸಿದರು. ಇಷ್ಟು ಮಾತ್ರವಲ್ಲದೆ, ರಾಮನಗರ ಪ್ರತಿನಿಧಿಯಾಗಿದ್ದಾಗಲೇ ಪ್ರಧಾನಮಂತ್ರಿ ಹುದ್ದೆಯೂ ಒಲಿಯಿತು. ಪ್ರಧಾನಿಯಾದ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 2004ರಲ್ಲಿ ರಾಮನಗರ ಕ್ಷೇತ್ರದಿಂದ ವಿಧಾನಸಭೆಗೆ ಮೊದಲ ಬಾರಿ ಪ್ರವೇಶಿಸಿದ ಕುಮಾರಸ್ವಾಮಿ ಜೆಡಿಎಸ್ – ಬಿಜೆಪಿ ಮೈತ್ರಿ ಸರ್ಕಾರದಲ್ಲಿ 20 ತಿಂಗಳು ಮುಖ್ಯಮಂತ್ರಿಯಾದರು. ಆನಂತರ 2018ರಲ್ಲಿ ಜೆಡಿಎಸ್ – ಕಾಂಗ್ರೆಸ್ ದೋಸ್ತಿ ಸರ್ಕಾರದಲ್ಲಿ 2ನೇ ಬಾರಿ ಕೇವಲ 14 ತಿಂಗಳು ಸಿಎಂ ಹುದ್ದೆ ನಿಭಾಯಿಸಿದ್ದರು. ಈಗ 2026ರಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವ ಯೋಗ ಕೂಡಿ ಬಂದಿದೆ.

ದಿಗಂತ ವಿಶೇಷ

1983ರಲ್ಲಿ ರಾಜ್ಯದಲ್ಲಿ ಮೊಟ್ಟದ ಮೊದಲ ಬಾರಿಗೆ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಿತು. ಬಿಜೆಪಿ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ ಅವರಿಗೆ ಸಿಎಂ ಹುದ್ದೆ ಒಲಿದಿತ್ತು. ಆದರೆ, ಹೆಗಡೆಯವರು ಉಭಯ ಸದನಗಳ ಸದಸ್ಯರಾಗಿರಲಿಲ್ಲ.

ಆರು ತಿಂಗಳೊಳಗೆ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರಾಗಬೇಕಿತ್ತು. ಅವರಿಗಾಗಿ ಕನಕಪುರದಿಂದ ಚುನಾಯಿತರಾಗಿದ್ದ ಪಿ.ಜಿ.ಆರ್. ಸಿಂಧ್ಯಾ ಸ್ಥಾನ ತೆರವು ಮಾಡಿಕೊಟ್ಟರು. ಕನಕಪುರದಲ್ಲಿ ನಡೆದ ಮರು ಚುನಾವಣೆಯಲ್ಲಿ ಬನ್ನಿಮಕೋಡ್ಲು ಲಿಂಗೇಗೌಡ ಎದುರು ರಾಮಕೃಷ್ಣ ಹೆಗಡೆ ಗೆಲುವು ಸಾಧಿಸಿ ಸದನದ ಸದಸ್ಯರಾದರು. 7ನೇ ವಿಧಾನಸಭೆಯಲ್ಲಿ ಹೆಗಡೆ ಅವರು 10ನೇ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ಈಗ ಶಿವಕುಮಾರ್ ಅವಕಾಶ ದೊರೆತರೆ 16ನೇ ವಿಧಾನಸಭೆಯಲ್ಲಿ 24ನೇ ಮುಖ್ಯಮಂತ್ರಿ ಆದಂತಾ ಗುತ್ತದೆ. ಇಷ್ಟೇ ಅಲ್ಲದೆ, ಕನಕಪುರ ಕ್ಷೇತ್ರಕ್ಕೆ 2ನೇ ಬಾರಿ ಸಿಎಂ ಹುದ್ದೆ ಲಭಿಸಿದಂತಾಗುತ್ತದೆ.

1994ರ ಚುನಾವಣೆಯಲ್ಲಿ ರಾಜ್ಯದಲ್ಲಿ ಜನತಾ ದಳ ಪರ ಅಲೆ ಇತ್ತು. ಆಗ ಪಕ್ಷದ ಚುಕ್ಕಾಣಿ ಹಿಡಿದಿದ್ದ ದೇವೇಗೌಡ ಅವರೇ ಮುಂದಿನ ಸಿಎಂ ಎನ್ನುವ ಕೂಗು ಎದ್ದಿತ್ತು. ಆ ವೇಳೆ ರಾಮ ನಗರದಿಂದ ಸ್ಪರ್ಧಿಸುವಂತೆ ಸ್ಥಳೀಯ ಮುಖಂಡರು ದುಂಬಾಲು ಬಿದ್ದಿದ್ದರು. ಸ್ವಕ್ಷೇತ್ರ ಹೊಳೆನರಸೀಪುರ, ರಾಮನಗರ ಪೈಕಿ ಯಾವ ಕ್ಷೇತ್ರದಿಂದ ಸ್ಪರ್ಧೆಬೇಕೆಂಬ ಗೊಂದಲದಲ್ಲಿದ್ದರು.


ರಾಜ್ಯಸಭೆ ಅಭ್ಯರ್ಥಿಗಳ ಪಟ್ಟಿ ಶೀಘ್ರ

ಬೆಂಗಳೂರು: ನನಗೆ ಬಂದಿರುವ ಮಾಹಿತಿ ಪ್ರಕಾರ ಎಲ್ಲಾ ರಾಜ್ಯಗಳ ರಾಜ್ಯಸಭೆ ಅಭ್ಯರ್ಥಿಗಳ ಪಟ್ಟಿಯನ್ನು ಒಟ್ಟಿಗೆ ಬಿಡುಗಡೆ ಮಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಹೊಸದಿಲ್ಲಿಯಲ್ಲಿ ಶುಕ್ರವಾರ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಕುರಿತ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ವೇಣುಗೋಪಾಲ್ ಅವರು ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಚರ್ಚೆ ಮಾಡಿರುವುದನ್ನು ಈಗಾಗಲೇ ತಿಳಿಸಿದ್ದಾರೆ. ನಮ್ಮ ನಾಯಕರು ನಮ್ಮ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಎಲ್ಲಾ ತೀರ್ಮಾನ ಆದ ಬಳಿಕ ನಮ್ಮ ನಾಯಕರು ಮಾಹಿತಿ ನೀಡುತ್ತಾರೆ. ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದ್ದಾರೆ. ನೀವು ಮುಖ್ಯಮಂತ್ರಿ ಆಗಿ ಯಾವಾಗ ಪ್ರಮಾಣ ವಚನ ಸ್ವೀಕರಿಸುವಿರಿ ಎಂಬ ಪ್ರಶ್ನೆಗೆ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನ ಆಯ್ಕೆ ಆಗಬೇಕಿದೆ. ನಂತರ ತೀರ್ಮಾನ ಆಗಲಿದೆ ಎಂದರು.

ಯೋಜನಾಧಿಕಾರಿಗೆ ಶೋಕಾಸ್ ನೋಟಿಸ್

ಬೆಂಗಳೂರು: ಸುಮಾರು 9,590 ಕೆ.ಜಿ. ಹಾಲಿನ ಪುಡಿ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗೆ ಕಾರಣ ಕೇಳಿ ಸರ್ಕಾರ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಗೆ ತಡೆ ನೀಡಬೇಕು ಎಂದು ಕೋರಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ಎಂ. ಆರ್. ನಂದಕುಮಾರ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಅನಂತ್‌ರಾಮನಾಥ್ ಹೆಗಡೆ ಮತ್ತು ನ್ಯಾ. ಗೀತಾ ಕೆ.ಬಿ. ಅವರನ್ನೊಳಗೊಂಡ ವಿಭಾಗೀಯ ಪೀಠವು ಈ ಆದೇಶ ಮಾಡಿದೆ.

ಸಂಪಾದಕೀಯ

ಎಸ್‌ಐಆರ್: ವಿಪಕ್ಷ ಯತ್ನಕ್ಕೆ ಸೋಲು

ಚುನಾವಣಾ ಆಯೋಗವು ಕೈಗೊಂಡಿರುವ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಅಡ್ಡಗಾಲು ಹಾಕುವ ವಿರೋಧ ಪಕ್ಷಗಳ ಮತ್ತು ಕೆಲವು ಸ್ಥಾಪಿತ ಹಿತಾಸಕ್ತಿಗಳ ಪ್ರಯತ್ನಕ್ಕೆ ಸೋಲಾಗಿದೆ. ಎಸ್‌ಐಆರ್ ಸಿಂಧುತ್ವವನ್ನು ಎತ್ತಿಹಿಡಿದಿರುವ ಸರ್ವೋಚ್ಚ ನ್ಯಾಯಾಲಯವು ಇದು ಮುಕ್ತ ಮತ್ತು ನ್ಯಾಯೋಚಿತ ರೀತಿಯಲ್ಲಿ ಚುನಾವಣೆ ನಡೆಸಲು ನೆರವೀಯುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಸಂವಿಧಾನದ 324ನೇ ವಿಧಿಯನ್ವಯ ಮತದಾರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ಚುನಾವಣಾ ಆಯೋಗಕ್ಕಿದೆ ಎಂಬುದನ್ನು ನ್ಯಾಯಾಲಯವು ಒಪ್ಪಿಕೊಂಡಿದೆ. ಮತದಾರ ಪಟ್ಟಿ ಪರಿಷ್ಕರಣೆಯ ಪ್ರಕ್ರಿಯೆ ನ್ಯಾಯೋಚಿತವಾಗಿದ್ದು, ಪ್ರತಿಯೊಬ್ಬ ಮತದಾರನಿಗೂ ತನ್ನ ಹೆಸರನ್ನು ಉಳಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಒದಗಿಸಲಾಗುತ್ತಿದೆ ಎಂದು ನ್ಯಾಯಾಲಯವು ಅಭಿಪ್ರಾಯಿಸಿದೆ. ಇದರಿಂದಾಗಿ ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ತಮ್ಮ ಸೋಲಿನ ನೆಪವನ್ನು ಎಸ್‌ಐಆರ್ ಮೇಲೆ ಜಾರಿಸಲು ಯತ್ನಿಸಿದ ಹಾಗೂ ದೇಶಾದ್ಯಂತ ಎಸ್‌ಐಆರ್ ಪ್ರಕ್ರಿಯೆಗೆ ತಡೆಯೊಡ್ಡುವ ವಿರೋಧ ಪಕ್ಷಗಳ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಇನ್ನೀಗ ದೇಶಾದ್ಯಂತ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲು ಚುನಾವಣಾ ಆಯೋಗಕ್ಕೆ ಮುಕ್ತ ಹಸ್ತ ದೊರಕಿದಂತಾಗಿದೆ.



ಸರ್ವೋಚ್ಚ ನ್ಯಾಯಾಲಯವು ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದ ಹಲವಾರು ಅನುಮಾನಗಳನ್ನು ನಿವಾರಿಸುವ ಪ್ರಯತ್ನವನ್ನೂ ನಡೆಸಿದ್ದು, ಮತದಾರ ಪಟ್ಟಿಯಿಂದ ಹೆಸರು ತೆಗೆದು ಹಾಕಿದಾಕ್ಷಣ ದೇಶದ ಪೌರತ್ವ ರದ್ದಾಗುವುದಿಲ್ಲ. ಪೌರತ್ವ ರದ್ದುಪಡಿಸುವ ಪ್ರಕ್ರಿಯೆಗೂ ಇದಕ್ಕೂ ಸಂಬಂಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಕೆಲವು ಪಕ್ಷಗಳು ಮತದಾರ ಪಟ್ಟಿಯಿಂದ ಹೆಸರು ತೆಗೆಯುವ ಮೂಲಕ ಕೆಲವರಿಗೆ ಪೌರತ್ವವನ್ನೆ ನಿರಾಕರಿಸಲಾಗುತ್ತಿದೆ ಎಂಬುದಾಗಿ ಹುಯಿಲೆಬ್ಬಿಸಿದ್ದವು. ಅವರ ಈ ಹುಯಿಲಿನ ಹಿಂದೆ ಅಕ್ರಮ ಬಾಂಗ್ಲಾ ದೇಶಿಗಳನ್ನು ಉಳಿಸಿಕೊಳ್ಳುವ ಹುನ್ನಾರ ಅಡಗಿದೆ ಎಂಬುದು ರಹಸ್ಯವೇನಲ್ಲ.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ನಂತರವಾದರೂ ವಿರೋಧ ಪಕ್ಷಗಳು ಹಾಗೂ ಕೆಲವು ಸ್ಥಾಪಿತ ಹಿತಾಸಕ್ತಿಯ ವ್ಯಕ್ತಿಗಳು ಮತ್ತು ಸಂಘಸಂಸ್ಥೆಗಳು ಎಸ್‌ಐಆರ್‌ಗೆ ವಿರೋಧ ಸೂಚಿಸುವುದನ್ನು ನಿಲ್ಲಿಸಬೇಕು. ಮತದಾರ ಪಟ್ಟಿಯ ಶುದ್ಧೀಕರಣವೇ ಚುನಾವಣಾ ಆಯೋಗದ ಪ್ರಧಾನ ಉದ್ದೇಶ ಎಂಬುದನ್ನು ಅರಿಯಬೇಕು. ಮತದಾರ ಪಟ್ಟಿಯಿಂದ ನಕಲಿ ಹೆಸರುಗಳನ್ನು ಮತ್ತು ಮೃತಪಟ್ಟವರ ಹೆಸರುಗಳನ್ನು ತೆಗೆಯುವುದು, ಅಕ್ರಮವಾಗಿ ದೇಶದಲ್ಲಿರುವ ವಿದೇಶಿಯರ ಹೆಸರುಗಳನ್ನು ಕಿತ್ತುಹಾಕುವುದು, ಒಬ್ಬನೇ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಹೆಸರು ಹೊಂದಿರುವುದನ್ನು ಪರಿಶೀಲಿಸುವುದು ಮುಂತಾದ ಸದುದ್ದೇಶ ಎಸ್‌ಐಆರ್ ಹಿಂದಿದೆ ಎಂಬುದನ್ನು ಎಲ್ಲರೂ ಮನಗಾಣಬೇಕು.

ಅಂಗೈ ಬಣ್ಣ ಯಾವುದು?

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನಿಮ್ಮ ಅಂಗೈನ ಬಣ್ಣ ಯಾವುದು ಎನ್ನುವುದರ ಮೇಲೆ ನಿಮ್ಮ ಕೀರ್ತಿ ಆರೋಗ್ಯ, ಆರ್ಥಿಕ ಸ್ಥಿತಿ, ವ್ಯಕ್ತಿತ್ವ ಎಲ್ಲಾ ನಿರ್ಧಾರವಾಗುತ್ತದೆ. ಗುಲಾಬಿ, ಕಪ್ಪು, ಬಿಳಿ, ನೀಲಿ, ಕೆಂಪು, ಹಸಿರು ಹೀಗೆ ನಿಮ್ಮ ಅಂಗೈ ಆಗಾಗ ಬಣ್ಣ ಬದಲಿಸುತ್ತಾ ಇರುತ್ತದೆ. ಡಾಕ್ಟರ್‌ಗಳು ಹಿಂದೆ ನಿಮ್ಮ ಕಣ್ಣಿನ ಒಳಭಾಗ, ನಾಲಿಗೆ, ನಾಡಿಗಳನ್ನು ಹಿಡಿದು ನೋಡಿ ರೋಗ ನಿರ್ಧಾರ ಮಾಡುತ್ತಿದ್ದರು. ಅದೇ ರೀತಿ ಹಸ್ತ ಸಾಮುದ್ರಿಕದಲ್ಲೂ ಸಹಾ ಅಂಗೈನ ಬಣ್ಣವನ್ನು ನೋಡಲಾಗುತ್ತದೆ. ಕೆಲವೊಮ್ಮೆ ಇಡೀ ಅಂಗೈ ಬೇರೆ ಬೇರೆ ಬಣ್ಣವಾಗಿರುವುದು ಸಹಾ ಉಂಟು. ಆಗ ಯಾವ ಭಾಗ ಯಾವ ಬಣ್ಣದಲ್ಲಿ ಇದೆ ಎನ್ನುವುದರ ಆಧಾರದ ಮೇಲೆ ಅವರ ಜೀವನದ ಆಗುಹೋಗುಗಳನ್ನು ತೀರ್ಮಾನಿಸಲಾಗುತ್ತದೆ. ಇಲ್ಲಿ ಮುಖ್ಯವಾಗಿ ಸೂರ್ಯ ಪರ್ವತದ ಬಣ್ಣವನ್ನು ಪರಿಗಣಿಸಿ ಸಂಗತಿಗಳನ್ನು ಚರ್ಚಿಸಲಾಗಿದೆ.

ಗುಲಾಬಿ ಬಣ್ಣ: ಸ್ವಾಭಾವಿಕವಾಗಿ ಆರೋಗ್ಯ ಚೆನ್ನಾಗಿದ್ದು, ರಕ್ತ ಸಂಚಾರ ಸರಿಯಾಗಿ ಇರುವವರಲ್ಲಿ ಅಂಗೈ ಬಣ್ಣ ಗುಲಾಬಿಯಾಗಿಯೇ ಇರುತ್ತದೆ. ವ್ಯಕ್ತಿಯ ಬಣ್ಣ ಕಪ್ಪಗೆ ಇದ್ದರೂ ಸಹಾ ಅಂಗೈ ಬಣ್ಣ ಗುಲಾಬಿ ಇರುವುದನ್ನು ನೀವು ನೋಡಬಹುದು. ಇವರು ಸಹಜವಾಗಿ ಎಲ್ಲರನ್ನೂ ಆಕರ್ಷಿಸುತ್ತಿರುತ್ತಾರೆ. ಕಲೆ ಮತ್ತು ಸಾಹಿತ್ಯದಲ್ಲಿ ಹೆಸರು ಮಾಡುತ್ತಾರೆ. ಹಣ ಇವರನ್ನು ಹುಡುಕಿಕೊಂಡು ಬರುತ್ತದೆ. ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗುತ್ತಾರೆ. ಇದರ ಮೇಲೆ ಯಾವುದೇ ಸಕಾರಾತ್ಮಕ ಚಿಹ್ನೆಗಳು ಇಲ್ಲದಿದ್ದರೂ ಸಹಾ ಗುಲಾಬಿ ಬಣ್ಣವೇ ಇವರ ಭವಿಷ್ಯವನ್ನು ಉನ್ನತಗೊಳಿಸುತ್ತದೆ. ರಾಜಯೋಗ ಪ್ರಾಪ್ತಿ. ಸೂರ್ಯ ಪರ್ವತವು ಗುಲಾಬಿ ಇದ್ದರೆ ಸಾಕು, ಸೂರ್ಯ ರೇಖೆ ಇಲ್ಲದಿದ್ದರೂ ಸಮಾನವಾದ ಫಲಗಳು ಲಭ್ಯವಾಗುತ್ತದೆ.

ಅತಿಯಾದ ಕೆಂಪು ಬಣ್ಣ: ಇಂತಹವರಿಗೆ ರಕ್ತದೊತ್ತಡ ಜಾಸ್ತಿ. ಕೋಪ ಮೂಗಿನ ತುದಿಯಲ್ಲೇ ಇರುತ್ತದೆ. ಆತುರದಿಂದ ಅನಾಹುತಗಳನ್ನು ಆಗಾಗ ಮಾಡುತ್ತಿರುತ್ತಾರೆ. ಆದರೂ ಇವರಿಗೂ ಹೆಸರು ಮತ್ತು ಗೌರವ ಸಿಗುತ್ತದೆ. ಆದರೆ ಇವರ ಮಾತು ಎಲ್ಲವನ್ನೂ ಹಾಳು ಮಾಡುತ್ತದೆ. ಇವರು ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುತ್ತಾರೆ. ಕೊನೆಗೆ ಸಿಕ್ಕಿ ಬಿದ್ದಾಗಲೂ ಸಹಾ ಏನೂ ಆಗಿಯೇ ಇಲ್ಲ, ನಾನು ಹೇಳಿದ್ದು ಈಗಲೂ ಸತ್ಯ, ನೀವು ತಪ್ಪು ತಿಳಿದುಕೊಂಡಿರಿ ಎಂದು ವಾದಿಸುತ್ತಾರೆ. ಮತ್ತು ತಮ್ಮ ಸುಳ್ಳು ಹೇಳುವ ಗುಣವನ್ನು ಮುಂದುವರೆಸುತ್ತಾರೆ. ಸರ್ಕಾರಿ ಕೆಲಸಗಳಲ್ಲಿ ಇವರು ತೊಡಗಿಸಿಕೊಳ್ಳುತ್ತಾರೆ. ಯಶಸ್ಸು ಬರುತ್ತಿರುತ್ತದೆ ಮತ್ತು ಹಾಗೆಯೇ ಹೋಗುತ್ತಿರುತ್ತದೆ. ಹೃದಯ ಸಂಬಂಧಿ ಸಮಸ್ಯೆ ಇವರನ್ನು ಕಾಡುತ್ತದೆ.

ಹಳದಿ ಬಣ್ಣ: ಲಿವರ್ ಸಮಸ್ಯೆ ಇದ್ದಾಗ ನಿಮ್ಮ ಅಂಗೈ ಅಥವಾ ಸೂರ್ಯ ಪರ್ವತ ಹಳದಿ ಬಣ್ಣವಾಗುತ್ತದೆ. ಅಂದರೆ ಪಿತ್ತ ಜನಕಾಂಗದ ಸಮಸ್ಯೆ ಇದೆ ಎಂದರ್ಥ. ಅಥವಾ ನೀವು ಅತಿಯಾಗಿ ನಿದ್ದೆಗೆಟ್ಟಿದ್ದೀರಿ, ಸೊಂಟದ ನೋವು ತುಂಬಾ ಇದೆ ಎಂದೂ ಆಗಬಹುದು.

ನಿಮ್ಮ ಮೇಲೆ ಅಪವಾದ ಬೇಗ ಬರುತ್ತದೆ. ಕೀರ್ತಿ ನಿಮ್ಮ ಕನಸು ಮಾತ್ರ. ಸದಾ ಕಾಲ ನಿಮ್ಮನ್ನು ನಿರಾಸೆ ಕಾಡುತ್ತಿರುತ್ತದೆ. ಆತ್ಮ ವಿಶ್ವಾಸ ಕಡಿಮೆ. ಹಣವಂತೂ ಯಾವಾಗಲೂ ಇರುವುದೇ ಇಲ್ಲ. ನೀವು ನಿಮ್ಮ ಯಕೃತ್‌ನ್ನು ಸರಿಪಡಿಸಿಕೊಂಡರೆ ಎಲ್ಲವೂ ಸರಿಹೋಗುತ್ತದೆ.

ನೀಲಿ ಅಥವಾ ನೇರಳೆ ಬಣ್ಣ: ನಿಮ್ಮಲ್ಲಿ ರಕ್ತ ಸಂಚಾರ ಸರಿಯಾಗಿ ಆಗುತ್ತಿಲ್ಲ, ಹೃದಯದಲ್ಲಿ ಸಮಸ್ಯೆ ಇದೆ ಎಂದು ಅರ್ಥ. ಅಥವಾ ನೀವು ಶೀತ ಪ್ರವೃತ್ತಿಯವರು ಇರಬಹುದು. ಚಳಿ ಮತ್ತು ಮಳೆಗಾಲದಲ್ಲಿ ನಿಮ್ಮ ಅಂಗೈ ನೀಲಿಯಾಗಿ ಇರುತ್ತದೆ ಎಂದಾದರೆ ಹೃದಯದ ಸಮಸ್ಯೆ ಇರಬೇಕೆಂದಿಲ್ಲ.

ಸೂರ್ಯ ಪರ್ವತ ನೀಲಿಯಾಗಿದ್ದರಂತೂ ನಿಮ್ಮ ಅವಕಾಶಗಳೆಲ್ಲಾ ತಪ್ಪಿಯೇ ಹೋಗುತ್ತದೆ. ನಿಮ್ಮ ಶ್ರಮವನ್ನು ಯಾರೂ ಲೆಕ್ಕಿಸುವುದೇ ಇಲ್ಲ. ನೀವೂ ಸಹಾ ಯಾವುದೇ ಕೆಲಸಕ್ಕೂ ಕೈ ಹಾಕದೇ ಹಾಗೇ ಉಳಿಯುತ್ತೀರಿ. ಕೀರ್ತಿ ಬಂದರೂ ಅದು ನಿಮಗೆ ತೃಪ್ತಿಯನ್ನು ನೀಡುವುದಿಲ್ಲ.

ಕಪ್ಪು ಬಣ್ಣ/ ಕಪ್ಪು ಕಲೆಗಳು: ಅಂಗೈ ಕಪ್ಪಾಗಿದ್ದರೆ ನಿಮ್ಮ ಭವಿಷ್ಯ ಸಹಾ ಕತ್ತಲಲ್ಲೇ ಇರುತ್ತದೆ. ನೀವು ಅಪರಾಧಿಗಳು. ಒಂದೊಮ್ಮೆ ಅಪರಾಧಿಗಳು ಅಲ್ಲದಿದ್ದರೂ ನಿಮ್ಮ ಮಾನಹಾನಿ ನಿರಂತರವಾಗಿ ನಡೆಯುತ್ತಿರುತ್ತದೆ. ಸೂರ್ಯ ರೇಖೆ ಕಪ್ಪಾಗಿದ್ದರಂತೂ ವೃತ್ತಿಯಲ್ಲಿ ಸದಾ ಸಂಕಟ.

ಬಿಳಿ/ ಬೂದು ಬಣ್ಣ: ನಿಮಗೆ ರಕ್ತ ಹೀನತೆಯಾಗಿದೆ, ಬೇಗ ಸರಿಪಡಿಸಿಕೊಳ್ಳಿ ಎಂದು ಅಂಗೈ ಹೇಳುತ್ತಿದೆ. ನಿಮ್ಮಲ್ಲಿ ಉತ್ಸಾಹದ ಹೀನತೆಯೂ ಆಗಿರುತ್ತದೆ. ನಿಮ್ಮಲ್ಲಿ ಪ್ರತಿಭೆ ಇದ್ದರೂ ನಿಮಗೆ ಯಾವುದೇ ಅವಕಾಶಗಳು ಸಿಗದೇ ಎಲೆ ಮರೆಯ ಕಾಯಂತೆ ಇರುತ್ತೀರಿ. ಒಂದೊಮ್ಮೆ ವೇದಿಕೆ ಸಿಗುತ್ತದೆ ಎಂದಾದಾಗ ಯಾರಾದರೂ ಅದನ್ನು ತಪ್ಪಿಸುತ್ತಾರೆ. ಆರೋಗ್ಯ ಆಗಾಗ ಬಿಗಡಾಯಿಸುವ ಕಾರಣ ಯಾವ ಕೆಲಸವೂ ಬೇಗನೆ ಆಗುವುದಿಲ್ಲ. ಯಶಸ್ಸಂತೂ ಸದಾ ಕೈತಪ್ಪಿ ಹೋಗುತ್ತಿರುತ್ತದೆ. ನೀವು ದೇವರಲ್ಲಿ ಬೇಡುವುದು ಒಂದೇ 'ಧೈರ್ಯ ಕೊಡು ದೇವರೇ' ಎಂದು ಮಾತ್ರ.

ನರಗಳು ನೇರಳೆ ಬಣ್ಣ: ಅತಿಯಾದ ಒತ್ತಡ, ನಿದ್ರಾ ಹೀನತೆ, ಯಾವಾಗ ಹೆಸರು ಗಳಿಸುತ್ತೇನೋ, ಯಾವಾಗ ಹಣ ಬರುತ್ತದೋ, ಬಂದಿದ್ದು ನಿಲ್ಲುತ್ತದೋ, ಇಲ್ಲವೋ ಎನ್ನುವ ಚಿಂತೆಯಿಂದಾಗಿ ನಿಮ್ಮ ಅಂಗೈಯಲ್ಲಿ ನರಗಳು ನೇರಳೆಯಾಗಿ ಕಾಣುತ್ತಿರುತ್ತವೆ.

ನಿಮ್ಮ ಆರೋಗ್ಯ ಸರಿಪಡಿಸಿಕೊಂಡರೆ ಬಣ್ಣದ ದೋಷಗಳ ನಿವಾರಣೆಯಾಗುತ್ತದೆ. ಸೂರ್ಯನಿಗೆ ಅರ್ಘ್ಯ ನೀಡುವುದು, ಸೂರ್ಯ ನಮಸ್ಕಾರ ಮಾಡುವುದು, ಬೆಳಗಿನ ಝಾವವೇ ಎದ್ದು ಸ್ನಾನ ಮಾಡಿ ಪೂಜೆ ಮಾಡುವುದು, ಬೆಳಗಿನ ವಾಕಿಂಗ್, ಮುಂಜಾನೆ ದಿನಾಲೂ ಹೂವುಗಳನ್ನು ಕೊಯ್ದು ಮಾಲೆ ಮಾಡುವುದು. ಹೀಗೆ ಸೂರ್ಯನನ್ನು ಸೇವಿಸುವ ಕೆಲಸಗಳನ್ನು ಮಾಡಬೇಕು.

ಅಲೆಯ ರೇಖೆ: ಸೂರ್ಯ ರೇಖೆಯು ಅಡ್ಡಾದಿಡ್ಡಿಯಾಗಿ ಹಾವು ಹರಿದಂತೆ ಓರೆಕೋರೆಯಾಗಿ ಇದ್ದರೆ, ಅದೆಂದೂ ಶುಭ ಲಕ್ಷಣವಲ್ಲ. ಏರಿಳಿತ ಸಾಮಾನ್ಯ, ಹಣ ಕೈಗೆ ಬರುತ್ತಿದ್ದಂತೆ ಹೋಗುತ್ತದೆ. ಇಂದು ಅರಸ ನಾಳೆ ಆಳು ಎನ್ನುವ ಅನಿಶ್ಚಿತತೆ ಕಾಡುತ್ತದೆ. ಸ್ಥಿರತೆಯಂತೂ ದೂರದ ಮಾತು

ನಿಮ್ಮ ಮನಸ್ಸು ಯಾವಾಗಲು ಚಂಚಲವಾಗಿಯೇ ಇರುತ್ತದೆ. ಒಮ್ಮೆ ಕಲೆ, ಇನ್ನೊಮ್ಮೆ ವ್ಯಾಪಾರ ಮಾಡುತ್ತೇನೆ ಎನ್ನುವುದು, ಮತ್ತೊಮ್ಮೆ ಸರ್ಕಾರಿ ಕೆಲಸಕ್ಕೆ ಟ್ರೈ ಮಾಡುತ್ತೇನೆ ಎನ್ನುವುದು. ಯಾವುದೇ ಕ್ಷೇತ್ರದಲ್ಲಿ ಇಂತಹವರು ಹೆಚ್ಚು ಕಾಲ ಇರುವುದಿಲ್ಲ. ಅಲ್ಲಲ್ಲಿ ಅಂಕುಡೊಂಕಾಗಿದ್ದರೆ, ಗುರಿ ಮುಟ್ಟುತ್ತೀರಿ. ಆದರೆ ಅಡ್ಡಿ ತಪ್ಪದು. ಅದೇ ತುಂಬಾ ಅಡ್ಡಡ್ಡ ಸರಪಳಿಯಂತೆ ಇದ್ದರೆ, ಜೀವನ ಪೂರ್ತಿ ಒಂದಲ್ಲಾ ಒಂದು ಹೋರಾಟ ನಿಶ್ಚಿತ. ಒಂದು ಸಮಸ್ಯೆ ಮುಗಿಯಿತೋ ಇನ್ನೊಂದು ಬರಲು ಸಿದ್ಧವಾಗಿರುತ್ತದೆ.

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು. ಸ್ವಂತ ಅನುಭವಗಳು ನಿಮ್ಮನ್ನು ಮಾಗುವಂತೆ ಮಾಡುತ್ತದೆ. ಅದೇ ಅಲೆಯ ರೇಖೆಯ ಅಕ್ಕಪಕ್ಕದಲ್ಲಿ ಸಮಾನಾಂತರ ರೇಖೆಗಳು ಇದ್ದರೆ, ನಿಮಗೆ ಗುರುಗಳ ಅಥವಾ ಗುರುಗಳಂತ ಸ್ನೇಹಿತರ ಸಹಾಯ ಸಿಗುತ್ತದೆ. ಚೌಕವು ಅಲೆಗಳ ನಡುವೆ ಇದ್ದರೆ, ದೊಡ್ಡ ನಷ್ಟದಿಂದ ಪಾರಾದ ಹಾಗೇ.

ನೀವು ಯಾವುದೇ ಕೆಲಸ ಮಾಡುವಾಗ ಮೊದಲೇ ಸಂಕಲ್ಪ ಮಾಡಬೇಕು. ನಿಮ್ಮ ಇಚ್ಛೆ ಯಾವುದು ಎನ್ನುವುದು ತಿಳಿಸುವುದು ಸೂಕ್ತ. ಉಪ್ಪು ಖಾರಗಳನ್ನು ವಾರದಲ್ಲಿ ಯಾವುದಾದರೂ ಒಂದು ದಿನ ಮಾತ್ರ ಸೇರಿಸಬೇಕು. ಸೂರ್ಯ ನಮಸ್ಕಾರ ಮತ್ತು ಪ್ರಾಣಾಯಾಮ ಮಾಡಲೇ ಬೇಕು. ಮಾಣಿಕ್ಯವನ್ನು ಧರಿಸಲೇ ಬೇಡಿ. ಜಾತಕ ಮತ್ತು ಬಲ ಅಂಗೈಯನ್ನು ನೋಡಿರಿ. ನೆನಪಿಡಿ, ಯಾವಾಗಲೂ ರೇಖೆಗಳು ಬದಲಾಗುತ್ತಿರುತ್ತವೆ. ಹೃದಯ ರೇಖೆ ಮತ್ತು ಶಿರೋ ರೇಖೆಗಳು ಬಲವಾಗಿದ್ದರೆ, ಬುದ್ಧಿಯಿಂದ ಅಸ್ಥಿರತೆಯನ್ನು ತಡೆಯಬಹುದು.

ಸೂರ್ಯ ರೇಖೆಯ ಮೇಲೆ ಗುಣಿಸು ಗುರುತು: ಇದು ಅಶುಭ ಸಂಕೇತ, ಸೂರ್ಯ ರೇಖೆಯ ಮೇಲೆ ಅಡ್ಡ ಗುರುತು ಅಥವಾ ಗುಣಿಸುವ ಚಿಹ್ನೆಯು ನಿಮ್ಮ ಯಶಸ್ಸು ಯಾವಾಗ ಡಮಾರ್ ಎಂದು ಬೀಳುವುದನ್ನು ತೋರಿಸುತ್ತದೆ. ಕೆಲಸ ಅರ್ಧಕ್ಕೆ ನಿಂತು ಹೋಗುವುದು, ಪ್ರಾಜೆಕ್ಟ್ ಕ್ಯಾನ್ಸಲ್ ಆಗುವುದು, ಉದ್ಯೋಗದಿಂದ ಹೊರಬರಬಹುದು. ಹಠಾತ್ ತಡೆ, ಕೋರ್ಟ್ ಕಚೇರಿ ಅಲೆದಾಟ. ಪೊಲೀಸ್ ಕೇಸ್, ಅಪವಾದ, ಮೀಡಿಯಾದಲ್ಲಿ ಕೆಟ್ಟ ಸುದ್ದಿ. ಜೀವನ ಪೂರ್ತಿ ಕೊರಗು ನಿಮ್ಮದು. ಅಂದರೆ ನೀವು ಯಾವುದಾದರೂ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆಯ ಮೇಲೆ ಬಹುಕಾಲ ಇರುವಂತಾಗುವುದು. ದೈಹಿಕವಾದ ಅಪಾಯಗಳು, ವೃತ್ತಿಗೆ ಸಮಸ್ಯೆ ಹೀಗೆ ಇವೆ. ಪರಿಹಾರ ಎಂದರೆ, ಪಾಲುದಾರಿಕೆ ಮಾಡಿಕೊಳ್ಳುವಾಗ ಎಚ್ಚರದಿಂದ ಇರಿ. ಗುಟ್ಟಾಗಿ ಪೋಲೀಸ್ ಕೇಸ್ ಆಗಬಹುದು. ಯಾವಾಗಲೂ ಸಾಮಾನ್ಯವಾದದ್ದು ನಿಮಗೆ ಮಾತ್ರ ಕಷ್ಟಕರ ಎನ್ನುತ್ತದೆ. ಒಟ್ಟಾರೆ ನೀವು ಸದಾ ಅಲೆಯುತ್ತಾ ಇರುತ್ತೀರಿ.

ರಾಬರ್ಟ್ ಕಾಲ್ಡ್‌ವೆಲ್‌ನಿಂದ ಜೋಸೆಫ್ ವಿಜಯ್‌ವರೆಗೆ

ಹಿಂದುಗಳನ್ನು ವಿಭಜಿಸುವ ತಂತ್ರಗಳು ತಮಿಳ್ನಾಡಿನಲ್ಲಿ ಆಳವಾಗಿ ಬೇರೂರಿವೆ. ಅದು ಬದಲಾವಣೆಯಾಗದೆ ಹಿಂದು ಏಕತೆ ಅಸಾಧ್ಯ.

ಒಳನೋಟ
• ಹೆ.ಬಾ. ಮಲ್ಯ



ಇತ್ತೀಚೆಗೆ ನಡೆದ 5 ವಿಧಾನಸಭೆಗಳ ಚುನಾವಣೆಯ ಫಲಿತಾಂಶ ಭಾರತೀಯ ರಾಜಕೀಯ ಕ್ಷೇತ್ರದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿದೆ. ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಆಗಿರುವ ಅಗಾಧ ಬದಲಾವಣೆ. ಒಂದೇ ತಿಂಗಳಲ್ಲಿ ದಿಗ್ಗಜರು, ಅಜೇಯರು ಎನಿಸಿಕೊಂಡಿದ್ದ ಮೂವರು ಮುಖ್ಯಮಂತ್ರಿಗಳು – ಕೇರಳದ ಪಿಣರಾಯಿ ವಿಜಯನ್, ತಮಿಳ್ನಾಡಿನ ಎಂ.ಕೆ. ಸ್ಟಾಲಿನ್, ಪ.ಬಂಗಾಳದ ಮಮತಾ – ಇವರ ಮಹಾಪತನದ ಜೊತೆಗೆ ಅವರ ಪಕ್ಷಗಳ ಹೀನಾಯ ಸೋಲು. ಆದರೆ ಹಿಂದುಗಳ ಮಟ್ಟಿಗೆ ದೊಡ್ಡ ಗೆಲುವು ಎಂದರೆ ಪಶ್ಚಿಮ ಬಂಗಾಳದಲ್ಲಿ ಮಮತಾ ಹಾಗೂ ಟಿ.ಎಂ.ಸಿ.ಯ ಹೀನಾಯ ಸೋಲು ಹಾಗೂ ಸುವೇಂದು ಅಧಿಕಾರಿಯವಂಥ ಮುಖ್ಯಮಂತ್ರಿ ಅಧಿಕಾರಕ್ಕೇರಿದ್ದು. ಇನ್ನು ಪಿಣರಾಯಿ ವಿಜಯನ್ ಹಾಗೂ ಅವರ ಮಾರ್ಕ್ಸಿಸ್ಟ್ ಪಕ್ಷದ ಸೋಲು, ಕಮ್ಯೂನಿಸ್ಟ್ – ನಕ್ಸಲ್‌ಮುಕ್ತ ಭಾರತದ ಘೋಷಣೆಯನ್ನು ನಿಜಮಾಡಿ ತೋರಿಸಿದೆ. ಅಲ್ಲಿ ಭಾಜಪ ಭದ್ರವಾದ ನೆಲೆ ಕಂಡುಕೊಳ್ಳುವಲ್ಲಿ ಯಶಸ್ಸು ಕಂಡಿದೆ. ಈಗ ಕರ್ನಾಟಕದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟ ಮೇಲೆ, ಕಾಂಗ್ರೆಸ್ ಅಸ್ಥಿರತೆಯತ್ತ ಸಾಗುತ್ತಿರುವುದು ನಿಶ್ಚಿತ. ಇಂಡಿ ಕೂಟ ಛಿದ್ರವಾಗಿದೆ.

ತಮಿಳ್ನಾಡಿನ ಫಲಿತಾಂಶದ ಕುರಿತಂತೆ ಹಿಂದು ಸಮಾಜ ಆಳವಾಗಿ ಚಿಂತಿಸಬೇಕಾದ ಆವಶ್ಯಕತೆಯಿದೆ. ಸನಾತನ ಧರ್ಮ ನಾಶ ಮಾಡಲು ಹೊರಟ ಸ್ಟಾಲಿನ್, ಉದಯನಿಧಿಯ ಡಿ.ಎಂ.ಕೆ. ಪಕ್ಷವೇ ನಾಶದ ಅಂಚಿನಲ್ಲಿದೆ. ಅದು ಸಮಾಧಾನ ತಂದಿದೆ. ಆದರೆ ಜೋಸೆಫ್ ವಿಜಯ್ ಹಾಗೂ ಅವರ ಟಿ.ವಿ.ಕೆ. ಪಕ್ಷ ಅಪಾರ ಯಶಸ್ಸು ಸಾಧಿಸಿದ್ದರಿಂದ ಹಿಂದುಗಳು ಸಂತಸಪಡುವ ಅಗತ್ಯವಿಲ್ಲ. ಹಳೆಯ ಪಾಸ್ಟರ್ (ಕ್ರೈಸ್ತ ಪುರೋಹಿತ) ಹೋಗಿ ಹೊಸ ಪಾಸ್ಟರ್ ಬಂದಷ್ಟೇ ಬದಲಾವಣೆ ತಮಿಳ್ನಾಡಿನದು. ತಮಿಳ್ನಾಡಿನ ಹಿಂದುಗಳ ಸ್ವಭಾವ ವಿಚಿತ್ರವಾದದ್ದು. ಅಲ್ಲಿ ಹಿಂದುಗಳು 86%ರಷ್ಟಿದ್ದಾರೆ. ಕ್ರೈಸ್ತರು 7% ಹಾಗೂ ಮುಸಲ್ಮಾನರು 7%. ವಿಚಿತ್ರವೆಂದರೆ ಅಲ್ಲಿ ಸತತವಾಗಿ ಕ್ರೈಸ್ತ ಮುಖ್ಯಮಂತ್ರಿಗಳೇ ಅಧಿಕಾರದಲ್ಲಿದ್ದಾರೆ. ವಾಸ್ತವದಲ್ಲಿ ಅಲ್ಲಿ ನಡೆಯುತ್ತಿರುವುದು ಚರ್ಚ್ ಆಡಳಿತ. ಇದಕ್ಕೆ 200 ವರ್ಷಗಳ ಸುದೀರ್ಘ ಇತಿಹಾಸವಿದೆ.

ತಮಿಳ್ನಾಡಿನ ಪರಿಸ್ಥಿತಿ ಪ. ಬಂಗಾಳದ ಪರಿಸ್ಥಿತಿಗಿಂತ ಭಿನ್ನವಾಗಿದೆ. ಮುಸ್ಲಿಮರಲ್ಲಿನ ಕೆಲವು ಜಿಹಾದಿಗಳು ಯಾವ ಮುಲಾಜಿಲ್ಲದೆ ಹಿಂದುಗಳ ಮೇಲೆ ನೇರವಾಗಿ ದೌರ್ಜನ್ಯ ಎಸಗುವ ಸ್ವಭಾವದವರು. ಹಿಂದುಗಳು ದೌರ್ಜನ್ಯ ಅತೀವವಾದಾಗ ಒಮ್ಮೆಲೇ ಎದ್ದು ಘರ್ಜಿಸಿ ಇದಿರಾಳಿಯನ್ನು ನಾಶ ಮಾಡುತ್ತಾರೆ. ಪ. ಬಂಗಾಳದಲ್ಲಾದುದು ಇದೇ. ಆದರೆ ಕ್ರೈಸ್ತ ಮಿಷನರಿಗಳು ಬಹಳ ಹಿಂದೆಯೇ ಕ್ರುಸೇಡ್ ಮಾನಸಿಕತೆಯನ್ನು ಬಿಟ್ಟುಕೊಟ್ಟು, ಆಮಿಷ, ಸೇವೆಯ ಸೋಗಿನಲ್ಲಿ ಮೌನವಾಗಿ ಹಿಂದುಗಳ ಮಾನಸಿಕತೆಯನ್ನೇ ಬದಲಾಯಿಸುತ್ತಾರೆ. ಕಳೆದ 200 ವರ್ಷಗಳಿಂದ ಬ್ರಿಟಿಷರು, ಮಿಷನರಿಗಳು ಈ ತಂತ್ರವನ್ನು ಬಳಸಿ ಹಿಂದುಗಳನ್ನು ಮನೋದಾಸ್ಯದಲ್ಲಿ ಇಡುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದು ಸಮಾಜದೊಳಗೆ, ಜಾತಿ-ಜಾತಿಗಳೊಳಗೆ ಒಡಕು ಸೃಷ್ಟಿಸುವುದು, ಅದಕ್ಕೆ ಪೂರಕವಾದ ಭ್ರಮಾತ್ಮಕ ನೆರೇಟಿವ್‌ಗಳನ್ನು ಸೃಷ್ಟಿಸಿ ಹಿಟ್ಲರ್ ಅನುಯಾಯಿ ಗೊಬೆಲ್ಸ್‌ನಂತೆ ನಿರಂತರವಾಗಿ ಪ್ರಚಾರ ಮಾಡುತ್ತಲೇ ಇರುವುದು ಅವರ ತಂತ್ರ. ತಮಿಳ್ನಾಡಿನಲ್ಲಾದುದು ಇದೇ. ನೇರ ಶಾರೀರಿಕ ಆಕ್ರಮಣವನ್ನು ಎದುರಿಸುವುದು ಹಿಂದುಗಳಿಗೆ ಕಷ್ಟವೇನೂ ಅಲ್ಲ. ಆದರೆ ಪರೋಕ್ಷವಾದ, ಮನಸ್ಸಿನ ಮೇಲಿನ ಆಕ್ರಮಣ ಎದುರಿಸುವುದು ಅಷ್ಟು ಸುಲಭವಲ್ಲ. ಪ. ಬಂಗಾಳ ಮತ್ತು ತಮಿಳ್ನಾಡಿನ ಪರಿಸ್ಥಿತಿಗಳಲ್ಲಿ ಇಂಥ ಭಿನ್ನತೆ ಇರುವುದರಿಂದಲೇ ಅಲ್ಲಿನ ಫಲಿತಾಂಶಗಳಲ್ಲೂ ಭಿನ್ನತೆ ಸಹಜ.

ಇಷ್ಟು ವಿಶಾಲ ದೇಶವನ್ನು ಹಾಗೂ ಇಲ್ಲಿನ ಅಪಾರ ಸಂಖ್ಯೆಯ ಹಿಂದುಗಳನ್ನು ದೀರ್ಘಕಾಲ ದಾಸ್ಯದಲ್ಲಿ ಇಡಲು ಸಾಧ್ಯವಿಲ್ಲವೆಂದರಿತ ಬ್ರಿಟಿಷರು ಕ್ರೈಸ್ತ ಮಿಷನರಿಗಳ ಸಹಾಯ ಪಡೆದರು. ಇಲ್ಲಿ ಹಿಂದು ಸಂಸ್ಕೃತಿ –ಸಂಪ್ರದಾಯ, ಭಕ್ತಿ, ಭಜನೆ, ದೇವರು, ವೇದ–ಪುರಾಣ ಇತ್ಯಾದಿಗಳು ಹಿಂದುಗಳ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿರುವುದರಿಂದ ಅವುಗಳನ್ನು ಕುಟಿಲೋಪಾಯದಿಂದಲೇ ನಾಶ ಮಾಡಲು ಯೋಜನೆ ರೂಪಿಸಿದರು. ಸುಮಾರು 120 ವರ್ಷಗಳ ಹಿಂದೆ ಫ್ರಾನ್ಸಿಸ್ ವೈಟ್ ಎಲ್ಲಿಸ್ ಎಂಬಾತ ಒಂದು ಪುಸ್ತಕ ಬರೆದು, ತಮಿಳು ಸಂಸ್ಕೃತಿಗೂ ಹಿಂದು ಸಂಸ್ಕೃತಿಗೂ ಸಂಬಂಧವಿಲ್ಲವೆಂಬ ನರೇಟಿವ್ ರೂಪಿಸಿದ. ಹಿಂದುಗಳು ಬ್ರಾಹ್ಮಣರು, ಆರ್ಯರು, ಉತ್ತರ ಭಾರತದವರು, ತಮಿಳರು ಸಂಪೂರ್ಣ ಭಿನ್ನವಾದ ದ್ರಾವಿಡ ಸಂಸ್ಕೃತಿಗೆ ಸೇರಿದವರು ಎಂಬ ವಾದ ಮಂಡಿಸಿದ. ತಮಿಳು ಭಾಷೆಗೂ ಸಂಸ್ಕೃತಕ್ಕೂ ಸಂಬಂಧವಿಲ್ಲವೆಂದು ವಾದಿಸಿದ. ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಆಡಳಿತವು ಸಿವಿಲ್ ಸರ್ವಿಸ್‌ನಲ್ಲಿ ಇಂಗ್ಲಿಷಿನ ಜೊತೆ ತಮಿಳನ್ನು ಸೇರಿಸಿತು. ನಂತರ ಬಂದವನೇ ರಾಬರ್ಟ್ ಕಾಲ್ಡ್‌ವೆಲ್. ಈತ ತಿರುನಲ್ವೇಲಿಗೆ ಆ್ಯಂಗ್ಲಿಕನ್ ಬಿಷಪ್ ಆಗಿ ಬಂದ. ಜಾತೀಯ, ಸಾಂಸ್ಕೃತಿಕ ಭಿನ್ನತೆ ಸೃಷ್ಟಿಸಿದ. ನಂತರ ಒಂದು ರಾಜಕೀಯ ವೇದಿಕೆಯನ್ನು ಸೃಷ್ಟಿಸುವ ಯೋಜನೆ ನಡೆಯಿತು. ಈ ಕಾಲ್ಡ್‌ವೆಲ್ 'ಕಂಪೇರಿಟೀವ್ ಗ್ರಾಮರ್ ಆಫ್ ದ ದ್ರಾವಿಡಿಯನ್ ಲ್ಯಾಂಗ್ವೇಜಸ್' ಎಂಬ ಗ್ರಂಥ ರಚಿಸಿ ತಮಿಳು ಹಾಗೂ ದಕ್ಷಿಣದ ದ್ರಾವಿಡಿಯನ್ ಭಾಷೆಗಳಿಗೂ ಉತ್ತರ ಭಾರತದ ಭಾಷೆ, ಸಂಸ್ಕೃತಿಗಳಿಗೂ ಸಂಬಂಧವಿಲ್ಲ ಹಾಗೂ ದ್ರಾವಿಡ ಭಾಷೆಗಳು ಸ್ವತಂತ್ರ ಭಾಷೆಗಳು ಎಂಬ ನರೇಟಿವ್ ಸೃಷ್ಟಿಸಿದ. ಬ್ರಿಟಿಷ್ ಸರಕಾರದ ಸಹಾಯವಿದ್ದುದರಿಂದ ಆಂಗ್ಲ ಶಾಲೆಗಳನ್ನು ತೆರೆದು ಇಂಗ್ಲಿಷ್ –ತಮಿಳಿಗೆ ಪ್ರಾಧಾನ್ಯತೆ ನೀಡಲು ಸುಲಭವಾಯಿತು. ಅವರಿಗೆ ತಮ್ಮ ದ್ರಾವಿಡ ಸಿದ್ಧಾಂತ , ಆರ್ಯ ಆಕ್ರಮಣ ಹಾಗೂ ಉತ್ತರ ದಕ್ಷಿಣ ಭೇದಗಳನ್ನು ಮಕ್ಕಳಲ್ಲಿ ತುಂಬುವ ಕಾರ್ಯ ಪ್ರಾರಂಭವಾಯಿತು. ಹಿಂದುಗಳೆಂದರೆ ಬ್ರಾಹ್ಮಣರು, ಉತ್ತರ ಭಾರತದವರು, ಆರ್ಯರು. ದನಗಾಹಿಗಳಾದ ಅವರು ಹೊರಗಿನಿಂದ ಅಂದರೆ ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದು ಇಲ್ಲಿನ ಮೂಲ ನಿವಾಸಿಗಳಾಗಿದ್ದ ದ್ರಾವಿಡರನ್ನು ಸೋಲಿಸಿ ದಕ್ಷಿಣಕ್ಕೆ ಓಡಿಸಿದರು. ಈ ಬ್ರಾಹ್ಮಣರು ನಿರಂತರವಾಗಿ ದ್ರಾವಿಡರನ್ನು ಶೋಷಣೆ ಮಾಡಿದರು ಎಂಬಿತ್ಯಾದಿ ಕಾಗಕ್ಕ–ಗೂಬಕ್ಕ ಕತೆಗಳನ್ನು ಕಟ್ಟಿ ಮಕ್ಕಳ ಮನಸ್ಸಿನಲ್ಲಿ ಬಿತ್ತಿದರು. ಇದು ಕ್ರಮೇಣ ಹಿಂದು ತಮಿಳು ಜನಾಂಗದ ಮೆದುಳಿನಲ್ಲಿ ಇಳಿದು ಭದ್ರವಾಗತೊಡಗಿತು. ಇಂದಿನ 'ದಲಿತ' ಎಂಬ ಹೊಸ ಪದ ಈ ದ್ರಾವಿಡ ಮೂಲದ್ದೆ ಆಗಿದೆ. ಇದರಿಂದಾಗಿ ಅಲ್ಲಿ ಬಹು ಸಂಖ್ಯೆಯಲ್ಲಿರುವ ಹಿಂದುಳಿದವರು 'ದಲಿತ' ಎಂಬ ಹೆಸರಿನಲ್ಲಿ ತಮಗೆ ಪ್ರತ್ಯೇಕ ದ್ರಾವಿಡ ಸ್ಥಾನ ಬೇಕು ಎಂಬ ಬೇಡಿಕೆ ಇಡಲಾರಂಭಿಸಿದರು. ಇದಕ್ಕೊಂದು ರಾಜಕೀಯ ವೇದಿಕೆ ಬೇಕಾಗಿತ್ತು. 1916ರಲ್ಲಿ ಸಿ. ನಟೇಶ್ ಮೊದಲಿಯಾರ್, ಪಿ.ಎಂ. ನಾಯರ್, ತ್ಯಾಗರಾಜ ಶೆಟ್ಟಿ ಮುಂತಾದ ಬ್ರಿಟಿಷ್ ಪರ ವ್ಯಕ್ತಿಗಳು ಸೇರಿ ಜಸ್ಟೀಸ್ ಪಾರ್ಟಿ ಸ್ಥಾಪಿಸಿದರು. ಇದು ಬ್ರಿಟಿಷರ ಪರವಾಗಿತ್ತು. ಸರಕಾರದ ಸಹಾಯದಿಂದ ಶಾಲೆಗಳನ್ನು ಪ್ರಾರಂಭಿಸಿದರು. ಗುರುಕುಲಗಳು, ಸಂಸ್ಕೃತ ಹಾಗೂ ವೇದಾಧ್ಯಯನ ಮೂಲೆಗುಂಪಾದವು. ಬ್ರಾಹ್ಮಣೇತರರಿಗೆ ಮೀಸಲಾತಿ ಬೇಕೆಂಬ ನಿರ್ಣಯ ಮಂಡಿಸಿದರು. ಹೀಗೆ ಹಿಂದು ಸಮಾಜದಲ್ಲಿ ಒಡಕು ಮೂಡಿಸುವಲ್ಲಿ ಬ್ರಿಟಿಷರು– ಮಿಷನರಿಗಳು ಯಶಸ್ವಿಯಾದರು.

ನಂತರ ಬಂದವರು ಪೆರಿಯಾರ್ ಇ. ವಿ.ರಾಮಸ್ವಾಮಿ ನಾಯ್ಕರ್. ಇವರು ಪಕ್ಕಾ ನಾಸ್ತಿಕರು. ಹಿಂದು ವಿರೋಧಿ, ಬ್ರಾಹ್ಮಣ ವಿರೋಧಿ. ನಾಟಕ, ಭಾಷಣಗಳ ಮೂಲಕ ದ್ರಾವಿಡ– ದಲಿತವಾದವನ್ನು ಗಟ್ಟಿಗೊಳಿಸಿದರು. ಇವರ ಶಿಷ್ಯ ಅಣ್ಣಾದೊರೈ ಹಾಗೂ ಕರುಣಾನಿಧಿ. ಇವರು ನಾಟಕ, ಸಿನಿಮಾ, ಭಾಷಣಗಳ ಮೂಲಕ ಹಿಂದು ವಿರೋಧ ಮುಂದುವರಿಸಿದರು. ಅದಕ್ಕಾಗಿ 1949ರಲ್ಲಿ ಡಿ.ಎಂ.ಕೆ (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷವನ್ನು ಸ್ಥಾಪಿಸಿದರು. 1967ರಲ್ಲಿ ಮೊದಲ ದ್ರಾವಿಡ ಸರಕಾರ ಅಧಿಕಾರಕ್ಕೆ ಬಂತು. 1968ರಲ್ಲಿ ಚೆನ್ನೈನ ಮರಿನಾ ಬೀಚಿನಲ್ಲಿ ರಾಬರ್ಟ್ ಕಾಲ್ಡ್‌ವೆಲ್ ಮೂರ್ತಿ ಸ್ಥಾಪಿಸಲಾಯಿತು. 2010ರಲ್ಲಿ ಆತನ ಚಿತ್ರವಿರುವ ಅಂಚೆ ಚೀಟಿ ಬಿಡುಗಡೆ ಮಾಡಲಾಯಿತು.

1996ರ ಲೋಕಸಭಾ ಚುನಾವಣೆಯಲ್ಲಿ ವಾಜಪೇಯಿ ನೇತೃತ್ವದಲ್ಲಿ ಬಿಜೆಪಿ ಅತಿ ದೊಡ್ಡ ಬಹುಮತದ ಪಕ್ಷವಾದರೂ ಸಂಖ್ಯಾ ಬಲವಿಲ್ಲದೆ 13 ದಿನದೊಳಗೆ ಪತನವಾಯಿತು. ನಂತರ ಜಯಲಲಿತಾ ತಮಿಳ್ನಾಡಿನ ಎಐಡಿಎಂಕೆ ಮುಖ್ಯಮಂತ್ರಿಯಾಗಿದ್ದಾಗ ಅವರ ಪಕ್ಷದ 27 ಸಂಸತ್ ಸದಸ್ಯರ ಬೆಂಬಲ ವಾಜಪೇಯಿಗೆ ಲಭಿಸಿ ಅವರು ಮತ್ತೆ ಪ್ರಧಾನಿಯಾದರು. ಆದರೆ ಜಯಲಲಿತಾ ತನ್ನ ಬೆಂಬಲ ಹಿಂತೆಗೆದುಕೊಂಡುದುದರಿಂದ ಒಂದೇ ಒಂದು ಓಟಿನ ಕೊರತೆಯಿಂದ ವಾಜಪೇಯಿ ಸರಕಾರ ಬಿದ್ದು ಹೋಯಿತು. ಆಗ ಕರುಣಾನಿಧಿ ಹಾಗೂ ಅವರ ಡಿಎಂಕೆ ಪಕ್ಷ ವಾಜಪೇಯಿಗೆ ಬೆಂಬಲ ನೀಡಿದ್ದರಿಂದ ವಾಜಪೇಯಿ ಮತ್ತೆ ಪ್ರಧಾನಿಯಾದರು.

ಇತ್ತೀಚೆಗೆ ಜೋಸೆಫ್ ವಿಜಯ್ ಪ್ರಧಾನಿ ಮೋದಿಯವರ ಭೇಟಿ ಮಾಡಿ ಇಂಡಿಕೂಟದಿಂದ ಹೊರಬಂದು ಲೋಕಸಭೆಯಲ್ಲಿ ಪ್ರತ್ಯೇಕ ಆಸನ ನೀಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಈಗ ತಮಿಳ್ನಾಡಿನಲ್ಲಿ ಬಿಜೆಪಿ ನೆಲೆ ಕಂಡುಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಹಿಂದುಗಳಲ್ಲಿ ವಿಶೇಷವಾಗಿ ಅಲ್ಲಿನ ದಲಿತ ಎಂದು ಕರೆಸಿಕೊಳ್ಳುವ ಹಿಂದುಳಿದವರ ಜೊತೆ ಪ್ರೀತಿಯಿಂದ ವ್ಯವಹರಿಸಿ ಅವರ ಮನೆಗೆದ್ದು ಅವರ ಮಾನಸಿಕತೆಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಅದು ತಕ್ಷಣವೇ ಆಗುತ್ತದೆ ಎಂದು ಹೇಳಲಾಗುವುದಿಲ್ಲ.

ಡಿಎಂಕೆಯವರು ರಚಿಸಿದ ಸಿನಿಮಾಗಳು, ನಾಟಕಗಳು ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿವೆ. ಜಯಲಲಿತಾ, ಎಂ.ಜಿ. ರಾಮಚಂದ್ರನ್, ಈಗ ಜೋಸೆಫ್ ವಿಜಯ್ ಎಲ್ಲರೂ ಸಿನಿಮಾ ನಟರೇ. ತಮಿಳ್ನಾಡಿನ ಜನರು ಸಿನಿಮಾ ನಟರ ಮಾತಿಗೆ ಹುಚ್ಚರಾಗಿ ಬೆಂಬಲಿಸುತ್ತಾರೆ. ಜೋಸೆಫ್ ವಿಜಯರ ಭಾರೀ ಗೆಲುವಿಗೆ ತಮಿಳರ ಈ ಮನಸ್ಥಿತಿಯೂ ಕಾರಣ. ಹಾಗಾಗಿ ಇಲ್ಲಿ ಬದಲಾವಣೆ ತರಬೇಕಾದರೆ ಬಿಜೆಪಿ ಹಾಗೂ ಹಿಂದುಗಳು ಬಹಳ ಹೋಂವರ್ಕ್ ಮಾಡಿ ಎಚ್ಚರಿಕೆಯಿಂದ ಹೆಜ್ಜೆ ಇರುವ ಅಗತ್ಯವಿದೆ. ಹಾಗೆಂದು ನಿರಾಶೆಗೆ ಅವಕಾಶವಿಲ್ಲ. ಮುಂದೊಂದು ದಿನ ಗೆಲುವು ನಿಶ್ಚಿತ.

ಮಜ್ಜಿಗೆಯಿಂದ ಹಾಲು ರೂಪಾಂತರ

ಅಣುರಪ್ಯಸತಾಂ ಸಂಗಃ ಸದ್ಗುಣಂ ಹಂತಿ ವಿಸ್ತೃತಮ್ ।
ಗುಣರೂಪಾಂತರಂ ಯಾನಿ ತಕ್ರಯೋಗಾದ್ ಯಥಾ ಪಯಃ ॥

-ಸುಭಾಷಿತ ರತ್ನಭಾಂಡಾಗಾರ

ಮಜ್ಜಿಗೆಯ ಸಹಯೋಗದಿಂದ ಹಾಲು ರೂಪಾಂತರ ಹೊಂದುವಂತೆ ಅಸತ್ಪುರುಷರ ಸಂಗವು ಅಣುವಿನಷ್ಟಾದರೂ ಸಾಕು, ಅಪಾರವಾದ ಸದ್ಗುಣಗಳನ್ನು ನಾಶಪಡಿಸುತ್ತದೆ – ಎಂಬುದು ಶ್ಲೋಕಾರ್ಥ.

ನಮ್ಮಲ್ಲಿ 'ಸಹವಾಸ ದೋಷ' ಎಂಬ ನುಡಿಗಟ್ಟಿದೆ. ಇದರ ಅರ್ಥ ಕೆಟ್ಟವರ ಸಹವಾಸ, ಗೆಳೆತನ ಮಾಡಿದರೆ, ಸಂಬಂಧ ಬೆಳೆಸಿದರೆ ಕೆಟ್ಟವನಾಗುತ್ತಾನೆ ಎಂಬುದು. ಹೆಚ್ಚಿನವರು ಹಾಳಾಗುವುದು ಈ ಸಹವಾಸದಿಂದ. ಕೆಟ್ಟವರ ಒಡನಾಟವಾದರೆ ಬಹು ಬೇಗನೆ ಕೆಟ್ಟ ಚಟಗಳನ್ನು ಕಲಿತು ಕೊಳ್ಳುತ್ತಾರೆ. ಹಾಗಾಗಿ ಹಿರಿಯರು 'ಗುಣ ನೋಡಿ ಗೆಳೆತನ ಮಾಡು' ಎನ್ನುತ್ತಾರೆ, ಎಚ್ಚರಿಸುತ್ತಾರೆ. ಕೆಟ್ಟವರ ಸಹವಾಸ ಮಾಡಿ ಕೆಡುವವರೇ ಜಾಸ್ತಿ. ಒಳ್ಳೆಯವರ ಒಡನಾಟ ಮಾಡಿ ಒಳ್ಳೆಯರಾಗುವವರ ಸಂಖ್ಯೆ ತೀರಾ ಕಡಿಮೆ. ಕೆಟ್ಟದ್ದರಲ್ಲಿರುವ ಆಕರ್ಷಣೆ. ಕೆಟ್ಟದ್ದನ್ನು ಮಾಡುವಾಗ ಸಿಗುವ ಮಜಾ ಒಳ್ಳೆಯದರಲ್ಲಿ ಸಿಗುವುದಿಲ್ಲ. ಸಿಗಬೇಕಾದರೂ ಅಂತಹ ಸಂಸ್ಕಾರ ಪಡೆದಿರಬೇಕು.

ಕೆಟ್ಟ ಹಣ್ಣಿನ ಜೊತೆಗೆ ಒಳ್ಳೆಯ ಹಣ್ಣನ್ನಿಟ್ಟರೆ ಅದೆಂದೂ ಒಳ್ಳೆಯದಾಗುವುದಿಲ್ಲ. ಅದೇ ಕೆಟ್ಟು ಹೋಗುತ್ತದೆ. ಸುವಾಸನೆಯ ಹೂವನ್ನು ಅಲ್ಪವೇ ದುರ್ವಾಸನೆ ಬರುವ ವಸ್ತುವಿನ ಜೊತೆಗಿರಿಸಿದರೆ ಸುಹಾಸನೆಯನ್ನೇ ಕೆಡಿಸುತ್ತದೆ.



ಕೆಡುವುದಕ್ಕೆ ಹೆಚ್ಚು ಬೇಕಾಗಿಲ್ಲ. ಒಳ್ಳೆಯ ಹಾಲಿಗೆ ಒಂದೆರಡು ಹುಳಿಯ ಹುಂಡು ಬಿದ್ದರೆ ಸಾಕು ಕೆಟ್ಟು ಹೋಗುತ್ತದೆ. ಒಳ್ಳೆಯ ಶುಭ್ರವಾದ ಬಟ್ಟೆಯ ಮೇಲೆ ಒಂದೆರಡು ಕಲೆ ಬಿದ್ದರೆ ಸಾಕು ಬಟ್ಟೆ ಅಂದವೇ ಮಾಯವಾಗಿ ಬಿಡುತ್ತದೆ. ಆದ್ದರಿಂದ ವ್ಯವಹರಿಸುವಾಗ ಎಚ್ಚರವಹಿಸಿದಷ್ಟು ಒಳ್ಳೆಯದು. ಅದರಲ್ಲಿಯೂ ದುಷ್ಟರ ಸಹವಾಸ ಮಾಡುವಾಗ, ಅವರೊಂದಿಗೆ ವ್ಯವಹಾರ ಮಾಡುವಾಗ ಜಾಗ್ರತೆ ವಹಿಸಿದಷ್ಟೂ ಕಡಿಮೆ.

ಅಸತ್ಪುರುಷರ, ಅವಿವೇಕಿಗಳ ಸಹವಾಸ ಅಣುವಿನಷ್ಟಾದರೂ ಮಹತ್ತಾದ ನಷ್ಟವನ್ನೇ ಉಂಟುಮಾಡುತ್ತದೆ. ಅಪಾರವಾದ ಸದ್ಗುಣವನ್ನು ನಾಶಪಡಿಸುತ್ತದೆ. ಒಮ್ಮೆ ನಾಶವಾದರೆ ಪುನಃ ತುಂಬಿಕೊಳ್ಳುವುದು ಕಷ್ಟ ಸಾಧ್ಯ.

ಹಾಲು ಅಮೃತಕ್ಕೆ ಸಮಾನ. ಮಗುವಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಈ ಪಾತ್ರೆ ತುಂಬಾ ಹಾಲಿದ್ದರೂ ಅದಕ್ಕೆ ಒಂದಿಷ್ಟು ಮೊಸರು ಬಿದ್ದರೆ ಪಾತ್ರೆಯಲ್ಲಿರುವ ಹಾಲು ಹಾಲಾಗಿ ಉಳಿಯದೆ ಮೊಸರಾಗಿ ಪರಿವರ್ತನೆ ಹೊಂದುತ್ತದೆ. ಹಾಲು ಮೊಸರಾಗಲು ಹೆಚ್ಚೇನು ಮೊಸರು ಬೇಕಿಲ್ಲ, ಸ್ವಲ್ಪವೇ ಸಾಕು. ಹಾಲಿನ ಪಾತ್ರೆಯನ್ನು ಮೊಸರಿನ ಪಾತ್ರೆಯನ್ನಾಗಿಸುತ್ತದೆ. ಹಾಲು ಮೊಸರಾಗುವುದನ್ನು ತಡೆಯಲೂ ಸಾಧ್ಯವಿಲ್ಲ. ಅದನ್ನು ಹಾಲಾಗಿ ಪರಿವರ್ತಿಸಲೂ ಸಾಧ್ಯವಿಲ್ಲ.

ಅಸತ್ಪುರುಷರ ಸಹವಾಸವು ಇದೇ ಪರಿಣಾಮವನ್ನು ಬೀರಬಲ್ಲದು. ಅವರ ಸಹವಾಸಕ್ಕೆ ಸಿಕ್ಕಿಕೊಂಡರೆ ಕಬ್ಬಿನ ಗಾಣಕ್ಕೆ ಕೈ ಕೊಟ್ಟಂತೆ. ಹಿಂದಿರುಗುವುದು ಕಷ್ಟ ಸಾಧ್ಯ. ಆದ್ದರಿಂದ ಎಚ್ಚರವಹಿಸಿ ಗೆಳೆತನಕ್ಕೆ, ಒಡನಾಟಕ್ಕೆ ಮುಂದಾಗಬೇಕು. ಬದುಕನ್ನು ಮೇಲೆತ್ತುವುದಕ್ಕೂ ಸಹವಾಸವೇ ಕಾರಣ. ಕೆಳಕ್ಕೆ ತಳ್ಳುವುದಕ್ಕೂ ಸಹವಾಸವೇ ಕಾರಣ. ತತ್ಪುರುಷರ ಸಂಗ ಮಾಡಿ ಸಜ್ಜನರಾಗೋಣ. ಅಸತ್ಪುರುಷರ ಸಹವಾಸ ಮಾಡಿ ಅವಿವೇಕಿಗಳಾಗದೆ ಇರೋಣ.

ಪತ್ರ ಮಿತ್ರ

ಹಿಂದುಗಳ ಕಡೆಗಣನೆ ಏಕೆ?

ಭಟ್ಕಳ ತಾಲೂಕಿನ ವೆಂಕಟಾಪುರ ಪ್ರದೇಶದಲ್ಲಿ ಹಿಂದುಗಳ ಧಾರ್ಮಿಕ ನಂಬಿಕೆಗೆ ಸಂಬಂಧ ಪಟ್ಟ 'ಮುರಿಕಟ್ಟೆ'ಯನ್ನು ರಸ್ತೆ ಅಗಲೀಕರಣ ಸಂದರ್ಭ ತೆರವುಗೊಳಿಸಲಾಗಿತ್ತು. ಈಗ ರಸ್ತೆಗೆ ಬಾಧಕವಾಗದ ರೀತಿಯಲ್ಲಿ ಇನ್ನೊಂದು ಸ್ಥಳದಲ್ಲಿ ಕಟ್ಟೆಯನ್ನು ಪುನರ್ ನಿರ್ಮಾಣ ಮಾಡಲು ಹೋದ ಹಿಂದೂ ಪ್ರಮುಖರನ್ನು ಪೊಲೀಸರು ವಶಕ್ಕೆ ಪಡೆದು ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇದು ಏನನ್ನು ಸೂಚಿಸುತ್ತದೆ. ನಮ್ಮ ದೇಶದಲ್ಲೇ ನಮಗೆ ನಮ್ಮ ಧರ್ಮಾನುಸಾರ ನಡೆಯುವ ಅವಕಾಶವಿಲ್ಲವೆಂದೆ? ಪೊಲೀಸರೇನು ಅವರಷ್ಟಕ್ಕೇ ಈ ನಿರ್ಧಾರ ತೆಗೆದುಕೊಂಡಿರಲಾರರು. ಸರಕಾರದ ಕಡೆಯಿಂದ ಅದಕ್ಕೆ ಸೂಕ್ತ ಆದೇಶ ಬಂದಿರಲೇ ಬೇಕಲ್ಲವೆ? ಹಾಗಿದ್ದರೆ, ಸರಕಾರವು ಎಲ್ಲರನ್ನು ಸಮಾನವಾಗಿ ನೋಡುವುದನ್ನು ಬಿಟ್ಟು ಕೆಲವರ ಹಿತಾಸಕ್ತಿಯನ್ನಷ್ಟೇ ಕಾಯುತ್ತಿದೆ ಎಂದರ್ಥವೆ? ಧಾರ್ಮಿಕ ಸ್ವಾತಂತ್ರ್ಯ ಹಿಂದುಗಳಿಗೂ ಇಲ್ಲವೆ ? ಅಭಿವೃದ್ಧಿ ದೃಷ್ಟಿಯಿಂದ ಈ ಹಿಂದೆ ಇದ್ದ ಸ್ಥಳವನ್ನು ಬಿಟ್ಟುಕೊಟ್ಟಿದ್ದೇ ದಡ್ಡತನವಾಯಿತೆ ? ಹಿಂದುಗಳೆಂದೂ ಸಂಕುಚಿತ ಭಾವದಿಂದ ಯೋಚಿಸುವುದಿಲ್ಲ. ದೇಶದ ಅಭಿವೃದ್ಧಿಯ ವಿಷಯದಲ್ಲಿ ಸಹಕಾರ ನೀಡುತ್ತಾರೆ.

ಇಂದು, ಭಟ್ಕಳ ಅಂದಕೂಡಲೇ ಅದು ಮುಸ್ಲಿಮರದ್ದು ಅಂದುಕೊಂಡವರೂ ಇದ್ದಾರೆ. ಆದರೆ ಅಲ್ಲಿ ಹಿಂದುಗಳೂ ಸಾಕಷ್ಟು ಪ್ರಮಾಣದಲ್ಲಿದ್ದಾರೆ ಎಂಬುದನ್ನು ಮರೆಯಲಾಗದು ಮತ್ತು ಮರೆಯಬಾರದು. ಈ ಹಿಂದೆಯೂ, ಭಟ್ಕಳದಲ್ಲಿ ಹಿಂದುಗಳ ಮೇಲೆ ಮಾರಣಾಂತಿಕ ಹಲ್ಲೆಗಳೂ ನಡೆದಿವೆ. ಇದಕ್ಕೆಲ್ಲ ಕಾರಣ ಅವರಿಗೆ ಸರಕಾರದಿಂದ ಸಿಗುತ್ತಿರುವ ಬೆಂಬಲ. ಈಗಷ್ಟೇ ರಾಜ್ಯ ಸರಕಾರ ಮುಸ್ಲಿಮರ ಮೇಲಿನ ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆದ ಬೆಳವಣಿಗೆಯೂ ನಡೆದಿದೆ. ಕಾಂಗ್ರೆಸ್ ಆಳ್ವಿಕೆಯಿರುವಲ್ಲೆಲ್ಲ ಈ ರೀತಿ ಅಲ್ಪಸಂಖ್ಯಾತ ಓಲೈಕೆ ನಡೆಯುತ್ತಿರುವುದೇಕೆ? ಹಿಂದುಗಳನ್ನೇಕೆ ಕಡೆಗಣಿಸಲಾಗುತ್ತಿದೆ?

-**ಶಂಕರನಾರಾಯಣ ಭಟ್**, ಮಾಡಗೇರಿ

ಮಾವು ಆಮದಿಗೆ ನಿಷೇಧ

ಜಪಾನ್ ಭಾರತದಿಂದ ಮಾವುಗಳ ಆಮದಿಗೆ ನಿಷೇಧ ಹೇರಿರುವ ಬಗ್ಗೆ ವರದಿಯಾಗಿದೆ. ಅದಕ್ಕೆ ಕಾರಣ ಭಾರತದಲ್ಲಿ ಮಾವುಗಳ ಶೇಖರಣೆಯಲ್ಲಿ ಮತ್ತು ಮಾವುಗಳು ಹಣ್ಣಾಗುವಂತೆ ಮಾಡುವಲ್ಲಿ ಸರಿಯಾದ ನಿಯಮ ಪಾಲಿಸದಿರುವುದು. ಆಮದಿಗೆ ತಯಾರಾದ ಮಾವುಗಳನ್ನು ದಾಸ್ತಾನು ಮಾಡುವಲ್ಲಿ ದೊಡ್ಡ ಪ್ರಮಾಣದಲ್ಲಿ ನೊಣ ಹಾಗೂ ಕೀಟಗಳ ಹಾವಳಿಯಿರುವುದು ಕೂಡಾ ಜಪಾನೀಯರ ಅಸಮಾಧಾನಕ್ಕೆ ಕಾರಣವಾಗಿದೆಯಂತೆ. ಜಪಾನಿನ ತಪಾಸಕರು ಭಾರತದಲ್ಲಿ ಇಂತಹ ಗೋದಾಮುಗಳಿಗೆ ಭೇಟಿ ನೀಡಿ ಮಾವಿನ ಹಣ್ಣಿನ ಸಂಸ್ಕರಣೆಯಲ್ಲಿ ನಿಯಮ ಪಾಲಿಸದಿರುವುದು, ಅತಿಯಾದ ಪ್ರಮಾಣದಲ್ಲಿ ಕೀಟ ನಾಶಕ ಬಳಸುತ್ತಿರುವುದನ್ನು ಕಂಡುಕೊಂಡ ಬಳಿಕ ಈ ವರ್ಷ ಮಾವು ಆಮದು ಮಾಡದಿರಲು ನಿರ್ಧರಿಸಿದ್ದಾರೆ. ಅತ್ತ ಅಮೆರಿಕದಲ್ಲಿ ಕೂಡಾ ಭಾರತದಿಂದ ಬರುವ ಮಾವಿನ ಹಣ್ಣುಗಳನ್ನು ಖರೀದಿಸಲು ಕೆಲವರು ಹಿಂದೇಟು ಹಾಕುವ ಪ್ರಸಂಗಗಳು ವರದಿಯಾಗುತ್ತಿವೆ.

ಈಗಾಗಲೆ ಭಾರತದಲ್ಲಿ ಹಣ್ಣುಗಳು ಬೇಗ ಕಳಿಯುವಂತೆ ಮಾಡಲು ರಾಸಾಯನಿಕಗಳನ್ನು ಬಳಸುವ ಕುರಿತಂತೆ, ದೊಡ್ಡ ಪ್ರಮಾಣದಲ್ಲಿ ಕೀಟನಾಶಕಗಳನ್ನು ಬಳಸುವ ಕುರಿತಂತೆ ಆರೋಪಗಳಿವೆ. ನಮಗೆ ನೈಸರ್ಗಿಕವಾಗಿ ಮಾಗಿದ ಹಣ್ಣುಗಳು ಸಿಗುವುದೇ ಅಪರೂಪ ಎಂಬಂತಾಗಿದೆ. ನಮ್ಮ ಸರಕಾರಗಳು ಕೂಡಾ ಹಣ್ಣುಗಳನ್ನು ಕೃತಕವಾಗಿ ಮಾಗಿಸುವುದರ ವಿರುದ್ಧ, ರಾಸಾಯನಿಕ ಬಳಸುವುದರ ವಿರುದ್ಧ ಕ್ರಮ ಕೈಗೊಳ್ಳಬೇಕು.

-**ಚಿದಂಬರ ರಾವ್**, ಕುಂದಾಪುರ

ರೈತರಿಗೆ ಅನ್ಯಾಯ

ಬೆಂಗಳೂರಿನ ಸುತ್ತಮುತ್ತಲಿನ ಹಸಿರು ವಲಯವನ್ನು ನುಂಗಿ ಹಾಕಲು ಹೊರಟಿರುವ ಬೃಹತ್ ಉಪನಗರ ಯೋಜನೆಗಳು ಕೇವಲ ಅಧಿಕೃತ ರಿಯಲ್ ಎಸ್ಟೇಟ್ ದಂಧೆಯಾಗಿ ಮಾರ್ಪಟ್ಟಿದೆ ಎಂಬುದು ಜನಜನಿತ. ಕೃಷಿ ಪ್ರಧಾನ ವಲಯವಾಗಿರುವ ಬಿಡದಿಯ ತೆಂಗು, ಹಿಪ್ಪನೇರಳೆ ಬೆಳೆಯುವ ಫಲವತ್ತಾದ 8000 ಕ್ಕೂ ಹೆಚ್ಚು ಎಕರೆ ನೀರಾವರಿ ಭೂಮಿಯನ್ನು ಬಲವಂತವಾಗಿ ಕಸಿದುಕೊಳ್ಳುತ್ತಿರುವುದು ಅತ್ಯಂತ ಕ್ರೂರ ಹಾಗೂ ಅಮಾನವೀಯ ಕ್ರಮ. ರೈತರ ಜಮೀನಿಗೆ ಕೇವಲ ತಲಾ 2 ಕೋಟಿ ರೂಪಾಯಿ ನಿಗದಿಪಡಿಸಿ, ಖಾಸಗಿ ಹಿತಾಸಕ್ತಿಗಳ ಜಾಗಕ್ಕೆ ಬರೋಬ್ಬರಿ 14 ಕೋಟಿ ರೂಪಾಯಿ ಬೆಲೆ ಕಟ್ಟುವುದು ಸರ್ಕಾರದ ಪರಮ ವಂಚನೆ ಮತ್ತು ಹಗಲು ದರೋಡೆ. ಶೇಕಡಾ 80ರಷ್ಟು ರೈತರು ಸಮ್ಮತಿಸಿದ್ದಾರೆ ಎಂದು ಆಡಳಿತಶಾಹಿ ಸುಳ್ಳು ಹೇಳುತ್ತಿದೆ. ಸೈಟುಗಳ ಮಾರಾಟ ಮತ್ತು ತೆರಿಗೆಯ ಮೂಲಕ ಬಡ ಅನ್ನದಾತರನ್ನು ಬೀದಿಗೆ ತಳ್ಳಿ 40,000 ಕೋಟಿ ರೂಪಾಯಿಗೂ ಅಧಿಕ ಹಣ ಲೂಟಿ ಮಾಡಲು ಹೊರಟಿರುವ ಈ ಜನವಿರೋಧಿ ಯೋಜನೆ ತಕ್ಷಣ ನಿಲ್ಲಿಸಬೇಕಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಈ ದಲ್ಲಾಳಿ ಆಡಳಿತ ಖಂಡನೀಯ.

-**ಡಾ. ವಿಜಯಕುಮಾರ್**, ರಾಯಚೂರು

ಹಳಿಯೇರಬಹುದೆ ?

ಮಲೆನಾಡು–ಕರಾವಳಿಯನ್ನು ಬೆಸೆಯುವ ಹಾಗೂ ಪಶ್ಚಿಮಘಟ್ಟವನ್ನು ಸೀಳಿ ಹಾದುಹೋಗುವ ಶಿವಮೊಗ್ಗಾ– ಶೃಂಗೇರಿ– ಮಂಗಳೂರು ರೈಲುಮಾರ್ಗ ನಿರ್ಮಿಸುವ ಬೃಹತ್ ಯೋಜನೆ ಡಿಪಿಆರ್ ಸಲ್ಲಿಸುವ ಹಂತದಲ್ಲಿದ್ದು, ಈ ಭಾಗದ ಜನರ ದಶಕಗಳ ಕನಸು ನನಸಾಗುವ ಸಾಧ್ಯತೆ ಕಾಣುತ್ತಿದೆ. ಆದರೆ, ಕರಾವಳಿಯನ್ನು ಕರ್ನಾಟಕದ ಉತ್ತರ ಹಿನ್ನಾಡಿಗೆ ಸೇರಿಸುವ, ಪಶ್ಚಿಮಘಟ್ಟದಲ್ಲಿ ಹಾದುಹೋಗುವ 162 ಕಿಮೀ ಉದ್ದದ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗೆ 1998ರಲ್ಲಿ ಅಂದಿನ ಪ್ರಧಾನಿ ವಾಜಪೇಯಿಯವರು ಅಡಿಗಲ್ಲು ಹಾಕಿದ್ದರು. ಅದಕ್ಕೆ ಈಗಾಗಲೇ ಸುಮಾರು 400 ಕೋಟಿ ವ್ಯಯವಾಗಿದ್ದರೂ ಪರಿಸರ ಸಂಬಂಧಿ ವಿರೋಧದಿಂದ ಹಳಿತಪ್ಪಿ ಆಡಳಿತಾತ್ಮಕ ಅನುಮತಿ ಮತ್ತು ಅನುದಾನಕ್ಕೆ ಕಾಯುತ್ತಿದೆ. ಹಾಗಿರುವಾಗ ಪ್ರಸ್ತಾವಿತ ಶಿವಮೊಗ್ಗಾ–ಮಂಗಳೂರು ಯೋಜನೆಯೂ ಅದೇ ಹಾದಿಯನ್ನು ಹಿಡಿಯುವ ಸಾಧ್ಯತೆ ಇದೆ. ಪರಿಸರವಾದಿಗಳು ಇಲ್ಲೂ ರೆಡ್ ಸಿಗ್ನಲ್ ತೋರಿಸುವುದನ್ನು ಅಲ್ಲಗಳೆಯಲಾಗದು.

ಮಲೆನಾಡನ್ನು ಕರಾವಳಿಗೆ ಸೇರಿಸುವ ಇನ್ನೊಂದು ರೈಲು ಯೋಜನೆ ತಾಳಗುಪ್ಪಾ –ಹೊನ್ನಾವರ ಮಾರ್ಗ ಕೂಡಾ ಪರಿಸರ ಸಂಬಂಧಿ ಕಾರಣದಿಂದ ದಶಕಗಳಿಂದ ಹಳಿ ಏರಲು ಕಾಯುತ್ತಿದೆ. ಹಾಗಾಗಿ ಶಿವಮೊಗ್ಗಾ– ಮಂಗಳೂರು ರೈಲು ಯೋಜನೆ ಶ್ಲಾಘನೀಯವಾದರೂ ಅದು ಅನುಷ್ಠಾನಗೊಳ್ಳುವುದು ಸಂದೇಹ ಅನಿಸುತ್ತದೆ.

-**ರಮಾನಂದ ಎಸ್**, ಬೆಂಗಳೂರು

‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ’ ಬೆಳೆದು ಬಂದ ಹಾದಿ







ಮಹಾತ್ಮಾ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಯಲ್ಲಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ, ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಾವಲಂಬನೆಗೆ ಪ್ರಾಮುಖ್ಯತೆಯನ್ನು ನೀಡುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ಕನಸಿನ ಕೂಸು ‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ’.

ಡಾ. ಡಿ. ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿಯ ನಾಯಕತ್ವದಲ್ಲಿ ಸ್ಥಾಪಿತವಾದ ಎಸ್‌ಕೆಡಿಆರ್‌ಡಿಪಿ ಮತ್ತು ರುಡ್‌ಸೆಟ್ ಸಂಸ್ಥೆ ಮುಂತಾದ ಮಹತ್ವದ ಸಾಮಾಜಿಕ ಸಂಸ್ಥೆಗಳ ಸಾಲಿನಲ್ಲಿ, ಸಿರಿ ತನ್ನ ವಿಶಿಷ್ಟ ಸಾಮಾಜಿಕ ದೃಷ್ಟಿಕೋನದಿಂದ ವಿಶೇಷ ಸ್ಥಾನವನ್ನು ಪಡೆದಿದೆ.

ಸಿರಿ ಸಂಸ್ಥೆಯ ಪ್ರಮುಖ ವೈಶಿಷ್ಟ್ಯವೆಂದರೆ ಇದು ಲಾಭಗಳಿಸುವ ಉದ್ದೇಶದಿಂದ ಆರಂಭಿಸಲ್ಪಟ್ಟ ಸಂಸ್ಥೆಯಲ್ಲ. ಬದಲಾಗಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ ಮುಖ್ಯವಾಗಿ ಸಮಾಜದ ಹಿಂದುಳಿದವರ್ಗಗಳು, ಪರಿಶಿಷ್ಟಜಾತಿ ಸಮುದಾಯಗಳು, ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ಮಹಿಳೆಯರಿಗೆ ಗೌರವಯುತ ಜೀವನ, ಉದ್ಯೋಗ, ಆತ್ಮವಿಶ್ವಾಸ ಮತ್ತು ಆರ್ಥಿಕ ಸ್ವಾವಲಂಬನೆ ಒದಗಿಸುವ ಮಹತ್ತರವಾದ ಉದ್ದೇಶದಿಂದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಣಕಾಸಿನ ನೆರವಿನೊಂದಿಗೆ ‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯನ್ನು 2004ರಲ್ಲಿ ಬೆಳ್ತಂಗಡಿಯಲ್ಲಿ ಪ್ರಾರಂಭಿಸಿದರು.

ಹೀಗೆ ಪ್ರಾರಂಭಗೊಂಡ ಸಿರಿ ಸಂಸ್ಥೆಯಲ್ಲಿ, ಯಾವುದೇ ರೀತಿಯ ವಿಶೇಷ ಅನುಭವ, ಪರಿಣತಿ ಇಲ್ಲದ ಗ್ರಾಮೀಣ ಮಹಿಳೆಯರಿಗೆ ವೇತನ ಸಹಿತವಾಗಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಿ ಅವರಿಂದ ಉತ್ತಮ ಗುಣಮಟ್ಟದ ಸಿದ್ಧ ಉಡುಪು ಉತ್ಪನ್ನಗಳು, ಫಿನಾಯಿಲ್, ಅಗರಬತ್ತಿ, ಕೋಕಂ ಜ್ಯೂಸ್, ಉಪ್ಪಿನಕಾಯಿ ಉತ್ಪನ್ನಗಳು ಸೇರಿದಂತೆ ಹಲವು ಬಗೆಯ ಗೃಹೋಪಯೋಗಿ ಉತ್ಪನ್ನಗಳನ್ನು ತಯಾರಿಸುವಂತೆ ಮಾಡುವುದು ಸಿರಿಯ ವಿಶೇಷತೆಯಾಗಿದೆ.

ಸಿರಿ ಉತ್ಪನ್ನಗಳನ್ನು ತಯಾರಿಸಲು ಪೂರಕವಾಗುವಂತೆ ಸುಮಾರು 50–60 ಹಳ್ಳಿಗಳಲ್ಲಿ ಘಟಕಗಳನ್ನು ಸ್ಥಾಪಿಸಿ, ಅಲ್ಲಿರುವ ಬಡಮಹಿಳೆಯರಿಗೆ ಉತ್ಪಾದನೆಗೆ ಬೇಕಾಗುವ ಕಚ್ಚಾಸಾಮಾಗ್ರಿಗಳನ್ನು ಪೂರೈಸಿ, ಅವರಿಂದ ತಯಾರಿಸಲಾದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ತಂದು ಆಯ್ದ ಪ್ರದೇಶಗಳಲ್ಲಿ ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿತ್ತು.

ಬೇರೆ ಬೇರೆ ಕಡೆಗಳಲ್ಲಿರುವ ಘಟಕಗಳಿಂದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ಸಾಗಿಸಲು ಅಧಿಕ ಸಾಗಾಟದ ವೆಚ್ಚ ವ್ಯಯವಾಗುತ್ತಿರುವುದರ ಜೊತೆಗೆ ಉತ್ಪನ್ನಗಳ ಗುಣಮಟ್ಟವನ್ನು ಕಾಪಾಡಲು ಬಹಳಷ್ಟು ಸಮಸ್ಯೆಗಳಾಗುತ್ತಿರುವ ಬಗ್ಗೆ ಸಿರಿಯ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್. ಜನಾರ್ದನ ಅವರು ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರಲ್ಲಿ ಚರ್ಚಿಸಿದಾಗ, ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಜೊತೆಗೆ ಸಿರಿಯ ವಿವಿಧ ಉತ್ಪಾದನಾ ವಿಭಾಗಗಳು ಒಂದೇ ಸೂರಿನಡಿ ಕಾರ್ಯಾಚರಿಸುವ ನಿಟ್ಟಿನಲ್ಲಿ ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರು ಬೆಳ್ತಂಗಡಿಯ ರೆಂಕೆದಗುತ್ತುವಿನ ಬಳಿ ಸುಮಾರು ಏಳು ಎಕರೆ ನಿವೇಶನವನ್ನು 2023 ಫೆಬ್ರವರಿಯಲ್ಲಿ ಖರೀದಿಸಿ, ಈ ವಿಶಾಲವಾದ ಸೌರಶಕ್ತಿಯಿಂದ ಬೆಳಗುವ ಸಿರಿ ಪರಿಸರದಲ್ಲಿ 71.00 ಕೋಟಿ ರೂ. ವೆಚ್ಚದಲ್ಲಿ ಸುಮಾರು 1.50ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಸಿರಿ ಸಂಸ್ಥೆಗೆ ನೂತನವಾದ ಬೃಹತ್ ಕಟ್ಟಡವನ್ನು ನಿರ್ಮಿಸಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸುವಂತಹ ಐತಿಹಾಸಿಕ ಕಾರ್ಯಕ್ಕೆ 2023ನೇ ವರ್ಷದ ಮಾರ್ಚ್ ತಿಂಗಳಲ್ಲಿ ಪೂಜ್ಯರು ಹಾಗೂ ಅಮ್ಮನವರು ಶಿಲಾನ್ಯಾಸವನ್ನು ನೆರವೇರಿಸಿದರು. 20–03–2025ರಂದು ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ತದನಂತರ ಹೊಸ ಕಟ್ಟಡದಲ್ಲಿ ಸಿರಿ ಉತ್ಪನ್ನಗಳ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯು ದಕ್ಷಿಣಕನ್ನಡ ಜಿಲ್ಲೆಯ 2000 ಸ್ವ–ಸಹಾಯ ಗುಂಪುಗಳ ಮಾಲಿಕತ್ವ ಹೊಂದಿರುವ ಕಲಂ 8ರ ಕಂಪೆನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾವಣಿಗೊಂಡ ಸಂಸ್ಥೆಯಾಗಿದ್ದು, ಸಿರಿ ಸಂಸ್ಥೆಯು ಯಾವುದೇ ಲಾಭದ ಉದ್ದೇಶವಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಆದಾಯ ತೆರಿಗೆ ಕಾಯ್ದೆ–1961ರ ಅಡಿಯಲ್ಲಿ ವಿಶೇಷವಾಗಿ ನೀಡಲ್ಪಡುವ ಕಲಂ 12ಎ ಮತ್ತು ಕಲಂ 80ಜಿಯ ಆದಾಯ ತೆರಿಗೆ ವಿನಾಯಿತಿಯನ್ನು ಪಡೆದುಕೊಂಡಿದೆ. ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಇಂತಹ ಮಹಿಳಾ ಸಿಬ್ಬಂದಿಗಳನ್ನು ಹೊಂದಿರುವ ಸಿರಿ ಸಂಸ್ಥೆಯಲ್ಲಿ ಗ್ರಾಮೀಣ ಮಹಿಳೆಯರು ಉತ್ಪಾದಿಸುವ ಉತ್ಕೃಷ್ಟ ಗುಣಮಟ್ಟದ ಗೃಹೋಪಯೋಗಿ ಆಹಾರೋತ್ಪನ್ನಗಳು, ಸಿರಿಧಾನ್ಯಗಳು, ಸಿದ್ಧ ಉಡುಪುಗಳು, ಅಗರಬತ್ತಿ, ರೆಕ್ಸಿನ್, ಶುಚಿಕಾರಕ ಇತ್ಯಾದಿ ಉತ್ಪನ್ನಗಳನ್ನು ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿದ್ದು, ಈ ಮೂಲಕ ಪ್ರತ್ಯಕ್ಷವಾಗಿ/ಪರೋಕ್ಷವಾಗಿ 5000ಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ಆಶ್ರಯ ನೀಡಿ, ಅವರ ಬಾಳು ಹಸನಾಗಿಸುವಲ್ಲಿ ಶ್ರಮಿಸುತ್ತಿದೆ.

ಅಗರಬತ್ತಿ ಉತ್ಪನ್ನಗಳ ಉತ್ಪಾದನಾ ಘಟಕ

ಅದೇ ರೀತಿ ವೈಷ್ಣವಿ ಬ್ಲಾಕ್‌ನ ಒಂದನೇ ಮಹಡಿಯಲ್ಲಿ ಅತ್ಯಾಧುನಿಕ ಮೆಷಿನರಿಗಳೊಂದಿಗೆ ಸಿರಿ ಸಂಸ್ಥೆಯ ಅಗರಬತ್ತಿ ಉತ್ಪಾದನಾ ಘಟಕವು ಕಾರ್ಯಾಚರಿಸುತ್ತಿದ್ದು, ಇಲ್ಲಿ ಅಗರಬತ್ತಿ ಉತ್ಪನ್ನಗಳ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಡಿಪ್ಪಿಂಗ್ ಮೆಷಿನ್, ಕೌಂಟಿಂಗ್ ಮತ್ತು ಲೇಡಿ ಪ್ಯಾಕಿಂಗ್ ಮೆಷಿನರಿಗಳನ್ನು , ವಿಭೂತಿ ಸುವಾಸನೆಯ ಒಟ್ಟು 22 ಬಗೆಯ ಅಗರಬತ್ತಿಗಳನ್ನು ಉತ್ಪಾದಿಸಿ ರೋಲ್, ಪೌಚ್ ಹಾಗೂ ಪ್ಯಾಕೆಟ್‌ಗಳಲ್ಲಿ ಗ್ರಾಹಕರಿಗೆ ಪೂರೈಸಲಾಗುತ್ತಿದೆ.

ಸಿರಿ ಕೇಂದ್ರ ಕಚೇರಿಗೆ ಧರ್ಮಸ್ಥಳ, ಉಜಿರೆ, ಬೆಳ್ತಂಗಡಿ, ವೇಣೂರು, ಗೇರುಕಟ್ಟೆ, ಉಪ್ಪಿನಂಗಡಿ, ನಾರಾವಿ, ಗುರುವಾಯನಕೆರೆ, ಮಡಂತ್ಯಾರು, ಪುಂಜಾಲಕಟ್ಟೆ ಇತ್ಯಾದಿ ಕಡೆಗಳಿಂದ ಕೆಲಸಕ್ಕಾಗಿ ಬರುವ ಸಿಬ್ಬಂದಿಗಳಿಗೆ ಬೆಳಿಗ್ಗೆ ಮತ್ತು ಸಂಜೆ ತಮ್ಮ ಕರ್ತವ್ಯದ ಸ್ಥಳಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಉಚಿತವಾಗಿ ಎರಡು ಬಸ್ಸುಗಳ ಸೌಕರ್ಯವನ್ನು ಒದಗಿಸಲಾಗಿದೆ.

ಸಿಬ್ಬಂದಿಗಳಿಗೆ ಹಾಸ್ಟೆಲ್ ಸೌಕರ್ಯ

ದೂರದ ಊರುಗಳಿಂದ ಸಿರಿ ಸಂಸ್ಥೆಗೆ ಉದ್ಯೋಗಕ್ಕಾಗಿ ಬರುವಂತಹ ಹೆಣ್ಣುಮಕ್ಕಳಿಗೆ ಸಹಕಾರಿಯಾಗುವ ಉದ್ದೇಶದಿಂದ ಸಿರಿ ಸಂಸ್ಥೆಯಲ್ಲಿಯೇ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತವಾದ ಹಾಸ್ಟೆಲ್ ವ್ಯವಸ್ಥೆಯನ್ನೂ ಒದಗಿಸಲಾಗಿದೆ.

ವಸತಿ ಗೃಹ (ಬ್ರಾಹ್ಮಣಿ)

ಸಿರಿ ಸಂಸ್ಥೆಯ ನೂತನ ಕಟ್ಟಡದ ಆವರಣದಲ್ಲಿ ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ವಸತಿಗೃಹದ ಜೊತೆಗೆ ಸಂಸ್ಥೆಗೆ ಆಗಮಿಸುವ ವಿಶೇಷ ಅತಿಥಿಗಳಿಗೆ ಉಳಿದುಕೊಳ್ಳಲು 4 ಸುಸಜ್ಜಿತ ಅತಿಥಿಗೃಹಗಳ ವ್ಯವಸ್ಥೆ ಹಾಗೂ ದೂರದ ಊರಿನಿಂದ ಆಗಾಗ ಬಂದು ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗಾಗಿ 11 ವಸತಿಗೃಹಗಳು, ಜಿಮ್ ಇಕ್ವಿಪ್‌ಮೆಂಟ್ ಕೊಠಡಿ ಮತ್ತು ಮೆಡಿಟೇಶನ್ ಕೊಠಡಿಯ ಸೌಲಭ್ಯವಿದೆ.

ಸಿರಿ ಸಿಬ್ಬಂದಿಗಳ ಪುಟ್ಟ ಮಕ್ಕಳಿಗೆ ಶಿಶು ವಿಹಾರ (ಮಗು)

ಸಿರಿ ಸಂಸ್ಥೆಯಲ್ಲಿ ಶೇ.90ರಷ್ಟು ಮಹಿಳಾ ಸಿಬ್ಬಂದಿಗಳೇ ಕಾರ್ಯನಿರ್ವಹಿಸುವುದರಿಂದ, ಇವರಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಸಿರಿ ಸಿಬ್ಬಂದಿಗಳ 5 ವರ್ಷ ವಯಸ್ಸಿನೊಳಗಿನ ಪುಟ್ಟ ಮಕ್ಕಳ ಲಾಲನೆ ಪಾಲನೆಗಾಗಿ ಸಿರಿ ಸಂಸ್ಥೆಯಲ್ಲಿಯೇ ಸುಸಜ್ಜಿತವಾದ ಶಿಶುವಿಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ಇಲ್ಲಿ ಮಕ್ಕಳಿಗೆ ಆಟೋಟ ಚಟುವಟಿಕೆಗಳ ಜೊತೆಗೆ ಸಿರಿ ಪುಷ್ಟಿ ಮೊದಲಾದ ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಮೂಲಕ ಮಕ್ಕಳ ಆರೋಗ್ಯದ ಕಾಳಜಿ ವಹಿಸಲಾಗುತ್ತಿದೆ.

ಬಿಸಿ ಭೋಜನದ ವ್ಯವಸ್ಥೆ (ನೈವೇದ್ಯಂ)

ಸಿರಿ ಸಂಸ್ಥೆಯ ನೂತನ ಉತ್ಪಾದನಾ ಸಂಕೀರ್ಣದ ವಿವಿಧ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಒದಗಿಸಲು ನೂತನ ಕಟ್ಟಡದಲ್ಲಿ, ಸುಸಜ್ಜಿತ ಭೋಜನಶಾಲೆಯನ್ನು ನಿರ್ಮಿಸಲಾಗಿದೆ. ತನ್ಮೂಲಕ ಇತರ ಖಾಸಗಿ ಸಂಸ್ಥೆಗಳಲ್ಲಿರುವಂತೆ ಎಲ್ಲಾ ಸಿಬ್ಬಂದಿಗಳಿಗೂ ರಿಯಾಯಿತಿ ದರದಲ್ಲಿ ಮಧ್ಯಾಹ್ನ ಶುಚಿ–ರುಚಿಯಾದ ಬಿಸಿ ಊಟದ ವ್ಯವಸ್ಥೆ ಒದಗಿಸಲಾಗಿದೆ. ಜೊತೆಗೆ ಸಿರಿ ಹಾಸ್ಟೆಲ್‌ನಲ್ಲಿ ವಾಸ್ತವ್ಯವಿರುವ ಸಿಬ್ಬಂದಿಗಳಿಗೂ ರಿಯಾಯಿತಿ ದರದಲ್ಲಿ ಪೌಷ್ಟಿಕಾಂಶಯುಕ್ತ ಊಟ–ಉಪಾಹಾರದ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಸಿರಿ ಸಂಸ್ಥೆಯ ಮುಖ್ಯ ಪ್ರವೇಶದ್ವಾರದ ಬಳಿಯಲ್ಲಿ ಸಿರಿ ಉತ್ಪನ್ನಗಳ ಮಾರಾಟ ಮಳಿಗೆ ಮತ್ತು ‘ಸಿರಿ ಕೆಫೆ’ಯನ್ನು ತೆರೆಯಲಾಗಿದ್ದು, ಇದರಿಂದ ಬೆಳ್ತಂಗಡಿ ರೆಂಕೆದಗುತ್ತು – ಗೇರುಕಟ್ಟೆ – ಉಪ್ಪಿನಂಗಡಿ ಮಾರ್ಗವಾಗಿ ಸಂಚರಿಸುವ ವಾಹನಸವಾರರಿಗೆ, ಹೊರಗಿನಿಂದ ಬರುವ ಇತರ ಗ್ರಾಹಕರು ಸೇರಿದಂತೆ ಸಂಸ್ಥೆಯ ಸಿಬ್ಬಂದಿಗಳು/ಘಟಕಗಳ ಸದಸ್ಯರಿಗೆ, ತುಂಬಾ ಅನುಕೂಲವಾಗಿದೆ.

ಸಿರಿ ಸಂಸ್ಥೆಯ ನೂತನ ಕೇಂದ್ರ ಕಚೇರಿ ಆವರಣದಲ್ಲಿರುವ ‘ಶ್ರೀ ಸನ್ನಿ’ ಬ್ಲಾಕ್ ನ ಒಂದನೇ ಮಹಡಿಯಲ್ಲಿ ವಿವಿಧ ಬಗೆಯ ಉಪ್ಪಿನಕಾಯಿಗಳ ಉತ್ಪಾದನಾ ಘಟಕ ಕಾರ್ಯಾಚರಿಸುತ್ತಿದ್ದು, ಉತ್ಪನ್ನಗಳ ಶುಚಿತ್ವ ಮತ್ತು ಗುಣಮಟ್ಟವನ್ನು ಕಾಪಾಡಲು ಸದರಿ ಘಟಕದಲ್ಲಿ ಅಳವಡಿಸಲಾಗಿರುವ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರುವ ಬ್ರೈಂಡಿಂಗ್ ಮೆಷಿನ್, ಪಿಕಲ್ ಫಿಲ್ಲಿಂಗ್ ಮೆಷಿನ್, ವೆಜಿಟೇಬಲ್ ಕಟ್ಟಿಂಗ್ ಮೆಷಿನ್‌ಗಳನ್ನು ಬಳಸಿಕೊಂಡು ಉತ್ಪಾದಿಸಲಾದ ಉಪ್ಪಿನಕಾಯಿ ಉತ್ಪನ್ನಗಳನ್ನು ಕೈಗಳಿಂದ ಮುಟ್ಟದೆ, ಇದಕ್ಕೆ ಬದಲಾಗಿ ಬಾಟಲ್/ಪೌಚ್ ಫಿಲ್ಲಿಂಗ್ ಮೆಷಿನರಿಗಳ ಮೂಲಕ ಪ್ಯಾಕಿಂಗ್ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಿ ಶುಚಿ–ರುಚಿಯಾದ ಹುಣಸೆಹುಳಿ, ನಿಂಬೆಹಣ್ಣು, ಮಾವಿನಕಾಯಿ, ಮಿಕ್ಸೆಡ್ ತರಕಾರಿಗಳ ಉಪ್ಪಿನಕಾಯಿ ಇತ್ಯಾದಿಗಳನ್ನು ವಾಟರ್‌ಬೇಸ್ ಮತ್ತು ಆಯಿಲ್‌ಬೇಸ್ ನಲ್ಲಿ ತಯಾರಿಸಿ ಮಾರುಕಟ್ಟೆಗೆ ಪೂರೈಸಲಾಗುತ್ತದೆ.

ಸಿದ್ಧ ಉಡುಪುಗಳ ಉತ್ಪಾದನಾ ಘಟಕ

ಕೇಂದ್ರ ಕಚೇರಿ ಆವರಣದಲ್ಲಿರುವ ಶ್ರೀ ಸನ್ನಿಧಿ ಬ್ಲಾಕ್‌ನಲ್ಲಿ ಸಿರಿ ಸಂಸ್ಥೆಯ ಸಿದ್ಧ ಉಡುಪು ಉತ್ಪಾದನಾ ಘಟಕ ಕಾರ್ಯಾಚರಿಸುತ್ತಿದ್ದು, ಸದ್ರಿ ಘಟಕದಲ್ಲಿ ಅಳವಡಿಸಲಾಗಿರುವ ಬ್ಯಾಂಡ್ ನೈಫ್ ಮೆಷಿನ್, ಫ್ಯಾಬ್ರಿಕ್ ಚೆಕ್ಕಿಂಗ್ ಮೆಷಿನ್, ಕಫ್ ಟರ್ನಿಂಗ್ ಮೆಷಿನ್, ಕೀಹೋಲ್ ಮೆಷಿನ್, ಪ್ರೊಫೈಲ್ ಮೆಷಿನ್‌ಗಳನ್ನು ಹೊಂದಿರುವ ಮೆಷಿನರಿಗಳನ್ನು ಉಪಯೋಗಿಸಿಕೊಂಡು, ಪುರುಷರಿಗಾಗಿ ಅಡಿಸ್ಟೆಡ್ ಪ್ರೀಮಿಯಂ ಶರ್ಟ್‌ಗಳು, ಸ್ವದೇಶಿ ಪ್ರೀಮಿಯಂ ಶರ್ಟ್‌ಗಳು, ಖಾದಿ ಶರ್ಟ್, ಅಡಿಸ್ಟೆಡ್ ಪ್ಯಾಂಟ್ ಇತ್ಯಾದಿ ಉತ್ತಮ ಗುಣಮಟ್ಟವನ್ನು ಹೊಂದಿರುವ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಮಹಿಳೆಯರಿಗಾಗಿ ಕುರ್ತಾಗಳು, ಟಾಪ್ಸ್, ನೈಟಿ, ಸೀರೆ, ಸ್ಕರ್ಟ್ ಮೊದಲಾದ ನವನವೀನ ಮಾದರಿಯ ಸಿದ್ಧ ಉಡುಪುಗಳನ್ನು ಉತ್ಪಾದಿಸಲಾಗುತ್ತಿದೆ. ಅಲ್ಲದೆ ಎಸ್.ಡಿ.ಎಮ್. ಶಿಕ್ಷಣ ಸಂಸ್ಥೆಗಳು ಸೇರಿದಂತೆ ರಾಜ್ಯಾದ್ಯಂತ ಇರುವ ಹಲವಾರು ಶಾಲಾ–ಕಾಲೇಜುಗಳು, ವಿವಿಧ ಭಜನಾ ಮಂಡಳಿಗಳು, ಪೆಟ್ರೋಲ್ ಪಂಪ್‌ಗಳು, ಖಾಸಗಿ ಆಸ್ಪತ್ರೆಗಳು ಮುಂತಾದ ಸಂಸ್ಥೆಗಳಿಂದ ಸಮವಸ್ತ್ರ ಉತ್ಪನ್ನಗಳಿಗೆ ಬೇಡಿಕೆ ಸಂಗ್ರಹಿಸಿ ಸಕಾಲದಲ್ಲಿ ಸಿದ್ಧಪಡಿಸಿ ಉತ್ಪನ್ನಗಳನ್ನು ಪೂರೈಕೆ ಮಾಡಲಾಗುತ್ತಿದೆ.

ಪ್ಯಾಕಿಂಗ್ ಘಟಕ

ಸಿರಿಸಂಸ್ಥೆಯಇಂದ್ರಾಣಿಬ್ಲಾಕ್‌ನನೆಲಮಹಡಿಯಲ್ಲಿ ದೀಪದ ಎಣ್ಣೆ /ಕೊಬ್ಬರಿಎಣ್ಣೆ ಪ್ಯಾಕಿಂಗ್ ಘಟಕ, ಕೋಕಂ ಸ್ಕ್ವ್ಯಾಷ್ ಮತ್ತು ಜ್ಯೂಸ್ ಘಟಕ ಹಾಗೂ ಶೇಂಗಾ ಚಿಕ್ಕಿ ಉತ್ಪನ್ನಗಳ ಉತ್ಪಾದನಾಘಟಕ ಕಾರ್ಯನಿರ್ವಹಿಸುತ್ತಿದೆ. ಕೋಕಂ ಸ್ಕ್ವಾಷ್ ಘಟಕದಲ್ಲಿ ರೈತರಿಂದ ಖರೀದಿಸಲಾದ ಕೋಕಂ ಉತ್ಪನ್ನಗಳನ್ನು ಶುಚಿಗೊಳಿಸಿ, ರಸ ಹಿಂಡಿ, ಇದಕ್ಕೆ ಸಕ್ಕರೆ ಮಿಶ್ರಣಗೊಳಿಸಿ ಕುದಿಸಿ, ಆರಿಸಿದ ಜ್ಯೂಸನ್ನು ಬಾಟಲಿಗಳಿಗೆ ತುಂಬಿಸಿ, ಅತಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರಮಾಣದ ಮತ್ತು ಗುಣಮಟ್ಟದ ಉತ್ಪನ್ನ ಗಳನ್ನು ಮಾರುಕಟ್ಟೆಗೆ ಪೂರೈಸುವ ನಿಟ್ಟಿನಲ್ಲಿ ಸದರಿ ಘಟಕದಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಸ್ಟೀಜರ್, ಹೀಟಿಂಗ್‌ವೆಸಲ್, ಕೂಲಿಂಗ್‌ಟ್ಯಾಂಕ್, ಆಟೋಮೆಟಿಕ್ ಫಿಲ್ಲಿಂಗ್ ಯಂತ್ರೋಪಕರಣಗಳನ್ನು ಬಳಸಿಕೊಂಡು ಕೋಕಂ ಸ್ಕ್ವಾಷ್ ಬಾಟಲ್ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಅದೇ ರೀತಿ ಎಣ್ಣೆ ಪ್ಯಾಕಿಂಗ್ ಘಟಕದಲ್ಲಿ ಸುಮಾರು 3000 ಟನ್ ತೂಕದ ದೀಪದಎಣ್ಣೆ, ರೋಸ್ಟಿಂಗ್/ ನಾನ್–ರೋಸ್ಟಿಂಗ್ ಕೊಬ್ಬರಿಎಣ್ಣೆಯನ್ನು ಆಯಿಲ್ ಸ್ಟೋರೇಜ್ ಟ್ಯಾಂಕ್‌ನಲ್ಲಿ ಸಂಗ್ರಹಿಸಿ, ಈ ಎಣ್ಣೆಯನ್ನು ಆಟೋಮ್ಯಾಟಿಕ್ ಪೌಚ್‌ಫಿಲ್ಲಿಂಗ್ ಮತ್ತು ಬಾಟಲ್ ಫಿಲ್ಲಿಂಗ್ ಯಂತ್ರೋಪಕರಣಗಳನ್ನು ಬಳಸಿಕೊಂಡು ಪ್ಯಾಕಿಂಗ್ ಕೆಲಸಕಾರ್ಯಗಳನ್ನು ನಿರ್ವಹಿಸುವ ಮೂಲಕ ಬೇಡಿಕೆಗನುಗುಣವಾಗಿ ಮಾರುಕಟ್ಟೆಗೆ ಪೂರೈಸಲಾಗುತ್ತಿದೆ.

ಸಿರಿ ಮಿಲೆಟ್ ಕೆಫೆ, ಬೆಳ್ತಂಗಡಿ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ ಪ್ರಪ್ರಥಮವಾಗಿ ಆರಂಭಿಸಲಾದ ಏಕೈಕ ಸಿರಿಧಾನ್ಯದ ಉಪಹಾರಗೃಹದಲ್ಲಿ ಶುಚಿ–ರುಚಿಯಾದ ಆರೋಗ್ಯಕರ ಸಿರಿಧಾನ್ಯಗಳ ಭೋಜನ ಮತ್ತು ಖಾದ್ಯಗಳನ್ನು ತಯಾರಿಸಿ ಗ್ರಾಹಕರಿಗೆ ಉಣಬಡಿಸಲಾಗುತ್ತಿದೆ.

ಸಿರಿ ಲೈನ್ ಸೇಲ್ಸ್ ಮತ್ತು ಶಾಪ್ ಆನ್ ವೀಲ್ಸ್

ರಾಜ್ಯಾದ್ಯಂತ ಸಿರಿಯ 10 ಲೈನ್ ಸೇಲ್ ವಾಹನಗಳು ಹಾಗೂ 5 ಶಾಪ್ ಆನ್ ವೀಲ್ಸ್ ವಾಹನಗಳ ಮುಖಾಂತರ ರಾಜ್ಯದೆಲ್ಲೆಡೆ ಇರುವ ಗ್ರಾಹಕರಿಗೆ ಸಮಯಕ್ಕೆ ಸರಿಯಾಗಿ ಸಿರಿ ಉತ್ಪನ್ನಗಳನ್ನು ಪೂರೈಸಲಾಗುತ್ತಿದೆ.

ಫ್ರಾಂಚೈಸಿ ಮಳಿಗೆಗಳು

ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವ ಯುವಕ ಯುವತಿಯರು ನಗರ ಪ್ರದೇಶದಲ್ಲಿ ಸಿರಿ ಫ್ರಾಂಚೈಸಿ ಮಳಿಗೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಸಿರಿ ಮಳಿಗೆಗಳನ್ನು ತೆರೆದು, ಸಿರಿ ಉತ್ಪನ್ನಗಳನ್ನು ಮಾರಾಟ ಮಾಡಿ ಸ್ವಉದ್ಯೋಗದಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗಿದ್ದಾರೆ.



ಕೆ. ಎನ್. ಜನಾರ್ಧನ, ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ (ಆರ್)

ಕಿರುಸುದ್ದಿ

ಪತ್ನಿ ಮನೆಯಿಂದ ಕೆಲಸಕ್ಕೆಂದು ಹೋದ ವ್ಯಕ್ತಿ ನಾಪತ್ತೆ

ಪುತ್ತೂರು: ವಿದ್ಯುತ್ ಸರಬರಾಜು ಮಾಡುವ ತಂತಿ ಎಳೆಯುವ ಕಾಮಗಾರಿಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ಕಾಣಿಯೂರು ಗ್ರಾಮದ ಪುಣ್ಯತ್ತಾರು ನಿವಾಸಿಯೊಬ್ಬರು ಪತ್ನಿ ಮನೆಯಿಂದ ಕೆಲಸಕ್ಕೆಂದು ಹೋದವರು ನಾಪತ್ತೆಯಾಗಿರುವ ಕುರಿತು ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಕಾಣಿಯೂರು ಗ್ರಾಮದ ಪುಣ್ಯತ್ತಾರು ನಿವಾಸಿ ವಿನಯ್(43) ನಾಪತ್ತೆಯಾದವರು. ವಿನಯ್ ಪುತ್ತೂರು ತಾಲೂಕಿನ ಕೆಮ್ಮಿಂಜೆ ಗ್ರಾಮದ ನೈತ್ತಾಡಿಯಲ್ಲಿರುವ ತಮ್ಮ ಪತ್ನಿಯ ಮನೆಯಲ್ಲಿದ್ದರು. ಮೇ 10ರಂದು ಎಂದಿನಂತೆ ಕೆಲಸಕ್ಕೆಂದು ಪತ್ನಿ ಮನೆಯಿಂದ ಹೊರಟವರು ಆ ಬಳಿಕ ಮನೆಗೆ ಮರಳಿ ಬಂದಿಲ್ಲ. ಅವರ ಮೊಬೈಲ್ ಫೋನ್ ಕೂಡಾ ಸ್ವಿಚ್ ಆಫ್ ಆಗಿದೆ. ವಿನಯ್ ಮಂಗಳೂರಿನಲ್ಲಿ ಆದಿತ್ಯ ಟ್ರೇಡಿಂಗ್ ಸೊಲ್ಯೂಷನ್ ಸಂಸ್ಥೆಯಲ್ಲಿ ಟ್ರೇಡಿಂಗ್ ಕೆಲಸ ಮಾಡಿಕೊಂಡಿದ್ದು, ಜೊತೆಗೆ ಪಾರ್ಟ್ ಟೈಮ್ ನೆಲೆಯಲ್ಲಿ ಎಸ್.ಎಲ್.ವಿ. ಕಂಪೆನಿಯ ನಂಜುಂಡಿ ಟ್ರೇಡರ್ಸ್‌ನಲ್ಲಿ ಗುತ್ತಿಗೆ ವಹಿಸಿಕೊಂಡಿರುವ ವಿದ್ಯುತ್ ಸರಬರಾಜು ಮಾಡುವ ತಂತಿ ಎಳೆಯುವ ಕಾಮಗಾರಿಯ ಮೇಲುಸ್ತುವಾರಿ ಕೆಲಸವನ್ನೂ ಮಾಡುತ್ತಿದ್ದರು. ವಿನಯ್ ಅವರ ಪತ್ನಿ ಭವ್ಯ ಪುತ್ತೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ತುಳು ಭಾಷೆ ಮಾನ್ಯತೆ : ಅ.ಭಾ. ತುಳು ಒಕ್ಕೂಟದ ನಿಯೋಗದಿಂದ ಮುಖ್ಯಮಂತ್ರಿ ಭೇಟಿಗೆ ನಿರ್ಧಾರ

ಮಂಗಳೂರು: ಅಖಿಲ ಭಾರತ ತುಳು ಒಕ್ಕೂಟದದೇಶದಾದ್ಯಂತಸದಸ್ಯರಾಗಿರುವ ತುಳು ಸಂಘಟನೆಯ ಪ್ರಮುಖರು ನಿಯೋಗದೊಂದಿಗೆ ಮುಖ್ಯಮಂತ್ರಿ ಅವರನ್ನು ಭೇಟಿಮಾಡಿ ನೆನೆಗುದಿಗೆ ಬಿದ್ದಿರುವ ತುಳುಭಾಷೆ ಮಾನ್ಯತೆಯನ್ನು ಪುರಸ್ಕರಿಸುವಂತೆ ಶೀಘ್ರದಲ್ಲೇ ಮನವಿ ಸಲ್ಲಿಸಲಾಗುವುದು ಎಂದು ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಎ.ಸಿ. ಭಂಡಾರಿ ಹೇಳಿದರು.

ಕಾವೂರಿನ ಗಾಂಧಿನಗರದಲ್ಲಿರುವ ಮುಗ್ರೋಡಿ ಎನ್‌ಕ್ಲೇವ್‌ನ ಕಚೇರಿ ಸಭಾಂಗಣದಲ್ಲಿ ನಡೆದ ಒಕ್ಕೂಟದ ಕಾರ್ಯಕಾರಿ ಸಮಿತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತುಳು ಭಾಷೆ, ಸಂಸ್ಕೃತಿ, ಲಿಪಿಗೆ ಸಂಬಂಧಿಸಿದಂತೆ ಈಗಾಗಲೇ ಪೂರಕವಾಗಿ ಎಲ್ಲಾ ದಾಖಲೆಗಳನ್ನು ಸರಕಾರದ ಸಂಬಂಧಪಟ್ಟ ಇಲಾಖೆಗೆ ನೀಡಲಾಗಿದೆ. ಹಾಗಿದ್ದರೂ ಈವರೆಗೆ ತುಳು ಭಾಷೆಯನ್ನು ಪುರಸ್ಕರಿಸುವ ಯಾವುದೇ ಕೆಲಸ ಆಗಿಲ್ಲ. ಅಲ್ಲದೆ ಈ ಬಗ್ಗೆ ಬೇರೆ ರಾಜ್ಯಗಳ ನಡಾವಳಿಯನ್ನು ಕೂಡಾ ಸರಕಾರದ ಗಮನಕ್ಕೆ ತರಲಾಗಿದೆ ಎಂದರು.

ಅಖಿಲ ಭಾರತ ತುಳು ಒಕ್ಕೂಟಕ್ಕೆ ಉಳ್ಳಾಲದ ನರಿಂಗಾನ ಗ್ರಾಮದಲ್ಲಿ ತುಳು ಗ್ರಾಮ ನಿರ್ಮಿಸಲು ಸರಕಾರ ಒಂದು ಎಕರೆಗೂ ಮಿಕ್ಕಿ ಜಾಗ ಕಾದಿರಿಸಿದೆ.



- ತುಳು ಭಾಷೆ, ಸಂಸ್ಕೃತಿ, ಲಿಪಿಗೆ ಸಂಬಂಧಿಸಿದಂತೆ ಈಗಾಗಲೇ ಪೂರಕವಾಗಿ ಎಲ್ಲಾ ದಾಖಲೆಗಳನ್ನು ಸರಕಾರದ ಸಂಬಂಧಪಟ್ಟ ಇಲಾಖೆಗೆ ನೀಡಲಾಗಿದೆ.
- ತುಳು ಭಾಷೆಯನ್ನು ಪುರಸ್ಕರಿಸುವ ಯಾವುದೇ ಕೆಲಸ ಆಗಿಲ್ಲ.

ಶೀಘ್ರದಲ್ಲೇ ಇದರ ರೂಪುರೇಖೆ ತಯಾರಿಸಿ ಒಕ್ಕೂಟ ಕಾರ್ಯೋನ್ಮುಖಗೊಳ್ಳಲಿದೆ ಹಾಗೂ ಸಂಘಟನಾ ಕಾರ್ಯದರ್ಶಿ ಕದ್ರಿ ನವನೀತ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ತುಳು ಸಂಬಂಧಿ ಕಾರ್ಯಕ್ರಮಗಳು, ಸಮಾರಂಭಗಳು, ಸ್ಪರ್ಧೆಗಳು, ಸಾಧಕರಿಗೆ ಗೌರವ ಅಭಿನಂದನೆ ಹಾಗೂ 27–29ನೇ ಅವಧಿಯ ನೂತನ ಪದಾಧಿಕಾರಿಗಳ ಪದ ಗ್ರಹಣ ನಡೆಯಲಿದೆ ಎಂದು ವಿವರಿಸಿದರು.

ಉಪಾಧ್ಯಕ್ಷ ಯೋಗೀಶ್ ಶೆಟ್ಟಿ ಜೆಪ್ಪು, ಸದಸ್ಯರಾದ ಹೇಮಾ ದಾಮೋದರ್ ನಿಸರ್ಗ, ಸುಖಲಾಕ್ಷಿ ಸುವರ್ಣ, ಜಯಂತಿ ಬಂಗೇರ, ಗೌರವ ಸಲಹೆಗಾರ ಚಂದ್ರಶೇಖರ ಸುವರ್ಣ, ಮಾಧ್ಯಮ ವಕ್ತಾರ ಮುಲ್ಕಿ ಕರುಣಾಕರ ಶೆಟ್ಟಿ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಪಿ.ಎ. ಪೂಜಾರಿ ಸ್ವಾಗತಿಸಿ, ಕೋಶಾಧಿಕಾರಿ ವಿಜಯಲಕ್ಷ್ಮೀ ಬಿ. ಶೆಟ್ಟಿ ಲೆಕ್ಕಪತ್ರ ಮಂಡಿಸಿದರು. ಜೊತೆ ಕಾರ್ಯದರ್ಶಿ ಗಣೇಶ್ ಮಲ್ಲಿ ಮರಕಡ ವಂದಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ರಸ್ತೆ–ಚರಂಡಿ ನಿರ್ಮಾಣಕ್ಕೆ ಆಗ್ರಹ

ಕುಶಾಲನಗರ: ಕುಶಾಲನಗರದ ಯೋಗಾನಂದ ಬಡಾವಣೆಯಲ್ಲಿರುವ ಶ್ರೀ ಮುತ್ತಪ್ಪಸ್ವಾಮಿ ದೇವಾಲಯ ಬಳಿ ಸುಸಜ್ಜಿತ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಆಗ್ರಹಿಸಿ ಹೆಚ್. ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪುರಸಭೆ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ದೇವಾಲಯ ಬಳಿ ಅಪೂರ್ಣಗೊಂಡಿರುವ ಚರಂಡಿಯಲ್ಲಿ ತ್ಯಾಜ್ಯ ಮಡುಗಟ್ಟಿ ನಿಂತಿದೆ. ಸಾಂಕ್ರಾಮಿಕ ರೋಗ ಹರಡುವ ಎಲ್ಲಾ ಲಕ್ಷಣಗಳಿವೆ. ಈ ಬಗ್ಗೆ ಈ ಹಿಂದೆ ಹಲವು ಬಾರಿ ಪುರಸಭೆ ಗಮನಕ್ಕೆ ತರಲಾಗಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಮುಂದಿನ ಎರಡು ತಿಂಗಳ ಒಳಗಾಗಿ ಕಾಮಗಾರಿ ಕೈಗೊಳ್ಳಬೇಕಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಡಾ.ಬಿ.ಎ.ದಿನೇಶ್ ಶೆಟ್ಟಿ ನೇತೃತ್ವದಲ್ಲಿ ಪದಾಧಿಕಾರಿಗಳು ಮುಖ್ಯಾಧಿಕಾರಿ ಗಿರೀಶ್ ಅವರನ್ನು ಒತ್ತಾಯಿಸಿದರು.

ಪುರಸಭೆ ಮೂಲಕವೇ ಕಾಮಗಾರಿಗೆ 3.12 ಲಕ್ಷ ವೆಚ್ಚದ ಅಂದಾಜು ಪಟ್ಟಿ ತಯಾರಿಸಲಾಗಿದೆ. ಮಳೆಗಾಲ ಆರಂಭವಾದಲ್ಲಿ ಸಮಸ್ಯೆ ತೀವ್ರಗೊಳ್ಳುವ ಕಾರಣ ಶೀಘ್ರದಲ್ಲೇ ಕಾಮಗಾರಿ ಕೈಗೊಳ್ಳುವಂತೆ ಜಿಲ್ಲಾಧ್ಯಕ್ಷ ದಿನೇಶ್ ಶೆಟ್ಟಿ ಮತ್ತು ಜಿಲ್ಲಾ ಸಂಚಾಲಕ ಎಂ.ಎಸ್. ಮಣಿಕಂಠ ಮುಖ್ಯಾಧಿಕಾರಿಗಳನ್ನು ಆಗ್ರಹಿಸಿದರು. ಎರಡು ತಿಂಗಳ ಒಳಗಾಗಿ ಕಾಮಗಾರಿ ನಡೆಸದಿದ್ದಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಕರವೇ ವತಿಯಿಂದ ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುತ್ತದೆ ಎಂದು ಎಚ್ಚರಿಸಿದರು.



- ದೇವಾಲಯ ಬಳಿ ಅಪೂರ್ಣ ಗೊಂಡಿರುವ ಚರಂಡಿಯಲ್ಲಿ ತ್ಯಾಜ್ಯ ಮಡುಗಟ್ಟಿ ನಿಂತಿದೆ
- ಈ ಹಿಂದೆ ಹಲವು ಬಾರಿ ಪುರಸಭೆ ಗಮನಕ್ಕೆ ತರಲಾಗಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ
- ಮುಂದಿನ ಎರಡು ತಿಂಗಳ ಒಳಗಾಗಿ ಕಾಮಗಾರಿ ಕೈಗೊಳ್ಳಬೇಕಿದೆ

ಈ ಸಂದರ್ಭ ಕರವೇ ಜಿಲ್ಲಾ ಗೌರವಾಧ್ಯಕ್ಷ ನಾಗರಾಜ್, ಜಿಲ್ಲಾ ಉಪಾಧ್ಯಕ್ಷೆ ಸರಳಾ ರಾಮಣ್ಣ, ಸಂಘಟನಾ ಕಾರ್ಯದರ್ಶಿ ನಿರ್ಮಲಾ, ಪ್ರಧಾನ ಕಾರ್ಯದರ್ಶಿ ವಿ. ಕೃಷ್ಣ, ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿ, ಸಂಚಾಲಕ ಡಿ.ವಿ.ಗಣೇಶ್, ಪದಾಧಿಕಾರಿಗಳಾದ ಸುಂದರ್, ಪುಟ್ಟಮ್ಮ, ಕಮಾಲುದ್ದೀನ್, ನಾಗರಾಜ್, ಗಣೇಶ್ ಟಿ.ಪಿ.ರಾಜೇಗೌಡ ಮತ್ತಿತರರು ಇದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜನ ಜಾಗೃತಿ ವೇದಿಕೆ ಟ್ರಸ್ಟ್‌ನ ತ್ರೈಮಾಸಿಕ ಸಭೆ

ಉಡುಪಿ ತಾಲೂಕು ಮಟ್ಟದ ವಿವಿಧ ಪದಾಧಿಕಾರಿಗಳ ನೇಮಕ

ಉಡುಪಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ ಟ್ರಸ್ಟ್ ಉಡುಪಿ ತಾಲೂಕು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಟ್ರಸ್ಟ್ ಉಡುಪಿ ತಾಲೂಕು ಇದರ 2026–27ನೇ ಸಾಲಿನ ತ್ರೈಮಾಸಿಕ ಪ್ರಥಮ ಸಭೆಯು ಬ್ರಹ್ಮಗಿರಿಯ ಪ್ರಗತಿಸೌಧದ ಸಭಾಭವನದಲ್ಲಿ ಮೇ 28ರಂದು ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಅಧ್ಯಕ್ಷತೆ ವಹಿಸಿದ ಸತ್ಯಾನಂದ ನಾಯಕ್ ದೀಪ ಬೆಳಗಿಸಿ ಉದ್ಘಾಟನೆ ನೆರವೇರಿಸಿದರು. ಗತ ಸಭೆಯ ವರದಿಯನ್ನು ತಾಲೂಕು ವೇದಿಕೆಯ ಕಾರ್ಯದರ್ಶಿ ಯೋಜನಾಧಿಕಾರಿ ಸುರೇಂದ್ರ ನಾಯ್ಕ್ ವಾಚಿಸಿದರು. ಎಲ್ಲಾ ವಲಯದ ಮೇಲ್ವಿಚಾರಕರು 2025 – 26ನೇ ಸಾಲಿನ ಜನಜಾಗೃತಿ ಕಾರ್ಯಕ್ರಮಗಳ ಸಾಧನಾ ವರದಿಯನ್ನು ಮಂಡಿಸಿದರು. 2026– 27ನೇ ಸಾಲಿನ ಕ್ರಿಯಾಯೋಜನೆಯ ಅನುಷ್ಠಾನದ ಕುರಿತು ಕರಾವಳಿ ಪ್ರಾದೇಶಿಕ ವಿಭಾಗದ ಜನಜಾಗೃತಿ ಯೋಜನಾಧಿಕಾರಿ ಗಣೇಶ್ ಆಚಾರ್ಯ ಮಾತಾನಾಡಿ, ಮೇ 31ರಂದು ವಿಶ್ವ ತಂಬಾಕು ವಿರೋಧಿ ದಿನಾಚರಣೆ, ಜೂನ್ 26 ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ, ತಾಲೂಕಿನಲ್ಲಿ ಒಟ್ಟು 15 ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ, ಎಲ್ಲಾ ವಲಯದಲ್ಲಿ ನವಜೀವನ ಸಮಿತಿಗಳನ್ನು ಬಲಪಡಿಸುವುದರ ಜೊತೆಗೆ ತಾಲೂಕು ಮಟ್ಟದ ನವಜೀವನೋತ್ಸವ ಕಾರ್ಯಕ್ರಮ, ಆಕ್ಟೋಬರ್ 2 ಗಾಂಧಿ ಜಯಂತಿ ಕಾರ್ಯಕ್ರಮ, ಹಾಗೂ ತಾಲೂಕು ವೇದಿಕೆಯ ಸಭೆಯ ಬಗ್ಗೆ ವಿವರವಾದ ಮಾಹಿತಿ ನೀಡಿ ವಲಯವಾರು ವಿಂಗಡಣೆಯನ್ನು ಮಾಡಿದರು.



ತಾಲೂಕು ಜನಜಾಗೃತಿ ವೇದಿಕೆಯ ನೂತನ ಅಧ್ಯಕ್ಷರಾಗಿ ರಾಜು ಪೂಜಾರಿ ಉಪ್ಪೂರು ಅವರು ಸರ್ವಾನುಮತದಿಂದ ಆಯ್ಕೆಯಾದರು. ಅದೇ ರೀತಿ ಎಲ್ಲಾ ವಲಯದ ವಲಯ್ಯಾಧ್ಯಕ್ಷರುಗಳ ಆಯ್ಕೆಯನ್ನು ಮಾಡಲಾಯಿತು. ಉಪ್ಪೂರಿನಿಂದ ಸುನಿಲ್ ಶೆಟ್ಟಿ, ಮಣಿಪಾಲದಿಂದ ವಸಂತ ಶೆಟ್ಟಿ, ಪೆರ್ಡೂರ್‌ನಿಂದ ಸತೀಶ್ ಶೆಟ್ಟಿ ಅಂಬಾಗಿಲಿನಿಂದ ಮಹಾಬಲ ಶೆಟ್ಟಿ, ಅಂಬಲಪಾಡಿಯಿಂದ ಮಹೇಶ್ ಕುಮಾರ್, ಮಲ್ಪೆಯಿಂದ ಉದಯ್ ಕುಮಾರ್ ಶೆಟ್ಟಿ, ಹಿರಿಯಡ್ಕದಿಂದ ನಳಿನಾ ಆಯ್ಕೆಯಾದರು.

ಪ್ರತಿಭಾ ಹಾಗೂ ಚಂದ್ರಾವತಿ ಪ್ರಾರ್ಥಿಸಿದರು. ಮೇಲ್ವಿಚಾರಕರಾದ ಬಾಲಚಂದ್ರ ಸ್ವಾಗತಿಸಿ, ಪ್ರೇಮ ವಂದಿಸಿದರು. ಯೋಜನಾಧಿಕಾರಿ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು.

ದಕ್ಷಿಣ ಕನ್ನಡ ಫ್ಲವರ್ ಡೆಕೋರೇಷನ್ ಮಾಲಕರ ಸಂಘ

ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ

ಮಂಗಳೂರು: ದಕ್ಷಿಣ ಕನ್ನಡ ಫ್ಲವರ್ ಡೆಕೋರೇಷನ್ ಮಾಲಕರ ಸಂಘ ಮಂಗಳೂರು ಉತ್ತರ ವಲಯ ವತಿಯಿಂದ ಕರಂಬಾರು ಶ್ರೀದೇವಿ ಭಜನಾ ಮಂದಿರದ ಸಭಾಂಗಣದಲ್ಲಿ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ ನಡೆಯಿತು.

ದಕ್ಷಿಣ ಕನ್ನಡ ಫ್ಲವರ್ ಡೆಕೋರೇಷನ್ ಮಾಲಕರ ಸಂಘದ ಅಧ್ಯಕ್ಷ ಸುಲಕ್ಷಣ ಬಿ. ರೈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ದಕ್ಷಿಣ ಕನ್ನಡ ಫ್ಲವರ್ ಡೆಕೋರೇಷನ್ ಮಾಲಕರ ಸಂಘದ ಸ್ಥಾಪಕ ಅಧ್ಯಕ್ಷ ಆಶ್ವಿತ್ ಕೊಟ್ಟಾರಿ ಉದ್ಘಾಟಿಸಿದರು. ನೆರವೇರಿಸಿದರು.



ಸಂಘದ ಕಾರ್ಯದರ್ಶಿ ಅನಿಲ್ ಕೊಟ್ಟಾರಿ, ಗೌರವ ಸಲಹೆಗಾರ ಫಕೀರಬ್ಬ ಮಾಸ್ಟರ್, ಶುಭಂ ನಾಯಕ್, ಸಂಘಟನಾ ಕಾರ್ಯದರ್ಶಿ, ಕರಂಬಾರು ಹಳೆ ವಿದ್ಯಾರ್ಥಿ ಸಂಘ ಅಧ್ಯಕ್ಷ ಸತೀಶ್ ದೇವಾಡಿಗ ಮುಂತಾದವರು ಉಪಸ್ಥಿತರಿದ್ದರು.

ಉತ್ತರ ವಲಯ ಅಧ್ಯಕ್ಷ ನಿಶ್ಚಿತ್ ಶ್ರೀಯಾನ್ ಸ್ವಾಗತಿಸಿದರು. ರಾಕೇಶ್ ಕುಂದರ್ ನಿರೂಪಿಸಿದರು. ನವೀನ್ ಚಂದ್ರ ಸಾಲ್ಯಾನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಉತ್ತರ ವಲಯದ ಕಾರ್ಯದರ್ಶಿ ತಿಲಕ್ ರಾಜ್ ಜೋಗಿ ವಂದಿಸಿದರು.

ಸಸುಮಾರು 30 ಮಕ್ಕಳಿಗೆ ಉಚಿತ ಪುಸ್ತಕ ವಿತರಿಸಲಾಯಿತು.

50 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕಾಮತ್ ಚಾಲನೆ



◆ **ಮಂಗಳೂರು:** ಮಹಾನಗರ ಪಾಲಿಕೆ ವ್ಯಾಪ್ತಿಯ 53ನೇ ಬಜಾಲ್ ವಾರ್ಡಿನ ಮೈರ ಜಯನಗರ-ವನರಕ್ತೇಶ್ವರಿ ದೇವಸ್ಥಾನ ರಸ್ತೆ ಅಭಿವೃದ್ಧಿ ಕಾಮಗಾರಿಯು 50 ಲಕ್ಷ ರೂ. ವೆಚ್ಚದಲ್ಲಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ 50 ಲಕ್ಷ ರೂ. ಮಂಜೂರಾಗಿದ್ದು, ತದನಂತರ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅದಕ್ಕೆ ತಡೆ ನೀಡಿತ್ತು. ಇದೀಗ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಬಳಿ ಮನವಿ ಮಾಡಿದ ಪರಿಣಾಮ ತಡೆ ಹಿಡಿಯಲಾಗಿದ್ದ ಅನುದಾನ ಬಿಡುಗಡೆಯಾಗಿದ್ದು ಶೀಘ್ರದಲ್ಲಿ ಕಾಮಗಾರಿ ನೆರವೇರುವ ವಿಶ್ವಾಸವಿದೆ ಎಂದರು.

ಈ ವೇಳೆ ಪ್ರಮುಖರಾದ ಚಂದ್ರಶೇಖರ ಬಜಾಲ್, ನವೀನ್, ಪ್ರವೀಣ್, ನಿಡ್ಡೇಲ್ , ಸುಕೇಶ್, ಶಿವಾಜಿ ರಾವ್, ಯಶವಂತ ಶೆಟ್ಟಿ, ವಿಜಯ್ ಕುಮಾರ್, ಸೀತಾರಾಮ, ದಿನೇಶ್ ಭಟ್, ಗಣಪತಿ ಭಟ್, ದೀಪಕ್, ಗಣೇಶ್, ದೇವದಾಸ್, ರಾಘವ, ಗೋಪಾಲ, ಸೌಮ್ಯ, ಲಕ್ಷ್ಮಿ, ಸುಮತಿ, ಶಾಂತ, ಹೇಮ, ಮಾಧವ್, ಮದನ್, ಮೊದಲಾದವರು ಉಪಸ್ಥಿತರಿದ್ದರು.

IN THE COURT OF THE PRL. CIVIL JUDGE AND J.M.F.C. AT MADIKERI
CR.M.C.NO. 315/2025

Petitioner:
Palangotu C Papuraj
Aged 60 years
S/o Late Chittiyappa
R/o. Made Village Madikeri Taluk, Kodagu District.

Vs

Respondents:
1. The Tahsildar, Madikeri, Kodagu District
2. P C Dalu
S/o. Late Chittiyappa
R/o. Made Village Madikeri Taluk, Kodagu District.
3. Smt. P S Vedavathy
W/o. Late Shivanna
R/o. Katakeri Village, Madikeri Taluk, Kodagu District
4. Smt. P A Jayalakshmi
W/o. Late P C Ananda
R/o. Made Village Madikeri Taluk, Kodagu District.

PUBLIC NOTICE

Take notice that the petitioner has filed the above case to obtain death certificate of his father **Chittiyappa.** He died on 01.06.1979 at his house situated at Made Village, Madikeri Taluk, Kodagu District.

Whoever having any objection to the above petition may appear before this Hon'ble court in person or through their counsel on **12.06.2026 at 11.00 a.m.** failing which the case will be disposed of as per law.

Given under my hand this 25th day of May, 2026 at Madikeri.

(By order of the Court)
Sd/- H.U. Nagesh Kumar
Advocate, Madikeri, Kodagu
Madikeri
25.05.2026

ಪುತ್ತೂರು ಮಾರುಕಟ್ಟೆ ಧಾರಣೆ

29-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	415 - 450
ಚೋಲ್ ಅಡಿಕೆ	510 - 535
ಡಬಲ್ ಚೋಲ್	510 - 535
ಹೊಸ ಪಠೋರ	340 - 390
ಹಳೆ ಪಠೋರ	360 - 390
ಹೊಸ ಉಳ್ಳಿ	140 - 290
ಹಳೆ ಉಳ್ಳಿ	130 - 290
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	255 - 285
ಹಳೆ ಕರಿಗೋಟು	255 - 285
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	250.50
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	143.00
ಸ್ಕ್ರಾಪ್ 2	140.00

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ
ಕಾರ್ಯಾಲಯ, ಅಥಣಿ-591304, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಕೆರೆ/ಬಾಬಾನಗರ/2026-27/595
ದಿನಾಂಕ: 26-05-2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಕರೆ-2

(ಕೆ.ಪಿ.ಪಿ. ಪೋರ್ಟಲ್-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ಅಥಣಿ ತಾ:ಅಥಣಿ ಜಿ:ಬೆಳಗಾವಿ** ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಸಿ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, **A Valid Copy of the Registration of the firm/Company with the Register of companies** ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ **(as per KTPP act 2000)** ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ **www.kpp-portal.karnataka.gov.in** ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 109.96 ಲಕ್ಷಗಳು

1) ಇ-ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: 30-05-2026 ರ 10.30 ಬೆಳಿಗ್ಗೆ ರಿಂದ 06-06-2026 ರ ಸಾಯಂಕಾಲ 4.00 ಗಂಟೆ ವರಗೆ 2) ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 04-06-2026 ರ ಸಾಯಂಕಾಲ 4.00 ಗಂಟೆ ವರೆಗೆ 3) ಪೂರ್ಣವಾಗಿ ತುಂಬಿದ ಇ-ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 30-05-2026ರ 10.30 ಬೆಳಿಗ್ಗೆ ರಿಂದ 06-06-2026 ರ ಸಾಯಂಕಾಲ 4.00 ಗಂಟೆ ವರಗೆ 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08-06-2026 ರ ಬೆಳಿಗ್ಗೆ 11.00 ಗಂಟೆವರೆಗೆ. (ಎಚ್.ಬಿ.ಸಿ ವಿಭಾಗ ಕಚೇರಿ ಅಥಣಿಯಲ್ಲಿ) 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 10-02-2026 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ).

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ-ಸಂಗ್ರಹಣಾ ಕೋಶ ವೆಬ್‌ಸೈಟ್ **http//:www.kppp. karnataka.gov.in/kpp-portal/index. seam link** ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ..

ಡಿಐಪಿಆರ್/ಬೆಳಗಾವಿ/339/ಮಣಿಹಾಲ್/2026-27

ರೈತರಿಗೆ ಶುಭ ಸುದ್ದಿ

ಭಾರತ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಹೊರಡಿಸಿದ ಆದೇಶ ಸಂಖ್ಯೆ **S.O.2900(E)**, ದಿನಾಂಕ: **24-10-2015**, ಅನುಸಾರ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಕೆಳಗಿನ **100%** ಜಲದಲ್ಲಿ ಕರಗುವ ಮಿಶ್ರ ರಸಗೊಬ್ಬರಗಳನ್ನು (ದ್ರವ /ಗ್ರಾನುಲರ್ ರೂಪದಲ್ಲಿ) ಮಾರುಕಟ್ಟೆಗೆ ತರಲು ಉದ್ದೇಶಿಸಲಾಗಿದೆ.

ಮಾರುಕಟ್ಟೆಗೊಳಿಸಿದವರು: ಎಂ/ಎಸ್ ಕಿಸಾನ್ ಪ್ಲಾಂಟ್ಕೇರ್ ಪ್ರೈವೇಟ್ ಲಿಮಿಟೆಡ್, ಮೊದಲ ಮಹಡಿ, ಬಿಲ್ಡಿಂಗ್ ನಂ./ಫ್ಲಾಟ್ ನಂ.: **1-1**, ಶಾಪ್ ನಂ. **2**, **APMC** ಯಾರ್ಡ್, ಅಮರಗೋಳ್, **2**ನೇ ಮೇನ್ ರಸ್ತೆ, ಹುಬ್ಬಳ್ಳಿ, ಜಿಲ್ಲೆ: ಧಾರವಾಡ, ಕರ್ನಾಟಕ - **580025.**

ಇಮೇಲ್: **kisanplantcare27@gmail.com**, ದೂರವಾಣಿ: **7207892229**

ಕ್ರಮ ಸಂಖ್ಯೆ	ರಸಗೊಬ್ಬರ	ಪ್ರಕಾರಪೋಷಕಾಂಶ ಶೇಕಡಾವಾರು
1	N:P:K	19:19:19
2	N:P:K	00:00:50
3	N:P:K:Mg:B	15:05:30:2:0.02
4	N:P:K	24:24:16
5	N:P:K	15:08:35
6	N:P:K	13:40:13
7	N:P:K:S	16:00:09:19
8	N:P:K	10:05:30
9	N:P:K	28:28:00
10	N:P:K:S	9:27:18:7.5
11	N:P:K	20:20:20

ಈ ರಸಗೊಬ್ಬರಗಳು ಬೆಳೆಗಳ ಅಭಿವೃದ್ಧಿಗೆ ಹಾಗೂ ಹೆಚ್ಚಿನ ಉತ್ಪಾದನೆಗೆ ರೈತರಿಗೆ ಸಹಾಯಕವಾಗುತ್ತವೆ.

ತಯಾರಿಸಿದವರು : ಎಂ/ಎಸ್ ಕಿಸಾನ್ ಪ್ಲಾಂಟ್ಕೇರ್ ಪ್ರೈವೇಟ್ ಲಿಮಿಟೆಡ್ ಪ್ಲಾಟ್ ನಂ. **46**, ಸರ್ವೇ ನಂ. **682** ರಿಂದ **717**, ಐಪಿ ದಂಡು ಮಲ್ಕಾಪುರ, ಚೌಟುಪ್ಪಲ್ ಮಂಡಲ, ದಂಡು ಮಲ್ಕಾಪುರ ಇಂಡಸ್ಟ್ರಿಯಲ್ ಪಾರ್ಕ್, ಯಾದಾದ್ರಿ ಭುವನಗಿರಿ ಜಿಲ್ಲೆ, ತೆಲಂಗಾಣ - **508252.**

ದಿನಾಂಕ: **30-05-2026**

ಮಂಗಳೂರು ಮಹಾನಗರಪಾಲಿಕೆ

ಮಹಾನಗರ ಪಾಲಿಕೆ ಕಾರ್ಯಾಲಯ ಮಂಗಳೂರು
ಸಂಖ್ಯೆ : ಮನಪಾ/ಇ.ಇ/ವಿದ್ಯುತ್/EOI/2026-27 ದಿನಾಂಕ : 26.05.2026

ದರಸೂಚಿ ಪ್ರಕಟಣೆ (EOI)

ವಿಷಯ: ಮೊಹರು ಮಾಡಲ್ಪಟ್ಟ ಲಕೋಟೆಯಲ್ಲಿ ಈ ಕೆಳಗೆ ನಮೂದಿಸಿದ ಕೆಲಸ ಕಾರ್ಯಗಳಿಗೆ ತಮ್ಮ ಆಸಕ್ತಿ ವ್ಯಕ್ತಪಡಿಸುವಿಕೆಯ ಪತ್ರವನ್ನು **ದಿನಾಂಕ: 04.06.2026 ಸಾಯಂಕಾಲ ಗಂಟೆ 4.00 ಒಳಗೆ** ಸಲ್ಲಿಸುವಂತೆ ಕೋರಿದೆ.

SL NO	PARTICULARS
1	ಕಾಮಗಾರಿಯ ಹೆಸರು: ಮಂಗಳೂರು ಮಹಾನಗರ ಪಾಲಿಕೆ ಅಧೀನದಲ್ಲಿರುವ ಬೋಳೂರು ವಿದ್ಯುತ್ ಚಿತಾಗಾರಕ್ಕೆ ಚಿಮಣಿ (Chimney) ಅಳವಡಿಸುವ ಕಾಮಗಾರಿ. (Rate Analysis Data Sheet should be submitted along with the EOI rate)

ವಿ.ಸೂ. ದರಸೂಚಿ ಪತ್ರವನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಯಾ ಪುರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ ಮತ್ತು ಇತರೇ ಶರ್ತಗಳು ಮಹಾನಗರ ಪಾಲಿಕೆಯ ನೀತಿ ನಿಯಮಕ್ಕೆ ಒಳಪಟ್ಟಿದೆ. ಹೆಚ್ಚಿನ ವಿವರಣೆ ಮತ್ತು ತಾಂತ್ರೀಕ ವಿಶ್ಲೇಷಣೆಗೆ ಸಂಭಂದಪಟ್ಟ ಮಾಹಿತಿಯನ್ನು ಕಚೇರಿ ಸಮಯದಲ್ಲಿ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಕೇಳಿ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಇಂಜಿನಿಯರಿಂಗ್ ವಿಭಾಗ-3
ಮಹಾನಗರ ಪಾಲಿಕೆ ಮಂಗಳೂರು.

DIPR/DK/KSMCA/287/26-27 dt: 29.05.2026

ಉಡುಪಿ ನಗರಸಭೆ

ಕವಿ ಮುದ್ದಣ್ಣ ಮಾರ್ಗ, ಉಡುಪಿ-576101, ದೂ: 0820-2520306
E-mail: ka.udupi.cmc@gmail.com Website: www.udupicity.mrc.gov.in
ಸಂಖ್ಯೆ: UCMC/HS/VR/CR-46/9919/2026-27 ದಿನಾಂಕ: 29/05/2026

ಕೊಟೇಶನ್ ಪ್ರಕಟಣೆ

ಉಡುಪಿ ನಗರಸಭೆಯ ಟಾಟಾ ಏಸ್ ವಾಹನ ಸಂಖ್ಯೆ.ಕೆಎ-20ಎಎ 9919ರ ಮುಂಬದಿಯ ಗ್ಲಾಸ್, Front Bumper, Front Body Panel Tinkering and Painting of the Cabin Body Panel, Electrical Repair ದುರಸ್ಥಿ ಮಾಡುವ ಬಗ್ಗೆ ಅರ್ಹ ಏಜೆನ್ಸಿಯಿಂದ ಕೊಟೇಶನ್ ಆಹ್ವಾನಿಸಲಾಗಿದ್ದು, ಆಸಕ್ತ ಕೊಟೇಶನ್‌ದಾರರು ಪ್ರತ್ಯೇಕವಾಗಿ ಮೊಹರು ಮಾಡಿದ ಕೊಟೇಶನ್‌ನ್ನು ದಿನಾಂಕ: **04.06.2026**ರ ಸಂಜೆ **4.00** ಗಂಟೆಯ ಒಳಗೆ ಕಛೇರಿಗೆ ತಲುಪಿಸಲು ಕೋರಿದೆ. ಬಂದಿರುವ ಕೊಟೇಶನ್‌ನ್ನು ದಿನಾಂಕ: **04.06.2026** ರಂದು ಸಂಜೆ **4.30** ಗಂಟೆಗೆ ಅಥವಾ ಸೂಕ್ತ ದಿನದಂದು ಹಾಜರಿರುವ ಏಜೆನ್ಸಿಯವರ ಸಮಕ್ಷಮ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯ ಆರೋಗ್ಯ ವಿಭಾಗವನ್ನು ಸಂಪರ್ಕಿಸುವುದು.

ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ವಾಸಾಅ/ಸನಿಉ/ಕೆಎಸ್‌ಎಂಸಿಎ/135/26-27 ದಿ: 29.05.2026

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
E-mail: purchase@kmf.coop

ಸಂ. ಕಹಾಮ/ಖರೀದಿ/NPFP/ಇ-ಪ್ರೊಕ್./ಟೆಂಡರ್-928/2026 ದಿನಾಂಕ: 27.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆಯನ್ನು ಪಡೆಯಲು ದ್ವೈವಾರ್ಷಿಕ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Unit	Approximate qty For the period of Two Years	EMD Amount (Rs.)
1	Transportation of Nandini Packaging Film from NPFP, Bangalore to Unions/Units of KMF (in 3MTs/ 6MTs/ 10MTs Vehicle)	MTs	7200	5,40,000/-

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ **18.06.2026** ರಂದು **03.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.

ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ

ಕರ್ನಾಟಕ ಸರ್ಕಾರ

ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2026-27
ದಿನಾಂಕ: 29.05.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಗಳಡಿ ಅನುದಾನ ನಿರೀಕ್ಷೇಯ ಮೇರೆಗೆ ನೆಡುತೋಪು ನಿರ್ಮಾಣ ಹಾಗೂ 14x20 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ದಿನಾಂಕ: 29.05.2026 ರಿಂದ 06.06.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಕರೆಯಲಾಗಿದೆ ಹಾಗೂ (ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **08.06.2026 ರಂದು ಬೆಳಿಗ್ಗೆ 11.00 ಘಂಟೆಗೆ**) ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/116/ಕೆಎಸ್‌ಎಂಸಿಎ/2026-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/854 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-919/2026-27 ದಿನಾಂಕ: 29.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approximate Nos.	Nominal EMD (Rs.)
1	Providing health Insurance coverage for the following 1. KMF Employees and their direct dependents, 2. Workmen Compensation policy covering casual and contract labours at all units of KMF, 3. Group Personnel Accident Policy covering KMF employees and 4. Public Liability Policy covering KMF and Its Units.	As per tender document	1,000/-

ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಯಾವುದೇ Addendum/Corrigendum ಹೊರಡಿಸಿದಲ್ಲಿ, ಅದು ಕೇವಲ KPPPವೆಬ್‌ಸೈಟ್ https://kppp.karnataka.gov.in ನಲ್ಲಿ ಮಾತ್ರ ಲಭ್ಯವಾಗುತ್ತದೆ.

ಟೆಂಡರ್ ಪ್ರಾರಂಭವಾಗುವ ದಿನಾಂಕ : 29.05.2026 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05.06.2026 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 12.06.2026 ರ ಸಂಜೆ 5.30 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : 15.06.2026 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:-khsdrp.divmys@gmail.com)

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುವ ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. 4 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಕನಿಷ್ಟ ಅಂದಾಜು ಮೊತ್ತ ರೂ.53,63 ರಿಂದ ಗರಿಷ್ಟ ಅಂದಾಜು ಮೊತ್ತ ರೂ.54.83 ಲಕ್ಷಗಳಾಗಿರುತ್ತವೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: **1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 08.06.2026 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 09.06.2026 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು

ಸಹಿ/- ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS/239/KSMCA/176/2026-27

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

\# 49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ಮಾನಿಮಂ/338/ಹಿಪಅ/ಗಣಿ/ಪಸಾಸ/2026-27/802 ದಿನಾಂಕ : 29.05.2026

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಶ್ರೀ. ಶರಣಬಸವ ಬಿನ್ ಜಂಬಣ್ಣ ಇವರು ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಚೀಕಲಪರ್ವಿ ಬ್ಲಾಕ್-04 ಗ್ರಾಮದ ಸರ್ವೆ ನಂ. 1 ಮತ್ತು 2/1ರ ಸಮೀಪದಲ್ಲಿರುವ ತುಂಗಭದ್ರ ನದಿಪಾತ್ರ ಯೋಜನೆಯ ಸಾಮಾನ್ಯ ಮರಳು ಬ್ಲಾಕ್-ಆರ್.ಎಸ್.ಬಿ.-63ರಲ್ಲಿ ಒಟ್ಟು 5.0585 ಹೆಕ್ಟೇರ್ (12.20 ಎಕರೆ) ಪ್ರದೇಶದಲ್ಲಿ ವಾರ್ಷಿಕ 83,550 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಆಧ್ಯಯನ ಅಧಿಸೂಚನೆ, 2006 ಮತ್ತು ತಿದ್ದುಪಡಿಗಳಂತೆ ಬಿ1 ವರ್ಗದ ಚಟುವಟಿಕೆ 1(ಎ) – 'ಖನಿಜಗಳ ಗಣಿಗಾರಿಕೆ' ವರ್ಗವೆಂದು ಪರಿಗಣಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 32 MIN 2026, ದಿನಾಂಕ: 03.03.2026 ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ ದಿನಾಂಕ:20.03.2026ರ ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಯಚೂರು, ಇವರ ಪತ್ರ ದಿನಾಂಕ: 21.05.2026ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. ಕಂಪನಿಯ ಹೆಸರು ಮತ್ತು ವಿಳಾಸ : ಶ್ರೀ. ಶರಣಬಸವ ಬಿನ್ ಜಂಬಣ್ಣ, # 1, ಆಲ್ದಾಳ್, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ-584 102.

2. ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 1 ಮತ್ತು 2/1ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯ ಸಾಮಾನ್ಯ ಮರಳು ಬ್ಲಾಕ್-ಆರ್.ಎಸ್.ಬಿ.-63, ಚಿಕಲಪರ್ವಿ ಬ್ಲಾಕ್-04 ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.

3. ಉದ್ದೇಶಿತ ಯೋಜನೆಯ ವಿವರ : ವಾರ್ಷಿಕ 83,550 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.

4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ : 30.06.2026 (ಮಂಗಳವಾರ), ಸಮಯ : ಬೆಳಿಗ್ಗೆ 10:30 ಗಂಟೆ, ಸ್ಥಳ: ಗುರು ವಿರೂಪಾಕ್ಷೇಶ್ವರ ಕಲ್ಯಾಣ ಮಂಟಪ, ಚಿಕಲಪರ್ವಿ ಗ್ರಾಮ, ಮಾದ್ಲಾಪುರ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.

5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ : (ಅ) ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ, ರಾಯಚೂರು. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಜಿಲ್ಲೆ, ರಾಯಚೂರು. (ಈ) ತಹಶೀಲ್ದಾರರ ಕಾರ್ಯಾಲಯ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ. (ಉ) ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಯಚೂರು ಜಿಲ್ಲೆ. (ಊ) ನಗರ ಸಭೆ ಕಾರ್ಯಾಲಯ, ಮಾನ್ವಿ, ರಾಯಚೂರು ಜಿಲ್ಲೆ. (ಋ) ಗ್ರಾಮ ಪಂಚಾಯತ್ ಕಾರ್ಯಾಲಯ, ಮಾದ್ಲಾಪುರ, ಮಾನ್ವಿ ತಾಲ್ಲೂಕು. (ಎ) ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ. (ಏ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು. (ಐ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು-560 001. (ಒ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-54) ಡ್ರಾ ಮೇ 30ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RX 412785 (MALAPPURAM)

Consolation Prize Rs.5,000/-
RN 412785 RO 412785 RP 412785 RR 412785
RS 412785 RT 412785 RU 412785 RV 412785
RW 412785 RY 412785 RZ 412785

2nd Prize Rs.30,00,000/- [30 Lakhs]
RV 799446 (IDUKKI)

3rd Prize Rs.5,00,000/- [5 Lakhs]
RU 736021 (NEYYATTINKARA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0365 0458 0798 1018 1244 3316 3718 4027 4360 4777
6195 6289 7027 7845 8167 8243 8798 9478 9968

5th Prize Rs.2,000/-
5816 6836 7222 7325 7875 8478

6th Prize Rs.1,000/-
0151 0195 1327 1467 1762 2047 2054 2539 2546 2744
2902 3263 4429 4490 5560 6055 6363 6511 6880 7071
7952 8345 8513 9099 9854

7th Prize Rs.500/-
0162 0203 0271 0506 0544 0632 0695 0873 1286 1360
1523 1997 2304 2331 2390 2415 2422 2740 2759 2911
3113 3114 3699 3795 3831 3912 4166 4244 4259 4302
4366 4459 4582 4585 4589 4654 4664 4675 4833 4842
5098 5162 5379 5436 5503 5539 5752 5921 5931 6284
6380 6734 6770 6777 6810 6832 6861 7131 7324 7472
7922 7985 8023 8181 8525 8530 8565 8583 8787 8854
9011 9287 9440 9500 9927 9942

8th Prize Rs.200/-
0017 0075 0103 0176 0210 0324 0433 0551 0599 0682
0786 0811 0870 1158 1178 1227 1529 1664 1802 1973
2055 2345 2384 2429 2452 2560 2615 2662 2894 3034
3121 3150 3163 3190 3509 3561 3600 3623 3986 4109
4253 4267 4283 4309 4594 4688 4724 4892 4948 5036
5097 5215 5440 5558 5559 5696 5914 5997 6259 6345
6373 6398 6429 6461 6478 6692 6730 7056 7093 7161
7455 7564 7599 7811 7880 8208 8292 8491 8551 8570
8618 8698 8753 8850 8960 8978 9150 9206 9297 9344
9403 9550

9th Prize Rs.100/-
0095 0119 0121 0257 0263 0299 0313 0357 0406 0494
0533 0625 0855 0869 0885 1045 1103 1252 1474 1494
1530 1550 1574 1588 1937 1968 2009 2101 2175 2410
2478 2479 2523 2528 2533 2587 2689 2750 2966 2971
3026 3036 3055 3119 3237 3278 3499 3571 3603 3706
4029 4058 4117 4138 4170 4235 4242 4272 4349 4424
4571 4628 4725 4734 4739 4748 4911 5028 5073 5077
5188 5193 5259 5450 5653 5667 5673 5840 5865 5869
5882 5947 6000 6039 6189 6270 6532 6654 6660 6670
6676 6742 6765 6813 6972 6996 7022 7023 7062 7088
7189 7192 7199 7366 7433 7442 7446 7514 7625 7672
7859 7927 7980 8003 8071 8078 8094 8193 8199 8371
8460 8544 8615 8649 8774 8778 8832 8862 8985 8987
9017 9070 9179 9188 9225 9229 9314 9342 9432 9451
9546 9624 9839 9885

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆ, ನ್ಯಾಯಾಲಯದ ರಸ್ತೆ
ಚಾಮರಾಜನಗರ ವಿಭಾಗ, ಚಾಮರಾಜನಗರ
Ph : Office & EE - 08226-226054 E-mail: eerdwsd.chn2014gmail.com

ಟೆಂಡರ್ ಪ್ರಕಟಣೆ

ಸಂಖ್ಯೆ : 01 / 2026-27 ದಿನಾಂಕ : 29.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ 2026-27 Construction of 50KL Over Head Tanks of Gundlupete Taluk (2 Packages) in Chamarajanagara District, ಕಾಮಗಾರಿಯ ಅಂದಾಜು ಮೊತ್ತವು ರೂ. 30.00 ಲಕ್ಷದಿಂದ ರೂ. 45.00 ಲಕ್ಷ ಮಿತಿಯೊಳಗೆ ಇರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಎಲ್ಲಾ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ- 2.0 kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ. 29.05.2026 ಮಧ್ಯಾಹ್ನ 3.00 ನಂತರ ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 08.06.2026, ಸಂಜೆ 17.00, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.06.2026 ಬೆಳಿಗ್ಗೆ 11.00 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.06.2026 ಬೆಳಿಗ್ಗೆ 11.00 ಮತ್ತು ಆರ್ಥಿಕ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ ನೈರ್ಮಲ್ಯ ಇಲಾಖೆ,
ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ : ಚಾ.ನಗರ : 136:2026-27

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.

ಆಸ್ತಿ ಅಧಿಕಾರಿಯವರ ಕಛೇರಿ, ಇರುವಕ್ಕಿ, ಆನಂದಪುರ-577412, ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979, ಇ-ಮೇಲ್: eo@uahs.edu.in
ಸಂಖ್ಯೆ: ಕೆಶಿನಾಕೃತೋವಿವಿ(ಇ)/ಆ.ಅ/ಉಖಅ/06/2026-27 ದಿನಾಂಕ : 27.05.2026

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿಗೆ ಅವಶ್ಯಕವಿರುವ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ-3 ನಿಬಂಧನೆಗೊಳಪಟ್ಟಂತೆ ನೋಂದಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 16.06.2026 ಸಂಜೆ 4.00 ಗಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 17.06.2026 ಸಂಜೆ 4.30 ಗಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 19.06.2026 ಬೆಳಿಗ್ಗೆ 10.00 ಗಂಟೆಗೆ.

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬೇಕು ಹೆಚ್ಚಿನ ವಿವರಗಳಿಗಾಗಿ ಇ-ಪೋರ್ಟಲ್ ವೆಬ್‌ಸೈಟ್ ಇ-ಮೇಲ್ @ hphelpdesk.blr@intarvo.com ಅಥವಾ ಸಹಾಯವಾಣಿ ಸಂಖ್ಯೆ : 91-940214000 ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಉಗ್ರಾಣ ಖರೀದಿ ಅಧಿಕಾರಿ, ಕೇಂದ್ರ ಉಗ್ರಾಣ, ಕೆಶಿನಾಕೃತೋವಿವಿ, ಇರುವಕ್ಕಿ, ಆನಂದಪುರ -577412, ಸಾಗರ ತಾಲ್ಲೂಕು, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಇರುವಕ್ಕಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.130-05/
ಥೀಂಕಾರ್/2026-27

ಕಿರುಸುದ್ದಿ

ಮರ ಅಭಿಯಾನಕ್ಕೆ ಚಾಲನೆ

• **ಬೆಂಗಳೂರು:** ನಗರದ ಆಡಳಿತ ವ್ಯವಸ್ಥೆಯನ್ನು ಮರ ಎಂಬ ಕಲ್ಪನೆಯೊಂದಿಗೆ ಹೆಮ್ಮೆಯ ಮರ ಎಂಬ ಹೆಸರಿನಲ್ಲಿ ನಾಗರಿಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಬಿಎನ್‌ಪಿ ವತಿಯಿಂದ ಆಯೋಜಿಸಲಾದ ಈ ಅಭಿಯಾನ ವಾರ್ಡ್ ಮಟ್ಟದ ಅಭಿವೃದ್ಧಿ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಾರ್ವಜನಿಕರನ್ನು ಮುಂಚೂಣಿಗೆ ತರುವ ಉದ್ದೇಶ ಹೊಂದಿದೆ. ಬೆಂಗಳೂರಿನ ನಿವಾಸಿಗಳ ಸಾಮೂಹಿಕ ಧ್ವನಿಯನ್ನು ಪ್ರತಿನಿಧಿಸುವ ಪ್ರಜಾಪ್ರಭುತ್ವದ ಜೀವಂತ ಸಂಕೇತವಾಗಿ ಈ ಹೆಮ್ಮೆಯ ಮರವನ್ನು ಬಿಂಬಿಸಲಾಗಿದೆ. ಈ ಅಭಿಯಾನದಡಿ ಪ್ರತಿಯೊಬ್ಬ ನಾಗರಿಕನ ಆಶಯ ಹಾಗೂ ಬೇಡಿಕೆಯು ಮರದ ಒಂದೊಂದು ಎಲೆಯಾಗಿ ಮಾರ್ಪಾಡಲಿದ್ದು, ಅದು ಆಯಾ ಪ್ರದೇಶದ ಸ್ಥಳೀಯ ಅಗತ್ಯತೆಗಳ ಆದ್ಯತೆಯನ್ನು ನಿರ್ಧರಿಸಲಿದೆ. ಅಂತಿಮವಾಗಿ ಜನರ ಈ ಆಕಾಂಕ್ಷೆಗಳನ್ನು ಕ್ರೋಢೀಕರಿಸಿ, ವ್ಯವಸ್ಥಿತ ಹಾಗೂ ದತ್ತಾಂಶ ಆಧಾರಿತ ವಾರ್ಡ್‌ಗೆ ಏನೆಲ್ಲಾ ಅವಶ್ಯಕತೆ ಇದೆ ಎಂದು ಗುರುತಿಸಲಾಗುವುದು ಎಂದು ಅಭಿಯಾನದ ರೂವಾರಿ ಬಿಎನ್‌ಪಿ ತಿಳಿಸಿದೆ. ಆಡಳಿತ ಮತ್ತು ರಾಜಕೀಯ ಎಂಬುದು ಜನರ ಮೇಲೆ ಹೇರುವಂಥದ್ದಾಗಿರಬಾರದು, ಬದಲಿಗೆ ಸಕ್ರಿಯ ನಾಗರಿಕರ ಭಾಗವಹಿಸುವಿಕೆಯೊಂದಿಗೆ ಜನರ ಮೂಲಕವೇ ನಿರ್ಮಾಣವಾಗಬೇಕು ಎಂಬ ಪರಿಕಲ್ಪನೆಯಲ್ಲಿ ಈ ಅಭಿಯಾನವು ಮೂಡಿಬಂದಿದೆ. ನಿವಾಸಿಗಳು ತಮ್ಮ ವಾರ್ಡ್‌ಗಳ ಮತ್ತು ನಗರದ ಭವಿಷ್ಯವನ್ನು ರೂಪಿಸುವಲ್ಲಿ ನೇರವಾಗಿ ಭಾಗವಹಿಸಲು ತಿಳಿಸಿದ್ದಾರೆ.

ಜೂ.12ಕ್ಕೆ ಅಂತಾರಾಷ್ಟ್ರೀಯ ಫೋಟೋ ಪ್ರದರ್ಶನ

• **ಬೆಂಗಳೂರು:** ಕರ್ನಾಟಕ ವಿಡಿಯೋ ಮತ್ತು ಫೋಟೋ ಅಸೋಸಿಯೇಷನ್ ವತಿಯಿಂದ ಜೂ.12, 13 ಮತ್ತು 14 ರಂದು ಅರಮನೆ ಮೈದಾನದಲ್ಲಿ ಮೂರು ದಿನಗಳ ಕಾಲ ಅಂತಾರಾಷ್ಟ್ರೀಯ ಮಟ್ಟದ ಫೋಟೋ ಮತ್ತು ವಿಡಿಯೋ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎಚ್.ವಿ.ಕೃಷ್ಣಪ್ಪ ತಿಳಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಯಾಮರಾ, ಆಲ್ಬಮ್, ಸಾಫ್ಟ್‌ವೇರ್, ಪ್ರಿಂಟರ್ ಫ್ರೇಮ್, ಲ್ಯಾಮಿನೇಶನ್ ಸೇರಿದಂತೆ ಛಾಯಾಗ್ರಹಣ ಕ್ಷೇತ್ರದ ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ 150ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. 5 ಸಾವಿರಕ್ಕೂ ಹೆಚ್ಚು ಛಾಯಾಗ್ರಹಣ ಉಪಕರಣಗಳ ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ. ರಾಜ್ಯದ ಹಲವಾರು ತಾಲೂಕು, ಜಿಲ್ಲಾ, ಹಾಗೂ ರಾಜ್ಯಮಟ್ಟದ ಛಾಯಾಗ್ರಾಹಕರ ಸಂಘ ಸಂಸ್ಥೆಗಳು ಬೆಂಬಲಿಸಿವೆ ಎಂದರು. ಛಾಯಾಗ್ರಹಣ ಕ್ಷೇತ್ರ ಅತ್ಯಂತ ತಾಂತ್ರಿಕವಾಗಿ ಕೂಡಿರುವ ಕ್ಷೇತ್ರವಾಗಿದೆ ಇದರಲ್ಲಿ ರಾಷ್ಟ್ರೀಯ ಹಾಗೂ ಹಲವಾರು ಕಂಪನಿಯಗಳು ತಂತ್ರಜ್ಞಾನದ ಬೆಳವಣಿಗಾಗಿ ಶ್ರಮಿಸುತ್ತಿವೆ. ತಂತ್ರಜ್ಞಾನದ ಬೆಳವಣಿಗೆ ಜತೆಯಲ್ಲಿ ಕಾಲಕ್ರಮೇಣ ಬೆಳೆಯುತ್ತಿರುವ ತಂತ್ರಜ್ಞಾನವನ್ನು ಲಕ್ಷಾಂತರ ಛಾಯಾಗ್ರಾಹಕರಿಗೆ ತಲುಪಿಸುವುದು ಒಂದು ಸವಾಲಾಗಿದೆ ಹಾಗೂ ಛಾಯಾಗ್ರಾಹಕರು ಎಲ್ಲಾ ಮಾಹಿತಿಯನ್ನು ಪಡೆಯುವುದು ಕಷ್ಟವಾಗಿದ್ದ ಕಾಲದಲ್ಲಿ ರವರು ಫೋಟೋ ಟುಡೆ ವಸ್ತು ಪ್ರದರ್ಶನಗಳನ್ನು 23 ವರ್ಷಗಳಿಂದ 150ಕ್ಕೂ ಹೆಚ್ಚು ವಸ್ತು ಪ್ರದರ್ಶನಗಳನ್ನು ಭಾರತದ ಹಲವಾರು ನಗರಗಳಲ್ಲಿ ಹಾಗೂ ವಿದೇಶದಲ್ಲೂ ಏರ್ಪಡಿಸುತ್ತಾ ಛಾಯಾಗ್ರಾಹಕ ಹಾಗೂ ರಾಷ್ಟ್ರೀಯ ಹಾಗೂ ಕಂಪನಿಗಳ ಮಧ್ಯ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದರು.

ರಕ್ತದಾನ ಜೀವ ಉಳಿಸುವ ಮಾನವೀಯ ಕಾರ್ಯ



• **ಬೆಂಗಳೂರು:** ರಕ್ತದಾನವು ಜೀವ ಉಳಿಸುವ ಮಹತ್ತರ ಮಾನವೀಯ ಕಾರ್ಯವಾಗಿದ್ದು, ಸಮುದಾಯದ ಪ್ರತಿಯೊಬ್ಬರೂ ನಿಯಮಿತವಾಗಿ ರಕ್ತದಾನದಲ್ಲಿ ಭಾಗವಹಿಸಬೇಕು ಎಂದು ಕರ್ನಾಟಕ ಸಂಘ ಕತಾರ್ ಅಧ್ಯಕ್ಷ ಸುಬ್ರಮಣ್ಯ ಹೆಬ್ಬಾಗಿಲು ಕರೆ ನೀಡಿದರು. ಭಾರತೀಯ ಸಾಂಸ್ಕೃತಿಕ ಕೇಂದ್ರ (ಐಸಿಸಿ) ಹಾಗೂ ಭಾರತೀಯ ರಾಯಭಾರ ಕಚೇರಿ, ದೋಹಾ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಸಂಘ ಕತಾರ್, ಹಮದ್ ಮೆಡಿಕಲ್ ಕಾರ್ಪೋರೇಷನ್ ಸಹಯೋಗದಲ್ಲಿ ಕತಾರ್ ರಾಷ್ಟ್ರೀಯ ರಕ್ತದಾನ ಕೇಂದ್ರದಲ್ಲಿ Everyone Could Be a Hero ಎಂಬ ಧ್ಯೇಯ ವಾಕ್ಯದೊಂದಿಗೆ ಭವ್ಯ ರಕ್ತದಾನ ಶಿಬಿರವನ್ನು 2026 ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನದ ಎನ್ನುವುದು ಮಹತ್ವಪೂರ್ಣವಾಗಿದ್ದು, ಈ ಬಗ್ಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು. ಕರ್ನಾಟಕ ಸಂಘ ಕತಾರ್ ಅಧ್ಯಕ್ಷ ಸುಬ್ರಮಣ್ಯ ಹೆಬ್ಬಾಗಿಲು, ವೈದ್ಯಕೀಯ ತಜ್ಞ ಡಾ. ಅಮಿತ್ ವರ್ಮಾ ಸೇರಿದಂತೆ ಇತರರಿದ್ದರು. 25ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿದ ಹಿರಿಯ ದಾನಿಗಳಾದ ಡಾ. ಸಂಜಯ್ ಕುದರಿ, ಶ್ರೀಧರ್ ನಾಯಕ್ ಹಾಗೂ ಮೊಹಮ್ಮದ್ ಸೊಹೈಲ್ ಅವರನ್ನು ಸನ್ಮಾನಿಸಲಾಯಿತು.

ಬೆಂಗಳೂರಿನಲ್ಲಿ ಅಕಾಲಿಕ ಮಳೆ | ರಸ್ತೆ, ಅಂಡರ್‌ಪಾಸ್ ಜಲಾವೃತ | ಜನಜೀವನ ಅಸ್ತವ್ಯಸ್ತ


ಗೋಡೆ ಕುಸಿದು ಆಟೋ ಚಾಲಕ ಬಲಿ

• **ಬೆಂಗಳೂರು:** ಶುಕ್ರವಾರ ಸಂಜೆಯಾಗುತ್ತಿದ್ದಂತೆ ಸುರಿದ ಧಾರಾಕಾರ ಮಳೆಗೆ ರಸ್ತೆಗಳು ಜಲಾವೃತವಾಗಿ ಮತ್ತು ಅಂಡರ್ ಪಾಸ್‌ಗಳಲ್ಲಿ ನೀರು ನಿಂತು ಸಂಚಾರ ಮತ್ತು ಜನಜೀವನ ಅಸ್ತವ್ಯಸ್ತ ಉಂಟಾಯಿತು. ಅಲ್ಲದೇ, ಒಂದು ಜೀವವನ್ನು ಬಲಿ ಪಡೆದುಕೊಂಡಿದೆ.

ಧಾರಾಕಾರ ಮಳೆಗೆ ವಿಜಯನಗರದಲ್ಲಿ ಕ್ಲಬ್ ಕಾಂಪೌಂಡ್ ಗೋಡೆ ಕುಸಿದು ಓರ್ವ ಆಟೋ ಚಾಲಕ ಮೃತಪಟ್ಟಿರುವಂತಹ ಘಟನೆ ನಡೆದಿದೆ. ಮಳೆ ಅರ್ಭಟಕ್ಕೆ ಗೋಡೆ ಕುಸಿದು ಬಿದ್ದು ದುರಂತ ಸಂಭವಿಸಿದೆ. ಗಂಗೊಂಡನಹಳ್ಳಿಯ ನಿವಾಸಿ ಶಿವಬೋರಯ್ಯ (56) ಮೃತ ಆಟೋ ಚಾಲಕನಾಗಿದ್ದು, ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಂಡಿದ್ದಾರೆ. ಇಸ್ರೋ ಲೇಔಟ್ ಬಸ್ ನಿಲ್ದಾಣ ಸೇರಿದಂತೆ ಹಲವೆಡೆ ಮರ ಬಿದ್ದ ಪರಿಣಾಮ ವಾಹನ ಸವಾರರು ಪರದಾಡುವ ಘಟನೆ ನಡೆಯಿತು.

ಮೆಜೆಸ್ಟಿಕ್, ಜಯನಗರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಕುಮಾರ ಕೃಪಾ ರಸ್ತೆ, ಶಿವಾನಂದ ಜಂಕ್ಷನ್, ಮಡಿವಾಳ, ಕಲ್ಯಾಣ ನಗರ, ಹೆಬ್ಬಾಳ, ಯಲಹಂಕ, ನಾಯಂಡಹಳ್ಳಿ, ಯುಬಿ ಸಿಟಿ, ಸಹಕಾರ ನಗರ, ವಿದ್ಯಾರಣ್ಯಪುರ ಸೇರಿದಂತೆ 30 ಕ್ಕೂ ಹೆಚ್ಚು ಪ್ರದೇಶಗಳಲ್ಲಿ ಮಳೆಯಾಗಿದ್ದು, ಸಂಚಾರ ದಟ್ಟಣೆ ಉಂಟಾಯಿತು.

ಕೇವಲ ಅರ್ಧ ಗಂಟೆ ಸುರಿದ ಮಳೆಗೆ ನಗರದ ಹಲವೆಡೆ ರಸ್ತೆಗಳು ಕೆರೆಯಂತಾಗಿತ್ತು. ಶಿವಾನಂದ ವೃತ್ತದ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ನಿಂತ ಪರಿಣಾಮ ಕಾರೊಂದು ಅಂಡರ್‌ಪಾಸ್‌ನಲ್ಲಿ ಸಿಲುಕಿಕೊಂಡು ಚಾಲಕ ಪರದಾಡಿದ್ದಾನೆ. ಇನ್ನು ಯುಬಿ ಸಿಟಿ ಮುಂದಿನ ರಸ್ತೆಯಲ್ಲಿ 2 ಅಡಿಯಷ್ಟು ನೀರು ನಿಂತಿತ್ತು. ಪರಿಣಾಮ ಬೈಕ್ ಕೈಕೊಟ್ಟಿದ್ದು, ಫುಡ್ ಡೆಲಿವರಿ ಬಾಯ್ ಪರದಾಡಿದ್ದಾನೆ.





ಚಿತ್ರ: ಮೋಹನ್ ಕುಮಾರ್ ಬಿ.ಎನ್.

ಮೂರು ದಿನ ಮಳೆ

ನಗರದಲ್ಲಿ ಮುಂದಿನ ಮೂರು ದಿನ ಅಂದರೆ ಜೂನ್ 1 ರ ವರೆಗೂ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಮಾನ ಇಲಾಖೆ ಸೂಚನೆ ನೀಡಿದೆ.

ಮುಖ್ಯ ಆಯುಕ್ತರ ಪರಿಶೀಲನೆ


ಕೆ.ಆರ್. ಸರ್ಕಲ್ ಸೇರಿದಂತೆ ನಗರದ ಹಲವು ಅಂಡರ್ ಪಾಸ್‌ಗಳು ಜಲಾವೃತಗೊಂಡಿದ್ದವು. ಜಲಾವೃತಗೊಂಡ ಅಂಡರ್ ಪಾಸ್‌ಗನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪರಿಶೀಲನೆ ನಡೆಸಿದರು. ಅಂಡರ್ ಪಾಸ್‌ನಲ್ಲಿ ಸಂಗ್ರಹವಾಗುವ ಮಳೆ ನೀರನ್ನು ಶೀಘ್ರ ತೆರವಿಗೆ ಸೂಚಿಸಿದ್ದಾರೆ. ಅಂಡರ್ ಪಾಸ್‌ಗಳಲ್ಲಿ ನೀರು ಸಂಗ್ರಹವಾಗದಂತೆ, ರಸ್ತೆಗಳಲ್ಲಿ ನೀರು ಸಮರ್ಪಕವಾಗಿ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಕಸದ ವಿಲೇವಾರಿ ಸರಿಯಾದ ಪ್ರಮಾಣದಲ್ಲಿ ಆಗಬೇಕು. ಕಸ ರಸ್ತೆಯಲ್ಲಿ ಸಂಗ್ರಹವಾದರೆ ಮಳೆ ನೀರು ಸರಾಗವಾಗಿ ಹರಿಯುವುದಿಲ್ಲ. ಸಾರ್ವಜನಿಕರು ಸಮರ್ಪಕವಾಗಿ ಕಸ ವಿಲೇವಾರಿ ಮಾಡಬೇಕು. ರಸ್ತೆ ಬದಿ ಒಣಗಿದ ಮರಗಳು, ಕೊಂಬೆಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ ಆಯುಕ್ತರು ಮಾಹಿತಿ ನೀಡಿದ್ದಾರೆ.



ಮಾನವೀಯತೆ ಮೆರೆದ ಟ್ರಾಫಿಕ್ ಪೊಲೀಸ್

ಮಳೆಯಿಂದ ನೀರು ತುಂಬಿದ್ದು ರಸ್ತೆ ದಾಟಲು ಹರಸಾಹಸ ಪಡುತ್ತಿದ್ದ ವಿಶೇಷ ಚೇತನ ವ್ಯಕ್ತಿಯನ್ನು ಹೊತ್ತುಕೊಂಡು ಟ್ರಾಫಿಕ್ ಪೊಲೀಸ್ ಮಾನವೀಯತೆ ಮೆರೆದಿದ್ದಾರೆ. ಮಳೆಯಲ್ಲಿ ರಸ್ತೆದಾಟಲಾಗದೇ ವಿಶೇಷ ಚೇತನ ವ್ಯಕ್ತಿ ಪರದಾಡುತ್ತಿದ್ದರು. ಇದನ್ನು ಕಂಡ ಬ್ಯಾಟರಾಯನಪುರ ಟ್ರಾಫಿಕ್ ಪೊಲೀಸ್ ವಿಶೇಷ ವ್ಯಕ್ತಿಯ ನೆರವಿಗೆ ಧಾವಿಸಿದ್ದಾರೆ. ವಿಜಯನಗರದ ಮಂಜುನಾಥ್ ನಗರದಲ್ಲಿ ರಾಜಕಾಲುವೆ ತುಂಬಿ ಹರಿಯುತ್ತಿದ್ದು, ರಾಜಕಾಲುವೆ ತಡೆಗೋಡೆ ಕುಸಿಯುವ ಆತಂಕ ಶುರುವಾಗಿದೆ. ರಾಜಕಾಲುವೆ ಪಕ್ಕದ ಮಣ್ಣು ಕುಸಿಯುತ್ತಿರುವ ಹಿನ್ನೆಲೆ ರಾಜಕಾಲುವೆ ಅಕ್ಕಪಕ್ಕದ ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಈಗಾಗಲೇ ಎರಡು ಮನೆಗಳು ಕುಸಿಯುವ ಹಂತಕ್ಕೆ ತಲುಪಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

- ಇಟಿ ಕ್ರಾಸ್ ನಿಂದ ಮೇಖ್ರಿ ವೃತ್ತದ, ಜೆಸಿ ನಗರ ಕಡೆಗೆ
- ಬಿಸ್ಮಿಲ್ಲಾ ನಗರದಿಂದ ಡೈರಿ ವೃತ್ತ ಕಡೆಗೆ
- 3. ನಾಯಂಡಹಳ್ಳಿ ಯಿಂದ ಕೆಂಗೇರಿ ಕಡೆಗೆ
- ಉದಯ ಟಿವಿ ಅಂಡರ್‌ಪಾಸ್ ನಿಂದ ಜಯಮಹಲ್ ರಸ್ತೆ ಕಡೆಗೆ
- ಕುಮಾರ ಕೃಪಾ ರಸ್ತೆ ಯಿಂದ ಶಿವಾನಂದ ಜಂಕ್ಷನ್ ಕಡೆಗೆ
- ರಾಜೀವ್ ಗಾಂಧಿ ವೃತ್ತ ದಿಂದ ಓಊಖ ಜಂಕ್ಷನ್ ಕಡೆಗೆ
- ಕಿಮ್ಕೋ ಜಂಕ್ಷನ್ ನಿಂದ ವಿಜಯನಗರದ ಕಡೆಗೆ
- ಕಲ್ಯಾಣ ನಗರ ಓಂಶಕ್ತಿ ದೇವಸ್ಥಾನ ರಸ್ತೆ
- ಮಡಿವಾಳ ಪಿಎಸ್ ನಿಂದ ಸಿಲ್ಕ್ ಬೋರ್ಡ್ ಕಡೆಗೆ
- ಸಾರಕ್ಕಿ ಯು ಟರ್ನ್
- ಕ್ವೀನ್ಸ್ ಜಂಕ್ಷನ್ ನಿಂದ ಅನಿಲ್ ಕುಂಬ್ಳೆ ಜಂಕ್ಷನ್ ಕಡೆಗೆ
- ಮಾರ್ಕೆಟ್ ಡೌನ್‌ರ್‍ಯಾಂಪ್ ನಿಂದ ಖಿಒಕ ರಸ್ತೆ ಕಡೆಗೆ
- ಬ್ರಿಯಾಂಡ್ ಸ್ಕ್ವೇರ್ ರಸ್ತೆ
- ಜಿಆರ್‌ಟಿ ಜಂಕ್ಷನ್
- ನೆಕ್ಸಸ್ ಮಾಲ್ ಮುಖ್ಯ ರಸ್ತೆ
- ಬಳಗೆರೆ ರಸ್ತೆ
- ಸಿದ್ದಾಪುರ
- ದೇವಿನಗರ ಕ್ರಾಸ್



ಮಳೆಯಿಂದ ಕೆಪಿ ಅಗ್ರಹಾರ ಲಾಕ್

ಇನ್ನು, ಬೆಂಗಳೂರಿನಲ್ಲಿ ಅರ್ಧ ಗಂಟೆ ಸುರಿದ ಮಳೆಗೆ ಕೆಪಿ ಅಗ್ರಹಾರಕ್ಕೆ ಲಾಕ್ ಆಗಿ ಹೋಗಿದೆ. ಮಳೆ ನೀರಿನಿಂದ ಮುಳುಗಿರುವ ಬಡಾವಣೆಯಲ್ಲಿರುವ ಮನೆಗಳಿಗೆ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದ್ದು, ಸ್ಥಳೀಯರ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಗರದ ಪ್ರಮುಖ ರಸ್ತೆಗಳು ಮಳೆ ನೀರಿಂದಾಗಿ ಜಲಾವೃತಗೊಂಡಿದ್ದು, ಮನೆಗೆ ಮರಳುತ್ತಿದ್ದ ಉದ್ಯೋಗಿಗಳು ಹಾಗೂ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಧಾರಾಕಾರ ಮಳೆಗೆ ಅಂಡರ್‌ಪಾಸ್‌ಗಳಲ್ಲಿ ಸಂಚಾರವನ್ನು ನಿರ್ಬಂಧಿಸಲಾಗಿದೆ. ಮಳೆ ನೀರು ನಿಂತಿರುವುದರಿಂದ ಹಲವು ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿದೆ.

ಜವಾಬ್ದಾರಿಯುತ ನಾಗರಿಕರಾಗಲು ವಿದ್ಯೆ ಪ್ರೇರಣೆ

• **ಬೆಂಗಳೂರು:** ಅರ್ಹ ಯಶಸ್ಸು ಮತ್ತು ಅಡ್ಡಮಾರ್ಗದಲ್ಲಿ ಗಳಿಸಿದ ಯಶಸ್ಸು ಎರಡರ ನಡುವಿನ ವ್ಯತ್ಯಾಸವನ್ನು ಅರಿತು ಜ್ಞಾನವನ್ನು ಮೌಲ್ಯಯುತವಾಗಿಸಿ ಕೊಳ್ಳಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಹೇಳಿದರು.

ಎಂ.ಪಿ.ಬಿರ್ಲಾ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಸಮಾಜದ ಬಹುದೊಡ್ಡ ಅಪಾಯವೆಂದರೆ ಅಕ್ಷರಸ್ಥರು ಸಾಮಾಜಿಕ ಹೊಣೆಗಾರಿಕೆಯಿಂದ ವಿಮುಖರಾಗುತ್ತಿರುವುದು. ನಮ್ಮ ಪರಂಪರೆಯಲ್ಲಿ ಮೌಲ್ಯವಿಲ್ಲದ ಜ್ಞಾನಕ್ಕೆ ಬೆಲೆ ಇಲ್ಲ ಎನ್ನುವುದನ್ನು ಖಚಿತವಾಗಿ ಹೇಳಲಾಗಿದೆ. ವಿದ್ಯೆಯು ಜವಾಬ್ದಾರಿಯುತ ನಾಗರೀಕರಾಗಲು ಪ್ರೇರಣೆ ನೀಡ ಬೇಕು.



ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಅಭಿಮತ

ಆಗ ಮಾತ್ರವೇ ನಮ್ಮ ಪ್ರಜಾಪ್ರಭುತ್ವವು ಸುರಕ್ಷಿತವಾಗಿ ಉಳಿಯಲು ಸಾಧ್ಯ. ಉಳ್ಳವರು ಮತ್ತು ಇಲ್ಲದವರ ನಡುವೆ ಕಂದಕ ವಿಸ್ತಾರವಾಗುತ್ತಾ ಹೋದರೆ ಸಮಾಜದಲ್ಲಿ ಅಶಾಂತಿ ಉಂಟಾಗ ಬಹುದು ಎಂದು ತಿಳಿಸಿದರು.

ಎಂ.ಪಿ.ಬಿರ್ಲಾ ಸಂಸ್ಥೆಯ ಅಧ್ಯಕ್ಷ ಎನ್.ರಾಮಾನುಜ ಮಾತನಾಡಿ , ಎಂಬಿಎ ಎನ್ನುವುದು ಶ್ರೀಮಂತರ ಸೊತ್ತಾಗಿ, ಮಧ್ಯಮ ವರ್ಗದವರ ಪಾಲಿಗೆ ಗಗನ ಕುಸುಮವಾಗಿದ್ದ ಕಾಲದಲ್ಲಿ ಆರಂಭವಾದ ಸಂಸ್ಥೆ ವ್ಯವಹಾರದೊಂದಿಗೆ ನೈತಿಕತೆಯನ್ನೂ ಕಲಿಸುವ ಸಂಸ್ಥೆ ಎನ್ನುವ ಹೆಗ್ಗಳಿಕೆಯನ್ನು ಪಡೆದಿದೆ ಎಂದು ತಿಳಿಸಿದರು. ಡಾ.ಮನಮೋಹನ ಸಿಂಗ್ ವಿಶ್ವವಿದ್ಯಾಲಯದ ಸೆನೆಟ್ ಮೆಂಬರ್ ಎಚ್. ಕೃಷ್ಣರಾವ್, ವಿ.ಮುರಳೀಧರ್ ಉಪಸ್ಥಿತರಿದ್ದರು.

ಭಾರೀ ವಾಹನ ಸಂಚಾರಕ್ಕೆ ತಾತ್ಕಾಲಿಕ ನಿರ್ಬಂಧ

• **ಬೆಂಗಳೂರು:** ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವರ್ತೂರು ಮುಖ್ಯರಸ್ತೆಯ ಮಾರತ್ತಹಳ್ಳಿ ಬ್ರಿಡ್ಜ್ ಮೇಲೆ ಬಿಎಂಆರ್‌ಸಿಎಲ್ ವತಿಯಿಂದ ಮೆಟ್ರೋ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ವಾಹನ ಸವಾರರ ಹಿತದೃಷ್ಟಿಯಿಂದ ಮೇ 30ರ ರಾತ್ರಿ 11 ಗಂಟೆಯಿಂದ ಮರುದಿನ ಬೆಳಗ್ಗೆ 6 ಗಂಟೆಯವರೆಗೆ ಭಾರೀ ಸರಕು ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ, ಪರ್ಯಾಯ ಮಾರ್ಗಗಳನ್ನು ಕಲ್ಪಿಸಲಾಗಿದೆ.

ಮಾರತ್ತಹಳ್ಳಿ ಬ್ರಿಡ್ಜ್ ಮೇಲೆ ಬಿಎಂಆರ್‌ಸಿಎಲ್ ಕಾಮಗಾರಿ ಹಿನ್ನೆಲೆ

ವಾಹನ ಸಂಚಾರ ನಿರ್ಬಂಧಿಸಿರುವ ರಸ್ತೆಗಳು: ಎಚ್‌ಎಎಲ್ ಕಡೆಯಿಂದ: ವರ್ತೂರು ಮುಖ್ಯರಸ್ತೆ ಮಾರತ್ತಹಳ್ಳಿ ಬ್ರಿಡ್ಜ್ ಮೂಲಕ ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಗೆ ಹೋಗುವ ಭಾರೀ ಸರಕು ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ವರ್ತೂರು/ವೈಟ್‌ಫೀಲ್ಡ್ ಕಡೆಯಿಂದ: ವರ್ತೂರು ಮುಖ್ಯರಸ್ತೆ ಮಾರತ್ತಹಳ್ಳಿ ಬ್ರಿಡ್ಜ್ ಮೂಲಕ ಎಚ್‌ಎಎಲ್ ಕಡೆಗೆ ಹೋಗುವ ಭಾರೀ ಸರಕು ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

ನಿರ್ಬಂಧಿಸಲಾದ ಸಂಚಾರಕ್ಕೆ ಪರ್ಯಾಯ ಮಾರ್ಗಗಳು: ಎಚ್‌ಎಎಲ್ ಕಡೆಯಿಂದ ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಗೆ ಹೋಗುವ ಭಾರೀ ವಾಹನಗಳಿಗೆ ವರ್ತೂರು ಮುಖ್ಯ ರಸ್ತೆಯ ಮುಖಾಂತರ ಸಾಗಿ ಮಾರತ್ತಹಳ್ಳಿ ಬ್ರಿಡ್ಜ್ ಜಂಕ್ಷನ್ ಬಳಿ ಎಡ ತಿರುವು ಪಡೆಯಬೇಕು. ನಂತರ ಅಶ್ವಥನಗರ ಸರ್ವಿಸ್ ರಸ್ತೆಯ ಮೂಲಕ ಹೊರ ವರ್ತುಲ ರಸ್ತೆ ತಲುಪಿ, ಕಾರ್ತಿಕ್‌ನಗರ ಜಂಕ್ಷನ್ ಬಳಿ ಯೂ-ಟರ್ನ್ ಪಡೆದು ಮುಂದೆ ಸಾಗಬೇಕು.

ವಾಹನ ಸವಾರರ ಸಹಕಾರಕ್ಕೆ ಮನವಿ

ವರ್ತೂರು ಮುಖ್ಯ ರಸ್ತೆಯ ಮುಖಾಂತರ ಸಂಚರಿಸಿ ಮಾರತ್ತಹಳ್ಳಿ ಬ್ರಿಡ್ಜ್ ಜಂಕ್ಷನ್ ಬಳಿ ಎಡ ತಿರುವು ಪಡೆದು ಹೊರ ವರ್ತುಲ ರಸ್ತೆಯ ಮೂಲಕ ಸಂಚರಿಸಬೇಕು. ಕಾಡುಬೀಸನಹಳ್ಳಿ ಜಂಕ್ಷನ್ ತಲುಪಿ ಅಲ್ಲಿ ಯೂ-ಟರ್ನ್ ಪಡೆದುಕೊಂಡು ಸರ್ವಿಸ್ ರಸ್ತೆಯ ಮುಖಾಂತರ ಸಾಗಬೇಕು. ಬಳಿಕ ಮಾರತ್ತಹಳ್ಳಿ ಬ್ರಿಡ್ಜ್ ಜಂಕ್ಷನ್ ಬಳಿ ಎಡ ತಿರುವು ಪಡೆದುಕೊಂಡು ವರ್ತೂರು ಮುಖ್ಯ ರಸ್ತೆಯ ಮೂಲಕ ಎಚ್‌ಎಎಲ್ ಕಡೆಗೆ ಸಂಚರಿಸಬಹುದಾಗಿದೆ. ಮೆಟ್ರೋ ಕಾಮಗಾರಿಯು ಸುಗಮವಾಗಿ ನಡೆಯಲು ಸಾರ್ವಜನಿಕರು ಹಾಗೂ ವಾಹನ ಸವಾರರು ಈ ಸಂಚಾರ ಮಾರ್ಪಾಡಿಗೆ ಸಹಕರಿಸಬೇಕಾಗಿ ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ಮನವಿ ಮಾಡಿದ್ದಾರೆ.

ವಿದ್ಯಾರ್ಥಿಗೆ ಚಾಕು ಇರಿತ

• **ಬೆಂಗಳೂರು:** ಬೈಕ್‌ನಲ್ಲಿ ಹೋಗುತ್ತಿದ್ದಾಗ ಸೈಡ್ ಬಿಡಲಿಲ್ಲ ಎಂಬ ಕಾರಣಕ್ಕೆ ಮತ್ತೊಂದು ಬೈಕ್ ಸವಾರನು ಪಿಯು ವಿದ್ಯಾರ್ಥಿಯೊಬ್ಬನಿಗೆ ಚಾಕುವಿನಿಂದ ಇರಿದಿರುವ ಘಟನೆ ಆರ್.ಆರ್.ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸೈಡ್ ಬಿಡಲಿಲ್ಲವೆಂಬ ಕಾರಣಕ್ಕೆ ಬೈಕ್ ಸವಾರನಿಂದ ಕೃತ್ಯ

ಚಾಕು ಇರಿತದಿಂದ ತೀವ್ರವಾಗಿ ಗಾಯಗೊಂಡಿರುವ ಆದಿತ್ಯ ಎಂಬ ವಿದ್ಯಾರ್ಥಿ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಪ್ರಥಮ ಪಿಯುಸಿ ವ್ಯಾಸಂಗ ಮಾಡುವುದರ ಜತೆಗೆ ಪಾರ್ಟ್‌ಟೈಮ್‌ನಲ್ಲಿ ರ‍್ಯಾಪಿಡೋ ಬೈಕ್ ಟ್ಯಾಕ್ಸಿ ಕೆಲಸ ಮಾಡುತ್ತಿದ್ದನು. ಬುಧವಾರ ರಾತ್ರಿ ಆದಿತ್ಯ ತನ್ನ ಸ್ನೇಹಿತನನ್ನು ಬೈಕ್‌ನಲ್ಲಿ ಕರೆದುಕೊಂಡು ಗ್ಲೋಬಲ್ ವಿಲೇಜ್ ರಸ್ತೆಯ ಬಾರ್ ಒಂದರ ಬಳಿ ಹೋಗುತ್ತಿದ್ದನು. ಈ ವೇಳೆ ಹಿಂದಿನಿಂದ ಬೈಕ್‌ನಲ್ಲಿ ಬಂದ ಸಂತೋಷ್ ಹಾಗೂ ಆತನ ಸ್ನೇಹಿತ, ನಮಗೆ ಸೈಡ್ ಬಿಡಲಿಲ್ಲ ಎಂದು ಹೇಳಿ ಆದಿತ್ಯನ ಜತೆ ಕಿರಿಕ್ ತೆಗೆದು ಜಗಳವಾಡಿದ್ದಾರೆ. ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗಿದಾಗ, ಆರೋಪಿ ಸಂತೋಷ್ ಚಾಕುವಿನಿಂದ ಆದಿತ್ಯನಿಗೆ ಇರಿದು, ತನ್ನ ಸ್ನೇಹಿತನೊಂದಿಗೆ ಸ್ಥಳದಿಂದ ಪರಾರಿಯಾಗಿದ್ದಾನೆ. ಇರಿತದಿಂದ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆದಿತ್ಯನನ್ನು ಆತನ ಸ್ನೇಹಿತ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದ್ದಾನೆ. ಪ್ರಾಣಾಪಾಯದಿಂದ ಪಾರಾಗಿರುವ ವಿದ್ಯಾರ್ಥಿ ಚಿಕಿತ್ಸೆ ಪಡೆದ ನಂತರ ಪೊಲೀಸರಿಗೆ ಅಧಿಕೃತ ದೂರು ನೀಡಿದ್ದಾನೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಆರ್.ಆರ್. ನಗರ ಪೊಲೀಸರು ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಶೇ.5 ರಿಯಾಯಿತಿ ಪಡೆಯಿರಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಮೇ 31ರೊಳಗೆ ಆಸ್ತಿ ತೆರಿಗೆ ಪಾವತಿಸಿ ಶೇ.5ರಷ್ಟು ರಿಯಾಯಿತಿ ಪಡೆಯುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

- ಮೇ 31ರೊಳಗೆ ಆಸ್ತಿ ತೆರಿಗೆ ಪಾವತಿಸಿ : ಮಹೇಶ್ವರ್ ರಾವ್
- ಮೇ 31 ರೊಳಗೆ ಆಸ್ತಿ ತೆರಿಗೆ ಪಾವತಿಸಿ ಶೇ.5ರಷ್ಟು ರಿಯಾಯಿತಿ ಪಡೆಯಿರಿ
- ಆಸ್ತಿ ತೆರಿಗೆ ಪಾವತಿಯಲ್ಲಿ ಶೇ. 5 ರಷ್ಟು ರಿಯಾಯಿತಿಗೆ ಇನ್ನೆರಡು ದಿನ ಮಾತ್ರ ಅವಕಾಶ

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 2026-27ನೇ ಸಾಲಿನ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತಿದೆ. 2026 ಜೂನ್ ತಿಂಗಳಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ. ಆದ್ದರಿಂದ ನಾಗರಿಕರು ಕೂಡಲೇ ಆಸ್ತಿ ತೆರಿಗೆ ಪಾವತಿಸಿ ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದ್ದಾರೆ. ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಪಾವತಿಸಲು ಜಿಬಿಎ ಅಧಿಕೃತ ಜಾಲತಾಣ https://bbmptax.karnataka.gov.in ಗೆ ಭೇಟಿ ನೀಡಿ ತೆರಿಗೆ ಪಾವತಿಸಬಹುದಾಗಿದೆ. ನಾಗರಿಕರು ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಅಥವಾ ಸಮಸ್ಯೆಗಳಿದ್ದಲ್ಲಿ ಜಿಬಿಎ ಸಹಾಯವಾಣಿ ಸಂಖ್ಯೆ 1533 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

₹50 ಕೋಟಿ ಬೆಲೆಬಾಳುವ ಆಸ್ತಿಗೆ ಖದೀಮರ ಕಣ್ಣು

ಕಾರಾಗೃಹ ಇಲಾಖೆ ಭೂಮಿ ಕಬ್ಜ

• **ಬೆಂಗಳೂರು:** ಕಾರಾಗೃಹ ಇಲಾಖೆಗೆ ಸೇರಿದ ಅಂದಾಜು 40 ರಿಂದ 50 ಕೋಟಿ ರೂ. ಮೌಲ್ಯದ ಬೆಲೆಬಾಳುವ ಆಸ್ತಿಯ ಮೇಲೆ ಕಣ್ಣು ಹಾಕಿರುವ ಖದೀಮರು, ಅದನ್ನು ಅಕ್ರಮವಾಗಿ ಕಬ್ಜ ಮಾಡಿಕೊಂಡಿರುವ ಗಂಭೀರ ಪ್ರಕರಣವೊಂದು ಬೆಳಕಿಗೆ ಬಂದಿದೆ.

ಗಾಂಧಿನಗರದ 2ನೇ ಅಡ್ಡರಸ್ತೆಯಲ್ಲಿರುವ, ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಅಧೀನಕ್ಕೆ ಒಳಪಡುವ ಮೈಸೂರು ಡಿಸ್ಚಾರ್ಜ್ ಪ್ರಿಸನರ್ಸ್ ಏಡ್ ಸೊಸೈಟಿಗೆ ಸೇರಿದ ಜಾಗವನ್ನು ಅತಿಕ್ರಮಣ ಮಾಡಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಹಿಂದೆ ಮೈಸೂರು ಮಹಾರಾಜರು ಕಾರಾಗೃಹ ಇಲಾಖೆಗೆ ಸುಮಾರು ಹತ್ತು ಸಾವಿರ ಚದರ ಅಡಿ ಜಾಗವನ್ನು ದಾನವಾಗಿ ನೀಡಿದ್ದರು. ಇಂದಿನ ಮಾರುಕಟ್ಟೆ ದರದ ಪ್ರಕಾರ ಇದರ ಮೌಲ್ಯ ಬರೋಬ್ಬರಿ 40 ರಿಂದ 50 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಸರ್ಕಾರಿ ಸ್ವತ್ತನ್ನು ಖಾಸಗಿ ವ್ಯಕ್ತಿಗಳಾದ ಖಲಿಂ ಹಾಗೂ ಅನಿಲ್ ಎಂಬವರು ಕಳೆದ ಒಂದು ವರ್ಷದಿಂದ ಕಾನೂನುಬಾಹಿರವಾಗಿ ತಮ್ಮ ಸುಪರ್ದಿಗೆ ಪಡೆದು ಬಳಕೆ ಮಾಡುತ್ತಿದ್ದರು ಎನ್ನಲಾಗಿದೆ.

ಅತಿಕ್ರಮಣ ಬೆಳಕಿಗೆ ಬಂದಿದ್ದು ಹೇಗೆ?: ಕಾರಾಗೃಹದ ಕೈದಿಗಳು ಜೈಲಿನಲ್ಲಿ ತಯಾರಿಸುವ ಬೇಕರಿ ತಿನಿಸುಗಳು ಹಾಗೂ ಬಟ್ಟೆಗಳ ವ್ಯಾಪಾರಕ್ಕಾಗಿ ಹೊಸ ಮಾರಾಟ ಮಳಿಗೆಯನ್ನು ತೆರೆಯಲು ಇಲಾಖೆ ಸಜ್ಜಾಗಿತ್ತು. ಗಾಂಧಿನಗರದಲ್ಲಿದ್ದ ಹಳೆಯ ಕಟ್ಟಡವನ್ನು ತೆರವುಗೊಳಿಸಿ, ಹೊಸದಾಗಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲು ಇಲಾಖೆಯ ಅಧಿಕಾರಿಗಳು ಮುಂದಾದಾಗ ಈ ಆಸ್ತಿ ಅತಿಕ್ರಮಣವಾಗಿರುವ ವಿಷಯ ಇಲಾಖೆಯ ಗಮನಕ್ಕೆ ಬಂದಿದೆ.

ಕಟ್ಟಡದ ಮೊದಲ ಮಹಡಿಯನ್ನು ಯಾವುದೇ ಪೂರ್ವಾನುಮತಿ ಇಲ್ಲದೆ ಅನಿಲ್ ಎಂಬಾತ ಅತಿಕ್ರಮಣ ಮಾಡಿಕೊಂಡಿದ್ದರೆ, ಖಲಿಂ ಎಂಬಾತ ಕಾರಾಗೃಹ ಇಲಾಖೆಗೆ ಸೇರಿದ ಖಾಲಿ ಜಾಗದಲ್ಲಿ ಹಳೆಯ ಸಾಮಗ್ರಿಗಳನ್ನು ತಂದು ಹಾಕಿ ಅಕ್ರಮವಾಗಿ ಜಾಗವನ್ನು ಆಕ್ರಮಿಸಿಕೊಂಡಿದ್ದಾನೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಈ ಅಕ್ರಮ ಭೂ ಕಬಳಿಕೆ ಕುರಿತು ಇಲಾಖೆಯ ಪರವಾಗಿ ಶ್ರೀಶೈಲ್ ಎಸ್.ಮೇಟಿ ಎಂಬವರು ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಅಧಿಕೃತ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದು, ಆರೋಪಿಗಳಾದ ಖಲಿಂ ಮತ್ತು ಅನಿಲ್‌ಗೆ ಈಗಾಗಲೇ ನೋಟಿಸ್ ಜಾರಿ ಮಾಡಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಹೇಳಿಕೆ

ಎಂಎಸ್‌ಎಂಇಗಳಿಂದ ಉದ್ಯೋಗ ಸೃಷ್ಟಿ

• **ಬೆಂಗಳೂರು:** ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ(ಎಂಎಸ್‌ಎಂಇ)ಗಳು ಕೇವಲ ಆರ್ಥಿಕ ಉತ್ಪಾದನೆ ಮತ್ತು ರಫ್ತುಗಳಿಗೆ ಮಾತ್ರ ಕೊಡುಗೆ ನೀಡುವುದಿಲ್ಲ. ಅದಕ್ಕಿಂತ ಮುಖ್ಯವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ, ನವೀನತೆಯನ್ನು ಉತ್ತೇಜಿಸುತ್ತವೆ, ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುತ್ತವೆ ಮತ್ತು ಜನರಿಗೆ ಅವಕಾಶಗಳನ್ನು ಇನ್ನಷ್ಟು ಹತ್ತಿರ ತರುತ್ತವೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯೋಜಿಸಿದ್ದ ಗ್ಲೋಬಲ್ ಎಂಎಸ್‌ಎಂಇ ಕಾನ್‌ಕ್ಲೇವ್‌ನಲ್ಲಿ ಮಾತನಾಡಿದ ಅವರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಮಗ್ರ ಮತ್ತು ಒಳಗೊಂಡ ಅಭಿವೃದ್ಧಿಯ ನಿಜವಾದ ಚಾಲಕಶಕ್ತಿಗಳಾಗಿವೆ. ಅವುಗಳು ಸ್ಥೈರ್ಯ, ಆಶಯ ಮತ್ತು ಉದ್ಯಮಶೀಲತೆಯ ಅತ್ಯಂತ ಚುರುಕಾದ ರೂಪವನ್ನು ಪ್ರತಿನಿಧಿಸುತ್ತವೆ ಎಂದು ಹೇಳಿದರು.



ಜಾಗತಿಕ ಆರ್ಥಿಕತೆ ತಂತ್ರಜ್ಞಾನ, ಸ್ಥಿರತೆಯ ಹಾಗೂ ಬದಲಾಗುತ್ತಿರುವ ಸರಬರಾಜು ಸರಪಳಿಗಳ ಪ್ರಭಾವದಿಂದ ವೇಗವಾಗಿ ರೂಪಾಂತರಗೊಳ್ಳುತ್ತಿರುವ ಸಂದರ್ಭದಲ್ಲಿ, ಎಂಎಸ್‌ಎಂಇಗಳು ಚುರುಕಾದ, ಸ್ಪರ್ಧಾತ್ಮಕ ಮತ್ತು ಸ್ಥೈರ್ಯಯುತ ಆರ್ಥಿಕ ವ್ಯವಸ್ಥೆಗಳನ್ನು ನಿರ್ಮಿಸುವಲ್ಲಿ ದಿನೇದಿನೇ ಹೆಚ್ಚು ಮಹತ್ವದ ಪಾತ್ರ ವಹಿಸುತ್ತಿವೆ.ತಂತ್ರಜ್ಞಾನ, ಸ್ಥಿರತೆ ಮತ್ತು ಬದಲಾಗುತ್ತಿರುವ ಜಾಗತಿಕ ಸರಬರಾಜು ಸರಪಳಿಗಳಿಂದ ಆರ್ಥಿಕ ವ್ಯವಸ್ಥೆ ರೂಪಾಂತರಗೊಳ್ಳುತ್ತಿರುವ ಈ ಸಂದರ್ಭದಲ್ಲಿ, ಈ ಸಮಾವೇಶವು ಅತ್ಯಂತ ಮಹತ್ವಪೂರ್ಣ ಹಾಗೂ ಸಮಯೋಚಿತ ವೇದಿಕೆಯಾಗಿದೆ ಎಂದು ತಿಳಿಸಿದರು.

ಎಂಎಸ್‌ಎಂಇಗಳ ಭವಿಷ್ಯದ ಸ್ಪರ್ಧಾತ್ಮಕತೆ ಅವರು ತಂತ್ರಜ್ಞಾನ ಮತ್ತು ನವೀನತೆಯನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಡಿಜಿಟಲ್ ವೇದಿಕೆಗಳು, ಸ್ವಯಂಚಾಲಿತ ವ್ಯವಸ್ಥೆಗಳ, ಕೃತಕ ಬುದ್ಧಿಮತ್ತೆ , ಇಂಡಸ್ಟ್ರಿ 4.0 ಪರಿಹಾರಗಳು ಹಾಗೂ ಇ-ಕಾಮರ್ಸ್ ಪರಿಸರ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಉದ್ಯಮಗಳನ್ನು ಸರ್ಕಾರದಿಂದ ಉತ್ತೇಜಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆ ಕೇಂದ್ರಗಳ ಅತ್ಯುನ್ನತ ಉದ್ಯಮಿಗಳಿಗೆ ಬಹಳ ಉಪಯುಕ್ತವಾಗಲಿದೆ. ಜೊತೆಗೆ, ಬ್ಯಾಂಕುಗಳೊಂದಿಗೆ ಸಹಯೋಗದ ಮೂಲಕ ಡಿಜಿಟಲ್ ಆಡಳಿತ ಹಾಗೂ ಡಿಜಿಟಲ್ ಸಾಮರ್ಥ್ಯ ನಿರ್ಮಾಣಕ್ಕೆ ಉತ್ತೇಜನಕ್ಕೆ ಒತ್ತು ಕೊಡಲಾಗುತ್ತಿದೆ ಎಂದು ಹೇಳಿದರು.

ಕಲಾವಿದರಿಂದ ಅರ್ಜಿ ಅಹ್ವಾನ

• **ಮಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವತಿಯಿಂದ ಆಯೋಜಿಸಲಾಗುವ ಚಿಗುರು, ಯುವ ಸೌರಭ, ಸಾಂಸ್ಕೃತಿಕ ಸೌರಭ ಕಾರ್ಯಕ್ರಮದಲ್ಲಿ ಶಾಸ್ತ್ರೀಯ ಸಂಗೀತ, ಕರ್ನಾಟಕ/ಹಿಂದುಸ್ಥಾನಿ/ ಗಾಯನ ವಾದ್ಯ ಸಂಗೀತ, ಸುಗಮ ಸಂಗೀತ/ ವಚನ ಸಂಗೀತ, ಜನಪದ ಗೀತೆಗಳು, ಸಮೂಹ ನೃತ್ಯ/ನೃತ್ಯ ರೂಪಕ, ಕಥಕ್, ಮೋಹಿನಿಯಾಟಂ, ಕೂಚಿಪುಡಿ ಒಡಿಸ್ಸಿ, (ಸೋಲೋ/ ಯುಗಳ ನೃತ್ಯ), ಜನಪದ ಪ್ರದರ್ಶನ ಕಲಾ ತಂಡಗಳು, ನಾಟಕ, ಯಕ್ಷಗಾನ, ಏಕಪಾತ್ರಾಭಿನಯ ಇತ್ಯಾದಿ ಕಾರ್ಯ ಕ್ರಮದಲ್ಲಿ ಕಲಾ ಪ್ರದರ್ಶನ ನೀಡಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ (ದೂರವಾಣಿ ಸಂ. 0824-2951327) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಿರು ಸುದ್ದಿ

ಬ್ಯಾಂಕ್ ಸಾಲ ಇರುವ ಮನೆ ಮಾರಾಟ ಮಾಡಿ ವಂಚನೆ: ದೂರು

ಕುಂದಾಪುರ: ಮನೆ ಸಾಲವನ್ನು ಪಡೆದು ಸರಿಯಾಗಿ ಮರು ಪಾವತಿಸದೇ ಬ್ಯಾಂಕ್ ಹೆಸರಿಗೆ ಋಣಭಾರವಿರುವ ಸ್ಥಿರಾಸ್ತಿಯನ್ನು ಮಾರಾಟ ಮಾಡಿ ವಂಚಿಸಿ ನಂಬಿಕೆ ದ್ರೋಹ ಎಸಗಿ ಮೋಸ ಮಾಡಿರುವುದಾಗಿ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಂದಾಪುರದ ಚರ್ಚ್ ಸಾಲ್ ರಸ್ತೆ ನಿವಾಸಿ ಶ್ರೀನಾಥ (50) ಎಂಬವರು ಉದಯ ಮೆಂಡನ್ ಮತ್ತು ನಿರ್ಮಲಾ ಯು. ಮೆಂಡನ್ ಅವರ ಕುಂದಾಪುರ ತಾಲೂಕು ವಡೇರಹೋಬಳಿ ಗ್ರಾಮದಲ್ಲಿನ 4.5 ಸೆಂಟ್ಸ್ ಸ್ಥಳದಲ್ಲಿರುವ ಮನೆಯನ್ನು 20,75,000 ರೂಪಾಯಿಗೆ ಖರೀದಿಸಿ ಸೇಲ್ ಡೀಡ್ ಮುಖಾಂತರ ಕುಂದಾಪುರ ಉಪ ನೋಂದಣಾಧಿಕಾರಿಯವರ ಕಚೇರಿಯಲ್ಲಿ ನೋಂದಾಯಿಸಿಕೊಂಡಿದ್ದರು. ಉದಯ ಮೆಂಡನ್ ಮತ್ತು ನಿರ್ಮಲಾ ಯು. ಮೆಂಡನ್ ಅವರು ಸ್ಥಿರಾಸ್ತಿಯನ್ನು ಮಾರಾಟ ಮಾಡುವ ಮೊದಲೇ ಸ್ಥಿರಾಸ್ತಿಯ ಮೇಲೆ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಕುಂದಾಪುರ ಶಾಖೆಯಲ್ಲಿ ಗೃಹ ಸಾಲ ಪಡೆದಿದ್ದು, ಸಾಲವನ್ನು ತೀರಿಸದೇ ಬಾಕಿ ಇರಿಸಿಕೊಂಡಿದ್ದು, ಮನೆ ಸಾಲವನ್ನು ಪಡೆದು ಸರಿಯಾಗಿ ಮರು ಪಾವತಿಸದೇ ಯುನಿಯನ್ ಬ್ಯಾಂಕ್ ಹೆಸರಿಗೆ ಋಣಭಾರವಿರುವ ಸ್ಥಿರಾಸ್ತಿಯನ್ನು ಮಾರಾಟ ಮಾಡಿ ವಂಚಿಸಿ ನಂಬಿಕೆ ದ್ರೋಹ ಎಸಗಿ ಮೋಸ ಮಾಡಿರುವುದಾಗಿ ಶ್ರೀನಾಥ ಅವರು ದೂರು ನೀಡಿದ್ದಾರೆ.

ಕೊಡಗಿನಲ್ಲಿ ತಮಿಳುನಾಡು ಮಾಜಿ ಮುಖ್ಯಮಂತ್ರಿ ವಿಶ್ರಾಂತಿ

ಮಡಿಕೇರಿ: ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿರುವ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹಾಗೂ ಅವರ ಮಗ ಉದಯನಿಧಿ ಕುಟುಂಬಸ್ಥರು ಕೊಡಗಿಗೆ ಆಗಮಿಸಿದ್ದಾರೆ. ಮಡಿಕೇರಿ ಸಮೀಪದ ರೆಸಾರ್ಟ್ ಒಂದರಲ್ಲಿ ಎರಡು ದಿನಗಳ ಕಾಲ ವಾಸ್ತವ್ಯ ಹೂಡಿರುವ ಸ್ಟಾಲಿನ್, ಪತ್ನಿ ದುರ್ಗಾ ಮತ್ತಿತರ ಕುಟುಂಬ ಸದಸ್ಯರೊಂದಿಗೆ ವಿಶ್ರಾಂತಿ ಪಡೆದಿದ್ದಾರೆ.

ನಿಧನ ಸುದ್ದಿ


ಪ್ರಶಾಂತ್ ಆಳ್ವ



ಮಂಗಳೂರು: ಕೊಡಿಯಾಲ್ ಬೈಲ್ ವಾರ್ಡ್‌ನ ಬಿಜೆಪಿ ಅಧ್ಯಕ್ಷ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತ ಪ್ರಶಾಂತ್ ಆಳ್ವ ಅವರು ಶುಕ್ರವಾರ ನಿಧನರಾದರು. ಅವರಿಗೆ 48 ವರ್ಷ ವಯಸ್ಸಾಗಿತ್ತು. ಕೊಡಿಯಾಲ್‌ಬೈಲ್ ನಿವಾಸಿ ಬಾಬು ಆಳ್ವ ಮತ್ತು ಸಂಜೀವಿ ಅವರ ಪುತ್ರನಾಗಿರುವ ಪ್ರಶಾಂತ್ ಆಳ್ವ ಅವಿವಾಹಿತರಾಗಿದ್ದು ವಿವಿಧ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಜರಂಗದಳದ ಕಾರ್ಯಕರ್ತರಾಗಿದ್ದ ಅವರು ಹಿಂದುತ್ವದ ವಿಷಯ ಬಂದಾಗ ಸದಾ ಮುಂಚೂಣಿಯಲ್ಲಿರುತ್ತಿದ್ದರು. ಹಿಂದೂ ಸಮಾಜೋತ್ಸವ ದಂತಹ ಸಂದರ್ಭದಲ್ಲಿ ಪ್ರತಿ ಬಾರಿಯೂ ಲವಲವಿಕೆಯಿಂದ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಅವರು ಉತ್ತಮ ಕ್ರಿಕೆಟ್ ಆಟಗಾರರೂ ಆಗಿದ್ದರು. ದ.ಕ.ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್, ಎಂಎಲ್‌ಸಿ ಕಿಶೋರ್ ಕುಮಾರ್, ಮಾಜಿ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಬಿಜೆಪಿ ಮುಖಂಡ ರಾಜ್ ಗೋಪಾಲ್ ರೈ ಮುಂತಾದವರು ಅಂತಿಮ ದರ್ಶನ ಪಡೆದರು.

ಮೃತರ ನಿಧನಕ್ಕೆ ಶಾಸಕರಾದ ಡಿ.ವೇದವ್ಯಾಸ ಕಾಮತ್, ಡಾ.ವೈ.ಭರತ್ ಶೆಟ್ಟಿ, ಉಮಾನಾಥ ಕೋಟ್ಯಾನ್, ಮಾಜಿ ಸಚಿವ ಬಿ.ನಾಗರಾಜ ಶೆಟ್ಟಿ, ಮಾಜಿ ಶಾಸಕ ಎನ್.ಯೋಗೀಶ್ ಭಟ್. ಬಿಜೆಪಿ ಯುವಮೋರ್ಚಾ ಅಧ್ಯಕ್ಷ ನಂದನ್ ಮಲ್ಯ, ಪ್ರಮುಖರಾದ ಮಹೇಶ್ ಪಾಂಡ್ಯ, ರಮೇಶ್ ಹೆಗ್ಡೆ, ರಮೇಶ್ ಕಂಡೆಟ್ಟು ಸೇರಿದಂತೆ ಹಲವು ಮಂದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಚಂದ್ರಯ್ಯ ಆಚಾರ್ಯ



ಹೆಬ್ರಿ: ಹೆಬ್ರಿ ತಾಲ್ಲೂಕಿನ ಮುನಿಯಾಲು ಪಡುಕುಡೂರು ನಿವಾಸಿ ನಿವೃತ್ತ ಪೋಸ್ಟ್ ಮ್ಯಾನ್ ಚಂದ್ರಯ್ಯ ಆಚಾರ್ಯ (82) ಬುಧವಾರ ನಿಧನರಾದರು. 1964ರಲ್ಲಿ ಭಾರತೀಯ ಅಂಚೆ ಇಲಾಖೆಯಲ್ಲಿ ಪೋಸ್ಟ್ ಮ್ಯಾನ್ ಸೇವೆಗೆ ಪಾದಾರ್ಪಣೆ ಮಾಡಿ 1978ರ ತನಕ ಎಳ್ಳಾರೆ ಪಡುಕುಡೂರು ಭಾಗದ ಪೋಸ್ಟ್ ಮ್ಯಾನ್ ಆಗಿ ಸೇವೆ ಸಲ್ಲಿಸಿದ್ದರು. 1978 ರಿಂದ 1992 ವರೆಗೆ ಮಂಗಳೂರು ಹಾಗು 2003 ರ ವರೆಗೆ ಕಾರ್ಕಳದಲ್ಲಿ ಸೇವೆ ಸಲ್ಲಿಸಿ ಜನರ ಅಪಾರ ಪ್ರೀತಿಗೆ ಪಾತ್ರರಾಗಿದ್ದರು. 40 ವರ್ಷಗಳ ವಿಶೇಷ ಸಾರ್ಥಕ ಸೇವೆಯನ್ನು ಪರಿಗಣಿಸಿ ಚಂದ್ರಯ್ಯ ಆಚಾರ್ಯ ಅವರಿಗೆ ಭಾರತೀಯ ಅಂಚೆ ಇಲಾಖೆಯು 'ಬೆಸ್ಟ್ ಪೋಸ್ಟ್‌ಮ್ಯಾನ್ ಅವಾರ್ಡ್' ನೀಡಿ ಗೌರವಿಸಿದೆ. 2003ರಲ್ಲಿ ಕಾರ್ಕಳದಲ್ಲಿ ಸೇವೆಯಿಂದ ನಿವೃತ್ತರಾಗಿ ಪಡುಕುಡೂರಿನಲ್ಲಿ ನೆಲೆಸಿದ್ದರು. ಊರಿನಲ್ಲೂ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಮೃತರಿಗೆ ಪತ್ನಿ, 2 ಗಂಡು 2 ಹೆಣ್ಣು ಮಕ್ಕಳು ಇದ್ದಾರೆ.

ಲಲಿತಾ

ಕಾಸರಗೋಡು: ಬೀರಂತಬೈಲು ಕೊಳ್ಕೆಬೈಲು ಮಾತೃಛಾಯ ನಿಲಯದ ದಿ.ಶೀನ ಪೂಜಾರಿಯವರ ಪತ್ನಿ ಲಲಿತಾ (70) ನಿಧನ ಹೊಂದಿದರು. ಮೃತರು ಮಕ್ಕಳಾದ ಅಶೋಕ, ಕಿಶೋರ, ಪ್ರಿಯಾ, ಚಿತ್ರಾ ಅವರನ್ನು ಅಗಲಿದ್ದಾರೆ.

ಪದೇ ಪದೇ ದಾರಿ ಮಧ್ಯೆ ಬಾಕಿಯಾಗುವ ಬಸ್ | ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ತೆರಳುವ ಭಕ್ತರ ಗೋಳು

ಕಾರವಾರ- ಸುಬ್ರಹ್ಮಣ್ಯ ಬಸ್‌ಗೆ ಗ್ರಹಣ

▸ ಹರೀಶ ಕುಲ್ಕುಂದ





ಮಂಗಳೂರು: ಈ ಬಸ್‌ನಲ್ಲಿ ನಿರ್ವಾಹಕರು ಪ್ರಯಾಣಿಕರಿಗೆ ಟಿಕೆಟ್ ನೀಡುವ ಜತೆಗೆ ರೇಡಿಯೇಟರ್‌ಗೆ ನೀರು ಹಾಕಬೇಕು. ವಾರದಲ್ಲಿ ಎರಡು- ಮೂರು ದಿನ ನಿಗದಿತ ಸಮಯಕ್ಕೆ ಈ ಬಸ್ ಕಾರ್ಯಾಚರಿಸುವುದೇ ಇಲ್ಲ. ವಾರದಲ್ಲಿ ಒಂದೆರಡು ದಿನ ಟ್ರಿಪ್ ರದ್ದಾಗುತ್ತದೆ...

ಕಾರವಾರ -ಸುಬ್ರಹ್ಮಣ್ಯ ನಡುವೆ ಸಂಚರಿಸುವ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಂಕೋಲ ಡಿಪೋದ ಬಸ್‌ನ ಅವ್ಯವಸ್ಥೆಯಿದು.

ಈ ಬಸ್ ಪ್ರತಿದಿನ ಬೆಳಗ್ಗೆ 8ಕ್ಕೆ ಅಂಕೋಲದಿಂದ ಹೊರಟು ಕಾರವಾರಕ್ಕೆ ತೆರಳಿ ಅಲ್ಲಿಂದ ಸುಬ್ರಹ್ಮಣ್ಯಕ್ಕೆ ಹೊರಡುತ್ತದೆ. ಕಾರವಾರ- ಅಂಕೋಲ- ಹೊನ್ನಾವರ- ಭಟ್ಕಳ- ಕುಂದಾಪುರ-ಉಡುಪಿ- ಮಂಗಳೂರು- ಉಪ್ಪಿನಂಗಡಿ ಮಾರ್ಗವಾಗಿ ರಾತ್ರಿ 8.30ರ ವೇಳೆಗೆ ಸುಬ್ರಹ್ಮಣ್ಯಕ್ಕೆ ಆಗಮಿಸಬೇಕಿದೆ. ಸುಬ್ರಹ್ಮಣ್ಯದಿಂದ ಮರುದಿನ ಬೆಳಗ್ಗೆ 8.15ಕ್ಕೆ ಕಾರವಾರಕ್ಕೆ ಹೊರಡುತ್ತದೆ. ಈ ರೂಟ್‌ನಲ್ಲಿ ಸಂಚರಿಸುವ ಕೆಎ 31 ಎಫ್ 1539 ಹಾಗೂ ಕೆಎ 31 ಎಫ್ 1540 ಸಂಖ್ಯೆಯ ಎರಡೂ ಬಸ್‌ಗಳು ಹಳೆಯದಾಗಿದ್ದು, ಎಂಜಿನ್ ಬಿಸಿಯಾಗಿ ಅಥವಾ ಇತರ ಕಾರಣದಿಂದ ಆಗಾಗ್ಗೆ ದಾರಿ ಮಧ್ಯೆ ಕೆಟ್ಟು ನಿಲ್ಲುತ್ತಿವೆ. ಒಂದೋ ಸುಬ್ರಹ್ಮಣ್ಯಕ್ಕೆ ತಡವಾಗಿ ತಲುಪುತ್ತದೆ, ಇಲ್ಲವೇ ಭಟ್ಕಳ, ಉಡುಪಿ ಅಥವಾ ಮಂಗಳೂರಿನಲ್ಲಿ ಸಂಚಾರ ಮೊಟಕು ಗೊಳಿಸುತ್ತದೆ. ನಿಗದಿತ ಸಮಯಕ್ಕೆ ಸುಬ್ರಹ್ಮಣ್ಯಕ್ಕೆ ತಲುಪಿದರೆ ಪ್ರಯಾಣಿಕರ ಪುಣ್ಯ ಎಂಬಂತಾಗಿದೆ.

ಪ್ರಯಾಣಿಕರಿಗೆ ಹಿಂಸೆ

ಈ ಬಸ್ ಆಗಾಗ್ಗೆ ದಾರಿಮಧ್ಯೆ ಕೆಟ್ಟು ನಿಲ್ಲುವುದರಿಂದ ಪ್ರಯಾಣಿಕರು ಹಿಂಸೆ ಅನುಭವಿಸುತ್ತಿದ್ದಾರೆ. ಸುಬ್ರಹ್ಮಣ್ಯಕ್ಕೆ ಕುಟುಂಬಿಕರ ಜತೆ ಆಗಮಿಸುವ ಅಥವಾ ಅಲ್ಲಿಂದ ವಾಪಸ್ ತೆರಳುವ ಪ್ರಯಾಣಿಕರು ಬಸ್ ಕೆಟ್ಟು ನಿಂತಾಗ ಇನ್ನೊಂದು ಬಸ್‌ಗೆ ಕಾದು ತಮ್ಮ ಲಗೇಜುಗಳ ಜತೆ ಬಸ್ ಬದಲಾವಣೆ ಮಾಡುವ ಕಿರಿಕಿರಿ ಪ್ರಯಾಣಿಕರನ್ನು ಹೈರಾಣಾಗಿಸುತ್ತಿದೆ. ರಾತ್ರಿ ವೇಳೆಯಂತೂ ವೃದ್ಧರು, ಮಹಿಳೆಯರು ಸಮಸ್ಯೆ ಅನುಭವಿಸುತ್ತಿದ್ದಾರೆ. ಕಚೇರಿ ಕೆಲಸ, ಇತರ ಬಸ್, ರೈಲಿನ ಸಮಯಕ್ಕೆ ಹೊಂದಾಣಿಕೆ ಮಾಡಿ ಈ ಬಸ್‌ನಲ್ಲಿ ಸಂಚರಿಸಿದರೆ ನಿಗದಿತ ಸಮಯಕ್ಕೆ ಗಮ್ಯಸ್ಥಾನಕ್ಕೆ ತಲುಪದೇ ಪೇಚಾಟ ಅನುಭವಿಸಬೇಕಿದೆ.

ಸುಸ್ಥಿತಿಯಲ್ಲಿರುವ ಬಸ್ ನೀಡಿ

ಸುಬ್ರಹ್ಮಣ್ಯಕ್ಕೆ ತೆರಳುವ ಭಕ್ತರು, ಕಚೇರಿ ಉದ್ಯೋಗಿಗಳು, ವಿದ್ಯಾರ್ಥಿಗಳು, ನಿತ್ಯ ಪ್ರಯಾಣಿಕರು ಮಂಗಳೂರಿನಿಂದ ಸಂಜೆ 5.30ಕ್ಕೆ ಸುಬ್ರಹ್ಮಣ್ಯಕ್ಕೆ ಹೊರಡುವ ಈ ಬಸ್‌ನ್ನು ಅವಲಂಬಿಸಿದ್ದಾರೆ. ಈ ಬಸ್ ಪದೇ ಪದೇ ದಾರಿ ಮಧ್ಯೆ ಕೆಟ್ಟು ನಿಲ್ಲುವುದರಿಂದ, ತಡವಾಗಿ ಆಗಮಿಸುವುದರಿಂದ ಪ್ರಯಾಣಿಕರು ತೀವ್ರ ಸಮಸ್ಯೆ ಅನುಭವಿಸುತ್ತಿದ್ದಾರೆ.

ಮಂಗಳೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಸುಬ್ರಹ್ಮಣ್ಯಕ್ಕೆ 4.30ರ ಕೆಎಸ್‌ಆರ್‌ಟಿಸಿ ಬಸ್ ತೆರಳಿದ ಬಳಿಕ ಸಂಜೆ 5.30ಕ್ಕೆ ಕಾರವಾರ- ಸುಬ್ರಹ್ಮಣ್ಯ ಬಸ್ ಮಾತ್ರ ಇರುವುದು. ಈ ಬಸ್ ಬಾರದಿದ್ದರೆ ಸುಬ್ರಹ್ಮಣ್ಯಕ್ಕೆ ತೆರಳುವ ಪ್ರಯಾಣಿಕರು ಸಂಜೆ 6.30ರ ಬಸ್‌ಗೆ ಕಾಯಬೇಕು.

ಸಂಜೆ ವೇಳೆ ಮಂಗಳೂರಿನಿಂದ ಸುಬ್ರಹ್ಮಣ್ಯಕ್ಕೆ ಗಂಟೆಗೊಂದು ಬಸ್ ಇರುವ ಕಾರಣ ಕಾರವಾರ- ಸುಬ್ರಹ್ಮಣ್ಯ ಬಸ್ ನಿಗದಿತ ಸಮಯಕ್ಕೆ ಬಾರದಿದ್ದರೆ ಪ್ರಯಾಣಿಕರು ಮತ್ತೆ ಒಂದು ಗಂಟೆ ಕಾಯುವ ಸ್ಥಿತಿ. ಸುಬ್ರಹ್ಮಣ್ಯದಿಂದ ಬೆಳಗ್ಗೆ 8.15ಕ್ಕೆ ಹೊರಡುವ ಈ ಬಸ್‌ನ್ನು ಕಡಬ, ಉಪ್ಪಿನಂಗಡಿಗೆ ತೆರಳುವ ವಿದ್ಯಾರ್ಥಿಗಳು, ಕಚೇರಿ ಉದ್ಯೋಗಿಗಳು, ಮಂಗಳೂರು ಕಡೆಗೆ ತೆರಳುವ ಭಕ್ತರು ಅವಲಂಬಿಸಿದ್ದಾರೆ. ಈ ಬಸ್ ಸಂಚಾರ ವ್ಯತ್ಯಯದಿಂದ ಎಲ್ಲರೂ ಪ್ರಸ್ತುತ ತೊಂದರೆ ಅನುಭವಿಸುತ್ತಿದ್ದಾರೆ. ಕಾರವಾರ- ಸುಬ್ರಹ್ಮಣ್ಯ ರೂಟ್‌ಗೆ ಹೊಸ ಬಸ್ ಅಥವಾ ಸುಸ್ಥಿತಿಯಲ್ಲಿ ಇರುವ ಬಸ್ ಒದಗಿಸಬೇಕು ಎಂಬುದು ನಿತ್ಯ ಪ್ರಯಾಣಿಕರ ಆಗ್ರಹ.

ದಿಗಂತ ವಿಶೇಷ

ಗ್ಯಾರಂಟಿ ಲಾಭವಿಲ್ಲ

ಪದೇ ಪದೇ ಈ ಬಸ್ ಕೈಕೊಡುವ ಕಾರಣ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯಿಂದ ವಂಚಿತರಾಗುತ್ತಿದ್ದಾರೆ. ಸಂಜೆ ವೇಳೆ ಕಾರವಾರ -ಸುಬ್ರಹ್ಮಣ್ಯ ಬಸ್ ಬಾರದಿರುವ ಕಾರಣ ಮಂಗಳೂರಿ ನಿಂದ ಉಪ್ಪಿನಂಗಡಿಗೆ ನಾವು ಖಾಸಗಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದೇವೆ ಎಂದು ಮಹಿಳಾ ನಿತ್ಯ ಪ್ರಯಾಣಿಕರು ದೂರಿದ್ದಾರೆ.

ಪದೇ ಪದೇ ಕೆಟ್ಟು ನಿಲ್ಲುವ ಬಸ್

ಕಾರವಾರ- ಸುಬ್ರಹ್ಮಣ್ಯ ಬಸ್ ನಿಗದಿತ ಸಮಯಕ್ಕೆ ಕಾರ್ಯಾಚರಿಸುತ್ತಿಲ್ಲ ಅಥವಾ ಪದೇ ಪದೇ ದಾರಿಮಧ್ಯೆ ಕೆಟ್ಟು ನಿಲ್ಲುತ್ತಿದೆ ಎಂಬ ವ್ಯಾಪಕ ದೂರುಗಳಿವೆ. ಏಪ್ರಿಲ್ 1, 3, 11, 12, 13, 29, ಮೇ 1, 4, 7, 10, 12ಕ್ಕೆ ನಿಗದಿತ ಸಮಯಕ್ಕೆ ಮಂಗಳೂರಿಗೆ ಬಂದಿಲ್ಲ ಅಥವಾ ದಾರಿಮಧ್ಯೆ ಕೆಟ್ಟು ನಿಂತಿದೆ. ಎರಡೂ ಬಸ್‌ಗಳಲ್ಲಿ ರೇಡಿಯೇಟರ್ ಬಿಸಿಯಾಗುವ ಸಮಸ್ಯೆಯಿದೆ. ಏ.13ರಂದು ಉಪ್ಪಿನಂಗಡಿ ಸಮೀಪದ ಕುಂತೂರಿನಲ್ಲಿ, ಮೇ 27ರಂದು ಉಪ್ಪಿನಂಗಡಿಯ ಕೊಯಿಲ ಬಳಿ ಈ ಬಸ್ ಕೆಟ್ಟು ನಿಂತಿತ್ತು. ಇದರಿಂದಾಗಿ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

> ಕಾರವಾರ- ಸುಬ್ರಹ್ಮಣ್ಯ ನಡುವೆ ಸಂಚರಿಸುವ ಅಂಕೋಲ ಡಿಪೋದ ಬಸ್‌ಗಳು ಹಳೆಯದಾಗಿವೆ. ಇದರಿಂದಾಗಿ ಕೆಲವೊಮ್ಮೆ ಸಂಚಾರ ವ್ಯತ್ಯಯ ಉಂಟಾಗುತ್ತಿದೆ. ಜೂನ್‌ನಲ್ಲಿ ಹೊಸ ಬಸ್‌ಗಳು ಬರಲಿದ್ದು, ಈ ರೂಟ್‌ಗೆ ಹೊಸ ಬಸ್ ಒದಗಿಸಲಾಗುವುದು.
> ■ ಮಂಜುನಾಥ ನಾಯ್ಕ್, ಅಂಕೋಲ ಡಿಪೋ ಮ್ಯಾನೇಜರ್



> ನಾನು ಉದ್ಯೋಗ ನಿಮಿತ್ತ ಕಡಬದಿಂದ ಮಂಗಳೂರಿಗೆ ಪ್ರತಿದಿನ ಸರಕಾರಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದೇನೆ. ಸಂಜೆ ಮಂಗಳೂರಿನಿಂದ ಕಡಬಕ್ಕೆ ತೆರಳಲು ಕಾರವಾರ- ಸುಬ್ರಹ್ಮಣ್ಯ ಬಸ್ ಅವಲಂಬಿಸಿದ್ದು, ಈ ಬಸ್ ಇತ್ತೀಚಿನ ದಿನಗಳಲ್ಲಿ ಸರಿಯಾದ ಸಮಯಕ್ಕೆ ಮಂಗಳೂರಿನಿಂದ ಹೊರಡುತ್ತಿಲ್ಲ ಅಥವಾ ದಾರಿ ನಡುವೆ ಕೆಟ್ಟು ನಿಲ್ಲುತ್ತಿದೆ. ಈ ಬಗ್ಗೆ ಅಂಕೋಲ ಡಿಪೋಗೆ ಕರೆ ಮಾಡಿ ದೂರು ನೀಡಿದರೂ ಸ್ಪಂದನೆಯಿಲ್ಲ. ದಿನಕ್ಕೆ 450 ಕಿ.ಮೀ. ದೂರ ಸಂಚರಿಸಬೇಕಿರುವ ಈ ರೂಟ್‌ಗೆ ಸುಸ್ಥಿತಿಯಲ್ಲಿರುವ ಬಸ್ ಒದಗಿಸಿ ಪ್ರಯಾಣಿಕರ ಸಮಸ್ಯೆ ಬಗೆಹರಿಸಬೇಕು.
> ■ ಸಂತೋಷ್ ಕೆ.ಎಚ್.ಕಡಬ, ನಿತ್ಯ ಪ್ರಯಾಣಿಕ.

ಶಾರದಾ ಶಿಕ್ಷಣ ಸಂಸ್ಥೆಗಳ ವತಿಯಿಂದ ವಿವಿಧ ಕಾರ್ಯಕ್ರಮ

ಅಕ್ಷರಾಭ್ಯಾಸ, ಪೋಷಕರಿಗೆ ಮಾಹಿತಿ



ಮಂಗಳೂರು: ಶಾರದಾ ಶಿಕ್ಷಣ ಸಂಸ್ಥೆಗಳ ವತಿಯಿಂದ ಗಣಹೋಮ, ಅಕ್ಷರಾಭ್ಯಾಸ ಹಾಗೂ ಮಕ್ಕಳ ಪೋಷಕರಿಗೆ ಮಾಹಿತಿ ಕಾರ್ಯಕ್ರಮ ನಡೆಯಿತು. ಅಧ್ಯಕ್ಷತೆಯನ್ನು ಶಾರದಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್ ವಹಿಸಿದ್ದರು.

ಶಾರದಾ ಶಿಕ್ಷಣ ಸಂಸ್ಥೆಗಳ ಕಾರ್ಯ ದರ್ಶಿ ಪ್ರದೀಪ ಕುಮಾರ ಕಲ್ಕೂರ ಅವರು ಅಕ್ಷರಾಭ್ಯಾಸದ ಮಹತ್ವವನ್ನು ವಿವರಿಸಿ, ಮಕ್ಕಳಲ್ಲಿ ಭಾರತೀಯ ಪರಂಪರೆ, ಸಂಸ್ಕಾರ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಪೋಷಕರ ಜವಾಬ್ದಾರಿಯ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಸಮೀರ್‌ಪುರಾಣಿಕ್, ಟ್ರಸ್ಟಿ ಸುಧಾಕರ ರಾವ್ ಪೇಜಾವರ, ಪ್ರಾಂಶುಪಾಲರು ಹಾಗೂ ಉಪಪ್ರಾಂಶುಪಾಲರು ಉಪಸ್ಥಿತರಿದ್ದರು.

ಶಾರದಾ ವಿದ್ಯಾಲಯದ ಪ್ರಾಂಶುಪಾಲರಾದ ಚಂದ್ರಿಕಾ ಎಸ್. ಭಂಡಾರಿ ಸ್ವಾಗತಿಸಿದರು. ಶಾರದಾ ಪಿಯು ಕಾಲೇಜಿನ ಉಪನ್ಯಾಸಕ ರಮೇಶ್ ಆಚಾರ್ಯ ಅವರು ಗಣಹೋಮ ಹಾಗೂ ಅಕ್ಷರಾಭ್ಯಾಸದ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು.

ರಜನಿ ಮಲ್ಯಾ ಅವರು ಪ್ರಾರ್ಥನೆ ನೆರವೇರಿಸಿದ್ದು, ಅಂಜನಾ ಕಾರ್ಯಕ್ರಮ ನಿರೂಪಿಸಿದರು.

ಶಾರದಾವಿದ್ಯಾಲಯದ ಆಡಳಿತಾತ್ಮಕ ಪ್ರಾಂಶುಪಾಲ ದಯಾನಂದ ಕಟೀಲ್ ಅವರು ವಂದನಾರ್ಪಣೆ ಸಲ್ಲಿಸಿದರು.

> ಮಕ್ಕಳಲ್ಲಿ ಭಾರತೀಯ ಸಂಸ್ಕೃತಿ, ಮೌಲ್ಯಗಳು ಹಾಗೂ ಜೀವನಶೈಲಿಯನ್ನು ಬೆಳೆಸುವಲ್ಲಿ ಪೋಷಕರ ಪಾತ್ರ ಮತ್ತು ಕೊಡುಗೆ ಅತ್ಯಂತ ಮಹತ್ವದ್ದಾಗಿದೆ
> ■ ಡಾ. ಎಂ.ಬಿ. ಪುರಾಣಿಕ್

ಉಪ್ಪುಂದದಲ್ಲಿ ವಿವಿಧೋದ್ದೇಶ ಮೀನುಗಾರಿಕಾ ಕೇಂದ್ರ ನಿರ್ಮಾಣ

ಸಂಸದ ರಾಘವೇಂದ್ರ ಭೂಮಿಪೂಜೆ



ಬೈಂದೂರು: ಕರಾವಳಿ ಮೀನುಗಾರರು ಪರಿಶ್ರಮದ ಜತೆಗೆ ತಮ್ಮ ಶ್ರದ್ಧೆ, ಭಕ್ತಿಯನ್ನು ಮುಂದುವರಿಸಿಕೊಂಡು ಬರುವ ಮೂಲಕ ಹಿಂದುತ್ವಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ, ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ ಮೀನುಗಾರರ ಆಶಯಗಳನ್ನು ಈಡೇರಿಸಲು ಉಪ್ಪುಂದದಲ್ಲಿ ವಿವಿಧೋದ್ದೇಶ ಮೀನುಗಾರಿಕಾ ಕೇಂದ್ರ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ ಎಂದು ಸಂಸದ ಬಿ. ವೈ. ರಾಘವೇಂದ್ರ ಹೇಳಿದರು.

ಉಪ್ಪುಂದ ಗ್ರಾಮದ ಅರಮಕೋಡಿ ಶ್ರೀ ಈಶ್ವರ ದೇವಸ್ಥಾನದ ಪರಿಸರದಲ್ಲಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒಟ್ಟು ರೂ. ಎರಡು ಕೋಟಿ ಅನುದಾನ ಮಂಜೂರಾಗಿದ್ದು, ಶುಕ್ರವಾರ ಕಾಮಗಾರಿಗಳ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಮುಂಬರುವ ದಿನಗಳಲ್ಲಿ ಈ ಭಾಗದ ಮೂಲಸೌಕರ್ಯ ಹಾಗೂ ಧಾರ್ಮಿಕ ಪ್ರವಾಸೋದ್ಯಮ ಕ್ಷೇತ್ರ ಮತ್ತಷ್ಟು ಬಲಗೊಳ್ಳಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಯೋಜನೆಗಳನ್ನು ತಳಮಟ್ಟದ ಜನರಿಗೂ ತಲುಪಿಸಿ, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಾವು ಸದಾ ಬದ್ಧರಾಗಿದ್ದೇವೆ.

ಶಾಸಕ ಗುರುರಾಜ್ ಗಂಟಿಹೊಳೆ ಅಧ್ಯಕ್ಷತೆ ವಹಿಸಿದ್ದರು. ರಾಣಿಬಲೆ ಮೀನುಗಾರರ ಸಂಘದ ಅಧ್ಯಕ್ಷ ಕುಮಾರ್ ಖಾರ್ವಿ, ನಾಡದೋಣಿ ಮೀನುಗಾರರ ಸಂಘದ ಅಧ್ಯಕ್ಷ ನಾಗೇಶ ಖಾರ್ವಿ, ನವೀನಚಂದ್ರ ಉಪ್ಪುಂದ, ಅರಮಕೋಡಿ ಈಶ್ವರ ದೇವಸ್ಥಾನದ ಅಧ್ಯಕ್ಷ ಸುರೇಶ ಖಾರ್ವಿ, ಈಶ್ವರ ಸೇವಾ ಸಮಿತಿ ಅಧ್ಯಕ್ಷ ರಾಮ ಖಾರ್ವಿ, ಬೈಂದೂರು ಬಿಜೆಪಿ ಮಂಡಲದ ಅಧ್ಯಕ್ಷೆ ಅನಿತಾ ಮರವಂತೆ, ಬಿ. ಎಸ್. ಸುರೇಶ ಶೆಟ್ಟಿ ಉಪ್ಪುಂದ, ಸುರೇಶ ಬಟವಾಡಿ, ಪ್ರಿಯದರ್ಶಿನಿ ದೇವಾಡಿಗ, ರಮೇಶ ಪೂಜಾರಿ, ಶರತಕುಮಾರ್ ಶೆಟ್ಟಿ, ಬಿಎಚ್‌ಪಿ ನಾಗರಾಜ ಮತ್ತಿತರರು ಇದ್ದರು. ಜಗನ್ನಾಥ ಖಾರ್ವಿ ಸ್ವಾಗತಿಸಿ, ಆನಂದ ಖಾರ್ವಿ ನಿರೂಪಿಸಿದರು. ಮುರುಳೀಧರ ವಂದಿಸಿದರು.

ಪ್ರೋತ್ಸಾಹ ಧನ ವಿಳಂಬ, ಸೇವಾ ಭದ್ರತೆ ಕೊರತೆ ವಿರುದ್ಧ ಮನವಿಗೆ ನಿರ್ಧಾರ

ಸಮಸ್ತ ಆ್ಯಪ್ ಒತ್ತಡಕ್ಕೆ ಬೇಸತ್ತ ಆಶಾ ಕಾರ್ಯಕರ್ತೆಯರು

ಮಂಗಳೂರು: ಗ್ರಾಮೀಣ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿರುವ ಆಶಾ ಕಾರ್ಯಕರ್ತೆಯರು 'ಸಮಸ್ತ' ಆ್ಯಪ್‌ನ ಹೆಚ್ಚುವರಿ ಡಿಜಿಟಲ್ ಕೆಲಸದ ಒತ್ತಡ, ಪ್ರೋತ್ಸಾಹ ಧನ ವಿಳಂಬ ಹಾಗೂ ಸೇವಾ ಭದ್ರತೆ ಕೊರತೆಯ ವಿರುದ್ಧ ಹೋರಾಟದ ಹಾದಿ ಹಿಡಿದಿದ್ದಾರೆ.

ಬಂಟ್ವಾಳ ತಾಲೂಕು ಆಶಾ ಕಾರ್ಯಕರ್ತೆಯರ ತಾಲೂಕು ಸಮಿತಿ (ಬಿಎಂಎಸ್ ಸಂಯೋಜಿತ ಸಂಘ) ನೇತೃತ್ವದಲ್ಲಿ ಶನಿವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ಮನವಿ ಸಲ್ಲಿಸಲಾಗುತ್ತಿದೆ.

ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ತಾಯಿ-ಮಗು ಆರೋಗ್ಯ, ಲಸಿಕೆ ಕಾರ್ಯಕ್ರಮ, ಆರೋಗ್ಯ ಜಾಗೃತಿ ಹಾಗೂ ವಿವಿಧ ಆರೋಗ್ಯ ಸೇವೆಗಳನ್ನು ನಿರ್ವಹಿಸುತ್ತಿದ್ದರೂ, ಇತ್ತೀಚೆಗೆ 'ಸಮಸ್ತ' ಆ್ಯಪ್ ಮೂಲಕ ನೀಡಲಾಗುತ್ತಿರುವ ಹೆಚ್ಚುವರಿ ಡಿಜಿಟಲ್ ಕೆಲಸದಿಂದ ತೀವ್ರ ಮಾನಸಿಕ ಮತ್ತು ದೈಹಿಕ ಒತ್ತಡಕ್ಕೆ ಒಳಗಾಗಿದ್ದಾರೆ ಎಂದು ಸಂಘಟನೆ ಆರೋಪಿಸಿದೆ.

ಒಂದು ಮನೆಯ ಮಾಹಿತಿಯನ್ನು ದಾಖಲಿಸಲು ಒಂದು ಗಂಟೆಯಿಂದ ಒಂದೂವರೆ ಗಂಟೆಯವರೆಗೆ ಸಮಯ ಬೇಕಾಗುತ್ತಿದ್ದು, ನೆಟ್‌ವರ್ಕ್ ಹಾಗೂ ತಾಂತ್ರಿಕ ಸಮಸ್ಯೆಗಳು ಕೆಲಸವನ್ನು ಇನ್ನಷ್ಟು ಕಷ್ಟಕರವಾಗಿಸುತ್ತಿವೆ ಎಂದು ಆಶಾ ಕಾರ್ಯಕರ್ತೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಇದರ ಜೊತೆಗೆ ಹಲವು ತಿಂಗಳುಗಳಿಂದ ಪ್ರೋತ್ಸಾಹ ಧನ ವಿಳಂಬವಾಗುತ್ತಿರುವುದು ಹಾಗೂ ಕಳೆದ ನಾಲ್ಕು ವರ್ಷಗಳಿಂದ ಪ್ರೋತ್ಸಾಹ ಧನ ಹೆಚ್ಚಳವಾಗದಿರುವುದು ಕುಟುಂಬ ಜೀವನದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ಅವರು ತಿಳಿಸಿದ್ದಾರೆ.

'ಸಮಸ್ತ' ಆ್ಯಪ್ ರದ್ದುಪಡಿಸಬೇಕು, ಪ್ರೋತ್ಸಾಹ ಧನವನ್ನು ನಿಗದಿತ ದಿನಾಂಕಕ್ಕೆ ಬಿಡುಗಡೆಗೊಳಿಸಬೇಕು, ಪ್ರೋತ್ಸಾಹ ಧನವನ್ನು ತಕ್ಷಣ ಪರಿಷ್ಕರಿಸಬೇಕು ಹಾಗೂ ಆಶಾ ಕಾರ್ಯಕರ್ತೆಯರ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ರಾಜ್ಯ ಮಟ್ಟದ ಸಮಿತಿ ರಚಿಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನು ಸಂಘಟನೆ ಮುಂದಿಟ್ಟಿದೆ.

ಶನಿವಾರ ಬೆಳಗ್ಗೆ 10 ಗಂಟೆಗೆ ಮಂಗಳೂರಿನ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಲ್ಲಿ ಮನವಿ ಸಲ್ಲಿಕೆ ನಡೆಯಲಿದ್ದು, ಜಿಲ್ಲೆಯ ವಿವಿಧ ಭಾಗಗಳಿಂದ ಆಶಾ ಕಾರ್ಯಕರ್ತೆಯರು ಭಾಗವಹಿಸಲಿದ್ದಾರೆ.

ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್‌ಶಿಪ್‌ಗೆ ಚಾಲನೆ

ಕರಾವಳಿ ಪ್ರವಾಸೋದ್ಯಮಕ್ಕೆ ಉತ್ತೇಜನ



ಮಂಗಳೂರು: ಮಂಗಳೂರಿನ ತಣ್ಣೀರುಬಾವಿಯ ಬ್ಲೂ ಬೇ ಇಕೋ ಬೀಚ್‌ನಲ್ಲಿ ಮೇ 31ರವರೆಗೆ ಆಯೋಜನೆಯಾಗಿರುವ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್‌ಶಿಪ್‌ಗೆ ಶುಕ್ರವಾರ ಅದ್ದೂರಿ ಚಾಲನೆ ದೊರಕಿದೆ.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಮೂರು ದಿನಗಳ ಈ ಚಾಂಪಿಯನ್‌ಶಿಪ್‌ಗೆ ಚಾಲನೆ ನೀಡಿ ಮಾತನಾಡಿ, ಮಂಗಳೂರಿನಲ್ಲಿ ಇಂತಹದ್ದೊಂದು ಮಹತ್ವದ ಸ್ಪರ್ಧೆ ಆಯೋಜನೆಯಾಗಿರುವುದರಿಂದ ಈ ಭಾಗದ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದಂತಾಗಿದೆ. ದೇಶದ ವಿವಿಧ ಭಾಗಗಳಿಂದ ಸ್ಪರ್ಧಿಗಳು ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಸ್ಪರ್ಧಿಗಳು ಭಾಗವಹಿಸುತ್ತಿದ್ದಾರೆ. ದೇಶದಲ್ಲಿ ಸರ್ಫಿಂಗ್ ಹಾಗೂ ಸ್ಟ್ಯಾಂಡ್-ಅಪ್ ಪ್ಯಾಡ್ಲಿಂಗ್ ಕ್ರೀಡೆಗಳ ಆಡಳಿತ ಸಂಸ್ಥೆಯಾದ ಸರ್ಫಿಂಗ್ ಫೆಡರೇಶನ್ ಆಫ್ ಇಂಡಿಯಾ ಆಶ್ರಯದಲ್ಲಿ ನಡೆಯುವ ಈ ಸ್ಪರ್ಧೆಯನ್ನು ನವ ಮಂಗಳೂರು ಬಂದರು ಪ್ರಾಧಿಕಾರ ಸತತ ಮೂರನೇ ವರ್ಷವೂ 'ಎನ್ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್', ಶೀರ್ಷಿಕೆ ಪ್ರಾಯೋಜಕರಾಗಿ ಬೆಂಬಲಿಸುತ್ತಿದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್ ಸಹ ಕಾರ್ಯಕ್ರಮಕ್ಕೆ ಕೈಜೋಡಿಸಿವೆ.

ಅಕ್ರಮ ಗೋವಧಾ ಕೇಂದ್ರಕ್ಕೆ ಬಂಟ್ವಾಳ ನಗರ ಠಾಣಾ ಪೊಲೀಸರ ದಾಳಿ

ಇಬ್ಬರ ಬಂಧನ; ಮತ್ತಿಬ್ಬರು ಪರಾರಿ





ಬಂಟ್ವಾಳ: ತಾಲೂಕಿನ ಸಜಿಪಮೂಡ ಗ್ರಾಮದ ಪಂಜಾಜೆ-ಕೊಳಕೆ ಎಂಬಲ್ಲಿ ಮನೆಯೊಂದರ ಹಿಂಭಾಗದ ದನದ ಕೊಟ್ಟಿಗೆಯಲ್ಲಿ ನಡೆಯುತ್ತಿದ್ದ ಅಕ್ರಮ ಗೋವಧಾ ಕೇಂದ್ರಕ್ಕೆ ಬಂಟ್ವಾಳ ನಗರ ಠಾಣಾ ಪೊಲೀಸರು ದಾಳಿ ನಡೆಸಿದ್ದಾರೆ.

ಈ ಸಂಬಂಧ ಸ್ಥಳದಲ್ಲಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಇನ್ನಿಬ್ಬರು ಪರಾರಿಯಾಗಿದ್ದಾರೆ.

ಬಂಧಿತ ಆರೋಪಿಗಳನ್ನು ಮುಸ್ತಾಫಾ (33) ಹಾಗೂ ಮಹಮ್ಮದ್ ಸಾದೀಕ್ (30) ಎಂದು ಹೆಸರಿಸಲಾಗಿದೆ. ಖಚಿತ ವರ್ತಮಾನದ ಮೇರೆಗೆ ಬುಧವಾರ ಸಂಜೆ ಬಂಟ್ವಾಳ ನಗರ ಪೊಲೀಸರು ಈ ದಾಳಿ ಕಾರ್ಯಾಚರಣೆ ನಡೆಸಿದ್ದು, ಈ ಸಂದರ್ಭ ಆರೋಪಿಗಳಾದ ಜಾಫರ್ ಹಾಗೂ ಅಸ್ಫಾಕ್ ಎಂಬವರಿಬ್ಬರು ಪರಾರಿಯಾಗಿದ್ದಾರೆ.

ಜಾನುವಾರು ವಧೆ ಮಾಡಿ ಮಾಂಸ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳ ಸಹಿತ ಜಾನುವಾರು, ವಾಹನ ಸೇರಿದಂತೆ ಸೊತ್ತುಗಳನ್ನು ವಶಕ್ಕೆ ಪಡೆದುಕೊಂಡ ಘಟನೆ ಮೇ 27ರಂದು ನಡೆದಿದೆ.

ಇಲ್ಲಿ ದನದ ಕೊಟ್ಟಿಗೆಯನ್ನೇ ಅಕ್ರಮ ಗೋ ವಧಾ ಕೇಂದ್ರವನ್ನಾಗಿಸಿ ದಂಧೆ ನಡೆಸಲಾಗುತ್ತಿತ್ತೆನ್ನಲಾಗಿದೆ.

ಈ ಸಂದರ್ಭ ಸ್ಥಳದಲ್ಲಿದ್ದ ಐದು ಜಾನುವಾರುಗಳು, ಒಂದು ಕರು, ಸುಮಾರು 31 ಕೆ.ಜಿ.ಯಷ್ಟು ದನದ ಮಾಂಸದ ಪ್ಯಾಕೆಟ್ , ಸುಮಾರು 40 ಕೆ.ಜಿ ಗೋಮಾಂಸ, ಸಾಗಾಟಕ್ಕೆ ಬಳಸಲಾಗುತ್ತಿದ್ದ ಮಾರುತಿ ಸುಜುಕಿ ಇಕೋ ಕಾರು, ಉಪಕರಣಗಳು ಸೇರಿದಂತೆ ವಿವಿಧ ಸೊತ್ತುಗಳನ್ನು ಪೊಲೀಸರ ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಐತಿಹಾಸಿಕ ಸ್ಮಾರಕದ ಪುನಶ್ಚೇತನಕ್ಕೆ ಸಂಬಂಧಪಟ್ಟವರು ಗಮನ ಹರಿಸಲಿ

ಪಾಳು ಬಿದ್ದಿರುವ ಗಂಗೊಳ್ಳಿ 'ಲೈಟ್‌ಹೌಸ್'



ಕುಂದಾಪುರ : ಬ್ರಿಟಿಷ್ ಕಾಲದ ಗಂಗೊಳ್ಳಿ ಗ್ರಾಮದ ಕೋಟೆಗುಡ್ಡೆ ಮಡಿ ಸಮುದ್ರತೀರದಲ್ಲಿರುವ ಲೈಟ್‌ಹೌಸ್ (ದೀಪಸ್ತಂಭ) ಪಾಳು ಬಿದ್ದಿದೆ. ಸುತ್ತಲೂ ಗಿಡಗಂಟಿ, ಪೊದೆಗಳು ಬೆಳೆದು ನಿಂತಿದೆ. ಕಸ ಕಡ್ಡಿ, ಮದ್ಯದ ಬಾಟಲಿಗಳು ತುಂಬಿಕೊಂಡು ಡಂಪಿಂಗ್ ಯಾರ್ಡ್ ಆಗಿ ಪರಿವರ್ತನಗೊಂಡಿದೆ.

ದಶಕಗಳ ಹಿಂದೆ ಮೀನುಗಾರರು, ನಾವಿಕರು, ಸಮುದ್ರಯಾನಿಗಳಿಗೆ ದಿಕ್ಸೂಚಿಯಾಗಿದ್ದ ವ್ಯವಸ್ಥೆ ಇಂದು ಪ್ರಸ್ತುತ ನಿಸ್ತೇಜವಾಗಿದೆ. ಆಕರ್ಷಕ ಕಟ್ಟಡ ಕಳೆಗುಂದಿದೆ. ಕಟ್ಟಡದ ಬಾಗಿಲು, ಕಿಟಕಿಗಳು ದುರ್ಬಲಗೊಂಡಿದೆ. ಸ್ತಂಭದ ತುದಿಯಲ್ಲಿರುವ ಬ್ರಿಟಿಷ್ ಕಾಲಘಟ್ಟದ ದೀಪ ಬೆಳಗದೆ ದಶಕವೇ ಸಂದು ಹೋಗಿದೆ. ಗೋಲ್ ಗುಂಬಜ್ ಹೋಲುವ ದೀಪಸ್ತಂಭ ಕಟ್ಟಡ ಬ್ರಿಟಿಷರ ಕಾಲದ್ದು. ಕಟ್ಟಡ ಗಟ್ಟಿಮುಟ್ಟಾಗಿಯೇ ಇದ್ದರೂ ಆಕರ್ಷಣೆ ಕಳೆದುಕೊಂಡಿದೆ. ಸುಣ್ಣಬಣ್ಣ ಕಾಣದೆ ವರ್ಷಗಳೇ ಸಂದುಹೋಗಿದೆ. ದೀಪಸ್ತಂಭ ತುತ್ತತುದಿಗೆ ಏರುವ ಕಬ್ಬಿಣದ ಮೆಟ್ಟಿಲಿಗೆ ತುಕ್ಕು ಹಿಡಿದಿದ್ದು ತಳಭಾಗ ಬಿದ್ದು ಹೋಗಿದೆ. ಸೊತ್ತುಗಳಿಗೆ ಗೆದ್ದಲು ಹಿಡಿದಿದೆ. ದಶಕದಿಂದ ನನೆಗುದಿಗೆ ಬಿದ್ದಿರುವ ಲೈಟ್‌ಹೌಸ್‌ನ ಕಡೆಗೆ ಕಣ್ಣೆತ್ತಿಯೂ ನೋಡದ ಸಂಬಂಧಿತ ಇಲಾಖೆಯ ನಿರ್ಲಕ್ಷ್ಯದ ಬಗ್ಗೆ ಸ್ಥಳೀಯರು ಅಸಮಾಧಾನ ಹೊರಗೆಡಹಿದ್ದಾರೆ.


ತಮಿಳುನಾಡಿನ ಮಹಾಬಲಿಪುರ ಶಿವ ದೇವಸ್ಥಾನದ ಮೇಲೆ ಕಂಚಿಯ ಪಲ್ಲವ ಅರಸರಿಂದ ರಚಿಸಲ್ಪಟ್ಟ ಬೆಂಕಿ ಉರಿಸುವ ದೀಪಸ್ತಂಭ ಪ್ರಾಚೀನ ಲೈಟ್‌ಹೌಸ್ ಆಗಿದೆ. ಕಾಪು, ಪಣಂಬೂರು, ಬಾವುಟಗುಡ್ಡ, ಕುಂದಾಪುರದ ಕೋಡಿ ಲೈಟ್‌ಹೌಸ್ ಪ್ರಸಿದ್ಧಿ ಪಡೆದಿವೆ. ಈ ಸಾಲಿಗೆ ಗಂಗೊಳ್ಳಿ ಲೈಟ್‌ಹೌಸ್ ಸೇರುತ್ತದೆ. ಆದರೆ ನಿರ್ಲಕ್ಷ್ಯದಿಂದ ಐತಿಹಾಸಿಕ ಸ್ಮಾರಕ ಮೂಲೆಗುಂಪಾಗಿದೆ ಎನ್ನುತ್ತಾರೆ ಇತಿಹಾಸ ಸಂಶೋಧಕ ಪ್ರದೀಪ್ ಕುಮಾರ್ ಬಸ್ರೂರು.

ಗತವೈಭವ ಮರಳಲಿ

2006ರಿಂದ ಲೈಟ್‌ಹೌಸ್ ತನ್ನ ಕಟ್ಟಡ ಅಭದ್ರತೆಯಿಂದ ನಲುಗಿದೆ. ಲೈಟ್‌ಹೌಸ್‌ಗೆ ಸಂಬಂಧಿಸಿದಂತೆ 4.33 ಎಕರೆ ಜಾಗವಿದೆ. ಕಾರ್ಯ ಚಟುವಟಿಕೆ ನಿಲ್ಲಿಸಿದೆ. ಇದರ ಸೌಂದರ್ಯ ಮಸುಕಾಗಿದೆ. ಕೋಡಿಯಲ್ಲಿ ದೀಪಸ್ತಂಭ ರಚನೆ ಬಳಿಕ ಇದು ಮಹತ್ವ ಕಳೆದುಕೊಂಡಿದೆ. ಗತವೈಭವ ಮತ್ತೆ ಮರುಕಳಿಸುವ ಪ್ರಯತ್ನ ಸಂಬಂಧಿತ ಇಲಾಖೆಯಿಂದ ನಡೆಯಬೇಕು

■ ಚಂದ್ರ ಖಾರ್ವಿ, ಗಂಗೊಳ್ಳಿ

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ವೈಭವ್ (ಗುಜರಾತ್) 776 ರನ್

ರಬಾಡ (ಗುಜರಾತ್) 28 ವಿಕೆಟ್

ಕಿರುಸುದ್ದಿ


ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್: ವಿನೇಶ್‌ಗೆ ಸ್ಪರ್ಧಿಸಲು ಅನುಮತಿ

• **ಹೊಸದಿಲ್ಲಿ:** ಕುಸ್ತಿಪಟು ವಿನೇಶ್ ಫೋಗಾಟ್ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಈ ಮೂಲಕ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ವಿನೇಶ್ ಫೋಗಾಟ್ ಬಯಕೆಗೆ ಇಂಬು ದೊರೆತಂತಾಗಿದೆ. ಇದಕ್ಕೆ ಮುನ್ನ ದಿಲ್ಲಿ ಹೈಕೋರ್ಟ್ ವಿನೇಶ್‌ಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಿತ್ತು. ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಹೋಗಿದ್ದ ಭಾರತೀಯ ಕುಸ್ತಿ ಒಕ್ಕೂಟವು, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರಿತ್ತು. ಈ ಕುರಿತು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಲು ನಿರಾಕರಿಸಿತು. ಆದರೆ ಹೈಕೋರ್ಟ್ ತನ್ನ ತೀರ್ಪಿನ ವೇಳೆ ವ್ಯಕ್ತಪಡಿಸಿದ ಹಲವಾರು ಅಭಿಪ್ರಾಯಗಳಿಗೆ ಸುಪ್ರೀಂ ಅಸಮ್ಮತಿ ಸೂಚಿಸಿದೆ. ತಾನು ಈಗ ನೀಡಿರುವ ಆದೇಶವು ಹೈಕೋರ್ಟಿನ ಆದೇಶವನ್ನು ಪುರಸ್ಕರಿಸಿದಂತಲ್ಲ ಎಂದು ಅದು ಹೇಳಿದೆ.

ಮೇ.30ರಿಂದ ಆಯ್ಕೆ ಟ್ರಯಲ್ಸ್ ಶುರುವಾಗಲಿದೆ. ವಿನೇಶ್ ಫೋಗಾಟ್ ಕುಸ್ತಿ ಒಕ್ಕೂಟದ ನಿಯಮಗಳನ್ನು ಒಪ್ಪಿಕೊಳ್ಳದ ಕಾರಣ ಅವರನ್ನು ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಕುಸ್ತಿ ಒಕ್ಕೂಟವು ನಿರಾಕರಿಸಿತ್ತು. ಅದರ ವಿರುದ್ಧ ಫೋಗಾಟ್ ನ್ಯಾಯಾಲಯದ ಮೊರೆ ಹೋಗಿದ್ದರು. ವಿನೇಶ್ ಫೋಗಾಟ್ ಅವರು ಡೋಪಿಂಗ್ ಪರೀಕ್ಷೆಗೆ ಒಳಪಡಲು ನಿರಾಕರಿಸುವುದಕ್ಕೆ ಕುಸ್ತಿ ಒಕ್ಕೂಟವು ಪ್ರಧಾನವಾಗಿ ಆಕ್ಷೇಪ ವ್ಯಕ್ತಪಡಿಸುತ್ತಿದೆ. ನ್ಯಾಯಾಲಯ ಕೂಡ ಈ ವಿಚಾರದಲ್ಲಿ ಫೋಗಾಟ್‌ರ ವರ್ತನೆಗೆ ಅಸಮಾಧಾನ ಸೂಚಿಸಿತು.

100 ಮೀ. ಓಟ: ಭಾರತಕ್ಕೆ ಕಂಚು

• **ಹೊಸದಿಲ್ಲಿ:** ಭಾರತದ ನಿಹಮ್ 20ರ ಕೆಳಹರಯದ ಏಷ್ಯನ್ ಗೇಮ್ಸ್‌ನ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಭಾರತವು ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ 100 ಮೀಟರ್ ಮಹಿಳಾ ವಿಭಾಗದ ಸ್ಪರ್ಧೆಯಲ್ಲಿ ಪದಕವೊಂದನ್ನು ಗೆಲ್ಲುತ್ತಿರುವುದು 25 ವರ್ಷಗಳ ಬಳಿಕವಾಗಿದೆ. ನಿಹಮ್ 11.62 ಸೆಕೆಂಡುಗಳಲ್ಲಿ ಗುರಿ ತಲುಪಿ ಮೂರನೆಯ ಸ್ಥಾನ ಪಡೆದರು. ಕತಾರ್‌ನ ದಾನಾ ನೂರ್ ಚಿನ್ನ ಗಳಿಸಿದರೆ, ಚೀನಾದ ಕ್ಷಿನ್‌ಕ್ಸುವಾನ್ ಬೆಳ್ಳಿ ಪಡೆದರು. ಉತ್ತರ ಪ್ರದೇಶದವರಾದ ನಿಹಮ್ 100 ಮೀಟರ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.



ಫೀಫಾ ವಿಶ್ವಕಪ್: ಅರ್ಜೆಂಟೀನಾ ತಂಡ ಪ್ರಕಟ, ಮೆಸ್ಸಿ ನಾಯಕ

• **ಚೆನ್ನೈ:** 2026ರ ಫೀಫಾ ಫುಟ್ಬಾಲ್ ವಿಶ್ವಕಪ್‌ಗೆ 26 ಸದಸ್ಯರ ಅರ್ಜೆಂಟೀನಾ ತಂಡವನ್ನು ಕೋಚ್ ಲಿಯೋನೆಲ್ ಸ್ಕಲೋನಿ ಪ್ರಕಟಿಸಿದ್ದು, 38 ವರ್ಷದ ಲಿಯೋನೆಲ್ ಮೆಸ್ಸಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವನ್ನು ಮುನ್ನಡೆಸಲಿದ್ದಾರೆ. ಕಳೆದ ಬಾರಿ 2022ರ ಕತಾರ್ ವಿಶ್ವಕಪ್‌ನಲ್ಲಿ ತಮ್ಮ ನಾಯಕತ್ವದಲ್ಲಿ ಅರ್ಜೆಂಟೀನಾ ಗೆಲ್ಲಿಸಿ ಟ್ರೋಫಿಗೆ ಮುತ್ತಿಟ್ಟಿದ್ದರು. ಈ ಬಾರಿ ಬಹುಶಃ ಮೆಸ್ಸಿ ಕೊನೆಯ ವಿಶ್ವಕಪ್ ಆಗಿರುವ ಸಾಧ್ಯತೆಯಿದೆ. ಆದರೆ ಗಾಯದಿಂದ ಬಳಲುತ್ತಿದ್ದ ಮೆಸ್ಸಿ ವಿಶ್ವಕಪ್ ಆಡುತ್ತಾರೋ ಇಲ್ಲವೋ ಎಂಬ ಊಹಾಪೋಹಗಳಿದ್ದವು. ಎಲ್ಲದಕ್ಕೂ ಕೋಚ್ ಸ್ಕಲೋನಿ ತೆರೆ ಎಳೆದಿದ್ದಾರೆ. ಇಂಟರ್ ಮಯಾಮಿ ಕ್ಲಬ್ ಪರ ಮೇಜರ್ ಲೀಗ್ ಆಡುತ್ತಿದ್ದಾಗ ಮೆಸ್ಸಿ ಗಾಯಗೊಂಡಿದ್ದರು.

ಐಪಿಎಲ್‌ನಲ್ಲಿ ಸ್ಮಾರ್ಟ್‌ಗ್ಲಾಸ್ ಬಳಕೆ ನಿಷೇಧಿಸಿದ ಬಿಸಿಸಿಐ

• **ಹೊಸದಿಲ್ಲಿ:** ಐಪಿಎಲ್‌ನಲ್ಲಿ ಆಟಗಾರರು ಹಾಗೂ ಪಂದ್ಯಾಧಿಕಾರಿಗಳು ಸ್ಮಾರ್ಟ್ ಸನ್‌ಗ್ಲಾಸ್ ಬಳಸುವುದನ್ನು ಬಿಸಿಸಿಐ ಭ್ರಷ್ಟಾಚಾರ ವಿರೋಧಿ ಘಟಕ (ಎಸಿಎಸ್‌ಯು) ನಿಷೇಧಿಸಿದೆ. ಈ ಸಾಧನಗಳಲ್ಲಿ ಲೈವ್ ಸ್ಟ್ರೀಮಿಂಗ್, ವಿಡಿಯೋ ಕಾಲ್ ಹಾಗೂ ಸಂದೇಶ ವಿನಿಮಯದಂತಹ ಸುಧಾರಿತ ಸಂವಹನ ಸೌಲಭ್ಯಗಳಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಲೀಗ್ ಫ್ರಾಂಚೈಸಿಗಳಿಗೆ ನೀಡಿದ ಸಲಹಾ ಪತ್ರದಲ್ಲಿ, ಕೆಲವು ಕಂಪನಿಗಳು ಆಟಗಾರರು ಹಾಗೂ ಸಹಾಯಕ ಸಿಬ್ಬಂದಿಗೆ ಸ್ಮಾರ್ಟ್ ಸನ್‌ಗ್ಲಾಸ್‌ಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಸಾಧನಗಳಲ್ಲಿ ಲೈವ್ ಸ್ಟ್ರೀಮಿಂಗ್, ಸಂದೇಶ ಕಳುಹಿಸುವುದು ಮತ್ತು ಸ್ವೀಕರಿಸುವುದು, ಮೊಬೈಲ್ ಡೇಟಾ ಅಥವಾ ವೈ-ಫೈ ಮೂಲಕ ಆಡಿಯೋ ಹಾಗೂ ವಿಡಿಯೋ ಕರೆ ಮಾಡುವ ಸಾಮರ್ಥ್ಯಗಳಿವೆ. ಆದ್ದರಿಂದ, ಆಟಗಾರರು ಮತ್ತು ಪಂದ್ಯಾಧಿಕಾರಿಗಳು ಸ್ಮಾರ್ಟ್ ಗಾಗಲ್ಸ್ ಗಳನ್ನು ಹೊಂದಿರುವುದು ಅಥವಾ ಬಳಸುವುದು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ.

ಮಹಿಳಾ ಹಾಕಿ: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ 2-0 ಜಯ

• **ಪರ್ತ್:** ಮಹಿಳಾ ನೇಷನ್ಸ್ ಕಪ್ ಹಾಕಿ ಪಂದ್ಯಾವಳಿಗೆ ಮುನ್ನ ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತೀಯ ಮಹಿಳಾ ಹಾಕಿ ತಂಡವು ಆತಿಥೇಯರ ವಿರುದ್ಧ ಶುಕ್ರವಾರದ ಸ್ನೇಹ ಪಂದ್ಯದಲ್ಲಿ 2-0 ಗೋಲ್‌ಗಳಿಂದ ಗೆಲುವು ಸಾಧಿಸಿದೆ. ನಾಲ್ಕು ಪಂದ್ಯಗಳ ಹಾಕಿ ಸರಣಿಯಲ್ಲಿ ಭಾರತ ವನಿತೆಯರು 2-1 ಗೆಲುವಿನ ಮುನ್ನಡೆ ದಾಖಲಿಸಿದರು.

ಸಾಯಿ ಸುದರ್ಶನ್ 58 ರನ್, ನಾಯಕ ಶುಬ್ಮನ್ 104 ರನ್ । ವೈಭವ್ ಹೋರಾಟ ವ್ಯರ್ಥ

ನಾಳೆ ಆರ್‌ಸಿಬಿ-ಗುಜರಾತ್ ಫೈನಲ್!

• **ಚಂಡೀಗಢ:** ರಾಜಸ್ಥಾನ ನೀಡಿದ 215 ರನ್ ಸವಾಲನ್ನು ಸುಲಭದಲ್ಲಿ ಬೆನ್ನತ್ತಿದ ಶುಬ್ಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ ಐಪಿಎಲ್ 2026ರ ಫೈನಲ್ ಪ್ರವೇಶಿಸಿದೆ. ತಾವೇ ಫೈನಲಿಸ್ಟ್, ಐಪಿಎಲ್ ಟ್ರೋಫಿ ಗೆಲ್ಲೋದು ಎಂಬ ರೀತಿಯಲ್ಲಿ ಗುಜರಾತ್ ಫೈನಲ್‌ಗೆ ಗಜಗಾಂಭೀರ್ಯದಿಂದ ಫೈನಲ್‌ಗೆ ಲಗ್ಗೆ ಇಟ್ಟಿದ್ದು, ಮೇ 31ರಂದು ಭಾನುವಾರ ನಡೆಯುವ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವನ್ನು ಎದುರಿಸಲಿದೆ.

ಪವರ್‌ಪ್ಲೇ 6 ಓವರ್‌ಗಳಲ್ಲಿ ಗುಜರಾತ್ ವಿಕೆಟ್‌ನಷ್ಟವಿಲ್ಲದೆ ಭರ್ಜರಿ 69 ರನ್ ಸ್ಕೋರ್ ಮಾಡುವ ಮೂಲಕ ಪ್ರಾಬಲ್ಯ ಮೆರೆದಿತ್ತು. ಆತ್ಮವಿಶ್ವಾಸದಿಂದ ಬ್ಯಾಟ್ ಬೀಸಿದ ಗುಜರಾತ್ ನಾಯಕ ಶುಬ್ಮನ್ ಗಿಲ್ ಮತ್ತು ಸಾಯಿ ಸುದರ್ಶನ್ ರಾಜಸ್ಥಾನ ಡಗೌಟ್, ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದರು. ಸೂರ್ಯವಂಶಿ ಬ್ಯಾಟಿಂಗ್ ಮರೆಸುವಂತೆ ಬ್ಯಾಟೆತ್ತಿ ಎತ್ತಿ ಹೊಡೆದ ಇಬ್ಬರು ಆರಂಭಿಕರು ಮೊದಲ ವಿಕೆಟ್‌ಗೆ 12.5 ಓವರ್‌ಗಳಲ್ಲಿ 167 ರನ್ ಪೇರಿಸಿದರು. ದ್ವಿತೀಯ ಕ್ವಾಲಿಫೈಯರ್‌ನಲ್ಲಿ ಸೂರ್ಯವಂಶಿ ಸ್ಫೋಟಕ 96 ರನ್, ಜಡೇಜಾ ಅಜೇಯ 45 ರನ್ ಹಾಗೂ ಇನ್ನಿಂಗ್ಸ್ ಕೊನೆಯಲ್ಲಿ ಫೆರೇರಾ ನೀಡಿದ ಅದ್ಭುತ ಫಿನಿಶಿಂಗ್ ಟಚ್ ನೆರವಿನಿಂದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 214 ರನ್ ಕಲೆಹಾಕಿತು. ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ಬ್ಯಾಟಿಂಗ್ ಆಯ್ದುಕೊಂಡಿತು. ಮೊದಲ ಓವರ್‌ನಲ್ಲಿಯೇ ವೇಗಿ ಮೊಹಮ್ಮದ್ ಸಿರಾಜ್ ವಿಕೆಟ್ ಕಬಳಿಸಿದರು.

ಕಳೆದ ಪಂದ್ಯದಲ್ಲಿ 21 ಎಸೆತಗಳಲ್ಲಿ ಅರ್ಧ ಶತಕ ದಾಖಲಿಸಿದ್ದ ಧ್ರುವ್ ಜ್ಯುರೆಲ್(7) ಕಗಿಸೊ ರಬಾಡ ವೇಗದ ಬಲೆಗೆ ಸಿಲುಕಿದರು. ಒಟ್ಟಿನಲ್ಲಿ ಯಾವುದೇ ರಾಯಲ್ ಬ್ಯಾಟರ್ ಹೆಚ್ಚು ಹೊತ್ತು ನಿಂತಿಲ್ಲ.

ಸುದರ್ಶನ ಮತ್ತೊಮ್ಮೆ ಹಿಟ್ ವಿಕೆಟ್!: ಸ್ಫೋಟಕ ಆಟವಾಡಿದ ಸುದರ್ಶನ್ 58 ರನ್ ಗಳಿಸಿದ್ದಾಗ ಸತತ 2ನೇ ಬಾರಿಗೆ ಹಿಟ್ ವಿಕೆಟ್ ಆಗಿದ್ದಾರೆ. ಇದು ಐಪಿಎಲ್ ಇತಿಹಾಸದ 15ನೇ ಹಾಗೂ ಸುದರ್ಶನ್ ಅವರ 3ನೇ ಹಿಟ್‌ವಿಕೆಟ್.



- 46 ರನ್ ಗಳಿಸಿದ್ದಾಗ ಸುದರ್ಶನ್‌ರಿಂದ ವೈಭವ್‌ಗೆ ಜೀವದಾನ
- ಎಲಿಮಿನೇಟರ್‌ನಲ್ಲಿ ವೈಭವ್ 97, ಕ್ವಾಲಿಫೈಯರ್-2ನಲ್ಲಿ 96 ರನ್

ಮತ್ತೊಮ್ಮೆ ವೈಭವ್ ಶತಕವಂಚಿತ

ಯಾರ್ಕರ್ ಎಸೆದರೂ ಸುತ್ತಿಗೆಯಲ್ಲಿ ಹೊಡೆದಂತೆ ಚೆಂಡನ್ನು ಬೌಂಡರಿ ಗಟ್ಟುವ ವೈಭವ್ ಜಿಟಿ ಬೌಲರ್‌ಗಳನ್ನು ಕಾಡಿದರು. ರಬಾಡ, ಸಿರಾಜ್, ಹೋಲ್ಡರ್‌ರಂತಹ ವೇಗಿಗಳಿಗೆ ಕರುಣೆ ತೋರಿಸದೆ ಬೌಂಡರಿ ಸಿಕ್ಸರ್‌ಗಳನ್ನು ಚಚ್ಚಿದರು. ನಿರಂತರ ವಿಕೆಟ್‌ಗಳನ್ನು ಕಳೆದುಕೊಂಡ ರಾಜಸ್ಥಾನದ ರನ್‌ರೇಟ್ ಕಾಯ್ದುಕೊಂಡು ಆಪದ್ಬಾಂಧವನಾದರು. ದ್ವಿತೀಯ ಕ್ವಾಲಿಫೈಯರ್‌ನಲ್ಲಿ ಜಿಟಿ ವಿರುದ್ಧ ವೈಭವ್ ಆಟವು 90ರ ದಶಕದ ಸಚಿನ್ ತೆಂಡುಲ್ಕರ್ ಆಟವನ್ನು ನೆನಪಿಸಿದ್ದು ಸುಳ್ಳಲ್ಲ. ಹಿಂದಿನ ಇನ್ನಿಂಗ್ಸ್ ಗಳಿಗೂ ಈ ಇನ್ನಿಂಗ್ಸ್‌ಗೂ ಅಜಗಜಾಂತರ ವ್ಯತ್ಯಾಸ ಕಂಡುಬಂದಿತ್ತು. ತಂಡದ ಇತರ ಬ್ಯಾಟರ್‌ಗಳ ವೈಫಲ್ಯದ ಜವಾಬ್ದಾರಿ ಹೆಗಲಿಗೇರಿಸಿಕೊಂಡ 15ರ ಪೋರ ತಮ್ಮ ಬ್ಯಾಟ್ ಎತ್ತಿ ಬೀಸುತ್ತಿದ್ದ ಪರಿ ಯಾವ ಕ್ರಿಕೆಟ್ ಅಭಿಮಾನಿಯೂ ಮರೆಯುವಂತಿಲ್ಲ. ಕೆಲವೊಂದು ಹೊಡೆತಗಳೂ ಮಿಸ್‌ಹಿಟ್ ಆಗಿ ಆಗಸದೆತ್ತರ ಹೋಗಿ ಬಿದ್ದರೂ ಯಾವ ಕ್ಷೇತ್ರರಕ್ಷಕರಿಲ್ಲದ ಜಾಗಗಳಲ್ಲಿ ಬಿದ್ದಿದ್ದರಿಂದ ವೈಭವ್ ಔಟಾಗಲಿಲ್ಲ. ಆದರೆ ರಬಾಡ ಎಸೆದ ಶಾರ್ಟ್ ಎಸೆತವನ್ನು ಬಲವಾಗಿ ಹೊಡೆಯುವ ಪ್ರಯತ್ನದಲ್ಲಿ ಡೀಪ್ ಥರ್ಡ್ ಮ್ಯಾನ್ ಕ್ಷೇತ್ರದಲ್ಲಿ ಪ್ರಸಿದ್ಧ್‌ಗೆ ಸುಲಭ ಕ್ಯಾಚಿತ್ತರು. ವೈಭವ್ ಔಟಾಗುತ್ತಿದ್ದಂತೆ ಒಂದು ಕ್ಷಣ ಸಂಪೂರ್ಣ ನಿಶ್ಶಬ್ದ ಆವರಿಸಿದ್ದು, ಆಮೇಲೆ ಪ್ರೇಕ್ಷಕರ ಕರತಾಡನ ಲಭಿಸಿತು. ಕಳೆದ ಪಂದ್ಯದಂತೆ ಮತ್ತೊಮ್ಮೆ ಶತಕ ಪೂರೈಸುವಲ್ಲಿ ವಿಫಲರಾದರು. 47 ಎಸೆತಗಳಿಂದ 96 ರನ್ ಗಳಿಸಿದ್ದ ಅವರು 7 ಸಿಕ್ಸರ್ ಮತ್ತು 8 ಬೌಂಡರಿ ಬಾರಿಸಿದ್ದರು. ಕೆಲವು ಇನ್ನಿಂಗ್ಸ್ ಶತಕಗಳಿಗೂ ಮೀರಿದ್ದು, ವೈಭವ್ ಔಟಾದಾಗ ರಾಯಲ್ಸ್ ಸ್ಕೋರ್ 172ಕ್ಕೆ 6.

ದುಬಾರಿ ಕೊನೆಯ ಓವರ್: 4 ಸಿಕ್ಸರ್!

ಲೆಗ್‌ಸ್ಪಿನ್ನರ್ ರಶೀದ್ ಖಾನ್ ಎಸೆದ ಇನ್ನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಡೊನೊವನ್ ಫೆರೇರಾ ಸತತ 3 ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ರಾಯಲ್ಸ್ ಸ್ಕೋರ್ 200ರ ಗಡಿ ದಾಟಿಸಿದರು. ಕೊನೆಯ ಎಸೆತದಲ್ಲಿ ಇನ್ನೊಂದು ಸಿಕ್ಸರ್ ಹೊಡೆದ ಫೆರೇರಾ 11 ಎಸೆತಗಳನ್ನು ಎದುರಿಸಿ 38 ರನ್ ಚಚ್ಚಿದರು. ಮುರಿಯದ 7ನೇ ವಿಕೆಟ್‌ಗೆ ಫೆರೇರಾ ಮತ್ತು ಜಡೇಜಾ 16 ಎಸೆತಗಳಿಂದ ಭರ್ಜರಿ 42 ರನ್ ಸೇರಿಸಿದರು. ರಶೀದ್ ಎಸೆದ ಕೊನೆಯ ಓವರ್‌ನಲ್ಲೇ 27 ರನ್ ಹರಿದುಬಂತು. ಅದರಲ್ಲಿ 4 ಸಿಕ್ಸರ್ ಸಹಿತ 26 ರನ್ ಫೆರೇರಾ ಬಾರಿಸಿದ್ದರು.

ಶುಬ್ಮನ್ ಗಿಲ್ ಸ್ಫೋಟಕ ಶತಕ!

ಇತ್ತೀಚೆಗೆ 2026ರ ಭಾರತ ಟಿ20 ವಿಶ್ವಕಪ್ ತಂಡದಲ್ಲಿ ಆಯ್ಕೆಯಾಗದ ಏಕದಿನ, ಟೆಸ್ಟ್ ತಂಡದ ನಾಯಕ ಶುಬ್ಮನ್ ಗಿಲ್ ತಮ್ಮನ್ನು ಟಿ20ಗೆ ಅನ್‌ಫಿಟ್ ಎಂದವರಿಗೆ ಸ್ಫೋಟಕ ಶತಕದ ಮೂಲಕ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. 200+ ಸ್ಟ್ರೈಕ್‌ರೇಟ್‌ನಲ್ಲಿ 49 ಎಸೆತಗಳಲ್ಲೇ ಶತಕ ದಾಖಲಿಸಿದ್ದಾರೆ. ಜಿಟಿ ನಾಯಕನಾಗಿ ಶತಕ ದಾಖಲಿಸಿದ್ದಷ್ಟೇ ಅಲ್ಲದೆ ಜಿಟಿ ತಂಡವನ್ನು 3ನೇ ಬಾರಿಗೆ ಫೈನಲ್ ಗೇರಿಸಿದ್ದಾರೆ.



ಮೊದಲ ಟಿ20: ಮಂದನಾ ಪಡೆಗೆ 38 ರನ್ ಗೆಲುವು

• **ಲಂಡನ್:** ಭಾರತೀಯ ಮಹಿಳೆಯರು ಇಂಗ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯವನ್ನು 38 ರನ್‌ಗಳಿಂದ ಜಯಿಸಿ ಸರಣಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಮೊದಲು ಬ್ಯಾಟ್ ಮಾಡಿದ ಭಾರತವು ನಿಧಾನ ಆರಂಭ ತೋರಿದರೂ ಬಳಿಕ 7ವಿಕೆಟ್ ಕಳಕೊಂಡು 188 ರನ್ ಗಳಿಸಲು ಶಕ್ತವಾಯಿತು. ಇದಕ್ಕುತ್ತರವಾಗಿ ಇಂಗ್ಲೆಂಡ್ 8 ವಿಕೆಟಿಗೆ 150 ರನ್ ಗಳಿಸಲಷ್ಟೆ ಶಕ್ತವಾಯಿತು. ಭಾರತವು ಮೊದಲ ಓವರಿನಲ್ಲೆ ಸ್ಮೃತಿ ಮಂಧಾನ ಮತ್ತು ಶೆಫಾಲಿ ಅವರನ್ನು ಕಳಕೊಂಡರೂ ಯಸ್ತಿಕಾ ಭಾಟಿಯಾ (54) ಮತ್ತು ಜೆಮಿಮಾ ರೋಡ್ರಿಗಸ್ (69) ಮೂರನೇ ವಿಕೆಟ್‌ಗೆ 76 ಎಸೆತಗಳಲ್ಲಿ 126 ರನ್ ಕಲೆಹಾಕುವ ಮೂಲಕ ತಂಡಕ್ಕೆ ಆಸರೆ ನೀಡಿದರು. ಇಬ್ಬರೂ 31 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು. 2024ರ ಏಪ್ರಿಲ್ ಬಳಿಕ ಯಸ್ತಿಕಾ ಮೊದಲ ಟಿ20 ಆಡಿದ್ದರು. ವೇಗಿ ಲೌರೆನ್ ಬೆಲ್ ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದರು. ದೀಪ್ತಿ ಶರ್ಮಾ 22 ರನ್ ಗಳಿಸಿದರು. ಇಂಗ್ಲೆಂಡ್ ಪರ 48 ಎಸೆತಗಳಿಂದ 67 ರನ್ ಹೊಡೆದ ಜೋನ್ಸ್‌ವೊಬ್ಬರೆ ಹೋರಾಟ ಪ್ರದರ್ಶಿಸಿದ್ದರು. ಭಾರತದ ಪರವಾಗಿ ಪದಾರ್ಪಣಾ ಪಂದ್ಯವನ್ನಾಡಿದ ನಂದಿನಿ ಶರ್ಮಾ 3 ವಿಕೆಟ್ ಹಾಗೂ ಕ್ರಾಂತಿ ಗೌಡ 2 ವಿಕೆಟ್ ಗಳಿಸಿದರು. ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಸ್ಮೃತಿ ಮಂದನಾ ನೇತೃತ್ವದ ಭಾರತ 1-0 ಮುನ್ನಡೆಯನ್ನು ಸಾಧಿಸಿದೆ. ಮುಂದಿನ ತಿಂಗಳು (ಜೂ.12ರಿಂದ) ಆರಂಭವಾಗುವ ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಇದು ಭಾರತದ ಕೊನೆಯ ಸರಣಿಯಾಗಿದೆ. ಜೂ.14ರಂದು ಭಾರತೀಯರು ಪಾಕಿಸ್ತಾನ ವನಿತೆಯರನ್ನು ಎದುರಿಸಲಿದ್ದಾರೆ.



ಸಂಕ್ಷಿಪ್ತ ಸ್ಕೋರ್

ಭಾರತ 188/7(20): ಜೆಮಿಮಾ 69(40), ಯಸ್ತಿಕಾ 54(40), ಲೌರೆನ್ ಬೆಲ್ 34ಕ್ಕೆ 3.
ಇಂಗ್ಲೆಂಡ್ 150/8(20): ಜೋನ್ಸ್ 67(48), ನಂದಿನಿ 34ಕ್ಕೆ 3, ಕ್ರಾಂತಿ 24ಕ್ಕೆ 2.
ಪಂದ್ಯಶ್ರೇಷ್ಠ: ಜೆಮಿಮಾ ರಾಡ್ರಿಗ್ಸ್

- ಪದಾರ್ಪಣಾ ಪಂದ್ಯದಲ್ಲಿ 3ವಿಕೆಟ್ ಕಬಳಿಸಿದ ನಂದಿನಿ
- ಸಿಡಿದ ಜೆಮಿಮಾ, ಯಸ್ತಿಕಾ ಚೊಚ್ಚಲ ಅರ್ಧ ಶತಕ

ಕಳಪೆ ಪ್ರದರ್ಶನ, ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ

ನಾಯಕತ್ವಕ್ಕೆ ರಿಷಬ್ ರಾಜೀನಾಮೆ

• **ಲಖನೌ:** ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್‌ನ ಕಳಪೆ ನಿರ್ವಹಣೆಯ ಹೊಣೆ ಹೊತ್ತುಕೊಂಡಿರುವ ರಿಷಬ್ ಪಂತ್ ನಾಯಕತ್ವ ತ್ಯಜಿಸಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ಕೇವಲ 4 ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿತ್ತು. ಕಳೆದ ವರ್ಷ ಕೂಡಾ ಎಲ್‌ಎಸ್‌ಜಿ ಗಳಿಸಿದ್ದು 7ನೇ ಸ್ಥಾನವನ್ನು.

ರಿಷಬ್ ಪಂತ್ ನಾಯಕನಾಗಿಯಷ್ಟೇ ಅಲ್ಲದೆ ಬ್ಯಾಟಿಂಗ್‌ನಲ್ಲೂ ವೈಫಲ್ಯ ಕಂಡಿದ್ದರು. 2025ರಲ್ಲಿ ಋತುವಿನಲ್ಲಿ ರಿಷಬ್ 133.16 ಸ್ಟ್ರೈಕ್ ರೇಟ್‌ನಲ್ಲಿ 269 ರನ್ ಗಳಿಸಿದ್ದರು. ಈ ವರ್ಷ ಅವರು ಗಳಿಸಲಾದುದು 138.05 ಸ್ಟ್ರೈಕ್ ರೇಟ್‌ನಲ್ಲಿ ಕೇವಲ 312 ರನ್‌ಗಳನ್ನು. 2025ರಲ್ಲಿ ಎಲ್‌ಎಸ್‌ಜಿ ರಿಷಬ್ ಅವರನ್ನು 27 ಕೋಟಿ ರೂ. ದುಬಾರಿ ಬೆಲೆಗೆ ಖರೀದಿಸಿತ್ತು. ಆದರೆ ಅವರು ತಮ್ಮ ಫ್ರಾಂಚೈಸಿಯ ನಿರೀಕ್ಷೆ ಉಳಿಸಿಕೊಳ್ಳಲು ಶಕ್ತರಾಗಲಿಲ್ಲ.



ಐಪಿಎಲ್‌ನ ಲೀಗ್ ಹಂತದ ಪಂದ್ಯ ಮುಗಿದ ಕೂಡಲೇ ಎಲ್‌ಎಸ್‌ಜಿ ನಿರ್ದೇಶಕ ಟಾಮ್ ಮೂಡಿ ಅವರು ನಾಯಕತ್ವ ಬದಲಾವಣೆಯ ಸುಳಿವು ನೀಡಿದ್ದರು. ರಿಷಬ್ ಪಂತ್ ಬದಲಿಗೆ ಬೇರೆಯವರನ್ನು ನಾಯಕನಾಗಿ ನೇಮಿಸುವುದಾಗಿ ಹೇಳಿದ್ದರು. ಅದರ ಬೆನ್ನಿಗೇ ಈಗ ರಿಷಬ್ ನಾಯಕತ್ವದಿಂದ ಕೆಳಗಿಳಿದಿದ್ದಾರೆ.

ಮುಂಬೈ ಇಂಡಿಯನ್ಸ್ ತೊರೆಯಲಿರುವ ಪಾಂಡ್ಯ

ಚೆನ್ನೈಗೆ ಹಾರ್ದಿಕ್ ಸ್ವಾಗತ?

• **ಮುಂಬೈ:** ಹಾರ್ದಿಕ್ ಪಾಂಡ್ಯ ಮುಂಬೈ ಇಂಡಿಯನ್ಸ್ ತೊರೆಯಲಿದ್ದಾರೆಂದು ವರದಿಯಾಗಿದೆ. ಮಾನಸಿಕವಾಗಿ ತೀವ್ರ ಒತ್ತಡ ಮತ್ತು ಮುಂಬೈ ನಿರ್ವಹಣೆಯಿಂದ ನಿರಾಶೆಗೆ ಒಳಗಾಗಿರುವ ಹಾರ್ದಿಕ್ ಫ್ರಾಂಚೈಸಿ ತೊರೆಯುವ ನಿರ್ಧಾರವನ್ನು ಫ್ರಾಂಚೈಸಿ ಮಾಲಕರಿಗೆ ಕೆಲದಿನಗಳ ಹಿಂದೆಯೇ ತಿಳಿಸಿದ್ದಾರೆನ್ನಲಾಗಿದೆ. ಮುಂಬೈ ಹಾರ್ದಿಕ್‌ರನ್ನು ಚೆನ್ನೈ ಸೂಪರ್ ಕಿಂಗ್ಸ್ ಜತೆ ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯಿದೆ.



ಐಪಿಎಲ್ ಟೂರ್ನಿಯ ಮಧ್ಯಂತರದ ವೇಳೆಯೇ ಪಾಂಡ್ಯ ಈ ನಿರ್ಧಾರ ತಳೆದಿದ್ದಾರೆಂದು ಹೇಳಲಾಗುತ್ತಿದೆ. ಅವರು ಚೆನ್ನೈ ಸೂಪರ್ ಕಿಂಗ್ಸ್ ಸೇರಲಿದ್ದಾರೆಂಬ ಮಾತುಗಳೂ ಕೇಳಿಬರುತ್ತಿವೆ. ಇನ್ನೂ ಅಧಿಕೃತವಾಗಿಲ್ಲ. 32ರ ಹರೆಯದ ಪಾಂಡ್ಯಾ 2024ರಲ್ಲಿ ಮುಂಬೈ ಇಂಡಿಯನ್ಸ್ ನಾಯಕರಾಗಿ ನೇಮಕರಾಗಿದ್ದರು. ರೋಹಿತ್‌ರಿಂದ ಪಾಂಡ್ಯರಿಗೆ ನಾಯಕತ್ವ ವರ್ಗಾಯಿಸಿದ ಬಗ್ಗೆ ಆಗಲೇ ಅಸಮಾಧಾನದ ಮಾತುಗಳು ಕೇಳಿಬಂದಿದ್ದವು. ಕಳೆದ ವರ್ಷದ ಐಪಿಎಲ್‌ನಲ್ಲಿ ಮುಂಬೈ ಉತ್ತಮ ನಿರ್ವಹಣೆ ತೋರಿರಲಿಲ್ಲ. ಈ ಬಾರಿಯಂತೂ ಇನ್ನೂ ಕಳಪೆ ನಿರ್ವಹಣೆ ತೋರಿತ್ತು. ಪಾಂಡ್ಯ ಮತ್ತು ಮುಂಬೈ ಇಂಡಿಯನ್ಸ್ ಪರಸ್ಪರ ಬೇರ್ಪಡಲು ಸೌಹಾರ್ದಯುತವಾಗಿ ಸಮ್ಮತಿಸಿದ್ದಾರೆಂದು ಹೇಳಲಾಗಿದೆ. ಪಾಂಡ್ಯ ಮಾನಸಿಕವಾಗಿ ತುಂಬಾ ಒತ್ತಡಕ್ಕೆ ಒಳಗಾಗಿದ್ದಾರೆ ಮತ್ತು ಬಳಲಿದ್ದಾರೆ. ಜತೆಗೇ ಬೆನ್ನು ನೋವಿಗೂ ಒಳಗಾದರು. ತಂಡವು ಪ್ಲೇಆಫ್‌ಗೆ ಏರಲು ವಿಫಲವಾದ ಬಳಿಕ ಅವರು ಮುಂಬೈ ತೊರೆಯಲು ನಿರ್ಧರಿಸಿದರು ಎಂದು ಅವರನ್ನು ಬಲ್ಲ ಮೂಲಗಳು ಹೇಳಿವೆ. ಹಿರಿಯ ನಾಯಕರು ಪಾಂಡ್ಯ ಅವರಿಗೆ ಪೂರ್ಣ ಸಹಕಾರ ನೀಡಲಿಲ್ಲ. ಆಟದಲ್ಲೂ ಸಂಪೂರ್ಣ ನಿರ್ವಹಣೆ ತೋರಲಿಲ್ಲ. ಇದು ಪಾಂಡ್ಯಾಗೆ ನೋವು ತಂದಿತು ಎಂದು ಮೂಲಗಳು ತಿಳಿಸಿವೆ.

ಪಾಂಡ್ಯ ನಿರ್ಗಮನದಿಂದಾಗಿ ರೋಹಿತ್ ಶರ್ಮಾ ಅವರು ಮುಂದಿನ ವರ್ಷದ ಐಪಿಎಲ್‌ಗೆ ತಂಡದ ನಾಯಕರಾಗಿ ಪುನರಾಯ್ಕೆಗೊಳ್ಳುವ ಸಾಧ್ಯತೆಗಳೂ ಇವೆ.

ಸುಳಿವು ನೀಡಿದ ಹಾರ್ದಿಕ್

ಹಾರ್ದಿಕ್ ಮತ್ತವರ ಸ್ನೇಹಿತೆ ಮಹೀಕಾ ಶರ್ಮಾ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಚೆನ್ನೈ ಸೇರುವ ಸುಳಿವು ನೀಡಿದ್ದಾರೆ. ಇತ್ತೀಚೆಗೆ 07:07 ಎಂಬ ಸಮಯದ ಸ್ಟೋರಿ ಹಾಗೂ ಹಾರ್ದಿಕ್ ಫ್ರಾನ್ಸ್ ಪ್ರವಾಸದ ಹೆಲಿಕಾಪ್ಟರ್ ರೈಡ್ ಚಿತ್ರಗಳನ್ನು ಹಂಚಿಕೊಂಡಿದ್ದರು. ಮಹೀಕಾ ಹೆಲಿಕಾಪ್ಟರ್ ಹೆಲಿಕಾಪ್ಟರ್ ಎಂದು ಕಾಮೆಂಟ್ ಮಾಡಿದ್ದರು. ಎಂಎಸ್ ಧೋನಿ ಜನ್ಮದಿನ ಜು.7 ಮತ್ತು ಅವರು ಹೆಲಿಕಾಪ್ಟರ್ ಶಾಟ್‌ಗೆ ಪ್ರಸಿದ್ಧರು.

ಚಿರಾಗ್-ರಾಂಕಿರೆಡ್ಡಿ ಸೆಮಿಫೈನಲ್ ಎಂಟ್ರಿ

• **ಸಿಂಗಾಪುರ:** ಸಿಂಗಾಪುರ ಓಪನ್ ಬ್ಯಾಡ್ಮಿಂಟನ್‌ನಲ್ಲಿ ಶುಕ್ರವಾರ ಭಾರತವು ಮಿಶ್ರಫಲ ಅನುಭವಿಸಿತು. ಮಹಿಳಾ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರೆ, ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಸೆಮಿಫೈನಲ್‌ಗೆ ಪ್ರವೇಶ ಪಡೆಯಿತು.

ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಬ್ಬರೂ ಕ್ವಾರ್ಟರ್ ಫೈನಲಿನಲ್ಲಿ ಮಲೇಶಿಯಾದ ಕಾಂಗ್ ಕಾಯಿ ಕ್ಸಿಂಗ್ ಮತ್ತು ಆರೋನ್ ಥಾಯ್ ಜೋಡಿಯ ವಿರುದ್ಧ 19-21, 21-17, 21-13 ಸೆಟ್‌ಗಳ ಪ್ರಯಾಸದ ಗೆಲುವು ಕಂಡರು. ಮೊದಲ ಸೆಟ್‌ನಲ್ಲಿ ಭಾರತೀಯ ಜೋಡಿ ಕಠಿಣ ಸವಾಲು ನೀಡಿದರೂ ಸೋಲು ಕಾಣಬೇಕಾಯಿತು. ಆದರೆ ಎರಡನೇ ಮತ್ತು ಮೂರನೇ ಸೆಟ್‌ನಲ್ಲಿ ಪ್ರತಿಹೋರಾಟ ನೀಡಿ ಗೆಲುವು ಸಾಧಿಸಲು ಸಫಲರಾದರು. ಇದೇ ವೇಳೆ, ಪಿ.ವಿ. ಸಿಂಧು ಅವರ ಚೈತ್ರಯಾತ್ರೆಯು ಕ್ವಾರ್ಟರ್ ಫೈನಲ್‌ನಲ್ಲಿ ಅಂತ್ಯ ಕಂಡಿತು. ಅವರು ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವ ನಂಬರ್ 1 ಆಟಗಾರ್ತಿ ಆನ್ ಸೆ ಯಂಗ್ ವಿರುದ್ಧ 17-21, 14-21 ನೇರ ಸೆಟ್‌ಗಳ ಸೋಲು ಕಂಡರು. ಸಿಂಧು ಮೊದಲ ಸೆಟ್‌ನಲ್ಲಿ ಹೋರಾಟಕಾರಿ ಮನೋಭಾವ ಪ್ರದರ್ಶಿಸಿದರಾದರೂ ಎದುರಾಳಿಯ ಆಕ್ರಮಣಕಾರಿ ಆಟದೆದುರು ಕೊನೆಗೂ ಮಣಿಯಬೇಕಾಯಿತು. ಎರಡನೇ ಸೆಟ್‌ನಲ್ಲಿ ಯಂಗ್ ಸುಲಭ ಜಯ ಸಾಧಿಸಿದರು.

ಸಿಂಗಾಪುರ ಓಪನ್: ಪಿವಿ ಸಿಂಧು ಚೈತ್ರಯಾತ್ರೆ ಅಂತ್ಯ

ಏಷ್ಯನ್ ಅಥ್ಲೆಟಿಕ್ಸ್: ಹಲವು ಪದಕಗಳನ್ನು ಗೆದ್ದ ಭಾರತ



• **ಹಾಂಕಾಂಗ್:** ಭಾರತದ ಹಲವು ಕ್ರೀಡಾಪಟುಗಳು ಚೀನಾದಲ್ಲಿ ನಡೆಯುತ್ತಿರುವ 20ರ ಕೆಳಹರಯದ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪದಕಗಳನ್ನು ಗೆದ್ದು ಮಿಂಚಿದ್ದಾರೆ. ವನಿತೆಯರ ಡಿಸ್ಕಸ್ ಎಸೆತದಲ್ಲಿ ಅಮಾನತ್ (52.27 ಮೀ.) ಸ್ವರ್ಣ, ಪುರುಷರ ಡೆಕಾಥ್ಲಾನ್‌ನಲ್ಲಿ 7,185 ಅಂಕಗಳನ್ನು ಸಂಪಾದಿಸಿದ ರಾಹುಲ್ ಸ್ವರ್ಣ ಮತ್ತು 6854 ಅಂಕಗಳನ್ನು ಸಂಪಾದಿಸಿದ ಉಪ್ಕಾರ್ ರಜತ ಪದಕ ಗೆದ್ದರು. ಮಹಿಳೆಯರ 400 ಮೀ. ಓಟದಲ್ಲಿ ನೀರು ಪಾಠಕ್ 53.23 ಸೆಕೆಂಡುಗಳಲ್ಲಿ ಗುರಿಮುಟ್ಟಿ ಕಂಚು ಗೆದ್ದಿದ್ದಾರೆ. ಪುರುಷರ 5000 ಮೀ. ಓಟ ನಡಿಗೆಯಲ್ಲಿ ನಿತಿನ್ ಗುಪ್ತಾ ಸ್ವರ್ಣ ಮತ್ತು ಮಹಿಳೆಯರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಸಾಧನಾ ರವಿ 12.84 ಮೀ. ಜಿಗಿತದೊಂದಿಗೆ ರಜತ ಪದಕ ಗೆದ್ದುಕೊಂಡರು.

ವನಿತೆಯರ ಎತ್ತರ ಜಿಗಿತ (ಹೈಜಂಪ್) ಸ್ಪರ್ಧೆಯಲ್ಲಿ ಭಾರತದ ಪೂಜಾ 1.93 ಮೀ. ಜಿಗಿತದೊಂದಿಗೆ ಸ್ವರ್ಣ ಪದಕ ಗೆದ್ದಿದ್ದಾರೆ. ಭಾರತದ ಪಾಲಿಗೆ ಇದೊಂದು ಐತಿಹಾಸಿಕ ಜಿಗಿತವಾಗಿದೆ.

ಸಮುದ್ರದ ಅಲೆಯ ನಡುವೆ ರೋಮಾಂಚಕ ಪ್ರದರ್ಶನ

• **ಮಂಗಳೂರು:** ಮಂಗಳೂರಿನ ತಣ್ಣೀರ್‌ಭಾವಿ ಬ್ಲೂ ಬೇ ಇಕೋ ಬೀಚ್‌ನಲ್ಲಿ ಶುಕ್ರವಾರ ಏಳನೇ ಆವೃತ್ತಿಯ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಆರಂಭಗೊಂಡಿದ್ದು, ಸರ್ಫರ್‌ಗಳು ಸಮುದ್ರದ ಅಲೆಗಳ ನಡುವೆ ಅದ್ಭುತ ಪ್ರದರ್ಶನ ನೀಡುವ ಮೂಲಕ ಅಲ್ಲಿ ನೆರೆದಿದ್ದವರನ್ನು ಚಕಿತರನ್ನಾಗಿಸಿದರು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಸರ್ಫರ್‌ಗಳು ಸಮುದ್ರ ಅಲೆಗಳ ಮಧ್ಯೆ ತಮ್ಮ ಕೌಶಲ್ಯ ಪ್ರದರ್ಶಿಸಿ ಪ್ರೇಕ್ಷಕರ ಮನಗೆದ್ದರು.

ಮೊದಲ ದಿನ ಭಾರತದ ಶ್ರೇಷ್ಠ ಸರ್ಫರ್‌ಗಳು ತಮ್ಮ ಸಾಮರ್ಥ್ಯವನ್ನು ತೋರಿದರು. ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವ ಅಭಯಚಂದ್ರ ಜೈನ್, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ದಿಲೀಪ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಪ್ರದೀಪ್ ಡಿಸೋಜ, ಸರ್ಫಿಂಗ್ ಫೆಡರೇಷನ್ ಆಫ್ ಇಂಡಿಯಾದ ಉಪಾಧ್ಯಕ್ಷ ರಾಮ್ ಮೋಹನ್ ಪರಾಂಜಪೆ, ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್‌ನ ಉಪಾಧ್ಯಕ್ಷ ದೀಕ್ಷಿತ್ ಸುವರ್ಣ, ಕಾರ್ಯದರ್ಶಿ ಶಮಂತ್ ಕುಮಾರ್, ಸರ್ಫಿಂಗ್ ಸ್ವಾಮಿ ಫೌಂಡೇಶನ್‌ನ ಅಧ್ಯಕ್ಷ ಧನಂಜಯ್ ಶೆಟ್ಟಿ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರದ ಅಥ್ಲೀಟ್ ರಿಲೇಷನ್ಸ್ ಮ್ಯಾನೇಜರ್ ಸೌರಭ್ ವರ್ಮಾ ಉಪಸ್ಥಿತರಿದ್ದರು.



ಇಂಡಿಯನ್ ಓಪನ್ ಆಫ್ ಸರ್ಫಿಂಗ್ 2026, ಭಾರತದ ಸರ್ಫರ್‌ಗಳ ಉತ್ತಮ ಸಾಧನೆ


ಸರ್ಫಿಂಗ್ ಮೊದಲ ದಿನದ ಫಲಿತಾಂಶ: ರಾಷ್ಟ್ರೀಯ ಸರ್ಫಿಂಗ್‌ನ ಮೊದಲ ದಿನದ ಸ್ಪರ್ಧೆಗಳು ಪುರುಷರ ಮತ್ತು ಮಹಿಳೆಯರ ಮುಕ್ತ ವಿಭಾಗ ಹಾಗೂ 18 ವರ್ಷದೊಳಗಿನ ಬಾಲಕರು ಮತ್ತು 14 ವರ್ಷದೊಳಗಿನ ಬಾಲಕರ ವಿಭಾಗಗಳಲ್ಲಿ ನಡೆದವು.

ಮಹಿಳೆಯರ ಓಪನ್ ವಿಭಾಗದಲ್ಲಿ ಕಮಾಲಿ ಮೂರ್ತಿ, ಶುಗರ್ ಶಾಂತಿ ಬನಾರ್ಸೆ, ಇಶಿತಾ ಮಾಳವೀಯ, ದೇವಿ ರಾಮನಾಥನ್, ಸಾನ್ವಿ ಹೆಗ್ಡೆ ಮತ್ತು ಸೃಷ್ಟಿ ಸೆಲ್ವಂ ಸೆಮಿಫೈನಲ್ ತಲುಪಿದ್ದು, ಈ ಪಂದ್ಯಗಳು ಚಾಂಪಿಯನ್‌ಶಿಪ್‌ನ ಅಂತಿಮ ದಿನದಂದು ನಡೆಯಲಿವೆ. ಪುರುಷರ ಓಪನ್ ವಿಭಾಗದಲ್ಲಿ 12 ಹೀಟ್ಸ್‌ಗಳ ಮೊದಲ ಸುತ್ತು ಪೂರ್ಣಗೊಂಡರೆ, ಮಹಿಳೆಯರ ಓಪನ್ ವಿಭಾಗವು ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿತು. ಜೂನಿಯರ್ ವಿಭಾಗಗಳಲ್ಲೂ ತೀವ್ರ ಪೈಪೋಟಿ ಕಂಡುಬಂದಿದ್ದು, 18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಮೊದಲ ಸುತ್ತಿನ ಹೀಟ್ಸ್‌ಗಳು ನಡೆದವು ಹಾಗೂ ಹೊಸದಾಗಿ ಪರಿಚಯಿಸಲಾದ 14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆದವು.

ಪ್ರಮುಖ ಪ್ರದರ್ಶನ: ಕಿಶೋರ್ ಕುಮಾರ್ (12.90 ಅಂಕ), ರಮೇಶ್ ಬೂದಿಹಾಳ್ (12.57), ತಯಿನ್ ಅರುಣ್ (12.10), ಸಂಜಯ್ ಕುಮಾರ್ ಎಸ್ (11.84), ಅಜೀಶ್ ಅಲಿ (11.74), ಅಖಿಲನ್ ಎಸ್ (11.66), ಶಿವರಾಜ್ ಬಾಬು (11.33), ಸಂಜಯ್ ಸೆಲ್ವಮಣಿ (11.33), ಹರೀಶ್ ಎಮ್ (10.27), ಶ್ರೀಕಾಂತ್ ಡಿ (9.33), ರುಬೆನ್ ವಿ (7.93) ಮತ್ತು ಸೋಮ ಶೇಖರ್ (7.30) ಅಂಕಗಳನ್ನು ಪಡೆದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5999

5998 ಉತ್ತರ

ಎಡದಿಂದ ಬಲಕ್ಕೆ:
3.ಜಾಜ್ವಲ್ಯಮಾನ
5.ಹಡಗು 6.ಲಕ್ಷ್ಮಣ
8.ಅಂಕಣ 9.ವಾಕ್ಯ
10.ಘೋರ 13.ಜ್ಯಾಮಿತಿ
15.ಪದವಿ 17.ಚಾದರ
18.ದಿನಬಳಕೆ

ಮೇಲಿನಿಂದ ಕೆಳಕ್ಕೆ :
1.ತಹತಹಿಸು 2.ಅಂಗುಲ
4.ಮಾಲಿಕೆ 7.ಗಣ
8.ಅಂಜೂರ 9.ವಾಕ್ಪತಿ
11.ತಲೆಹರಟೆ 12.ಪಾಪ
14.ಮಿಥುನ 16.ವಿಚಾರ

ಎಡದಿಂದ ಬಲಕ್ಕೆ
2.ತನ್ನಲ್ಲಿ ತಾನು ಸಂತೋಷಗೊಳ್ಳುವದು (4)
4.ಬೀಸುತ್ತಿರುವ ವಾಯು (2)
5.ತೀವ್ರವಾದ ಆಸೆಯಲ್ಲಿ ತಿರುಗಿದೆ (3)
6.ಕಣ್ಣಿನಲ್ಲಿ ಬೆಂಕಿಯುಳ್ಳವನು-ಶಿವ (5)
9.ಭಾರತೀಯ ನಾಟ್ಯಶಾಸ್ತ್ರದ ಒಂಬತ್ತು ಭಾವಗಳು (4)
10.ಸೇರುವಿಕೆ-ಕೂಡುವಿಕೆಯಿದು (4)
13.ಸಂಪತ್ತಿನ ಅಧಿದೇವತೆ-ಲಕ್ಷ್ಮಿ (5)
15.ಮನೆಯ ಮೇಲಿನ ಅಂತಸ್ತು (3)
17.ಕೊಡದೇ ಉಳಿಸಿಕೊಂಡದ್ದು (2)
18. ಸಂಗೀತದಲ್ಲಿನ ಕಾಲಗಣನೆ (4)

ಮೇಲಿನಿಂದ ಕೆಳಕ್ಕೆ
1.ಬೀಳುವುದು-ಪತನ ಎಂಬರ್ಥದ ಶಬ್ದ (2)
2.ಗಡಿಬಿಡಿಯಿಂದ ಕೆಲಸ ಮಾಡುವವನು (5)
3.ಶಾಲೆಗೆ ಬಿಡುವು ಇರುವ ದಿವಸ (4)
4.ಮಂತ್ರವಿದ್ಯೆ-ಮಾಯಾಜಾಲವಿದು (3)
7.ಕೃಷ್ಣನ ಸಾಕುತಾಯಿಯ ಹೆಸರು (4)
8.ಹೆಚ್ಚು ತಿಳಿದುಕೊಳ್ಳಬೇಕೆಂಬ ಅಪೇಕ್ಷೆ (4)
11.ಮರ್ಯಾದೆ-ಅವಮರ್ಯಾದೆ ಕೂಡಿ ಕಾಣುತ್ತಿವೆ (5)
12. ಬಲಿಷ್ಠವಾದ ಎಂಬರ್ಥದ ಶಬ್ದ (4)
14. ಬೆಳಕಿನ ರಶ್ಮಿ ತಲೆಕೆಳಗಾಗಿದೆ (3)
16. ಕಂದಮೂಲದ ಸಮಾನಪದ (2)

ಕಿರುಸುದ್ದಿ

ಯುವಕನ ಅಪಹರಿಸಿ ಹಲ್ಲೆ

• **ಪುತ್ತೂರು:** ಬೆಳ್ತಂಗಡಿಯ ತೆಕ್ಕಾರು ನಿವಾಸಿಯಾಗಿದ್ದು ಕಾಸರಗೋಡಿನಲ್ಲಿ ಬೇಕರಿ ಉದ್ಯಮ ನಡೆಸುತ್ತಿದ್ದ ಯುವಕನೋರ್ವನನ್ನು ಕೆದಿಲದಿಂದ ಪರಿಚಯದ ಮೂವರು ರಿಕ್ಷಾವೊಂದರಲ್ಲಿ ಅಪಹರಿಸಿ ಕರದೊಯ್ದು ಹಲ್ಲೆ ನಡೆಸಿದ ಘಟನೆ ವರದಿಯಾಗಿದೆ. ಕಾಸರಗೋಡಿನಲ್ಲಿ ಬೇಕರಿ ಉದ್ಯಮ ನಡೆಸುತ್ತಿರುವ ತೆಕ್ಕಾರಿನ ಮಹಮಮ್ ಇರ್ಷಾದ್ (26) ಅಪಹರಣಕ್ಕೊಳಗಾಗಿ ಹಲ್ಲೆಗೊಳಗಾದವರು.

ಮೇ 25ರಂದು ಕಾಸರಗೋಡಿನಿಂದ ಬೆಳ್ತಂಗಡಿ ಮನೆಗೆ ಬಂದಾಗ ಅಲ್ಲಿದ್ದ ಅಕ್ಕ ಸೈನಾಜ್ ಅವರನ್ನು ಕರುವೇಲು ಎಂಬಲ್ಲಿಗೆ ಸ್ಕೂಟರ್‌ನಲ್ಲಿ ಬಿಟ್ಟು ಬಳಿಕ ಕೆದಿಲ ಗ್ರಾಮದ ಗಡಿಯಾರ ಮಸೀದಿ ಬಳಿ ಸ್ಕೂಟರನ್ನು ತನ್ನ ಭಾವನಿಗೆ ನೀಡಲು ಕಾಯುತ್ತಿದ್ದ ವೇಳೆ ಅಲ್ಲಿಗೆ ಬಂದ ಪರಿಚಯಸ್ಥರಾದ ಆಸೀಫ್ ಯಾನೆ ಅಚ್ಚಿ, ಶಾಕೀರ್ ಮತ್ತು ಆಸೀಫ್ ಎಂಬವರು ನನ್ನನ್ನು ಆಟೋ ರಿಕ್ಷಾವೊಂದರಲ್ಲಿ ಅಪಹರಿಸಿ, ಸಜೀಪ ಎಂಬಲ್ಲಿನ ಗುಡ್ಡಕ್ಕೆ ಕರೆದುಕೊಂಡು ಹೋಗಿ ಹಲ್ಲೆ ನಡೆಸಿದ್ದಾರೆ. ಮೇ 26ರಂದು ರಾತ್ರಿಯ ತನಕ ಗುಡ್ಡದಲ್ಲೇ ಇರಿಸಿ ಹಲ್ಲೆ ನಡೆಸಿದ್ದಾರೆ. ಮೇ27ರಂದು ಆರೋಪಿಗಳು ನಿದ್ರೆಯಲ್ಲಿದ್ದಾಗ ಅವರಿಗೆ ತಿಳಿಯದಂತೆ ತಪ್ಪಿಸಿಕೊಂಡು ಬಂದು ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿರುವುದಾಗಿ ಮಹಮ್ಮದ್ ಇರ್ಷಾದ್ ತಿಳಿಸಿದ್ದಾರೆ. ಆರೋಪಿಗಳ ಪೈಕಿ ಶಾಕೀರ್ ಹಣ ಕೊಡಲು ಬಾಕಿ ಇರುವುದನ್ನು ಕೇಳಿದ್ದಕ್ಕೆ ಹಲ್ಲೆ ನಡೆಸಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧರ್ಮಸ್ಥಳ: ನೋ ಫ್ಲೈ ಝೋನ್, ನೋ ಡ್ರೋನ್ ಝೋನ್ ಆದೇಶ

• **ಮಂಗಳೂರು:** ಭಾರತದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮೇ 31 ರಂದು ಧರ್ಮಸ್ಥಳ ದೇವಸ್ಥಾನಕ್ಕೆ ಭೇಟಿ ನೀಡಿ, ಬೆಳ್ತಂಗಡಿ ಗ್ರಾಮದ ರೆಂಕೆದಗುತ್ತು ಎಂಬಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಭದ್ರತಾ ಹಿತದೃಷ್ಟಿಯಿಂದ ಮೇ 30 ಮತ್ತು 31 ರಂದು ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ದೇವಸ್ಥಾನದ ಸುತ್ತಮುತ್ತಲಿನ 1500 ಮೀ. ವ್ಯಾಪ್ತಿಯನ್ನು ಮತ್ತು ಬೆಳ್ತಂಗಡಿ ಕಸಬಾ ಗ್ರಾಮದ ರೆಂಕೆದಗುತ್ತು ಎಂಬಲ್ಲಿ ಕಾರ್ಯಕ್ರಮ ನಡೆಯುವ ಪ್ರದೇಶದ ಸುತ್ತಮುತ್ತಲಿನ 1500 ಮೀ ವ್ಯಾಪ್ತಿಯನ್ನು ನೋ ಫ್ಲೈ ಝೋನ್ ಮತ್ತು ನೋ ಡ್ರೋನ್ ಝೋನ್ ಎಂದು ಘೋಷಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕಾರು ಡಿಕ್ಕಿ: ದ್ವಿಚಕ್ರ ವಾಹನ ಸವಾರ ಗಾಯ

• **ಮಂಗಳೂರು:** ಕಾರೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾದ ಪರಿಣಾಮ ಬೈಕ್ ಸವಾರ ಗಾಯಗೊಂಡ ಘಟನೆ ನಗರದ ಪದವು ಜಂಕ್ಷನ್ ಬಳಿ ಸಂಭವಿಸಿದೆ. ಕೆ.ಜಿ. ಪ್ರತೀಕ್ ಕುಮಾರ್ ಗಾಯಗೊಂಡವರು. ನಂತೂರು ಕಡೆಯಿಂದ ಸುರತ್ಕಲ್ ಕಡೆಗೆ ರಾಷ್ಟ್ರಿಯ ಹೆದ್ದಾರಿ 66ರಲ್ಲಿ ಪ್ರತೀಕ್ ಅವರು ಸಾಗುತ್ತಿದ್ದಾಗ, ಕದ್ರಿ ಪಾರ್ಕ್ ಕಡೆಯಿಂದ ಬಂದ ಕಾರು ಢಿಕ್ಕಿಯಾಗಿದೆ. ಚಾಲಕ ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಚಲಾಯಿಸಿಕೊಂಡು ಬಂದು ದ್ವಿಚಕ್ರ ವಾಹನದ ಮುಂಭಾಗಕ್ಕೆ ಡಿಕ್ಕಿಯಾಗಿದೆ. ಘಟನೆಯಲ್ಲಿ ಪ್ರತೀಕ್ ಅವರ ಬಲ ಕೈ ಮಣಿಗಂಟಿನಲ್ಲಿ ಮೂಳೆ ಮುರಿತವಾಗಿದೆ. ಬಲಕಾಲು, ಕುತ್ತಿಗೆ, ಬಲಭುಜಕ್ಕೆ ಗುದ್ದಿದ ಗಾಯವಾಗಿದೆ. ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು, ಕದ್ರಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಟ್ಟೆ ಅಂಗಡಿಯಿಂದ ಕಳವು

• **ಮಂಗಳೂರು:** ಬಟ್ಟೆ ಅಂಗಡಿಯೊಂದಕ್ಕೆ ನುಗ್ಗಿದ ಕಳ್ಳರು ನಗದು ಹಣ ಹಾಗು ಮೊಬೈಲ್ ದೋಚಿದ ಘಟನೆ ಸುರತ್ಕಲ್‌ನಲಿ ಸಂಭವಿಸಿದೆ. ಮೇ 27ರಂದು ರಾತ್ರಿ ಈ ಕಳ್ಳತನ ನಡೆದಿದೆ. ರಾತ್ರಿ ಸುಮಾರು 11.50ರ ವೇಳೆಗೆ ಅಂಗಡಿಯ ಬೀಗ ಮುರಿದು ಒಳಗೆ ಪ್ರವೇಶಿಸಿದ ಕಳ್ಳರು ಕ್ಯಾಶ್ ಡ್ರಾವರ್‌ನಲ್ಲಿದ್ದ 1 ಸಾವಿರ ರೂ. ನಗದು ಹಾಗೂ ಅಲ್ಲೆ ಇದ್ದ 10 ಸಾವಿರ ರೂ. ಮೌಲ್ಯದ ಮೊಬೈಲ್ ಕಳವು ಮಾಡಿದ್ದಾರೆ. ಜತೆಗೆ ಪಕ್ಕದ ಕಚೇರಿಯೊಂದರ ಬಾಗಿಲು ಮುರಿದು ಹಾನಿ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ವಾಹನ ಅಪಘಾತದಲ್ಲಿ ಯುವಕ ಮೃತ್ಯು

• **ಕುಂಬಳೆ:** ಧರ್ಮತ್ತಡ್ಕ ಸಮೀಪದ ಪೆರ್ಮುದೆ ಪೆರಿಯಡ್ಕ ರಸ್ತೆಯಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದ ವಾಹನ ಅಪಘಾತದಲ್ಲಿ ವ್ಯಕ್ತಿಯೋರ್ವ ಮೃತಪಟ್ಟ ಘಟನೆ ನಡೆದಿದೆ. ಚಿಪ್ಪಾರು ಬಾಯಾರು ನೆತ್ತರಗುಳಿ ನಿವಾಸಿ ಎನ್.ಕಿಶನ್ (25) ಸಾವಿಗೀಡಾದ ದುರ್ದೈವಿ. ಕಿಶನ್ ಚಲಾಯಿಸುತ್ತಿದ್ದ ಸ್ಕೂಟರ್ ಹಾಗೂ ಎದುರು ಭಾಗದಿಂದ ಬಂದ ಬೈಕ್ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಈ ವೇಳೆ ಕಿಶನ್‌ರ ಜೊತೆಗಿದ್ದ ತಂದೆ ಮಾಧವ ದೇವಾಡಿಗ (55) ಗಂಭೀರ ಗಾಯಗೊಂಡಿದ್ದು, ಅವರನ್ನು ಮಂಗಳೂರಿನ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಕಿಶನ್ ವೆಲ್ಡಿಂಗ್ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಮೃತರು ತಂದೆ, ತಾಯಿ ಹರಿಣಿ, ಸಹೋದರ ಮೋಹನ್ ದಾಸ್, ಸಹೋದರಿ ಶರ್ಮಿಳಾ ಅವರನ್ನು ಅಗಲಿದ್ದಾರೆ.

ಮಂಜನಾಡಿ ದುರಂತಕ್ಕೆ ತುಂಬಿತು ವರ್ಷ | ಕಣ್ಣೀರಲ್ಲೇ ಕೈತೊಳೆಯುತ್ತಿದೆ ಸಂತ್ರಸ್ತ ಕುಟುಂಬ

ಕೊನೆಯಾಗಿಲ್ಲ ಕೋರ್ಟ್ ಕಚೇರಿ ಅಲೆದಾಟ

• **ಕೊಣಾಜೆ:** ಭಾರೀ ಗಾಳಿ ಮಳೆಗೆ ಮಂಜನಾಡಿ ಮೊಂಟೆಪದವು ಸಮೀಪದ ಪಂಬದ ಹಿತ್ತಿಲು ಕೋಡಿ ಕೊಪ್ಪಲ ಎಂಬಲ್ಲಿ ಗುಡ್ಡ ಕುಸಿದು ಮನೆಯ ಮೇಲೆ ಬಿದ್ದು ಇಬ್ಬರು ಪುಟಾಣಿ ಮಕ್ಕಳು ಸೇರಿ ಮೂವರು ಮೃತಪಟ್ಟಿರುವ ಭೀಕರ ಘಟನೆ ನಡೆದು ಇಂದಿಗೆ ಒಂದು ವರ್ಷ ಪೂರ್ಣಗೊಂಡಿದೆ.

ಘಟನೆ ನಡೆದು ಒಂದು ವರ್ಷವಾದರೂ ಪುಟಾಣಿ ಕಂದಮ್ಮಗಳನ್ನು ಕಳೆದುಕೊಂಡಿರುವ ಜೊತೆಗೆ ತನ್ನೆರಡು ಕಾಲುಗಳನ್ನೂ ಕಳೆದುಕೊಂಡಿರುವ ಅಶ್ವಿನಿ ಅವರಿಗೆ ಇನ್ನೂ ನ್ಯಾಯ ಸಿಗದೆ ಕೋರ್ಟ್ ಕಚೇರಿ ಎಂದು ಅಲೆದಾಡುವ ಪರಿಸ್ಥಿತಿ ಕೊನೆಯಾಗಿಲ್ಲ.

2025 ರ ಮೇ 30 ರಂದು ಮುಂಜಾನೆ ಸುಮಾರು4 ಗಂಟೆಯಸುಮಾರಿಗೆಧಾರಕಾರವಾಗಿ ಸುರಿದ ಮಳೆಗೆ ಮನೆಯ ಗುಡ್ಡ ಕುಸಿದು ಮನೆಗೆ ಅಪ್ಪಳಿಸಿತ್ತು. ಈ ಸಂದರ್ಭದಲ್ಲಿ ಕಾಂತಪ್ಪ ಪೂಜಾರಿ ಹಾಗೂ ಪ್ರೇಮ ಅವರು ಮನೆಯಿಂದ ಹೊರಗೆ ಓಡಿ ಬರಲು ಪ್ರಯತ್ನಿಸಿದ್ದರೂ ಬಾಗಿಲ ಬಳಿ ಮುಟ್ಟಿದಾಗ ಮನೆ ಸಂಪೂರ್ಣ ಕುಸಿದು ಪ್ರೇಮ ಅವರು ಅಲ್ಲೇ ಮೃತಪಟ್ಟಿದ್ದರು. ಕಾಂತಪ್ಪ ಪೂಜಾರಿ ಗಾಯಗೊಂಡಿದ್ದರು. ಸೀತಾರಾಮ ಅವರ ಪತ್ನಿ ಅಶ್ವಿನಿ ಹಾಗೂ ಪುಟಾಣಿ ಇಬ್ಬರು ಪುಟಾಣಿ ಮಕ್ಕಳು ಮನೆಯೊಳಗೆ ಸಿಲುಕಿ ಹಾಕಿಕೊಂಡಿದ್ದರು. ಕೂಡಲೇ ಸೀತಾರಾಮ ಅವರು ಸಮೀಪದ ಮನೆಗೆ ಓಡಿ ಹೋಗಿ ವಿಷಯ ತಿಳಿಸಿದ್ದರು. ಕಾಂತಪ್ಪ ಪೂಜಾರಿ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಮನೆಯಡಿ ಸಿಲುಕಿದ್ದ ಅಶ್ವಿನಿ ಹಾಗೂ ಇಬ್ಬರು ಮಕ್ಕಳು ಜೀವಂತವಾಗಿದ್ದರೂ ರಕ್ಷಿಸಲು ಸಾಧ್ಯವಾಗಿರಲಿಲ್ಲ. ಬಳಿಕ ಸ್ಥಳಕ್ಕೆ ಆಗಮಿಸಿದ್ದ ಎನ್‌ಡಿಆರ್‌ಎಫ್, ಎಸ್ ಡಿಆರ್‌ಎಫ್, ಅಗ್ನಿಶಾಮಕ ದಳದ ಸಿಬ್ಬಂದಿಗಳು ಮಳೆಯನ್ನು ಲೆಕ್ಕಿಸದೆ ಪೊಲೀಸರು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಮಧ್ಯಾಹ್ನ ವೇಳೆಗೆ ಕಾರ್ಯಾಚರಣೆ ಪೂರ್ಣಗೊಂಡರೂ ಇಬ್ಬರು ಪುಟಾಣಿ ಮಕ್ಕಳು ಮೃತಪಟ್ಟಿದ್ದರು, ಅಲ್ಲದೆ ಅವರ ತಾಯಿ ಅಶ್ವಿನಿ ಅವರನ್ನು ಹೊರತೆಗೆದರೂ ಎರಡು ಕಾಲುಗಳನ್ನೂ ತುಂಡರಿಸಬೇಕಾದ ಸ್ಥಿತಿ ಎದುರಾಗಿತ್ತು.



ನೋವಿನ ಮಾತು

'ನನ್ನ ಮಕ್ಕಳನ್ನು ಮರಳಿ ಕೇಳುವುದಿಲ್ಲ, ಆದರೆ ಆ ಸಾವನ್ನು ಕೇವಲ ಅಪಘಾತ ಎಂದು ಮರೆತು ಬಿಡಬಾರದು. ಸತ್ಯವು ಹೊರಬರಲಿ. ನನ್ನಂತೆಯೇ ಇನ್ನೊಂದು ತಾಯಿ ಹೀಗೆ ಕಣ್ಣೀರಿನಲ್ಲಿ ಜೀವನ ನಡೆಸುವಂತಾಗಬಾರದು' ಎಂಬುದು ಎರಡು ಮಕ್ಕಳನ್ನು ಹಾಗೂ ಕಾಲುಗಳೆರಡನ್ನೂ ಕಳೆದುಕೊಂಡ ಅಶ್ವಿನಿ ಅವರ ನೋವಿನ ಮಾತು.

ಸಿಗದ ನ್ಯಾಯ

ಇದು ಕೇವಲ ಪ್ರಕೃತಿ ದುರಂತವಲ್ಲ, ಮನೆಯ ಹಿಂಭಾಗದ ಎತ್ತರದ ಪ್ರದೇಶದಲ್ಲಿ ಯಂತ್ರೋಪಕರಣಗಳನ್ನು ಬಳಸಿ ಬೆಟ್ಟ ಅಗೆದು ಅವೈಜ್ಞಾನಿಕ ರಸ್ತೆಯ ನಿರ್ಮಾಣವೇ ಈ ದುರಂತಕ್ಕೆ ಕಾರಣವಾಗಿದೆ ಎಂಬುದು ಮನೆಯವರ ಹಾಗೂ ಅವರ ಕುಟುಂಬದವರ ಆರೋಪ. ಇದಕ್ಕಾಗಿ ಅಶ್ವಿನಿ ಹಾಗೂ ಅವರ ಪತಿ ಸೀತಾರಾಮ ಅವರು ಅನೇಕ ಇಲಾಖೆ, ಕಚೇರಿಗಳಿಗೆ ದೂರನ್ನು ಕೊಡುತ್ತಾ ಬಂದಿದ್ದಾರೆ. ಇದೀಗ ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಿ ನೋವು ತೋಡಿಕೊಂಡಿದ್ದಾರೆ.



ಮಂಜನಾಡಿಯ ಈ ಭೀಕರ ದುರಂತವನ್ನು ಈ ಭಾಗದ ಜನತೆ ಮರೆತಿಲ್ಲ.

ಮಳೆಗಾಲಕ್ಕಿಂತ ಮುಂಚೆ ಮುನ್ನೆಚ್ಚರಿಕೆ ಅಗತ್ಯ

ಕಳೆದ ಮಳೆಗಾಲದ ಆರಂಭದಲ್ಲಿ ಉಳ್ಳಾಲ ತಾಲೂಕಿನ ಮಂಜನಾಡಿಯಲ್ಲಿ ಮೂವರು ಸಾವನ್ನಪ್ಪಿ ದುರಂತ ಸಂಭವಿಸಿದರೆ, ದೇರಳಕಟ್ಟೆಯಲ್ಲೂ ಮನೆಯ ಮೇಲೆ ಗುಡ್ಡ ಕುಸಿದು ಎಂಟರ ಬಾಲಕಿಯೊರ್ವಳು ಮೃತಪಟ್ಟಿದ್ದಳು. ಮಾತ್ರವಲ್ಲ ಹಲವೆಡೆ ಮನೆಗಳಿಗೆ ಗುಡ್ಡ ಕುಸಿದು ಅವಘಡಗಳು ನಡೆದಿದ್ದವು.

ಈ ಬಾರಿ ಮಳೆಗಾಲ ಆರಂಭಗೊಳ್ಳಲಿದ್ದು ಇದಕ್ಕಿಂತ ಮುಂಚೆಯೇ ಅಪಾಯಕಾರಿ ಪ್ರದೇಶಗಳು, ಮನೆಗಳ ಬಗ್ಗೆ ಅವಲೋಕನ ನಡೆಸಲು ಜಿಲ್ಲಾಡಳಿತವು ಗ್ರಾ.ಪಂ. ಅಧಿಕಾರಿಗಳಿಗೆ ಸೂಚನೆ ನೀಡಿದೆ.

> **ಈಗಾಗಲೇ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಗ್ರಾಮ ಪಂಚಾಯತಿಗಳು ಅಪಾಯಕಾರಿ ಮನೆಗಳನ್ನು ಗುರುತಿಸಿ ಮನೆಯವರಿಗೆ ಮಾಹಿತಿ ನೀಡಲು ತಿಳಿಸಲಾಗಿದೆ. ಮನೆಯ ಬಳಿ ಇರುವ ಖಾಸಗಿ ಜಮೀನಲ್ಲಿರುವ ಅಪಾಯಕಾರಿ ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಿಸಲು ಸರ್ಕಾರದಿಂದ ಅವಕಾಶವಿಲ್ಲ. ಅಂತಹ ಮನೆಯವರು ಮತ್ತು ಸ್ಥಳೀಯರು ಸೇರಿಕೊಂಡು ಸ್ವಯಂ ಸೇವೆಯೊಂದಿಗೆ ಮುನ್ನಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸ್ಥಳೀಯಾಡಳಿತ, ಸಂಘ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಪರಸ್ಪರ ಸಹಕಾರದೊಂದಿಗೆ ತೊಡಗಿಸಿಕೊಂಡು, ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಸನ್ನದ್ಧರಾಗಿರಬೇಕು.**
> ■ ಯು.ಟಿ.ಖಾದರ್, ವಿಧಾನಸಭಾ ಅಧ್ಯಕ್ಷರು

ಕೇರಳ ಸಾರಿಗೆಯಿಂದ ಈಗ ರಾಷ್ಟ್ರೀಯ, ಅಂತಾರಾಷ್ಟ್ರೀಯ ಟೂರ್ ಪ್ಯಾಕೇಜ್ ಸಿದ್ಧತೆ

• **ಕಾಸರಗೋಡು:** ಜಿಲ್ಲಾ ಮಟ್ಟದ ಮತ್ತು ಅಂತರ್ ಜಿಲ್ಲಾ ಮಟ್ಟದ ಬಸ್ ಪ್ರವಾಸಗಳ ಬೆನ್ನಲ್ಲೇ ಕಾಸರಗೋಡು ಸಹಿತ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೇರಳ ಕೆಎಸ್‌ಆರ್‌ಟಿಸಿಯು ರೈಲು, ವಿಮಾನ, ಹಡಗಿನ ಮೂಲಕ ಮಹತ್ತರ ಯೋಜನೆಯಾದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಟೂರ್ ಪ್ಯಾಕೇಜ್ ಹಮ್ಮಿಕೊಳ್ಳಲು ಸಕಲ ಸಿದ್ಧತೆಗಳನ್ನು ನಡೆಸುತ್ತಿದೆ.

2021ರಲ್ಲಿ ಆರಂಭಗೊಂಡ ಕೆಎಸ್ ಆರ್‌ಟಿಸಿ ವಿಭಾಗದ ಬಜೆಟ್ ಟೂರಿಸಂ ಪ್ಯಾಕೇಜ್‌ನ ಆದಾಯದ ಮೊತ್ತ ವರ್ಷದಿಂದ ವರ್ಷಕ್ಕೆ ಏರಿಕೆ ಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ, ತಮಿಳುನಾಡು, ಗೋವಾ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ದೇಶಾದ್ಯಂತ ಮತ್ತು ವಿದೇಶಗಳಿಗೆ ಪ್ರವಾಸಿಗರನ್ನು ಕರೆದೊಯ್ಯಲು ಕೆಎಸ್ ಆರ್‌ಟಿಸಿ ಸಜ್ಜಾಗುತ್ತಿದೆ.

ಕೆಎಸ್‌ಆರ್‌ಟಿಸಿಯಲ್ಲಿ ಜೂನ್ 15ರಿಂದ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತವಾಗಿರುವುದರಿಂದ ಆದಾಯ ಕುಸಿತಕ್ಕೆ ಪರಿಹಾರವಾಗಿ ಕಾಸರಗೋಡು ಜಿಲ್ಲಾ ಡಿಪ್ಪೋ ಕೂಡಾ ಕೆಎಸ್‌ಆರ್‌ಟಿಸಿ ಟೂರ್ ಪ್ಯಾಕೇಜ್‌ಗೆ ಯೋಜನೆ ರೂಪಿಸಿದೆ. ಈ ನಿಟ್ಟಿನಲ್ಲಿ ಕಾಸರಗೋಡಿನಿಂದ ಶೀಘ್ರದಲ್ಲೇ ಲಕ್ಷದ್ವೀಪಕ್ಕೆ ಪ್ರವಾಸ ಕೈಗೊಳ್ಳಲು ನಿರ್ಧರಿಸಲಾಗಿದೆ. ತಮಿಳುನಾಡು ಮತ್ತು ಆಂಧ್ರಪ್ರದೇಶ ಮುಂತಾದ ರಾಜ್ಯಗಳಿಗೆ ಟೂರಿಸಂ ಪ್ಯಾಕೇಜ್ ಜೂನ್ ತಿಂಗಳಲ್ಲಿ ಆರಂಭಗೊಳ್ಳಲಿದೆ. ಇದರ ಬೆನ್ನಲ್ಲೇ ಜಮ್ಮು ಕಾಶ್ಮೀರ, ಅಯೋಧ್ಯೆ ಮೊದಲಾದ ಉತ್ತರ ಭಾರತ ಯಾತ್ರೆಯನ್ನು ವ್ಯವಸ್ಥೆಗೊಳಿಸಲು ತೀರ್ಮಾನಿಸಲಾಗಿದೆ.



ಈ ವರ್ಷದಲ್ಲೇ ಅಖಿಲ ಭಾರತ ಟೂರ್ ಪ್ಯಾಕೇಜ್ ಅನುಷ್ಠಾನಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಕಳೆದ ವರ್ಷ ಬಜೆಟ್ ಟೂರಿಸಂ ಮೂಲಕ ಕಾಸರಗೋಡು ಡಿಪ್ಪೋ ಸಹಿತ ಕೆಎಸ್ ಆರ್‌ಟಿಸಿಗೆ 42 ಕೋಟಿ ರೂಪಾಯಿ ಆದಾಯ ದೊರಕಿದೆ. ಈ ವರ್ಷ ಮೇ 15ರ ತನಕ 23 ಕೋಟಿ ರೂಪಾಯಿ ಆದಾಯ ಲಭಿಸಿದೆ. ಆದರಂತೆ ಈ ವರ್ಷ ಕೇವಲ ನಾಲ್ಕೂವರೆ ತಿಂಗಳುಗಳಲ್ಲಿ ಕಳೆದ ವರ್ಷದ ಅರ್ಧಕ್ಕಿಂತಲೂ ಹೆಚ್ಚು ಆದಾಯ ದೊರೆತಿದೆ. ಕಳೆದ ವರ್ಷ ನಾಲ್ಕೂವರೆ ತಿಂಗಳುಗಳ ಅವಧಿಯಲ್ಲಿ 16 ಕೋಟಿ ರೂಪಾಯಿ ಆದಾಯ ಲಭಿಸಿತ್ತು. ಗೋವಾ, ಗವಿ, ಮುನ್ನಾರು, ವಯನಾಡು, ಕೊಚ್ಚಿ ಹಡಗು ಕೇಂದ್ರ ಮೊದಲಾದ ಪ್ರವಾಸಿ ಪ್ಯಾಕೇಜ್‌ಗಳಲ್ಲಿ ಆದಾಯ ಗಣನೀಯವಾಗಿ ಏರಿಕೆಯಾಗಿದೆ.

ಕೆಎಸ್‌ಆರ್‌ಟಿಸಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಏರ್ಪಡಿಸುವ ಹಿನ್ನೆಲೆಯಲ್ಲಿ ಕೆಲವರು ಟೂರ್ ಪ್ಯಾಕೇಜ್ ಯೋಜನೆಯಿಂದ ಹಿಂದೆ ಸರಿಯುತ್ತಿದ್ದಾರೆ. ಜಿಲ್ಲೆಯಿಂದ ಮೇ ಕೊನೆಯ ಎರಡು ದಿನಗಳಲ್ಲಿ ನಡೆಸಬೇಕಾದ ಹಲವು ಯಾತ್ರೆಗಳಿಗೆ ಸೀಟುಗಳು ಇನ್ನೂ ಬಾಕಿಯಿವೆ. ಕಾಸರಗೋಡು ಸೇರಿದಂತೆ ರಾಜ್ಯದ 93 ಡಿಪ್ಪೋಗಳ 80 ಕೇಂದ್ರಗಳಿಂದ ಟೂರ್ ಪ್ಯಾಕೇಜ್ ಸಜ್ಜುಗೊಳಿಸಲಾಗಿದೆ.

> ವೊಲ್ವೋ, ಡಿಲಕ್ಸ್ ಬಸ್‌ಗಳು, ಫಾಸ್ಟ್ ಪ್ಯಾಸೆಂಜರ್, ಸೂಪರ್ ಪಾಸ್ಟ್ ಬಸ್‌ಗಳನ್ನು ಪ್ರವಾಸೋದ್ಯಮಕ್ಕಾಗಿ ಉಪಯೋಗಿಸಲಾಗುತ್ತಿದೆ. ಪ್ರತಿಯೊಂದು ಟೂರ್‌ಗೆ ಪ್ರತ್ಯೇಕ ವಿಮಾ ವ್ಯವಸ್ಥೆಯಿದೆ. ಯಾವುದೇ ಒಂದು ಪ್ರದೇಶಕ್ಕೆ ಹಮ್ಮಿಕೊಳ್ಳುವ ಟೂರ್ ಪ್ಯಾಕೇಜ್‌ಗೆ ಬುಕ್ಕಿಂಗ್ ಪ್ರಕ್ರಿಯೆಯನ್ನು ಒಂದು ವಾರ ಮೊದಲೇ ಪೂರ್ತಿಗೊಳಿಸಬೇಕು. ಹಾಗಾದಲ್ಲಿ ಮಾತ್ರ ಸಮರ್ಪಕ ವ್ಯವಸ್ಥೆ ಕೈಗೊಳ್ಳಲು ಸಾಧ್ಯವಿದೆ ಎಂದು ಕಾಸರಗೋಡು ಡಿಪ್ಪೋ ಅಧಿಕಾರಿಗಳು ತಿಳಿಸಿದ್ದಾರೆ.

ಉಡುಪಿ ಯಕ್ಷಗಾನ ಕಲಾರಂಗಕ್ಕೆ ಉತ್ತರ ಕನ್ನಡ ಜಿಲ್ಲಾ ಯಕ್ಷಶ್ರೀ ಪ್ರಶಸ್ತಿ

• **ಉಡುಪಿ :** ಕುಂಭಾಶಿಯ ಪೂರ್ಣಚಂದ್ರ ಯಕ್ಷಕಲಾ ಪ್ರತಿಷ್ಠಾನವು ಕೆಲವು ವರ್ಷಗಳಿಂದ ಯಕ್ಷಗಾನದ ಮೇರು ನಟ 'ಕೊಂಡದಕುಳಿ ರಾಮ ಹೆಗಡೆ ಪ್ರಶಸ್ತಿ'ಯನ್ನು ಯಕ್ಷಗಾನ ಕಲಾ ಸಾಧಕರಿಗೆ ಪ್ರದಾನ ಮಾಡುತ್ತಾ ಬಂದಿದೆ. ಕಳೆದ ವರ್ಷ ಕಲೆ, ಸಾಹಿತ್ಯ, ಸಂಗೀತ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದ ಮಹಾನ್ ಸಾಧಕರಿಗೆ, ಸಂಘಟನೆಗೆ ನೀಡುವ ಉದ್ದೇಶದಿಂದ ರೂಪಾಯಿ ಒಂದು ಲಕ್ಷ ನಗದು ಪುರಸ್ಕಾರದ 'ಉತ್ತರ ಕನ್ನಡ ಜಿಲ್ಲಾ ಯಕ್ಷಶ್ರೀ ಪ್ರಶಸ್ತಿ'ಯನ್ನು ಪ್ರತಿಷ್ಠಾನ ಸ್ಥಾಪಿಸಿದೆ. ಪ್ರಥಮ ಪ್ರಶಸ್ತಿಯನ್ನು ಸಾರಸ್ವತ ಲೋಕದ ಅಪ್ರತಿಮ ವಿದ್ವಾಂಸ ಶತಾವಧಾನಿ ಡಾ. ಆರ್. ಗಣೇಶರಿಗೆ ಪ್ರದಾನ ಮಾಡಲಾಗಿತ್ತು. ಈ ವರ್ಷ ಮೇಲಿನ ಎರಡೂ ಪ್ರಶಸ್ತಿಯನ್ನು ಯಕ್ಷಗಾನ ಕಲೆ – ಕಲಾವಿದರ ಕ್ಷೇಮ ಚಿಂತನೆಯೊಂದಿಗೆ ಸಮಾಜಪರ ಕಾಳಜಿಯಿರುವ ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆಗೆ ನೀಡಲಾಗುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಮೇ 31ರಂದು ಅಪರಾಹ್ನ 2.30 ಗಂಟೆಗೆ ಉಡುಪಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ನಡೆಯಲಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಕೊಂಡದಕುಳಿ ರಾಮಚಂದ್ರ ಹೆಗಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮ್ಮನ ಅಪ್ಪುಗೆಯಲ್ಲಿ ನೋವು ಮರೆತ ನೊಂದ ಜೀವಗಳು...

• **ಮಂಗಳೂರು:** ಬೋಳೂರಿನ ಅಮೃತಾನಂದಮಯಿ ಮಠದಲ್ಲಿ ಎರಡು ದಿನಗಳ ಕಾಲ ನಡೆದ ಬ್ರಹ್ಮಸ್ಥಾನ ಮಹೋತ್ಸವ, ಅಮೃತ ಸಂಗಮ 2026 ಕಾರ್ಯಕ್ರಮಕ್ಕೆ ಭಕ್ತ ಪ್ರವಾಹವೇ ಹರಿದು ಬಂದಿದೆ. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿಸಿದ್ದಾರೆ.

ವಿಶ್ವದ ಅಗ್ರಮಾನ್ಯ ಆಧ್ಯಾತ್ಮಿಕ ನಾಯಕಿ, ಕರುಣೆ, ಮಮತೆಯ ಮಾತೆಯನ್ನು ಹತ್ತಿರದಿಂದ ಕಾಣಬೇಕೆಂಬ ಲಕ್ಷಾಂತರ ಭಕ್ತರ ಕನಸು ಈಡೇರಿದೆ. ಎರಡೂ ದಿನವೂ ಭಕ್ತರ ದಂಡು ಬೋಳೂರು ಮಠದ ಆವರಣದಲ್ಲಿ ತುಂಬಿತ್ತು. ಕಾರ್ಯಕ್ರಮ ಕೂಡ ಅಚ್ಚುಕಟ್ಟಾಗಿ ನಡೆಯುವ ಮೂಲಕ ಸೇವಾ ಸಮಿತಿಯ ಶ್ರಮ ಸಾರ್ಥಕ್ಯ ಕಂಡಿತು.

ಏಳು ವರ್ಷಗಳ ಬಳಿಕ ಮಂಗಳೂರಿನಲ್ಲಿ ಅಮ್ಮನ ಕಾರ್ಯಕ್ರಮದ ಆಯೋಜನೆಯಾಗಿದ್ದ ರಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

ಊಟೋಪಚಾರ ವ್ಯವಸ್ಥೆ

ಅಮೃತ ಸಂಗಮಕ್ಕಾಗಿ ಆಗಮಿಸಿದ್ದ ಪ್ರತಿಯೊಬ್ಬರಿಗೂ ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಕಾರ್ಯಕ್ರಮದ ನಡು ನಡುವೆ ಮಜ್ಜಿಗೆ, ನೀರು, ಬಿಸ್ಕತ್ ವಿತರಿಸುತ್ತಿದ್ದ ಆಯುಧ್ ಸ್ವಯಂ ಸೇವಕರ ಶ್ರಮ ಕಾರ್ಯಕ್ರಮದ ಅಚ್ಚುಕಟ್ಟುತನಕ್ಕೆ ಸಾಕ್ಷಿಯಾಯಿತು. ಬೆಳಗ್ಗಿನಿಂದ ರಾತ್ರಿಯವರೆಗೆ ಭಕ್ತರು ಅಮ್ಮನನ್ನು ಕಾಣಲು ಬರುತ್ತಲೇ ಇದ್ದರು.



ಟೋಕನ್ ಪಡೆದು ಕಾದು ಕುಳಿತರು

ಅಮ್ಮನ ಆಲಿಂಗನದ ಆಶೀರ್ವಾದ ಪಡೆಯಲು ಟೋಕನ್ ವ್ಯವಸ್ಥೆ ಮಾಡಲಾಗಿದ್ದು, ಬೆಳಗ್ಗೆಯೇ ಜನತೆ ಟೋಕನ್‌ಗಾಗಿ ಕಾದಿದ್ದರು. ಬಳಿಕ ಟೋಕನ್ ಪಡೆದು ಅಮ್ಮನ ದರ್ಶನಕ್ಕಾಗಿ ಕಾದು ಕುಳಿತಿದ್ದರು. ಬೆಳಗ್ಗಿನಿಂದ ರಾತ್ರಿಯವರೆಗೆ ನಡೆದ ಪ್ರವಚನ, ಸತ್ಸಂಗ, ಧ್ಯಾನ, ಅಮೃತಾಲಿಂಗನದಲ್ಲಿ ಭಕ್ತರು ತನ್ಮಯತೆಯಿಂದ ಪಾಲ್ಗೊಂಡರು.

ಮಾನವೀಯತೆ ಮೆರೆದ ಬಸ್ ಚಾಲಕ-ನಿರ್ವಾಹಕರು

• **ಮಂಗಳೂರು:** ನಗರದ ಕಾವೂರು ಮರಕಡ ಬಳಿ ಬಸ್ಸೊಂದರಲ್ಲಿ ಪ್ರಯಾಣಿಸುತ್ತಿದ್ದ ತಾಯಿ ಮಗು ಏಕಾಏಕಿ ಬಸ್‌ನಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಮತ್ತೊಂದು ಬಸ್‌ನ ಚಾಲಕ-ನಿರ್ವಾಹಕ ತಮ್ಮ ಬಸ್‌ನಲ್ಲಿಯೇ ಆಸ್ಪತ್ರೆಗೆ ಸಾಗಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಮಾಸ್ಟರ್ ಬಸ್‌ನ ಚಾಲಕ ದಯಾನಂದ್ ಮತ್ತು ನಿರ್ವಾಹಕ ಸಂದೀಪ್ ಅವರ ಮಾನವೀಯ ಸೇವೆಗೆ ಶ್ಲಾಘನೆ ವ್ಯಕ್ತವಾಗಿದೆ.

13ಬಿ ನಂಬರ್ ಮಾಸ್ಟರ್ ಬಸ್ ಕಾವೂರುನಿಂದ ಕುಂಜತ್ತ್‌ಬೈಲ್‌ಗೆ ಸಂಚರಿಸುತ್ತಿತ್ತು. ಮರಕಡ ಜಂಕ್ಷನ್ ಬಳಿ ತೆರಳುವಾಗ ಎದುರಿನಿಂದ ಹೋಗುತ್ತಿದ್ದ ಬಸ್‌ನಿಂದ ತಾಯಿ ಮಗು ಸಹಿತ ಕೆಳಗೆ ಬಿದ್ದಿದ್ದಾರೆ. ಇದನ್ನು ನೋಡಿದ ಹಿಂದಿನ ಮಾಸ್ಟರ್ ಬಸ್‌ನ ಚಾಲಕ ಮತ್ತು ನಿರ್ವಾಹಕ ಕೂಡಲೇ ಮಗು-ತಾಯಿ ಬಳಿ ತೆರಳಿ ಸಂತೈಸಿದ್ದಾರೆ. ಈ ಸಂದರ್ಭ ಮಗು ಆಘಾತದಿಂದ ಯಾವುದೇ ಸ್ಪಂದನೆ ನೀಡದಿದ್ದಾಗ ಎಲ್ಲರೂ ಆತಂಕಕ್ಕೊಳಗಾಗಿದ್ದಾರೆ. ತುರ್ತು ಆಸ್ಪತ್ರೆಗೆ ಕರೆದೊಯ್ಯಲು ಅಲ್ಲಿ ಕಾರು, ರಿಕ್ಷಾ ಸೇರಿದಂತೆ ಯಾವುದೇ ವಾಹನಗಳು ಇಲ್ಲದ ಕಾರಣ ಮಗುವಿನ ಜೀವ ರಕ್ಷಣೆಗಾಗಿ ಮಾಸ್ಟರ್ ಬಸ್‌ನ ಚಾಲಕ-ನಿರ್ವಾಹಕರು ತಮ್ಮ ಬಸ್‌ನಲ್ಲಿದ್ದ 15 ಮಂದಿ ಪ್ರಯಾಣಿಕರನ್ನು ಕೆಳಗೆ ಇಳಿಸಿ, ಬಸ್ಸನ್ನು ಯೂಟರ್ನ್ ಹೊಡೆದು ತಾಯಿ ಮತ್ತು ಮಗುವನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಹಾರ್ನ್ ಹಾಕುತ್ತಲೇ ಬಸ್ಸನ್ನು ವೇಗವಾಗಿ ಚಲಿಸಿ ಕುಂಟಿಕಾನದಲ್ಲಿರುವ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮಗುವನ್ನು ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಮಿನಿ ಲೈಬ್ರೇರಿಯಾದ ಆಟೋರಿಕ್ಷಾ ! ಇದರಲ್ಲಿದೆ ಡಸ್ಟ್ ಬಿನ್, ಪ್ರಥಮ ಚಿಕಿತ್ಸಾ ಪೆಟ್ಟಿಗೆ!!


• **ಬಂಟ್ವಾಳ:** ಒಂದಷ್ಟು ಮಕ್ಕಳ ಚಿತ್ರಕಥೆ ಪುಸ್ತಕಗಳು, ಆದರ ಜೊತೆಗೆ ಕಾದಂಬರಿಗಳು, ಚಿತ್ರಗೀತೆ, ಕ್ಷೇತ್ರ ಪರಿಚಯ, ಸಾಮಾನ್ಯ ಜ್ಞಾನದ ಪುಸ್ತಗಳು... ಜೊತೆಗೆ ಕಣ್ಣಿಗೆ ಕಾಣುವಂತೆ ನೇತಾಡಿಕೊಂಡಿದೆ.

ಶ್ರೇಷ್ಠ ದಾರ್ಶನಿಕರ, ಚಿಂತಕರ, ತತ್ವಜ್ಞಾನಿಗಳ, ಸಾಹಿತಿಗಳ ವಾಕ್ಯಗಳು..ಪ್ರಥಮ ಚಿಕಿತ್ಸಾ ಹಾಗೂ ಸಣ್ಣ ಡಸ್ಟ್ ಬಿನ್ ವ್ಯವಸ್ಥೆ ಇದೆಲ್ಲವೂ ಆಟೋ ರಿಕ್ಷಾದಲ್ಲಿ ಕಾಣಬಹುದು ಎಂಬುದನ್ನು ನೀವು ನಂಬುತ್ತಿರಾ! ಇದೆಲ್ಲವನ್ನು ಈ ಆಟೋರಿಕ್ಷಾದಲ್ಲಿ ಪ್ರತ್ಯಕ್ಷವಾಗಿ ಕಾಣಬಹುದಾಗಿದೆ..

ತನ್ನ ಆಟೋ ರಿಕ್ಷಾದಲ್ಲಿ ಇಂತಹವೊಂದು ಪರಿಕಲ್ಪನೆಯನ್ನು ರೂಪಿಸಿದವರು ಆಟೋ ಚಾಲಕ ಸುಶಾನ್ ಬಿ.ಸಿ.ರೋಡು ಅವರು ಮೂಲತ: ನೀರಪಾದೆ ನಿವಾಸಿಯಾಗಿರುವ ಸುಶಾನ್ ಪ್ರಸ್ತುತ ಬಿ.ಸಿ.ರೋಡಿನ ಅಜ್ಜಿಬೆಟ್ಟುವಿನಲ್ಲಿ ವಾಸ್ತವ್ಯವಿದ್ದಾರೆ.

ಗೋಡೆ ಚಿತ್ರಕಲಾವಿದನಾಗಿರುವ ಇವರು ಆಟೋ ರಿಕ್ಷಾ ಹಾಗೂ ಕ್ಯಾಟರಿಂಗ್ ನಲ್ಲಿ ಪಾಟ್ ಟೈಮ್ ಆಗಿಯೂ ಕೆಲಸ ಮಾಡುತ್ತಾರೆ. ಸ್ವತಃ ಪುಸ್ತಕ ಪ್ರೇಮಿಯಾಗಿರುವ ಸುಶಾನ್ ಅವರು ಜನರಲ್ಲಿ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ತನ್ನ ಬಾಡಿಗೆ ರಿಕ್ಷಾದಲ್ಲಿ ಮಿನಿ ಲೈಬ್ರರಿಯನ್ನು ತೆರೆದು ಅಚ್ಚರಿ ಮೂಡಿಸಿದ್ದಾರೆ. ಮಕ್ಕಳಿಗೆ , ಹಿರಿಯರಿಗೆ ಬೇಕಾಗುವ ಪುಸ್ತಕಗಳು ಈ ರಿಕ್ಷಾದಲ್ಲಿದೆ. ಪ್ರಯಾಣಿಕರು ಈ ಪುಸ್ತಕಗಳನ್ನು ತಮ್ಮ ಮನೆಗೆ ಕೊಂಡೊಯ್ದು ಓದಿದ ಬಳಿಕ ಬಿ.ಸಿ.ರೋಡಿನಲ್ಲಿರುವ ಆಟೋರಿಕ್ಷಾ ಪಾರ್ಕಿಂಗ್‌ನಲ್ಲಿ ಹಿಂತಿರುಗಿಸಬಹುದಾಗಿದೆ. ಪ್ರಯಾಣದ ವೇಳೆ ಪುಸ್ತಕ ಓದುವುದು ಕಣ್ಣಿಗೆ ತೊಂದರೆಯಾಗುವುದರಿಂದ ಪ್ರಯಾಣದ ವೇಳೆ ಓದಲು ಅವಕಾಶ ನೀಡುವುದಿಲ್ಲ ಎನ್ನುತ್ತಾರೆ ಸುಶಾನ್. ಇದರಿಂದ ಪ್ರಯಾಣಿಕರೊಂದಿಗೆ ಮತ್ತೆಯೂ ಉತ್ತಮ ಬಾಂಧವ್ಯ ಹೊಂದಲು ಸಾಧ್ಯವಿದೆ ಎನ್ನುತ್ತಾರೆ ಅವರು. ಈಗಾಗಲೇ ಅನೇಕ ಮಂದಿ ಪುಸ್ತಕಗಳನ್ನು ಕೊಂಡೊಯ್ದು, ಓದಿ, ಹಿಂದಿರುಗಿಸಿದ್ದಾರೆ. ಏಳೆಂಟು ಪುಸ್ತಕಗಳನ್ನು ಆಸಕ್ತ ಪ್ರಯಾಣಿಕರು ಕೊಂಡು ಹೋಗಿದ್ದಾರೆ. ಮಧ್ಯಾಹ್ನ ಬಿಡುವಿನ ವೇಳೆಯಲ್ಲಿ ಇತರ ಚಾಲಕರು ಬಂದು ಪುಸ್ತಕಗಳನ್ನು ಓದಿ, ಜ್ಞಾನ ಹೆಚ್ಚಿಸಿಕೊಳ್ಳುತ್ತಾರೆ ಎಂದು ಸುಶಾನ್ ಖುಷಿ ಪಟ್ಟುಕೊಳ್ಳುತ್ತಾರೆ.





ಇನ್ನಷ್ಟು ಹೊಸ ಸೇರ್ಪಡೆ

ರಿಕ್ಷಾದಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಇನ್ನಷ್ಟು ಹೊಸ ಸೌಲಭ್ಯಗಳನ್ನು ರಿಕ್ಷಾದೊಳಗೆ ಕಲ್ಪಿಸುವ ಯೋಜನೆ ಸುಶಾನ್ ಅವರಲ್ಲಿದೆ. ಚಾಕ್ಲೆಟ್ ಮತ್ತಿತರ ತಿಂಡಿಗಳ ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ರಸ್ತೆಗೆ ಎಸೆಯುವ ಬದಲು ಸ್ವಚ್ಚತೆ ಕಾಪಾಡುವ ನಿಟ್ಟಿನಲ್ಲಿ ರಿಕ್ಷಾದಲ್ಲಿಯೇ ಸಣ್ಣ ಡಸ್ಟ್ ಬಿನ್ ಅಳವಡಿಸಲಿದ್ದಾರೆ. ಇದೀಗ ಆಟೋರಿಕ್ಷಾಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಯೇ ಕಣ್ಮರೆಯಾಗಿದ್ದು, ಸುಶಾನ್ ಅವರು ತುರ್ತು ಚಿಕಿತ್ಸೆಗಾಗಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಕೂಡ ಅಳವಡಿಸಿಕೊಂಡಿದ್ದಾರೆ. ಕುಡಿಯುವ ನೀರಿಗಾಗಿ ಬಿಸಿನೀರಿನ ಥರ್ಮಾಸ್, ಲಸ್ಸಿ, ಮಜ್ಜಿಗೆ ಮೊದಲಾದ ತಂಪು ಪಾನೀಯ ವ್ಯವಸ್ಥೆ, ಬೆಳಗ್ಗಿನ ವೇಳೆ ದಿನ ಪತ್ರಿಕೆ ಮೊದಲಾದ ವ್ಯವಸ್ಥೆಗಳನ್ನು ಕಲ್ಪಿಸುವ ಯೋಜನೆ ಇದೆ ಎನ್ನುತ್ತಾರೆ ಸುಶಾನ್.

ಗಿಡಗಳು, ಆಕರ್ಷಣೀಯ ಬರಹಗಳು

ರಿಕ್ಷಾದ ಎರಡು ಮಗ್ಗಲುಗಳಲ್ಲಿ ಕುಂಡಗಳಲ್ಲಿ ಗಿಡವನ್ನು ನೆಟ್ಟಿದ್ದು ಪ್ರಯಾಣಿಕರ ಗಮನ ಸೆಳೆಯುತ್ತದೆ. ರಿಕ್ಷಾದೊಳಗೆ ಜೋಡಿಸಿರುವ ಶ್ರೇಷ್ಠ ಚಿಂತಕರು, ತತ್ವಜ್ಞಾನಿಗಳ ಸಾಲುಗಳು ಒಂದಷ್ಟು ಸದ್ವಿಚಾರಗಳನ್ನು ಪ್ರಯಾಣಿಕರ ಮಸ್ತಕಕ್ಕೆ ತುಂಬುತ್ತದೆ. ರಿಕ್ಷಾದ ಎರಡೂ ಬದಿಗಳಲ್ಲಿ ದೇಶ ಕಾಯುವ ಯೋಧರು ನಿಜವಾದ ಹೀರೋಗಳು ಹಾಗೂ ಅಗ್ನಿಶಾಮಕ ತುರ್ತು ಸೇವೆಯ ಬರಹಗಳಿದೆ.

ಓದುಗರಿಗೆ ಪ್ರಯೋಜನ

> **ನನಗೆ ಮೊದಲಿನಿಂದಲು ಪುಸ್ತಕ ಓದುವ ಹವ್ಯಾಸ ಇದೆ. ಜಾತ್ರೆ, ವಸ್ತು ಪ್ರದರ್ಶನ, ಮಾರಾಟ ಮೇಳಗಳಿಗೆ ಓದಾಗ ಪುಸ್ತಕಗಳನ್ನು ಖರೀದಿಸುತ್ತೇನೆ. ಇದು ಮನೆಯಲ್ಲಿ ಉಳಿದರೆ ಏನು ಪ್ರಯೋಜನವಿಲ್ಲ, ಅದರ ಬದಲು ಸಾವಿರಾರು ಮಂದಿ ಪ್ರಯಾಣಿಸುವ ರಿಕ್ಷಾದಲ್ಲಿದ್ದರೆ ಆಸಕ್ತ ಓದುಗರಿಗೆ ಪ್ರಯೋಜನವಾಗುತ್ತದೆ. ಈ ಕಾರಣಕ್ಕಾಗಿ ರಿಕ್ಷಾದಲ್ಲಿ ಗ್ರಂಥಾಲಯ ತೆರೆದಿದ್ದೇನೆ. ಇದರಿಂದಾಗಿ ಪ್ರಯಾಣಿಕರೊಂದಿಗೆ ಉತ್ತಮ ಸ್ನೇಹ, ಬಾಂಧವ್ಯ ಬೆಳೆಯಲು ಸಾಧ್ಯವಿದೆ**
> ■ ಸುಶಾನ್

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಇಂದಿನ ಹವಾಮಾನ



ದಕ್ಷಿಣ ಕನ್ನಡ	ಉಡುಪಿ
35⁰ 27⁰	34⁰ 28⁰




ಪುಟ 2
ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಮೀನಮೇಷ



ಪುಟ 5
100 ಕೋ.ರೂ. ಅಭಿವೃದ್ಧಿ ಪ್ಯಾಕೇಜ್‌ಗೆ ಕರಡು ಯೋಜನೆ ಸಲ್ಲಿಕೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!



ಮಂಗಳೂರಿನ ತಣ್ಣೀರ್‌ಭಾವಿ ಬ್ಲೂ ಬೇ ಇಕೋ ಬೀಚ್‌ನಲ್ಲಿ ಶುಕ್ರವಾರ ಏಳನೇ ಆವೃತ್ತಿಯ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಆರಂಭಗೊಂಡಿದ್ದು, ಸರ್ಫರ್‌ಗಳು ಸಮುದ್ರದ ಅಲೆಗಳ ನಡುವೆ ಅದ್ಭುತ ಪ್ರದರ್ಶನ ನೀಡುವ ಮೂಲಕ ಅಲ್ಲಿ ಸೇರಿದ್ದವರನ್ನು ಚಕಿತರನ್ನಾಗಿಸಿದರು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಸರ್ಫರ್‌ಗಳು ಸಮುದ್ರ ಅಲೆಗಳ ಮಧ್ಯೆ ತಮ್ಮ ಕೌಶಲ್ಯ ಪ್ರದರ್ಶಿಸಿ ಪ್ರೇಕ್ಷಕರ ಮನಗೆದ್ದರು.

ಸುತ್ತಮುತ್ತ

ಎಲ್ಲೆಡೆ ಈಗ ಮೋಡಕ್ಕೆ ಸೀಮಿತವಾಗಿದೆ ಆಗಸ: ಮಳೆ ನಿರೀಕ್ಷೆಯಲ್ಲಿ ಜನತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶುಕ್ರವಾರವೂ ದಿನಪೂರ್ತಿ ಮೋಡ ಮುಸುಕಿದ ವಾತಾವರಣ ಮುಂದುವರಿದಿದ್ದು, ಗ್ರಾಮೀಣ ಭಾಗದ ಕೆಲವೆಡೆ ಹನಿಹನಿ ಮಳೆಯಾಗಿದೆ. ಉಳಿದಂತೆ ಮತ್ತೆ ತಾಪಮಾನ ಏರಿಕೆ ಕಂಡಿದ್ದು, ಅಸಾಧ್ಯ ಸೆಕೆ ಹೈರಾಣಾಗಿಸುತ್ತಿದೆ. ಸಂಜೆಯ ಬಳಿಕ ವಾತಾವರಣ ತಂಪಾಗುತ್ತಿದ್ದು, ಜಿಲ್ಲೆಯ ಗರಿಷ್ಠ ಉಷ್ಣಾಂಶ ಶುಕ್ರವಾರ ಮತ್ತೆ 33 ಡಿಗ್ರಿ ಸೆಲ್ಸಿಯೆಸ್‌ಗೆ ಏರಿಕೆ ಕಂಡಿತ್ತು. ರಾತ್ರಿ ಕೆಲವೆಡೆ ಅಲ್ಪ ಮಳೆಯಾಗಿದೆ.

ಅರಂತೋಡು ಭಾಗದಲ್ಲಿ ಮತ್ತೆ ಕಾಡಾನೆಗಳ ಕಾಟ: ಕೃಷಿಕ ಮತ್ತಷ್ಟು ಕಂಗಾಲು

ಸುಳ್ಯ: ತಾಲೂಕಿನ ಅರಂತೋಡು, ತೊಡಿಕಾನ ಭಾಗದಲ್ಲಿ ಕಾಡಾನೆ ಹಾವಳಿ ಮರುಕಳಿಸಿದ್ದು, ಅಪಾರ ಪ್ರಮಾಣದಲ್ಲಿ ಇವು ಕೃಷಿ ನಾಶ ಉಂಟುಮಾಡುತ್ತಿವೆ. ಏಕಾಏಕಿ ಕೃಷಿ ಭೂಮಿಗೆ ಹಿಂಡು ಹಿಂಡಾಗಿ ಲಗ್ಗೆಯಿಡುತ್ತಿರುವ ಆನೆಗಳು ಅಡಿಕೆ, ಬಾಳೆ ಗಿಡಗಳನ್ನು ಎಲ್ಲೆಡೆಂದರಲ್ಲಿ ಪುಡಿಗಟ್ಟುತ್ತಿವೆ. ಅರಣ್ಯ ಇಲಾಖೆ ತಕ್ಷಣವೇ ಈ ಬಗ್ಗೆ ಗಮನಹರಿಸಿ ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯುವಂತೆ ಈ ಭಾಗದ ಕೃಷಿಕರು ಆಗ್ರಹಿಸಿದ್ದಾರೆ.

ಡೆಂಗ್ಯೂ ರೋಗ ತಡೆಗೆ ಮಂಗಳೂರು ನಗರದಲ್ಲಿ ಫಾಗಿಂಗ್ ಕಾರ್ಯ ಶುರು

ಮಂಗಳೂರು: ನಗರದಲ್ಲಿ ಡೆಂಗ್ಯೂ, ಮಲೇರಿಯಾ ಮೊದಲಾದ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಮುಂದಾಗಿರುವ ನಗರ ಪಾಲಿಕೆ, ವಿವಿಧ ಭಾಗದಲ್ಲಿ 'ಫಾಗಿಂಗ್' ಕಾರ್ಯ ಆರಂಭಿಸಿದೆ. ನಗರದಲ್ಲಿ ಬಿಟ್ಟೂ ಬಿಟ್ಟೂ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಸೊಳ್ಳೆಗಳ ಕಾಟ ಆರಂಭವಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದ್ದು, ರೋಗ ನಿಯಂತ್ರಣಕ್ಕಾಗಿ ಪಾಲಿಕೆಯಲ್ಲಿ ಪ್ರತ್ಯೇಕ ನಿಯಂತ್ರಣ ಘಟಕವನ್ನು ಕೂಡಾ ಸ್ಥಾಪಿಸಿ ಎಲ್ಲೆಡೆ ನಿಗಾ ಇರಿಸಲಾಗಿದೆ.

ಕರಾವಳಿ ಭಾಗಕೆ ಮತ್ತೆ ಮಳೆಯ 'ಭವಿಷ್ಯ' ನುಡಿದ ಹವಾಮಾನ ಇಲಾಖೆ

ಮಂಗಳೂರು: ಮುಂದಿನ ಎರಡು ದಿನಗಳ ಕಾಲ ಕರಾವಳಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಜೂ.1ರಂದು ಕಾಸರಗೋಡು ಸಹಿತ ಕೇರಳದಲ್ಲಿ ಭಾರೀ ಮಳೆಯ ಸಾಧ್ಯತೆ ಇದೆ.

ಮಳೆ ನಿರೀಕ್ಷೆ ನಡುವೆ ಮತ್ತೆ ಏರಿಕೆಯಾದ ತಾಪ

ಬೆವರಿಳಿಸಿದೆ ಮತ್ತೆ ಬಿಸಿ

ಆರ್ದ್ರ ವಾತಾವರಣಕ್ಕೆ ಕೈಕೊಡ್ತಿದೆ ಆರೋಗ್ಯ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದಲ್ಲಿ ಆರ್ದ್ರ ಹವೆ ಕಾಣಿಸಿಕೊಳ್ಳುತ್ತಿದ್ದು, ಮೋಡ, ಬಿಸಿಲು, ಉಷ್ಣಾಂಶ ಸಮ್ಮಿಶ್ರ ವಾತಾವರಣ ಈಗ ನಾಗರಿಕರನ್ನು ಕಂಗಾಲಾಗಿಸಿದೆ.

ತಾಪಮಾನದಲ್ಲೂ ಏರಿಕೆ ಆಗಿದೆ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಪ್ರಸ್ತುತ ಹೆಚ್ಚಿನ ತಾಪಮಾನ ದಾಖಲಾಗುತ್ತಿದೆ. ಸರಾಸರಿ ಗರಿಷ್ಠ ತಾಪಮಾನವು 33 ರಿಂದ 35 ಡಿಗ್ರಿ ಸೆಲ್ಸಿಯಸ್ ನಡುವೆ ದಾಖಲಾಗುತ್ತಿದ್ದು, ಕನಿಷ್ಠ ತಾಪಮಾನವು 25 ರಿಂದ 27 ಡಿಗ್ರಿ ಸೆಲ್ಸಿಯಸ್ ವರೆಗೆ ಇದೆ. ಮಳೆ ಆರಂಭಕ್ಕೂ ಮೊದಲು ಇಂತಹ ಆರ್ದ್ರ ಸ್ಥಿತಿ ಸಾಮಾನ್ಯ. ಸಮುದ್ರದಿಂದ ಬರುವ ತೇವಾಂಶ ಹೆಚ್ಚಿದಂತೆ ದೇಹದ ಉಷ್ಣತೆ ಹೆಚ್ಚಾಗಿ ಈ ಅನುಭವವಾಗುತ್ತದೆ ಎಂದು ತಜ್ಞರು ಅಭಿಪ್ರಾಯಿಸಿದ್ದಾರೆ.

ಆದರೆ ಇದರ ಪರಿಣಾಮವಾಗಿ ಎಲ್ಲೆಡೆ ಉಸಿರಾಟದ ತೊಂದರೆ, ಬೆವರು, ಅಸ್ವಸ್ಥತೆ ಮತ್ತು ಉರಿ ಬಿಸಿಲಿನ ಅಡ್ಡಪರಿಣಾಮ ಪ್ರಕರಣಗಳು ಈಗ ಹೆಚ್ಚುತ್ತಲೇ ಇದೆ.



- ಜೂನ್ 4ರ ಸುಮಾರಿಗೆ ಮುಂಗಾರು ಪ್ರವೇಶ ಸಾಧ್ಯತೆ
- ಜೂನ್ ಎರಡನೇ ವಾರದಿಂದ ಮಳೆ ತೀವ್ರತೆ ಹೆಚ್ಚಳ ಸಾಧ್ಯತೆ
- ಕರಾವಳಿಯಲ್ಲಿ ಪಶ್ಚಿಮ ಮಾರುತಗಳ ಮುನ್ಸೂಚನೆ
- ಅರಬ್ಬಿ ಸಮುದ್ರದಲ್ಲಿ ಅಲೆಗಳ ತೀವ್ರತೆ ಹೆಚ್ಚುವ ಸಾಧ್ಯತೆ
- ಕಡಲ ತೀರದ ಜನತೆಗೆ ಪ್ರವಾಸಿಗರಿಗೆ ಮುನ್ನೆಚ್ಚರಿಕೆ

ಜೂನ್ ಎರಡನೇ ವಾರದಿಂದ ಭಾರೀ ಮಳೆ?

ಆಫ್ರಿಕಾದ ಸೊಮಾಲಿಯಾ ಭಾಗದಿಂದ ಅರಬ್ಬಿ ಸಮುದ್ರದ ಮೂಲಕ ಭಾರತ ಕಡೆಗೆ ಬೀಸುವ ಬಲವಾದ ಗಾಳಿಯ ಪ್ರವಾಹ ಬಲಗೊಳ್ಳುತ್ತಿದ್ದು, ಇದರ ಪರಿಣಾಮವಾಗಿ ಜೂನ್ ಎರಡನೇ ವಾರದಲ್ಲಿ ಅರಬ್ಬಿ ಸಮುದ್ರದಿಂದ ಕರಾವಳಿ ಕರ್ನಾಟಕದ ಕಡೆಗೆ ಬಲವಾದ ಪಶ್ಚಿಮ ಮಾರುತಗಳು ಬೀಸುವ ನಿರೀಕ್ಷೆಯಿದೆ. ಇದರ ಪರಿಣಾಮವಾಗಿ, ಜೂನ್ ಎರಡನೇ ವಾರದಿಂದ ಕರಾವಳಿಯಾದ್ಯಂತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಂಗಳೂರಿಗೆ ರಾತ್ರಿ ತುಸು ತಂಪೆರೆದ ಮಳೆ

ಶುಕ್ರವಾರ ದಿನಪೂರ್ತಿ ಸುಡು ತಾಪದಿಂದ ಕಂಗೆಟ್ಟಿದ್ದ ಮಂಗಳೂರು ನಗರಕ್ಕೆ ರಾತ್ರಿ ಮಳೆಯ ಆಗಮನವಾಗಿದ್ದು, ಕೆಲಕಾಲ ಸುರಿದ ಮಳೆ ಒಂದಿಷ್ಟು ತಂಪಿನ ಅನುಭವ ನೀಡಿದೆ. ಹಠಾತ್ ಮಳೆಯಿಂದ ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಉಡುಪಿ ಜಿಲ್ಲೆಯಲ್ಲಿ ಕೈಕೊಟ್ಟ ಮಳೆರಾಯ

ಉಡುಪಿಯಾದ್ಯಂತ ಶುಕ್ರವಾರದ ದಿನದಂದು ಮಳೆಯಾಗದೆ ಒಣ ಹವೆ ಮುಂದುವರಿದಿದೆ ಮುಂಜಾನೆಯಿಂದ ಸಂಜೆಯವರೆಗೆ ದಿನವಿಡೀ ದಟ್ಟವಾದ ಮೋಡ ಕವಿದ ವಾತಾವರಣವೇ ಇತ್ತು.

24X7 ಸಾಗಿದೆ ಉಚಿತ ನೀರು ಪೂರೈಕೆ

ರಾಜಾರಸ್ತೆಯಲ್ಲಿದೆ ಉಚಿತ ಸ್ನಾನಗೃಹ!

ತಿಂಗಳಾದರೂ ಆಡಳಿತ ಮೌನ

ಬಂಟ್ವಾಳ: ಬಿ.ಸಿ.ರೋಡ್‌ನ ರಾಜಾರಸ್ತೆಯಲ್ಲಿ ಕಳೆದ ಒಂದು ತಿಂಗಳಿನಿಂದ ಕಾರಂಜಿಯಂತೆ ನೀರು ಚಿಮ್ಮಿ ಪೋಲಾಗುತ್ತಿದ್ದು, ಭಿಕ್ಷುಕರ ಸಹಿತ ಅನಾಥರು ಇದೇ ನೀರಲ್ಲಿ ಸ್ನಾನಾದಿಗಳಲ್ಲಿ ತೊಡಗಿದ್ದರೂ, ಬಂಟ್ವಾಳ ಪುರಸಭೆ ಮಾತ್ರ ಇನ್ನು ಎಚ್ಚೆತ್ತುಕೊಂಡಿಲ್ಲ!

ಸಾರ್ವಜನಿಕ ವಲಯದಲ್ಲಿ ಆಕ್ರೋಶ

ಸದ್ಯ ಬಂಟ್ವಾಳ ನಗರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಅಷ್ಟೊಂದು ಸಮಸ್ಯೆ ತಲೆದೋರದಿದ್ದರೂ ಕಳೆದ ಒಂದು ತಿಂಗಳಿನಿಂದ ಬಿ.ಸಿ.ರೋಡಿನ ಹೆದ್ದಾರಿಯಲ್ಲೇ ಪೈಪ್ ಒಡೆದು ನೀರು ಪೋಲಾಗುತ್ತಿರುವುದು ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಬಿ.ಸಿ.ರೋಡ್‌ನ ರೈಲ್ವೆ ಮೇಲ್ಸೇತುವೆಯಲ್ಲಿ ಕುಡಿಯುವ ನೀರು ಸರಬರಾಜಿನ ಪೈಪ್ ಲೈನ್ ಒಡೆದು ನೀರು ಚಿಮ್ಮುತ್ತಿದ್ದು, ಭಿಕ್ಷುಕರು, ಅನಾಥರು ಸ್ನಾನ, ಬಟ್ಟೆ ಒಗೆದು ಎಲ್ಲರಲ್ಲಿ ಮುಜಗರ ಮೂಡಿಸುತ್ತಿದ್ದಾರೆ. ಪುರಸಭೆ ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಡಳಿತ ವ್ಯವಸ್ಥೆಯನ್ನು ಆಗ್ರಹಿಸಿದ್ದಾರೆ.



ಪಾದಚಾರಿಗಳಿಗೆ ಹಾದಿ ಬದಲಿಸುವ ಸ್ಥಿತಿ!

ಹೆದ್ದಾರಿಯಲ್ಲಿ ಸಾವಿರಾರು ವಾಹನಗಳು ಓಡಾಡುತ್ತಿವೆಯಲ್ಲದೆ ಇಲ್ಲಿರುವ ಫುಟ್ ಪಾತ್‌ನಲ್ಲಿ ಪಾದಚಾರಿಗಳು ಸಂಚರಿಸುತ್ತಿದ್ದು, ಚಿಮ್ಮುವ ಈ ನೀರಿನಲ್ಲಿ ಭಿಕ್ಷುಕರು ಸ್ನಾನಾದಿಗಳಲ್ಲಿ ನಿರತರಾಗುತ್ತಿರುವುದು ಕಂಡು ಹಾದಿ ಬದಲಿಸುವ ಸ್ಥಿತಿ ಉಂಟಾಗುತ್ತಿದೆ.

ಪರಿಹಾರವಾಗದ ಸರ್ವರ್ ಸಮಸ್ಯೆ | ವ್ಯವಸ್ಥೆ ವಿರುದ್ಧ ನಾಗರಿಕರ ಆಕ್ರೋಶ

ಪಡಿತರ ಪಡೆಯಲು ನಿತ್ಯವೂ ಪಡಿಪಾಟಲು

ಕುಂದಾಪುರ: ಸರ್ವರ್ ಸಮಸ್ಯೆಯಿಂದ ಪಡಿತರ ಪಡೆಯಲು ನಾಗರಿಕರು ತೊಂದರೆ ಅನುಭವಿಸುತ್ತಿದ್ದು, ಗಂಟೆಗಟ್ಟಲೆ ಕಾದರೂ ಪಡಿತರ ದೊರೆಯದೆ ವಾಪಾಸಾಗುತ್ತಿದ್ದಾರೆ. ಪಡಿತರಕ್ಕಾಗಿ ಪಡಿತರ ವಿತರಣಾ ಕೇಂದ್ರದ ಸಮೀಪ ಕಾದು ನಿಂತು ಸುಸ್ತಾಗಿರುವ ಜನರು ವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಹಲವು ದಿನಗಳಿಂದ ಸಮಸ್ಯೆ

ಕಳೆದ 15– 20 ದಿನದಿಂದ ರಾಜ್ಯವ್ಯಾಪಿ ಸರ್ವರ್ ಸಮಸ್ಯೆಯಿದ್ದು ಇದರಿಂದ ಕುಂದಾಪುರ, ಬೈಂದೂರು ಮಾತ್ರವಲ್ಲದೆ, ಉಡುಪಿ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಪಡಿತರ ಪಡೆಯಲು ಜನರು ಈಗ ನಿತ್ಯ ತೊಂದರೆ ಅನುಭವಿಸುವಂತಾ ಸ್ಥಿತಿ ಇದೆ.



ಥಂಬ್ ಕೊಡುವಾಗ ಸಮಸ್ಯೆ ಶುರು

ಬಿಪಿಎಲ್ ಕಾರ್ಡ್‌ದಾರರು ಹೆಬ್ಬೆಟ್ಟು ಕೊಡಲು ಹೋದಾಗ ಸರ್ವರ್ ಸಮಸ್ಯೆ ಆಗುತ್ತಿದೆ. ಇದರಿಂದ ಬೆಳಗ್ಗೆಯಿಂದ ರಾತ್ರಿವರೆಗೂ ಕಾದು ನಿಂತರೂ ಅಕ್ಕಿ ಸಿಗದೆ ಜನರು ನಿರಾಶೆಯಿಂದ ಮನೆಗೆ ಮರಳುವಂತಾಗಿದೆ. ಈ ತಿಂಗಳ 31ರ ಒಳಗೆ ಪಡಿತರ ಅಕ್ಕಿ ಪಡೆದುಕೊಳ್ಳದಿದ್ದರೆ, ತಿಂಗಳ ಅಕ್ಕಿ ಕೈತಪ್ಪಿ ಹೋಗುತ್ತದೆ. ಇದರಿಂದ ಜನರು ಚಿಂತಿತರಾಗಿದ್ದು ಸರ್ವರ್ ಸಮಸ್ಯೆ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. »»ಪುಟ 6

> **ಕಾದರೂ ಅಕ್ಕಿ ಸಿಗುತ್ತಿಲ್ಲ**
>
> ಒಂದೆಡೆ ಸುಡುವ ಬಿಸಿಲು, ಇನ್ನೊಂದೆಡೆ ದಿನವಿಡೀ ಅಕ್ಕಿಗಾಗಿ ನ್ಯಾಯಬೆಲೆ ಅಂಗಡಿಯಲ್ಲಿ ಕಾಯುವ ಸ್ಥಿತಿ. ಸಂಜೆ ತನಕ ಕಾದರೂ ಕೆಲವೊಮ್ಮೆ ಅಕ್ಕಿ ಸಿಗುವುದಿಲ್ಲ. ತಿಂಗಳೊಳಗೆ ಅಕ್ಕಿ ತೆಗೆದುಕೊಂಡು ಹೋಗದಿದ್ದರೆ ಮತ್ತೆ ಮುಂದಿನ ತಿಂಗಳು ಪಡೆದುಕೊಳ್ಳಲು ಆಗಲ್ಲ. ಇದನ್ನು ಸಂಬಂಧಪಟ್ಟವರು ಗಮನಿಸಿ ಶೀಘ್ರ ಪರಿಹರಿಸಬೇಕು.
>
> • ಮಿಥುನ್ ದೇವಾಡಿಗ, ತ್ರಾಸಿ ಗ್ರಾ.ಪಂ. ಮಾಜಿ ಅಧ್ಯಕ್ಷ

ಮೀನು ಸಾಕಣಾ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷ!



ದಕ್ಷಿಣ ಕೊಡಗಿನ ಬಾಳೆಲೆ ಹೋಬಳಿ ನಿಟ್ಟೂರು ಜಾಗಲೆ ಗ್ರಾಮದ ಕೃಷಿಕ ಆಳಮೇಂಗಡ ಬೋಸ್ ಮಂದಣ್ಣ ಎಂಬವರ ಮೀನು ಸಾಕಾಣಿಕೆ ಕೆರೆಯಲ್ಲಿ ಮೊಸಳೆ ಕಾಣಿಸಿಕೊಂಡು ಸಾಕಿದ ಮೀನುಗಳನ್ನೆಲ್ಲಾ ತಿಂದು ಅಪಾರ ಪ್ರಮಾಣದ ನಷ್ಟ ಉಂಟು ಮಾಡಿದೆ.

ಕಿನಾನೂರು ಕರಿಂದಳಂ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಳನಳಿಸುತ್ತಿವೆ ಅಳಿವಿನಂಚಿನ ಪುನ್ನಾ, ರುದ್ರಾಕ್ಷಮ್, ಎಳಿಲಂಪಾಳ, ಕುರುಂಥಲಿ ಗಿಡಗಳು

ಗಣಿಗಾರಿಕೆ ನಡೆಸಿ ಬರಡಾಗಿದ್ದ ಭೂಮಿಯಲ್ಲಿ ಹಸಿರು ಮ್ಯಾಜಿಕ್ ಸೃಷ್ಟಿಸಿದ ಕೆಸಿಸಿಪಿಎಲ್!

ಕಾಸರಗೋಡು: ಗಣಿಗಾರಿಕೆ ನಡೆಸಿ ಬರಡಾಗಿದ್ದ ಜಿಲ್ಲೆಯ ಕಿನಾನೂರು ಕರಿಂದಳಂ ಗ್ರಾಮ ಪಂಚಾಯತ್ ವ್ಯಾಪ್ತಿಯ ಭೂಮಿಯಲ್ಲಿ 'ಕೆಸಿಸಿಪಿಎಲ್' ಸಂಸ್ಥೆಯು ಈಗ ಹಸಿರು ಅದ್ಭುತ ಸೃಷ್ಟಿಸಿ ಗಮನಸೆಳೆದಿದೆ. ಗಣಿಗಾರಿಕೆ ಬಳಿಕ ಕೈಬಿಡಲಾಗಿದ್ದ ಈ ಪ್ರದೇಶದಲ್ಲಿ ಮತ್ತೆ ಮಣ್ಣನ್ನು ತುಂಬಿಸಿ ಇಲ್ಲಿ ಹಸಿರು ಉದ್ಯಾನವನ್ನು ವಿಶೇಷವಾಗಿ ಸಿದ್ಧಪಡಿಸಲಾಗಿದೆ.

ಅರಳಿವೆ 1700ಕ್ಕೂ ಹೆಚ್ಚು ಸ್ಥಳೀಯ ಸಸ್ಯ

ನೆನ್ಮೆನಿವಾಕ, ಪುನ್ನಾ, ರುದ್ರಾಕ್ಷಮ್, ಎಳಿಲಂಪಾಳ ಮತ್ತು ಕುರುಂಥಲಿಯಂತಹ ಅಳಿವಿನಂಚಿನಲ್ಲಿರುವ ಸಸ್ಯಗಳು ಸೇರಿದಂತೆ ಇಲ್ಲಿ 180 ವಿಧಗಳ 1700ಕ್ಕೂ ಹೆಚ್ಚು ಸ್ಥಳೀಯ ಸಸ್ಯಗಳನ್ನು ಈ ಪ್ರದೇಶದಲ್ಲಿ ನಾಟಿ ಮಾಡಲಾಗಿದ್ದು, ನೋಡುಗರ ಕಣ್ಮನ ಸೆಳೆಯುತ್ತಿವೆ. ಜೀವ ವೈವಿಧ್ಯದ ಕೇಂದ್ರವಾಗಿರುವ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿಟ್ಟೆಗಳು ಮತ್ತು ಜೇನುನೊಣಗಳು ವಲಸೆ ಬಂದಿರುವುದರಿಂದ ಪರಿಸರ ಪ್ರದೇಶಗಳಲ್ಲಿ ಕೃಷಿ ಬೆಳೆಗಳ ಪರಾಗಸ್ಪರ್ಶಕ್ಕೂ ಸಹಾಯವಾಗುತ್ತಿದೆ. ಬರಗಾಲದ ಸಮಯ ಈ ಪ್ರದೇಶವು ಪಕ್ಷಿಗಳು ಮತ್ತು ಇತರ ಜೀವಿಗಳಿಗೆ ಉತ್ತಮ ಆವಾಸಸ್ಥಾನವಾಗಿದೆ.



ಸಂಗಮ ವಿಶೇಷ

ಕೃಷಿ ಕ್ಷೇತ್ರದಲ್ಲಿಯೂ ಛಾಪು ಮೂಡಿಸಿದ ಸಂಸ್ಥೆ

ಕೃಷಿ ಕ್ಷೇತ್ರದಲ್ಲಿಯೂ ಸಂಸ್ಥೆಯು ಉತ್ತಮ ಹೆಜ್ಜೆಯನ್ನು ಇಟ್ಟಿದೆ. ಕರಿಂದಳಂ ಬಳಿ ಸುಮಾರು ಎರಡು ಎಕರೆ ಭೂಮಿಯಲ್ಲಿ ಪ್ರಸಿದ್ಧ ಕುಟ್ಟಿಯತ್ತೂರು ಭತ್ತದ ತಳಿಯನ್ನು ಉತ್ತಮ ರೀತಿಯಲ್ಲಿ ಬೆಳೆಸಲಾಗುತ್ತಿದೆ. ಗಣಿಗಾರಿಕೆಯಿಂದ ರೂಪುಗೊಂಡಿರುವ ಬೃಹತ್ ಹೊಂಡಗಳಲ್ಲಿ ಮಳೆನೀರು ಸಂಗ್ರಹಿಸಿ ನಿರ್ಮಿಸಲಾದ ಮೀನು ಕೊಳ ಕೂಡಾ ನಿರ್ಮಿಸಲಾಗಿದೆ. ಇದಲ್ಲದೆ ಇಲ್ಲಿನ ಜಲಮೂಲ ಮಧ್ಯದಲ್ಲಿನ 10 ಸೆಂಟ್ಸ್ ಜಾಗದಲ್ಲಿ ಮಿಯಾವಾಕಿ ಅರಣ್ಯ ಸ್ಥಾಪಿಸಲಾಗಿದೆ.

- ಕರಿಂದಳಂ ಬಳಿ ಸುಮಾರು ಎರಡು ಎಕರೆ ಭೂಮಿಯಲ್ಲಿ ಪ್ರಸಿದ್ಧ ಕುಟ್ಟಿಯತ್ತೂರು ಭತ್ತದ ತಳಿ ನಾಟಿ
- ಗಣಿಗಾರಿಕೆಗೆ ರೂಪುಗೊಂಡ ಬೃಹತ್ ಹೊಂಡಗಳಲ್ಲಿ ಮಳೆನೀರನ್ನು ಸಂಗ್ರಹಿಸಿ ನಿರ್ಮಿಸಲಾದ ಮೀನು ಕೊಳ
- ಜಲಮೂಲದ ಮಧ್ಯದಲ್ಲಿ 10 ಸೆಂಟ್ಸ್ ಜಾಗದಲ್ಲಿ ಮಿಯಾವಾಕಿ ಅರಣ್ಯ

ರಾಜ್ಯಕ್ಕೇ ಮಾದರಿಯಾಗಿದೆ ಇಲ್ಲಿನ ಕೆಸಿಸಿಪಿಎಲ್ ಹಸಿರೀಕರಣ

ಗಣಿಗಾರಿಕೆ ಜಾಗದಲ್ಲಿ ಸೃಷ್ಟಿಸಿದ ಹಸಿರೀಕರಣ ಇಡೀ ರಾಜ್ಯಕ್ಕೇ ಮಾದರಿಯಾಗಿದೆ. ಕೈಗಾರಿಕೆಗಳು ಮತ್ತು ಗಣಿಗಾರಿಕೆ ಕೇಂದ್ರಗಳಿಗೆ ಪ್ರಕೃತಿ ಸಂರಕ್ಷಣೆಯು ಯಾವುದೇ ಸವಾಲಲ್ಲ ಎಂಬುದನ್ನು ಕಿನಾನೂರು ಕರಿಂದಳಂ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಸಿಸಿಪಿಎಲ್ ಸಂಸ್ಥೆಯು ಸಾಬೀತುಪಡಿಸಿದೆ. ಕೈಗಾರಿಕಾ ಇಲಾಖೆಯಡಿ ಸಾರ್ವಜನಿಕ ವಲಯದ ಕೆಸಿಸಿಪಿಎಲ್ ಬಂಜರು ಗಣಿಗಾರಿಕೆ ಭೂಮಿಯಲ್ಲಿ ಸೃಷ್ಟಿಸಿರುವ ಹಸಿರು ಕ್ರಾಂತಿ ಮತ್ತು ಕೃಷಿ ಚಟುವಟಿಕೆಗಳು ಇತರರಿಗೆ ಕೂಡಾ ಪ್ರೇರಣೆಯಾಗಿ ನಿಂತಿವೆ.

ಸಾರ್ವಜನಿಕ ವಲಯದ ಉದ್ಯಮಕ್ಕಾಗಿ ರಾಜ್ಯ ಪ್ರಶಸ್ತಿ

ನಾಡಿನ ಕೃಷಿ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳನ್ನು ಗುರುತಿಸಿ ಕೆಸಿಸಿಪಿಎಲ್ ಲಿಮಿಟೆಡ್ ಕಂಪೆನಿಯು ಕೇರಳ ಕೃಷಿ ಅಭಿವೃದ್ಧಿ ಮತ್ತು ರೈತ ಕಲ್ಯಾಣ ಇಲಾಖೆಯಿಂದ ಅತ್ಯುತ್ತಮ ಸಾರ್ವಜನಿಕ ವಲಯದ ಉದ್ಯಮಕ್ಕಾಗಿ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪಡೆದಿದೆ. ಇಷ್ಟೇ ಅಲ್ಲ, ತನ್ನ ವಿವಿಧ ಸಾಮೂಹಿಕ ಪ್ರಯತ್ನಗಳ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಸಂಸ್ಥೆಯು ಈ ಕಾರ್ಯವು ಕಾಸರಗೋಡು ಜಿಲ್ಲೆಯಲ್ಲೇ ಅಪಾರ ಪ್ರಸಿದ್ಧಿ ಪಡೆಯಲು ಕಾರಣವಾಗಿದೆ.

ಸುತ್ತ ಮುತ್ತ

ಮುಕ್ಕೂರು ನೇಸರ ಯುವಕ ಮಂಡಲ: ಪದಾಧಿಕಾರಿಗಳ ಆಯ್ಕೆ





ಸವಣೂರು: ದಶ ವರ್ಷದ ಸಂಭ್ರಮದಲ್ಲಿರುವ ಮುಕ್ಕೂರು ನೇಸರ ಯುವಕ ಮಂಡಲದ ಮುಂದಿನ ಎರಡು ವರ್ಷದ ನೂತನ ಪದಾಧಿಕಾರಿಗಳ ಆಯ್ಕೆ ನಡೆದು 2026–27ರಿಂದ 2028–29ರ ಅವಧಿಗೆ ಗೌರವಾಧ್ಯಕ್ಷರಾಗಿ ಜಗನ್ನಾಥ ಪೂಜಾರಿ ಮುಕ್ಕೂರು, ಅಧ್ಯಕ್ಷರಾಗಿ ರಕ್ಷಿತ್ ಗೌಡ, ಪ್ರಧಾನ ಕಾರ್ಯದರ್ಶಿಯಾಗಿ ತೇಜಸ್ವಿತ್ ಅಡ್ಯತಕಂಡ, ಉಪಾಧ್ಯಕ್ಷರಾಗಿ ಭರತ್ ಬೊಣ್ಯಕುಕ್ಕು, ಜತೆ ಕಾರ್ಯದರ್ಶಿಯಾಗಿ ಪ್ರವೀಣ್ ಬೋಳಕುಮೇರು, ಕೋಶಾಧಿಕಾರಿಯಾಗಿ ಶ್ರೀಧರ ಗೌಡ ಕೊಂಡೆಪ್ಪಾಡಿ ಆಯ್ಕೆಯಾದರು. ಇದೇ ಸಂದರ್ಭದಲ್ಲಿ ಕಳೆದ ನೇಸರ ದಶಪ್ರಣತಿ ಸಮಿತಿ ಪದಾಧಿಕಾರಿಗಳಾಗಿದ್ದ ಡಾ. ನರಸಿಂಹ ಶರ್ಮ ಕಾನಾವು, ಕುಂಬ್ರ ದಯಾಕರ ಆಳ್ವ, ಸುಬ್ರಾಯ ಭಟ್ ನೀರ್ಕಜೆ, ನರಸಿಂಹ ತೇಜಸ್ವಿ ಕಾನಾವು, ಚಂದ್ರಹಾಸ ರೈ ಮುಕ್ಕೂರು, ಉಮೇಶ್ ಕೆಎಂಬಿ, ಸಂಪತ್ ಕುಮಾರ್ ರೈ ಪಾತಾಜೆ, ಗುಡ್ಡಪ್ಪ ಗೌಡ ಅಡ್ಯತಕಂಡ, ಚಂದ್ರಶೇಖರ ಗೌಡ ಬೀರುಸಾಗು, ಕೃಷ್ಣಪ್ಪ ನಾಯ್ಕ ಅಡ್ಯತಕಂಡ, ಕೃಷ್ಣಪ್ಪ ಜರಿಯಡ್ಕ ಅವರನ್ನು ಗೌರವ ಸಲಹೆಗಾರರನ್ನಾಗಿ ನೇಮಿಸಲು ಸಭೆ ನಿರ್ಣಯ ಕೈಗೊಂಡಿತು. ಗೌರವಾಧ್ಯಕ್ಷ ಜಗನ್ನಾಥ ಪೂಜಾರಿ ಮುಕ್ಕೂರು, ನಿರ್ಗಮನ ಅಧ್ಯಕ್ಷ ರಮೇಶ್ ಕಾನಾವು, ನಿರ್ಗಮನ ಕಾರ್ಯದರ್ಶಿ ರಾಮಚಂದ್ರ ಚೆನ್ನಾವರ ಅವರ ಉಪಸ್ಥಿತಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು.

ಕುಕ್ಕೆ ದೇವಳದ ಸಭಾಂಗಣದಲ್ಲಿ ಇಂದು ಭರತನಾಟ್ಯ, ನೃತ್ಯ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ರಥಬೀದಿಯ ನೂತನ ಸಭಾಂಗಣದಲ್ಲಿ ಇಂದು (ಮೇ 30) ಸಂಜೆ 5 ಗಂಟೆಗೆ ಭರತನಾಟ್ಯ ಮತ್ತು ಸಮೂಹ ನೃತ್ಯ ಪ್ರದರ್ಶನಗೊಳ್ಳಲಿದೆ. ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಡ್ಯಾನ್ಸ್ ಆರ್ಟ್ ಅಂಡ್ ಮ್ಯೂಸಿಕ್ ಕೇಂದ್ರದ ವಿದ್ಯಾರ್ಥಿಗಳಿಂದ ಸಂಸ್ಥೆಯ ಗುರು ವಿದುಷಿ ಪೂರ್ಣಿಮಾ ರವಿ ನಿರ್ದೇಶನದಲ್ಲಿ ಕಾರ್ಯಕ್ರಮ ನಡೆಯಲಿದೆ. ಸರ್ವರೂ ಆಗಮಿಸಿ ಕಾರ್ಯಕ್ರಮ ವೀಕ್ಷಿಸಿ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕೆಂದು ಶ್ರೀ ದೇವಳದ ಆಡಳಿತ ತಿಳಿಸಿದೆ.

ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಲ್ಲಿ ಕಾರ್ಯಾಗಾರ

ಮುಲ್ಕಿ: ಕೆರೆಕಾಡು ಶ್ರೀ ವಿನಾಯಕ ಯಕ್ಷಕಲಾ ಫೌಂಡೇಶನ್ ವತಿಯಿಂದ ಯಕ್ಷಗಾನ ಕಾರ್ಯಾಗಾರ ನಡೆಯಿತು. ಕಿನ್ನಿಗೋಳಿ ಪಟ್ಟಣ ಪಂಚಾಯತ್ ಕೌನ್ಸಿಲರ್ ಪ್ರಕಾಶ್ ರವರು ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿ, ಕಾರ್ಯಾಗಾರಗಳ ಮೂಲಕ ಕಲೆಗೆ ಪ್ರೋತ್ಸಾಹ ಅಭಿನಂದನೀಯ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕಲೆ, ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸಾಧಕರಾಗಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವಿನಾಯಕ ಯಕ್ಷಕಲಾ ಫೌಂಡೇಶನ್‌ನ ಅಧ್ಯಕ್ಷ ಜಯಂತ್ ಅಮೀನ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಫೌಂಡೇಶನ್ ಉಪಾಧ್ಯಕ್ಷ ಹಾಗೂ ಶಿಕ್ಷಕ ಅಶೋಕ್ ಕೊಲ್ನಾಡ್, ಯಕ್ಷಗುರು ಅಜಿತ್ ಕೆರೆಕಾಡು, ಪ್ರೇಮಲತಾ, ರೇಷ್ಮ ಜಿ. ಬಂಗೇರ. ನೀಲೇಶ್ ಆಚಾರ್ಯ, ತರುಣ್, ನರೇಶ್ ಶೆಟ್ಟಿ ಮೂಕಾಂಬಿಕಾ, ವಾಣಿ, ಮಾಲತಿ ಮತ್ತಿತರರು ಉಪಸ್ಥಿತರಿದ್ದರು.

ಪಾವಂಜೆ ಮೇಳದ ಕಲಾವಿದರಿಗೆ ಇಎಸ್‌ಐ, ಪಿ.ಎಫ್ ಸವಲತ್ತು

ಮುಲ್ಕಿ: ಆರು ವರ್ಷಗಳನ್ನು ಪೂರ್ಣ ಗೊಳಿಸಿರುವ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಮಣ್ಯ ಸ್ವಾಮಿ ದಶಾವತಾರ ಯಕ್ಷಗಾನ ಮಂಡಳಿ ನಾಗವ್ರಜ ಕ್ಷೇತ್ರದ ಕಲಾವಿದರಿಗೆ ಈಗ ಮತ್ತಷ್ಟು ಆರೋಗ್ಯ ಭದ್ರತೆ ದೊರಕಿದಂತಾಗಿದೆ. ಯಕ್ಷರಂಗದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಮೇಳದ ಕಲಾವಿದರಿಗೆ ಇಎಸ್‌ಐ ಮತ್ತು ಪಿ.ಎಫ್ ಸವಲತ್ತು ನೀಡುವ ಮೂಲಕ ಯಕ್ಷರಂಗದಲ್ಲಿ ಹೊಸ ವ್ಯವಸ್ಥೆಗೆ ಸಾಕ್ಷಿಯಾಗಿದೆ.

ಮೇಳದಲ್ಲಿ ಮುಮ್ಮೇಳ, ಹಿಮ್ಮೇಳ ಮತ್ತು ಸಹಾಯಕರು ಸೇರಿ ಒಟ್ಟು 52 ಕಲಾವಿದರಿದ್ದು ಈ ಎಲ್ಲ ಕಲಾವಿದರು ಈ ನೂತನ ವ್ಯವಸ್ಥೆ ಅಡಿಯಲ್ಲಿ ಸೌಲಭ್ಯಗಳನ್ನು ಪಡೆಯಲಿದ್ದಾರೆ.

ಪಟ್ಲ ಸತೀಶ್ ಶೆಟ್ಟಿಯವರ ಸಾರಥ್ಯದಲ್ಲಿ ಸಮರ್ಥ ಕಲಾವಿದರ ತಂಡಕ್ಕೆ ಕೇವಲ ಆರು ವರ್ಷದಲ್ಲಿ ನೂತನ ವ್ಯವಸ್ಥೆ ಕಲ್ಪಿಸಿರುವುದು ದಾಖಲೆಗಳ ಪುಟ ಸೇರಲಿದೆ. ಪ್ರಾರಂಭದಿಂದಲೂ ದೇವಳದ ಆಡಳಿತ ಮಂಡಳಿ ಕಲಾವಿದರಿಗೆ ವಿಶೇಷ ಸವಲತ್ತು ನೀಡುತ್ತಾ ಬಂದಿದ್ದು ಕಲಾವಿದರ ಶ್ರೇಯಸ್ಸಿಗಾಗಿ ಆಡಳಿತ ಮಂಡಳಿ ಶ್ರಮಿಸುತಿದೆ. ಇದರ ಜೊತೆ ಯಕ್ಷಗಾನದಿಂದ ಹಿಮ್ಮುಖವಾಗುತ್ತಿದ್ದ ಯುವ ಕಲಾಭಿಮಾನಿಗಳನ್ನು ಮತ್ತೆ ಯಕ್ಷಗಾನದತ್ತ ಸೆಳೆದ, ಪಾವಂಜೆ ಮೇಳದ ಸಾರಥ್ಯ ವಹಿಸಿರುವ ಪಟ್ಲ ಭಾಗವತರ ಯಕ್ಷ ಧ್ರುವ ಪಟ್ಲ ಫೌಂಡೇಶನ್ ವತಿಯಿಂದ ಕೂಡ ಕಲಾವಿದರಿಗೆ ಸಹಕಾರ ನೀಡಲಾಗುತ್ತಿದೆ.

ಪಟ್ಲ ಫಂಡೇಶನ್ ಸಾವಿರಾರು ಯಕ್ಷಗಾನ, ನಾಟಕ, ದೈವಾರಾಧನೆ ಕಲಾವಿದರಿಗೆ ವಿವಿಧ ರೀತಿಯ ವಿಮೆಯ ವ್ಯವಸ್ಥೆ ಮಾಡಲಾಗಿದ್ದು ಇದರ ಸೌಲಭ್ಯ ಕೂಡ ಪಾವಂಜೆ ಮೇಳದ ಕಲಾವಿದರಿಗೆ ಸಿಗಲಿದೆ. ಒಟ್ಟಿನಲ್ಲಿ ಪಾವಂಜೆ ಕ್ಷೇತ್ರದ ಆಡಳಿತ ಮಂಡಳಿ ಹೊಸತನಕ್ಕೆ ಸಾಕ್ಷಿಯಾಗಿದೆ.

ಈಗ ಸುರತ್ಕಲ್ ನಗರದಿಂದ ಕೃಷ್ಣಾಪುರ, ಕಾಟಿಪಳ್ಳ, ಗಣೇಶಪುರ ಉದ್ದಕ್ಕೂ ವಿಸ್ತರಿಸಿಕೊಂಡಿದೆ ವ್ಯಾಪಾರ

ಪಾದಚಾರಿಗಳಿಗೆ ಸಂಕಷ್ಟ ಸೃಷ್ಟಿಸುತ್ತಿದೆ ರಸ್ತೆ ಬದಿ ಫುಡ್ ಸ್ಟಾಲ್



ಸಂಗಮ ವಿಶೇಷ

ಸುರತ್ಕಲ್: ಒಮ್ಮೆ ಪಾದಚಾರಿಗಳ ಸುರಕ್ಷಿತ ಸಂಚಾರಕ್ಕಾಗಿ ನಿರ್ಮಿಸಲಾದ ಫುಟ್‌ಪಾತ್‌ಗಳು ಇದೀಗ ರಸ್ತೆ ಬದಿ ಫುಡ್ ಸ್ಟಾಲ್‌ಗಳ ಆಕ್ರಮಣಕ್ಕೆ ಒಳಗಾಗಿ ಸಾರ್ವಜನಿಕರಿಗೆ ತೊಂದರೆಯ ಕೇಂದ್ರಗಳಾಗಿ ಪರಿಣಮಿಸಿವೆ.

ಸುರತ್ಕಲ್ ನಗರ ಭಾಗದಲ್ಲಿ ಆರಂಭವಾದ ಈ ಅತಿಕ್ರಮಣ ಇದೀಗ ಕೃಷ್ಣಾಪುರ, ಕಾಟಿಪಳ್ಳ, ಗಣೇಶಪುರ ಸೇರಿದಂತೆ ಉದ್ದಕ್ಕೂ ವಿಸ್ತರಿಸಿಕೊಂಡಿದ್ದು ನೂರಾರು ತಾತ್ಕಾಲಿಕ ಫುಡ್ ಸ್ಟಾಲ್‌ಗಳು ರಸ್ತೆ ಬದಿಯಲ್ಲಿ ಸರಮಾಲೆಯಂತೆ ಕಾಣಿಸುತ್ತಿವೆ.

ಸಮಸ್ಯೆಗೆ ಕಾರಣವಾಗಿದೆ

ಸಂಜೆ ವೇಳೆಗೆ ಈ ಪ್ರದೇಶಗಳಲ್ಲಿ ವಾಹನ ದಟ್ಟಣೆ ತೀವ್ರವಾಗುತ್ತಿದ್ದು ರಸ್ತೆ ಬದಿ ತಿಂಡಿ ತಿನಿಸುಗಳಿಗೆ ಬರುವವರು ತಮ್ಮ ಬೈಕ್, ಕಾರುಗಳನ್ನು ರಸ್ತೆಯಲ್ಲಿಯೇ ಪಾರ್ಕ್ ಮಾಡುತ್ತಿರುವುದು ಮತ್ತಷ್ಟು ಸಮಸ್ಯೆಗೆ ಕಾರಣವಾಗಿದೆ. ದ್ವಿಪಥ ರಸ್ತೆ ಇದ್ದರೂ ಅತಿಕ್ರಮಣ ಮತ್ತು ಅಕ್ರಮ ಪಾರ್ಕಿಂಗ್‌ನಿಂದ ವಾಹನಗಳು ಒಂದೇ ಸಾಲಿನಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪಾದಚಾರಿಗಳಿಗೆ ಜಾಗವೇ ಇಲ್ಲ

ಫುಟ್‌ಪಾತ್‌ಗಳನ್ನು ಫುಡ್ ಸ್ಟಾಲ್‌ಗಳು ಸಂಪೂರ್ಣ ಆವರಿಸಿಕೊಂಡಿರುವುದರಿಂದ ಪಾದಚಾರಿಗಳು ರಸ್ತೆ ಮಧ್ಯೆ ನಡೆದು ಹೋಗುವ ಅನಿವಾರ್ಯತೆ ಎದುರಿಸುತ್ತಿದ್ದಾರೆ. ಶಾಲಾ ಮಕ್ಕಳು, ಹಿರಿಯ ನಾಗರಿಕರು ಹಾಗೂ ಮಹಿಳೆಯರು ಜೀವ ಭಯದ ನಡುವೆ ಸಂಚರಿಸುವಂತಾಗಿದೆ. ಕೆಲವೆಡೆ ಸ್ಟಾಲ್‌ಗಳ ಮುಂದೆ ಕುರ್ಚಿ, ಮೇಜುಗಳನ್ನು ಇಟ್ಟು ಸಾರ್ವಜನಿಕ ದಾರಿಯನ್ನೇ ಸಂಪೂರ್ಣ ಬಂದ್ ಮಾಡಲಾಗುತ್ತಿದೆ.

ಟ್ರಾಫಿಕ್ ಸಮಸ್ಯೆ ದಿನೇದಿನೇ ಗಂಭೀರ

ರಸ್ತೆ ಬದಿ ವಾಹನ ನಿಲುಗಡೆಯಿಂದ ಸಂಜೆ ಹೊತ್ತಿಗೆ ಸುರತ್ಕಲ್–ಕೃಷ್ಣಾಪುರ ಮುಖ್ಯ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಸಾಮಾನ್ಯ ದೃಶ್ಯವಾಗಿದೆ. ಕೆಲವೇ ನಿಮಿಷಗಳ ಪ್ರಯಾಣಕ್ಕೂ ವಾಹನ ಸವಾರರು ಅರ್ಧ ಗಂಟೆಗೂ ಹೆಚ್ಚು ಕಾಲ ಕಾಯಬೇಕಾದ ಪರಿಸ್ಥಿತಿ ಎದುರಾಗುತ್ತಿದೆ. ತುರ್ತು ಸೇವಾ ವಾಹನಗಳ ಸಂಚಾರಕ್ಕೂ ಅಡ್ಡಿಯಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ.

- ರಸ್ತೆ ಬದಿಯಲ್ಲಿ ಸರಮಾಲೆಯಂತೆ ಕಾಣಿಸುತ್ತಿವೆ ತಾತ್ಕಾಲಿಕ ಫುಡ್ ಸ್ಟಾಲ್
- ರಸ್ತೆ ಬದಿ ತಿಂಡಿ ತಿನಿಸುಗಳಿಗೆ ಬರುವವರು ತಮ್ಮ ಬೈಕ್, ಕಾರುಗಳನ್ನು ರಸ್ತೆಯಲ್ಲಿಯೇ ಪಾರ್ಕ್ ಮಾಡುತ್ತಿರುವುದೇ ಮತ್ತೊಂದು ಸಮಸ್ಯೆ
- ಸ್ಟಾಲ್‌ಗಳ ಮುಂದೆ ಕುರ್ಚಿ, ಮೇಜುಗಳ ಇಟ್ಟು ಸಾರ್ವಜನಿಕ ದಾರಿಯನ್ನೇ ಸಂಪೂರ್ಣ ಬಂದ್ ಮಾಡಲಾಗುತ್ತಿದೆ.

ಇಷ್ಟಾದರೂ ಇಲಾಖೆ ಯಾವುದೇ ಗಂಭೀರ ಕ್ರಮಕೈಗೊಂಡಿಲ್ಲ ಎಂಬ ಆಕ್ರೋಶ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ. ಅತಿಕ್ರಮಣ ತೆರವು ಕಾರ್ಯಾಚರಣೆ ಕೆಲ ದಿನಗಳಷ್ಟೇ ನಡೆಯುತ್ತಿದ್ದು ಬಳಿಕ ಮತ್ತೆ ಹಳೆಯ ಸ್ಥಿತಿ ಮರುಕಳಿಸುತ್ತಿದೆ.

ನಿಯಂತ್ರಣ ಇಲ್ಲದೆ ಹೆಚ್ಚುತ್ತಿರುವ ಸ್ಟಾಲ್‌ಗಳು

ಯಾವುದೇ ಪರವಾನಗಿ, ಪಾರ್ಕಿಂಗ್ ವ್ಯವಸ್ಥೆ ಅಥವಾ ಆರೋಗ್ಯ ಸುರಕ್ಷತಾ ನಿಯಮಗಳನ್ನು ಪಾಲಿಸದೇ ರಸ್ತೆ ಬದಿಯಲ್ಲಿ ಹೊಸ ಹೊಸ ಫುಡ್ ಸ್ಟಾಲ್‌ಗಳು ಆರಂಭವಾಗುತ್ತಿವೆ.

ಮಳೆಗಾಲ ಆರಂಭ ವಾದರೆ ಸಾಂಕ್ರಾಮಿಕ ರೋಗ ಸಾಮಾನ್ಯ. ಈ ಸಂದರ್ಭದಲ್ಲಿ ಹೆಚ್ಚು ಕಾಳಜಿ, ಆರೋಗ್ಯ ಸುರಕ್ಷತೆ ಅಗತ್ಯವಾಗಿದೆ.

ಸಾರ್ವಜನಿಕರ ಬೇಡಿಕೆ ಏನು?

ರಸ್ತೆ ಬದಿ ಅಕ್ರಮ ಫುಡ್ ಸ್ಟಾಲ್‌ಗಳಿಗೆ ನಿಯಂತ್ರಣ ಹೇರಬೇಕು, ಫುಟ್‌ಪಾತ್‌ಗಳನ್ನು ಪಾದಚಾರಿಗಳಿಗೆ ಮುಕ್ತಗೊಳಿಸಬೇಕು, ವಾಹನ ಪಾರ್ಕಿಂಗ್‌ಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಬೇಕು ಹಾಗೂ ನಿಯಮ ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ನಗರದ ಅಭಿವೃದ್ಧಿ ಹೆಸರಿನಲ್ಲಿ ರಸ್ತೆ ಅಗಲೀಕರಣಕ್ಕೆ ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದ್ದರೂ, ಅತಿಕ್ರಮಣದ ವಿರುದ್ಧ ಕ್ರಮವಿಲ್ಲದಿದ್ದರೆ ಅದರ ಪ್ರಯೋಜನವಿಲ್ಲ ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಶಾರದಾ ಕಲಾ ಕೇಂದ್ರದ ವಾರ್ಷಿಕೋತ್ಸವ, ಕಲಾಸಿರಿ ಪ್ರಶಸ್ತಿ ಪ್ರದಾನ

ಯಕ್ಷಗಾನ ಕಲೆಯಲ್ಲ, ಆರಾಧನೆ: ದೇವಿಪ್ರಸಾದ್



ಸುಬ್ರಹ್ಮಣ್ಯ: ಯಕ್ಷ ಕಲಾ ಕೇಂದ್ರಗಳು ಕಲಾವಿದರನ್ನು ಸೃಷ್ಟಿಸುವ ಆಲಯಗಳಾಗಿವೆ. ಯಕ್ಷಗಾನವು ಕೇವಲ ಕಲೆ ಮಾತ್ರವಾಗಿದೆ ಅದೊಂದು ಆರಾಧನೆಯಾಗಿದೆ ಎಂದು ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್ ಹೇಳಿದರು.

ಪಂಜದ ಶ್ರೀ ಶಾರದಾಂಬಾ ಯಕ್ಷಗಾನ ಕಲಾ ಸೇವಾ ಟ್ರಸ್ಟ್ ಆಶ್ರಯದ ಶ್ರೀ ಶಾರದಾಂಬಾ ಯಕ್ಷಗಾನ ಅಧ್ಯಯನ ಕೇಂದ್ರದ ವಾರ್ಷಿಕೋತ್ಸವ ಮತ್ತು ಶಾರದಾ ಕಲಾಸಿರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುರಸ್ಕಾರ ಪ್ರದಾನಗೈದು ಮಾತನಾಡಿದರು.

ಆಧುನಿಕ ವಿದ್ಯಾರ್ಥಿಗಳು ನಮ್ಮ ಕಲಾ ಸಂಪತ್ತಿನತ್ತ ಆಕರ್ಷಿತರಾಗುವಂತೆ ಮಾಡುವಲ್ಲಿ ಕಲಾ ಕೇಂದ್ರದ ಪಾತ್ರ ಅನನ್ಯ. ಈ ಕೇಂದ್ರವು ನಿರಂತರವಾಗಿ ಅನೇಕ ವಿದ್ಯಾರ್ಥಿಗಳಿಗೆ ಯಕ್ಷಗಾನ ಶಿಕ್ಷಣ ನೀಡುತ್ತಿದೆ. ಅತ್ಯಂತ ಶಿಸ್ತಿನಿಂದ ಕಲಾ ವಿದ್ಯಾರ್ಥಿಗಳನ್ನು ಪರಿಪಕ್ವಗೊಳಿಸುತ್ತಿರುವುದು ಶ್ಲಾಘನೀಯ ಎಂದರು.

ಪುರಸ್ಕಾರ ಪ್ರದಾನ

ಸಮಾರಂಭದಲ್ಲಿ ಹಿರಿಯ ಯಕ್ಷಗಾನ ಕಲಾವಿದ ಕೆ. ಕೃಷ್ಣ ವೈಲಾಯ, ಹಿರಿಯ ಹಾಸ್ಯಗಾರ ಮೋಹನ ಆಚಾರ್ಯ ನಾಗತೀರ್ಥ ಅವರಿಗೆ 'ಶಾರದಾ ಕಲಾಸಿರಿ ಪ್ರಶಸ್ತಿ, ಬಾಲ ಯಕ್ಷ ಕಲಾವಿದೆ ಧೃತಿ ಉಬ್ರಾಲರಿಗೆ ಶಾರದಾ ಬಾಲ ಕಲಾಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀ ಶಾರದಾಂಬಾ ಯಕ್ಷಗಾನ ಕಲಾ ಸೇವಾ ಟ್ರಸ್ಟ್ ಅಧ್ಯಕ್ಷ ಬಾಲಕೃಷ್ಣ ಪುತ್ಯ ಅಧ್ಯಕ್ಷತೆ ವಹಿಸಿದ್ದರು. ನ್ಯಾಯವಾದಿ ಪುರುಷೋತ್ತಮ ಮಲ್ಕಜೆ ಕಾರ್ಯಕ್ರಮ ಉದ್ಘಾಟಿಸಿದರು. ಯಕ್ಷಗಾನ ಕಲಾ ಸೇವಾ ಟ್ರಸ್ಟ್ ಉಪಾಧ್ಯಕ್ಷ ತಿಮ್ಮಪ್ಪ ಗೌಡ ಕೂತ್ಕುಂಜ, ಯಕ್ಷಗಾನ ನಾಟ್ಯ ಗುರು ಗಿರೀಶ್ ಗಡಿಕಲ್ಲು, ನಿವೃತ್ತ ಪ್ರಾಂಶುಪಾಲೆ ಶೀಲಾವತಿ ಕೊಳಂಬೆ, ಲಯನ್ಸ್ ಕ್ಲಬ್ ನಿಯೋಜಿತ ಅಧ್ಯಕ್ಷ ಆನಂದ ಗೌಡ ಜಳಕದಹೊಳೆ, ಪೈಂದೋಡಿ ಶ್ರೀ ಸುಬ್ರಾಯ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಗೌಡ ಕುದ್ವ ವೇದಿಕೆಯಲ್ಲಿದ್ದರು.

ಮಹಾಲಿಂಗ ಸಂಪ ಪ್ರಾರ್ಥಿಸಿದರು. ಭಜನಾ ಮಂಡಳಿ ಉಪಾಧ್ಯಕ್ಷ ಪರಮೇಶ್ವರ ಬಿಳಿಮಲೆ ಸ್ವಾಗತಿಸಿ, ಕಾರ್ಯದರ್ಶಿ ಗುರುಪ್ರಸಾದ್ ತೋಟ ವಂದಿಸಿದರು. ಶಿಕ್ಷಕ ಶಂಕರ್ ನೆಲ್ಯಾಡಿ ನಿರ್ವಹಿಸಿದರು.

ಚೇಳ್ಯಾರು ಗ್ರಾಮ ಪಂಚಾಯತ್‌ನಲ್ಲಿ ಗ್ರಾಮ ಸಭೆ | ಡಿಸಿಗೆ ಮನವಿಗೆ ಒತ್ತಾಯ

ಮರಳುಗಾರಿಕೆಗೆ ಅವಕಾಶಕ್ಕೆ ಗ್ರಾಮಸ್ಥರ ಆಕ್ರೋಶ



ಸುರತ್ಕಲ್: ಚೇಳ್ಯಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಚೇಳ್ಯಾರು ಭಾಗದಲ್ಲಿ ಖಂಡಿಗೆ ನಂದಿನಿ ನದಿಗೆ ಖಾಸಗಿ ಆಸ್ಪತ್ರೆ ಮತ್ತು ಎಸ್‌ಟಿಪಿ ಪ್ಲಾಂಟ್‌ನಿಂದ ಕಲುಷಿತ ನೀರು ಬರುವುದರಿಂದ ಕುಡಿಯುವ ನೀರಿನ ಬಾವಿ ಕಲುಷಿತಗೊಂಡು ಕುಡಿಯಲು ನೀರಿಲ್ಲ ಕೃಷಿ ಮಾಡಲು ಸಾಧ್ಯವಿಲ್ಲ ಇಂತಹ ಸಂದಿಗ್ಧ ಪರಿಸ್ಥಿತಿ ಇರುವಾಗ ಚೇಳ್ಯಾರು 1ನೇ ವಿಭಾಗದ ನದಿಯಲ್ಲಿ ಮರಳುಗಾರಿಕೆಗೆ ಗಣಿ ಇಲಾಖೆ ಅನುಮತಿ ನೀಡಿದ್ದು ಇದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಗ್ರಾಮಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿದರು.

ಇಂದು ಚೇಳ್ಯಾರು ಗ್ರಾಮ ಪಂಚಾಯತ್‌ನ ಸಭಾಭವನದಲ್ಲಿ ನಡೆದ ಗ್ರಾಮ ಪಂಚಾಯತ್‌ನ 2026–27ನೇ ಸಾಲಿನ ಪ್ರಥಮ ಹಂತದ ಗ್ರಾಮ ಸಭೆಯಲ್ಲಿ ಇಂತಹ ಘಟನೆ ನಡೆಯಿತು. ಈಗಾಗಲೇ ಕುಡಿಯಲು ನೀರಿಲ್ಲದೆ ಜನ ಪರದಾಡುತ್ತಾ ಇದ್ದಾರೆ. ಇಂತಹ ಸಂದರ್ಭದಲ್ಲಿ ಈಗಾಗಲೇ ಈ ಹಿಂದಿನ ಗ್ರಾಮ ಸಭೆಯಲ್ಲಿ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ಮಾತ್ರವಲ್ಲದೆ ಖುದ್ದಾಗಿ ಜಿಲ್ಲಾಧಿಕಾರಿ, ಸಹಾಯಕ ಆಯುಕ್ತರು, ಗಣಿ ಇಲಾಖೆಗೆ ಮರಳುಗಾರಿಕೆಗೆ ಅನುಮತಿ ನೀಡಬಾರದಾಗಿ ಮನವಿ ನೀಡಿದರು.

ಯಾವ ಪುರುಷಾರ್ಥಕ್ಕೆ ಗ್ರಾಮ ಸಭೆ ನಡೆಸುತ್ತೀರಿ ನಾವು ಗ್ರಾಮ ಸಭೆ ನಡೆಸಲು ಬಿಡುವುದಿಲ್ಲ ಮರಳುಗಾರಿಕೆಗೆ ನೀಡಿದ ಅನುಮತಿಯನ್ನು ತಕ್ಷಣ ರದ್ದುಗೊಳಿಸಿ ಎಂದು ಗ್ರಾಮಸ್ಥರು ಆಗ್ರಹಿಸಿದರು. ಇದಕ್ಕೆ ಗ್ರಾಮಸಭೆಯ ಅಧ್ಯಕ್ಷತೆ ವಹಿಸಿದ ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿ ಸುರೇಶ್ ಅಡಿಗ ಮಾತನಾಡಿ, ಈ ಬಗ್ಗೆ ಇವತ್ತಿನ ಗ್ರಾಮಸಭೆಯ ನಿರ್ಣಯವನ್ನು ಜಿಲ್ಲಾಧಿಕಾರಿ, ಸಹಾಯಕ ಆಯುಕ್ತರು, ಗಣಿ ಇಲಾಖೆಗೆ ಕಳುಹಿಸುವುದಾಗಿ ತಿಳಿಸಿದರು. ಚೇಳ್ಯಾರು ಕೊಲ್ಯ ರಸ್ತೆಯು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೇಔಟ್‌ನಿಂದಾಗಿ ಸಂಪೂರ್ಣ ಹಾಳಾಗಿದ್ದು ಮೂಡಾಕ್ಕೆ ಎಷ್ಟು ಮನವಿ ಸಲ್ಲಿಸಿದರು ಪ್ರಯೋಜನವಾಗಲಿಲ್ಲ ಎಂದು ಮಾಜಿ ಪಂ. ಸದಸ್ಯ ಪ್ರತಿಮಾ ಶೆಟ್ಟಿ ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೆಂಕಟರಮಣ ಭಟ್ ಈ ಬಗ್ಗೆ ಮೂಡಾಕ್ಕೆ ಮನವಿ ನೀಡಲಾಗುವುದು ಎಂದರು. ಎಂ.ಆರ್.ಪಿ.ಎಲ್ ಸಂಸ್ಥೆಯಿಂದ ಚೇಳ್ಯಾರು ಕೊಲ್ಯ ಎಂಬಲ್ಲಿ ತೆರೆದ ಬಾವಿ ರಚನೆ ಮಾಡಿದ್ದು ಅದಕ್ಕೆ ವಿದ್ಯುತ್ ಸಂಪರ್ಕ ನೀಡಲಿಲ್ಲ ತಕ್ಷಣ ಸಂಪರ್ಕ ನೀಡಿ ಕುಡಿಯಲು ನೀರು ಕೊಡಿ ಎಂದು ಗ್ರಾಮಸ್ಥರು ಕೇಳಿಕೊಂಡರು. ಗ್ರಾಮ ಆಡಳಿತ ಅಧಿಕಾರಿ ಸುಲೋಚನಾ, ಲೆಕ್ಕ ಸಹಾಯಕ ಸುರೇಶ್, ರಾಜೇಶ್ವರಿ,ವಿನಯ ಸಾಲ್ಯಾನ್,ಸಂತೋಷ್ ಶೆಟ್ಟಿ,ಮೋದಾಕ್ಷಿ,ಶಕೀಲಾ ಮತ್ತಿತರರಿದ್ದರು.

ಶ್ರೀಕ್ಷೇತ್ರ ಪೊಳಲಿಯಲ್ಲಿ ಹಳೆ ಅನ್ನಛತ್ರ, ಮದುವೆ ಸಭಾಂಗಣ ತೆರವಿಗೆ ಪ್ರಾರ್ಥನೆ



ಬಂಟ್ವಾಳ: ಪೊಳಲಿ ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಪಕ್ಕದಲ್ಲಿರುವ ಅನ್ನಛತ್ರ ಹಾಗೂ ಮದುವೆ ಸಭಾಂಗಣ ವನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಶುಕ್ರವಾರ ಮುಹೂರ್ತ ನೆರವೇರಿಸಲಾಯಿತು.

ಸುಮಾರು 4.50 ಕೋ.ರೂ..ವೆಚ್ಚದಲ್ಲಿ ಸುಸಜ್ಜಿತವಾದ ನೂತನ ಅನ್ನ ಛತ್ರ ಹಾಗೂ ಹಾಗೂ 3.50ಕೋ. ರೂ ವೆಚ್ಚದಲ್ಲಿ ನೂತನ ಮದುವೆ ಸಭಾಂಗಣವನ್ನು ನಿರ್ಮಿಸಲಾಗುತ್ತಿದ್ದು ಈ ಹಿನ್ನಲೆಯಲ್ಲಿ ಹಳೇ ಅನ್ನಛತ್ರ ಮತ್ತ ಸಭಾಂಗಣ ನಿರ್ಮಾಣದ ತೆರವಿಗಾಗಿ ದೇವಳದ ತಂತ್ರಿಗಳು, ಅರ್ಚಕರು, ಗುತ್ತಿನವರು, ಆಡಳಿತಮಂಡಳಿ ಹಾಗೂ ಭಕ್ತಾಧಿಗಳ ಉಪಸ್ಥಿತಿಯಲ್ಲಿ ಪ್ರಾರ್ಥಿಸಲಾಯಿತು.

ದೇವಳದ ಸುಬ್ರಹ್ಮಣ್ಯ ತಂತ್ರಿ, ಪವಿತ್ರಪಾಣಿ ಅನುವಂಶಿಕ ಮೊಕ್ತೇಸರ ಮಾಧವ ಭಟ್, ಕೆ. ರಾಮ ಭಟ್, ಪದ್ಮನಾಭ ಭಟ್, ಶ್ರೀಕಾಂತ್ ಮಯ್ಯ, ನಿರ್ಮಿತಿ ಕೇಂದ್ರದ ಅಧಿಕಾರಿ ನವೀನ್, ದೇವಳದ ಇಂಜಿನಿಯರ್ ಲಕ್ಷಣ್ ಪೂಜಾರಿ, ಗುತ್ತಿಗೆದಾರ ಗಿರೀಶ್, ದೇವಳದ ಆಡಳಿತ ಮೊಕ್ತೇಸರ ಡಾ.ಎ. ಮಂಜಯ್ಯ ಶೆಟ್ಟಿ ಅಮ್ಮುಂಜೆಗುತ್ತು, ಬಂಟ್ವಾಳ ಶಾಸಕ ಯು.ರಾಜೇಶ್ ನ್ಯಾಕ್, ಮಾಜಿ ಸಚಿವ ಬಿ.ರಮಾನಾಥ ರೈ, ಜಿ.ಪಂ.ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ತುಂಬೆ,ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜ, ಪ್ರಮುಖರಾದ ಜೀವರಾಜ್ ಶೆಟ್ಟಿ ಅಮ್ಮುಂಜೆಗುತ್ತು, ಶಿವಪ್ರಸಾದ್ ಶೆಟ್ಟಿ ಅಮ್ಮುಂಜೆಗುತ್ತು, ಕೃಷ್ಣರಾಜ ಮಾರ್ಲ ಮುತ್ತೂರು, ವಿದ್ಯಾಚರಣ್ ಭಂಡಾರಿ ಮೊಗರುಗುತ್ತು, ಭುವನೇಶ್ ಪಚಿನಡ್ಕ, ಚಂದ್ರಶೇಖರ್ ಭಂಡಾರಿ,ಭಾಸ್ಕರ್ ಭಟ್ ಗಂಜಿಮಠ, ಯಶವಂತ ಪೂಜಾರಿ ಪೊಳಲಿ,ಚಂದ್ರಹಾಸ ಪಲ್ಲಿಪಾಡಿ, ಲೋಕೇಶ್ ಭಂಡಾರಿ, ದೇವಳದ ಕಾರ್ಯನಿರ್ವಹಣಾಧಿಕಾರಿ ಚಂದ್ರಮೋಹನ್ ಹಾಗೂ ದೇವಳದ ಸಿಬ್ಬಂದಿಗಳು ಹಾಜರಿದ್ದರು.

ಹೊಸಬೆಟ್ಟುವಿನಲ್ಲಿ ಪುತ್ತಿಗೆ ಶ್ರೀಗಳ ಭವ್ಯ ಮೆರವಣಿಗೆ, ಅಭಿನಂದನಾ ಕಾರ್ಯಕ್ರಮ



ಸುರತ್ಕಲ್: ಚತುರ್ಥ ವಿಶ್ವಗೀತಾ ಪರ್ಯಾಯವನ್ನು ಯಶಸ್ವಿಯಾಗಿ ಪೂರೈಸಿ ಮೊದಲ ಬಾರಿಗೆ ಸುರತ್ಕಲ್ ಹೊಸಬೆಟ್ಟುವಿಗೆ ಆಗಮಿಸಿದ ಶ್ರೀ ಪುತ್ತಿಗೆ ಮಠದ ಡಾ. ಸುಗುಣೇಂದ್ರತೀರ್ಥ ಶ್ರೀಪಾದರಿಗೆ ಅಭಿನಂದನಾ ಕಾರ್ಯಕ್ರಮ ಮಠದಲ್ಲಿ ಜರಗಿತು.

ರಾಘವೇಂದ್ರ ಮಠ, ಹೊಸಬೆಟ್ಟು ಇದರ ವತಿಯಿಂದ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಮಾರುತಿ ನಗರದಿಂದ ಶ್ರೀ ರಾಘವೇಂದ್ರ ಮಠದವರೆಗೆ ಪರಮ ಪೂಜ್ಯ ಶ್ರೀಗಳನ್ನು ಭವ್ಯ ಮೆರವಣಿಗೆಯ ಮೂಲಕ ಕರೆ ತಂದು ಪೂರ್ಣಕುಂಭ ಸ್ವಾಗತ, ವಾದ್ಯಘೋಷ, ಭಜನೆಗಳೊಂದಿಗೆ ಸ್ವಾಗತಿಸಲಾಯಿತು.

ವಿವಿಧ ಭಜನಾ ಮಂಡಳಿಗಳ ಮಾತೆಯರಿಂದ ಸಾಮೂಹಿಕ ಭಗವದ್ಗೀತಾ ಪಾರಾಯಣ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಭಕ್ತರಿಗೆ ಶ್ರೀಗಳು ಕೋಟಿ ಗೀತಾಲೇಖನ ಯಜ್ಞದ ದೀಕ್ಷೆ ನೀಡಿದರು. ಬಳಿಕ ಆಶೀರ್ವಚನ ನೀಡಿದ ಅವರು ಗೀತೆಯ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ಶ್ರೀ ಪುತ್ತಿಗೆ ಮಠದ ಶಾಖೆಯಾಗಿರುವ ಹೊಸಬೆಟ್ಟು ಶ್ರೀ ರಾಘವೇಂದ್ರ ಮಠದ ಅಭಿನಂದನಾ ಸಮಿತಿ ಕಾರ್ಯಕ್ರಮದ ನೇತೃತ್ವ ವಹಿಸಿತ್ತು. ಧರ್ಮದರ್ಶಿ ಹರಿಕೃಷ್ಣ ಪುನರೂರು, ಮಠದ ಜೀರ್ಣೋದ್ಧಾರ ಸಮಿತಿ ಪ್ರಮುಖರಾದ ರಾಘವೇಂದ್ರ ಎಚ್ ಎ., ವಿಶ್ವೇಶರ ಬದವಿದೆ, ಪುಂಡಲೀಕ ಹೊಸಬೆಟ್ಟು, ಎಂ. ಬಿ ಪುರಾಣಿಕ್, ಪ್ರದೀಪ್ ಕುಮಾರ್ ಕಲ್ಕೂರ, ಭುವನಾಭಿ ರಾಮ ಉಡುಪ,ಪುತ್ತಿಗೆ ಮಠದ ಪ್ರಮುಖರು, ಹೊಸಬೆಟ್ಟು ಮಠದ ಉಸ್ತುವಾರಿ ಶ್ರೀನಿಧಿ ಆಚಾರ್ಯ ಮತ್ತಿತರರಿದ್ದರು. ಕಲಾವತಿ ಟೀಚರ್ ಅಭಿನಂದನಾ ಪತ್ರ ವಾಚಿಸಿದರು.



ಶೈಕ್ಷಣಿಕ ಸಾಲಿನಲ್ಲಿ ಆರಂಭೋತ್ಸವದ ಅಂಗವಾಗಿ ಪುತ್ತೂರು ವಿವೇಕಾನಂದ ಕನಡ ಶಾಲೆಯಲ್ಲಿ ಗಣಪತಿ ಹವನ ನಡೆಸಲಾಯಿತು. ಮಕ್ಕಳಿಗೆ ತಿಲಕವಿರಿಸಿ ಆರತಿ ಬೆಳಗಿ ಶುಭ ಕೋರಲಾಯಿತು. ಶಾಲಾ ಆಡಳಿತ ಮಂಡಳಿ, ಅಧ್ಯಕ್ಷರು, ಸಂಚಾಲಕರು ಹಾಗೂ ಸದಸ್ಯರು ಹಾಗೂ ಶಾಲಾ ಶಿಕ್ಷಕ ವೃಂದ, ಪೋಷಕರು ಉಪಸ್ಥಿತರಿದ್ದರು.



ಕಡಬ ಸರಸ್ವತೀ ವಿದ್ಯಾಲಯದಲ್ಲಿ ಶುಕ್ರವಾರ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಸಂಭ್ರಮ ಸಡಗರದಿಂದ ನಡೆಯಿತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹ ಕಾರ್ಯನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಂಕುಡೆ ಶುಭ ಹಾರೈಸಿದರು. ಸಂಸ್ಥೆಯ ಕೋಶಾಧಿಕಾರಿ ಲಿಂಗಪ್ಪ ಜೆ., ನಿರ್ದೇಶಕರಾದ ಶಿವಪ್ರಸಾದ್ ಮೈಲೇರಿ, ಶಾಲಾ ಮುಖ್ಯ ಶಿಕ್ಷಕ ಮಾಧವ ಕೋಲ್ಪೆ, ಶಿಕ್ಷಕಿ ಪ್ರೇಮಲತಾ ಮೊದಲಾದವರಿದ್ದರು.

ಮಂಗಳೂರು ತಾ.ಪಂ. ಸಭಾಂಗಣದಲ್ಲಿ ಪ.ಜಾ.-ಪಂ.ದ ಅಹವಾಲು ಆಲಿಕೆ ಸಭೆಯಲ್ಲಿ ಸಮುದಾಯದ ಮುಖಂಡರ ಆಗ್ರಹ

ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ವೃತ್ತ ನಿರ್ಮಾಣಕ್ಕೆ ಮೀನಮೇಷ ಏಕೆ?



ಮಂಗಳೂರು: ಮಂಗಳೂರಿನಲ್ಲಿ ಹಲವು ವೃತ್ತಗಳ ನಿರ್ಮಾಣವಾಗಿದೆ. ಎಲ್ಲದಕ್ಕೂ ಮಹಾನ್ ಪುರುಷರ ಹೆಸರಿಡಲಾಗಿದೆ. ಆದರೆ ನಗರದ ಕೆಎಂಸಿ ಆಸ್ಪತ್ರೆ ಮುಂಭಾಗದಲ್ಲಿ ನಿರ್ಮಾಣವಾಗಬೇಕಾದ ಡಾ.ಅಂಬೇಡ್ಕರ್ ವೃತ್ತ ಮಾತ್ರ ಇನ್ನೂ ನಿರ್ಮಾಣವಾಗಿಲ್ಲ. ಈ ರೀತಿಯ ನಿರ್ಲಕ್ಷ್ಯ ಯಾಕೆ? ಎಂದು ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಗಳೂರಿನ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಮಂಗಳೂರು ಮತ್ತು ಉಳ್ಳಾಲ ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಂದುಕೊರತೆ ಸಭೆಯಲ್ಲಿ ಈ ಆಕ್ರೋಶ ವ್ಯಕ್ತವಾಯಿತು.

ನಾವೇ ನಿರ್ಮಾಣ ಮಾಡುತ್ತೇವೆ

ಸಮುದಾಯದ ಮುಖಂಡ ದಿನೇಶ್ ಮೂಳೂರು ಅವರು, ಮಾತನಾಡಿ, ಜಿಲ್ಲಾಡಳಿತ, ಮಹಾನಗರ ಪಾಲಿಕೆಯಿಂದ ವೃತ್ತ ನಿರ್ಮಾಣ ಸಾಧ್ಯವಾಗುತ್ತಿಲ್ಲ ಎಂದಾದರೆ ನಾವೇ ನಿರ್ಮಾಣ ಮಾಡುತ್ತೇವೆ. ಆದರೆ ನಿರ್ಲಕ್ಷ್ಯ ಸಲ್ಲದು ಎಂದರು.

ಜಿನ್ನಪ್ಪ ಬಂಗೇರ ಅವರು ಮಾತನಾಡಿ, ಅಂಬೇಡ್ಕರ್ ವೃತ್ತದಲ್ಲಿ ಈ ಹಿಂದೆ ಇದ್ದ ಪೊಲೀಸ್ ಚೌಕಿಯಲ್ಲಿ ಅಂಬೇಡ್ಕರ್ ವೃತ್ತ ಎಂದು ಬರೆದಿತ್ತು. ಆ ಚೌಕಿಯನ್ನು ತೆಗದು ಹೊಸ ಚೌಕಿಯನ್ನು ಇಡಲಾಗಿದೆ. ಆದರೆ ಇದರಲ್ಲಿ ಅಂಬೇಡ್ಕರ್ ವೃತ್ತ ಎಂದು ಬರೆದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಬಗ್ಗೆ ಸಂಬಂಧಪಟ್ಟ ಇಲಾಖಾಧಿಕಾರಿಗಳ ಗಮನಕ್ಕೆ ತರುತ್ತೇವೆ ಎಂದು ಅಧಿಕಾರಿಗಳು ಉತ್ತರ ನೀಡಿದರು.

ರಘುರಾಜ್ ಕದ್ರಿ ಅವರು, ಹಾಸ್ಟೆಲ್ ಕೊರತೆಯನ್ನು ಪ್ರಸ್ತಾಪಿಸಿದರು. ಅರ್ಜಿ ಸಲ್ಲಿಸಿದ ಪ.ಜಾ ಮತ್ತು ಪ.ಪಂಗಡದ ಎಲ್ಲ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ದೊರೆಯುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸುರೇಶ್ ಅಡಿಗ ಅವರು ಪ್ರತಿಕ್ರಿಯಿಸಿ, ಮಂಗಳೂರಿನಲ್ಲಿ ಹಾಸ್ಟೆಲ್‌ಗಳ ಕೊರತೆ ಇದೆ. ಬಾಡಿಗೆ ಕಟ್ಟಡಗಳು ಸಿಗುತ್ತಿಲ್ಲ. ಇತ್ತೀಚೆಗೆ ಕದ್ರಿಯಲ್ಲಿ ಹಾಸ್ಟೆಲ್ ಉದ್ಘಾಟನೆಯಾಗಿದೆ. ಮಂಗಳೂರು ವಿಶ್ವವಿದ್ಯಾನಿಲಯದ ಬಳಿ 500 ವಿದ್ಯಾರ್ಥಿಗಳ ಸಾಮರ್ಥ್ಯದ ಕಟ್ಟಡ ನಿರ್ಮಾಣ ಆಗುತ್ತಿದ್ದು, ಈ ವರ್ಷದೊಳಗೆ ಅದು ಪೂರ್ಣಗೊಳ್ಳಬಹುದು. ಅನಂತರ ಸಮಸ್ಯೆ ಬಗೆಹರಿಯಬಹುದು ಎಂದರು.

ಕುದ್ಮುಲ್ ರಂಗರಾವ್ ಜನ್ಮದಿನ ಆಚರಿಸಿ ಜೂ. 29ರಂದು ಕುದ್ಮುಲ್ ರಂಗರಾವ್ ಅವರ ಜನ್ಮದಿನ. ಕಳೆದ ವರ್ಷ ಯಾವುದೇ ಕಾರ್ಯಕ್ರಮ ನಡೆಸಲಾಗಿಲ್ಲ. ಈ ವರ್ಷವಾದರೂ ಜಿಲ್ಲಾಡಳಿತ ಮತ್ತು ಇತರ ಸಂಬಂಧಪಟ್ಟ ಇಲಾಖೆಯವರು ಪುರಭವನದಲ್ಲೇ ಕಾರ್ಯಕ್ರಮ ಆಯೋಜಿಸಬೇಕು ಎಂದು ಅಖಿಲ ಭಾರತ ಮುಂಡಾಲ ಯುವ ವೇದಿಕೆ ಅಧ್ಯಕ್ಷ ರಘುವೀರ್ ಬಾಬುಗುಡ್ಡೆ ಅವರು ಆಗ್ರಹಿಸಿದರು. ಮಂಗಳೂರು ತಹಶೀಲ್ದಾರ್ ರಮೇಶ್ ಬಾಬು, ಉಳ್ಳಾಲ ತಹಶೀಲ್ದಾರ್ ಪ್ರಶಾಂತ್ ಪಾಟೀಲ್, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಮಹೇಶ್ ಹೊಳ್ಳ ಉಪಸ್ಥಿತರಿದ್ದರು.

ಸುತ್ತ ಮುತ್ತ

ಇಂದು ಶಾಸಕರಿಂದ ಸಾರ್ವಜನಿಕ ಕುಂದುಕೊರತೆ ಆಲಿಕೆ

ಮುಲ್ಕಿ: ಶಾಸಕ ಉಮಾನಾಥ್ ಎ. ಕೋಟ್ಯಾನ್ ಅವರಿಂದ ಮೇ 30 ರಂದು ಮುಲ್ಕಿಯ ಕಾರ್ನಾಡ್ ಗೇರುಕಟ್ಟೆ ಪ್ರಜಾಸೌಧ ಸೇವಕ ಕಚೇರಿಯಲ್ಲಿ ಬೆಳಿಗ್ಗೆ 10ರಿಂದ 11ರವರೆಗೆ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲಿದ್ದಾರೆ. ಸಾರ್ವಜನಿಕರು ತಮ್ಮ ಸಮಸ್ಯೆಗಳು, ಮನವಿಗಳು ಹಾಗೂ ಅರ್ಜಿಗಳೊಂದಿಗೆ ಆಗಮಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಶಾಸಕರ ಕಚೇರಿ ಪ್ರಕಟಣೆ ತಿಳಿಸಿದೆ.

ಇಂದು ಪ್ರತಿಭಟನೆ

ಬಂಟ್ವಾಳ: ದ.ಕ. ಜಿಲ್ಲಾ ಕಾಂಗ್ರೆಸ್ ಆಶ್ರಯದಲ್ಲಿ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ದ.ಕ.ಇದರ ವತಿಯಿಂದ ಪಾಣೆಮಂಗಳೂರು ಬ್ಲಾಕ್ ಕಾಂಗ್ರೆಸ್ ಮತ್ತು ಬಂಟ್ವಾಳ ಬ್ಲಾಕ್ ಕಾಂಗ್ರೆಸ್ ಸಹಕಾರದೊಂದಿಗೆ ಮಾಜಿ ಸಚಿವ ಬಿ. ರಮಾನಾಥ ರೈ ಮಾರ್ಗದರ್ಶನದಲ್ಲಿ ಬಂಟ್ವಾಳ ತಾಲೂಕು ಆಡಳಿತ ಕಚೇರಿ ಎದುರುಗಡೆ ಕೇಂದ್ರ ಸರಕಾರದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸುವ ನೀತಿ ಮತ್ತು ಇತರ ವೈಫಲ್ಯಗಳ ವಿರುದ್ಧ ಮೇ 30 ಬೆಳಿಗ್ಗೆ 10 ಗಂಟೆಗೆ ಪ್ರತಿಭಟನೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಕಾಂಗ್ರೆಸ್ ಮುಖಂಡ ಸುಧೀರ್ ಕುಮಾರ್ ಮುರೊಳ್ಯ ಅವರು ಪ್ರಮುಖ ಭಾಷಣಕಾರರಾಗಿ ಭಾಗವಹಿಸಲಿದ್ದಾರೆ.

ಮರ ಬೆಳೆಸೋಣ: ಕಾಸರಗೋಡಿನಲ್ಲಿ ಉಚಿತ ಸಸಿ ವಿತರಣೆ

ಕಾಸರಗೋಡು: ಪರಿಸರ ಸಂರಕ್ಷಣೆ , ಹಸಿರೀಕರಣದ ಮುಖ್ಯ ಉದ್ದೇಶದಿಂದ ಜಿಲ್ಲೆಯಲ್ಲಿ ಮರ ಬೆಳೆಸೋಣ ಎಂಬ ಯೋಜನೆಯ ಭಾಗವಾಗಿ ಉಚಿತ ಸಸಿಗಳ ವಿತರಣೆಗೆ ಸಿದ್ಧತೆಗಳು ನಡೆದಿವೆ. ಕಾಸರಗೋಡು ಅರಣ್ಯ ಮತ್ತು ವನ್ಯಜೀವಿ ಇಲಾಖೆ ಯಡಿ ಸಾಮಾಜಿಕ ಅರಣ್ಯ ವಿಭಾಗವು ಹಸಿರು ಕೇರಳ ಮಿಷನ್‌ಗಾಗಿ ಉತ್ಪಾದಿಸಿದ ಸಸಿಗಳು ಈಗ ವಿತರಣೆಗೆ ಸಿದ್ಧವಾಗಿವೆ. ಹಸಿರು ನಮ್ಮ ಭವಿಷ್ಯ ಎಂಬ ಸಂದೇಶ ಗಮನದಲ್ಲಿಟ್ಟುಕೊಂಡು ಈ ಯೋಜನೆ ಕಾರ್ಯಗತಗೊಳಿಸಲಾಗುತ್ತಿದೆ. ಯೋಜನೆಯ ಭಾಗವಾಗಿ ಶಾಲೆಗಳು, ಕಾಲೇಜುಗಳು, ಇತರ ಸಂಸ್ಥೆಗಳು , ಸ್ವಯಂಸೇವಾ ಸಂಸ್ಥೆಗಳಿಗೆ ಸಸಿಗಳ ಉಚಿತವಾಗಿ ನೀಡಲಾಗುವುದು. ಸಸಿಗಳ ಅಗತ್ಯವಿರುವವರು 9446088056 ಅಥವಾ 8547603838 ಸಂಪರ್ಕಿಸಬಹುದು.

ಪಶು ವೈದ್ಯರ ನೇಮಕಾತಿ

ಕಾಸರಗೋಡು: ಜಿಲ್ಲೆಯಲ್ಲಿ ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಪಶು ವೈದ್ಯರನ್ನು ನೇಮಿಸುವ ಅಂಗವಾಗಿ ಸಂದರ್ಶನ ಜೂ.5 ರಂದು ಬೆಳಿಗ್ಗೆ 10.30ಕ್ಕೆ ಪರಪ್ಪ ಬ್ಲಾಕ್ ಪಂಚಾಯತ್ ಕಚೇರಿಯಲ್ಲಿ ನಡೆಯಲಿದೆ. ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ, ಕೇರಳ ಪಶುವೈದ್ಯಕೀಯ ಮಂಡಳಿ ನೋಂದಣಿ ಅರ್ಹತೆಯಾಗಿದೆ. ಮಾಹಿತಿಗೆ 9745068809 ಕರೆ ಮಾಡಬಹುದು.

ಜನಜಾಗೃತಿ ವೇದಿಕೆ ಕುಂದಾಪುರ ತಾಲೂಕು ಅಧ್ಯಕ್ಷರಾಗಿ ಸುಬ್ರಹ್ಮಣ್ಯ



ಕುಂದಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕುಂದಾಪುರ ತಾಲೂಕು ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕುಂದಾಪುರ ತಾಲೂಕು ಇದರ ವಾರ್ಷಿಕ ಸಭೆ ಇತ್ತೀಚೆಗೆ ನಡೆಯಿತು. ಅಧ್ಯಕ್ಷತೆಯನ್ನು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕುಂದಾಪುರ ತಾಲೂಕು ಅಧ್ಯಕ್ಷ ನ್ಯಾಯವಾದಿ ಉಮೇಶ್ ಶೆಟ್ಟಿ ಶಾನ್ಕಟ್ ವಹಿಸಿದ್ದರು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯಯು.ಎಸ್. ಶೆಣೈ , ಸುಬ್ರಹ್ಮಣ್ಯ ಶೆಟ್ಟಿ, ತಾಲೂಕು-2 ಯೋಜನಾಧಿಕಾರಿ ಸುಧೀರ್ ಹಂಗ್ಲೂರು ಹಾಗೂ ಜನಜಾಗೃತಿ ವೇದಿಕೆ ಪ್ರಾದೇಶಿಕ ಕಚೇರಿ ಉಡುಪಿ ಮೇಲ್ವಿಚಾರಕ ಉದಯ ಉಪಸ್ಥಿತರಿದ್ದರು. ಯೋಜನೆಯ ತಾಲೂಕು- 1 ಯೋಜನಾಧಿಕಾರಿ ಉಮೇಶ್ ಶೆಟ್ಟಿ ಪ್ರಸ್ತಾವನೆಗೈ ದರು. ನೂತನ ಅಧ್ಯಕ್ಷ ಜಿಲ್ಲಾ ಜನಜಾಗೃತಿ ಸದಸ್ಯ ಸುಬ್ರಹ್ಮಣ್ಯ ಶೆಟ್ಟಿ ಅವರನ್ನು ಆಯ್ಕೆ ಮಾಡಲಾಯಿತು.

ಸಂಪೂರ್ಣ ಹದೆಗೆಟ್ಟ ಕಬಕ-ಕೊಡಿಪ್ಪಾಡಿ ರಸ್ತೆ | ಸಾರ್ವಜನಿಕರಿಂದ ಧರಣಿ ನಡೆಸುವ ಎಚ್ಚರಿಕೆ

ಅಭಿನಂದನಾ ಬ್ಯಾನರ್‌ಗೇ ಮಾತ್ರ ಸೀಮಿತವಾದ ಅನುದಾನ!




ಪುತ್ತೂರು: ಕಬಕ-ಕೊಡಿಪ್ಪಾಡಿ ರಸ್ತೆ ಸಂಪೂರ್ಣ ಹದೆಗೆಟ್ಟಿದೆ. ರಸ್ತೆಅಭಿವೃದ್ಧಿಗೆಅನುದಾನಇರಿಸಲಾಗಿದೆ ಎನ್ನುವ ಹೇಳಿಕೆಗಳು ಅಭಿನಂದನಾ ಬ್ಯಾನರ್‌ಗೆ ಮಾತ್ರ ಸೀಮಿತವಾಗಿದೆ. ತಕ್ಷಣ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳದಿದ್ದರೆ ಧರಣಿ ನಡೆಸಲಾಗುವುದು, ಜಿಲ್ಲಾಧಿಕಾರಿಗಳೇ ಸ್ಥಳಕ್ಕೆ ಬರುವಂತೆ ಆಗ್ರಹಿಸಲಾಗುವುದು ಎಂದು ಸ್ಥಳೀಯ ಸಾರ್ವಜನಿಕರು ಎಚ್ಚರಿಸಿದ್ದಾರೆ.

4 ಕಿ.ಮೀ. ಸಂಚಾರಕ್ಕೆ ಅಯೋಗ್ಯ

ಗುರುವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರಾ.ಪಂ. ಮಾಜಿ ಸದಸ್ಯ ಹಾಗೂ ಸಾಮಾಜಿಕ ಹೋರಾಟಗಾರ ಚಂದ್ರಶೇಖರ್ ಕೊಡಿಪ್ಪಾಡಿ ಮಾತನಾಡಿ, ರಾಷ್ಟ್ರೀ ಹೆದ್ದಾರಿಯ ಕಬಕದಿಂದ ಆರಂಭಗೊಂಡು ಕುಡೇರವಡ್ಡು-ಅರ್ಕ- ಬಟ್ರಪ್ಪಾಡಿ- ಕೊಡಿಪ್ಪಾಡಿ ಶಾಲೆ-ಕೊಡಿಪಾಡಿ ಪಂಚಾಯತ್- ಕೋಂಟ್ರಪ್ಪಾಡಿಯ ಸುಮಾರು 4 ಕಿಲೋ ಮೀಟರ್ ಸಂಚಾರಕ್ಕೆ ಅಯೋಗ್ಯವಾಗಿದೆ. ಕುಡೇರವಡ್ಡು- ಓಜಾಲ-ಕುಂಡಡ್ಕ ಕವಲೊಡೆ ಯುವ ರಸ್ತೆಯೂ ಸಂಚಾರಕ್ಕೆ ಯೋಗ್ಯವಾಗಿಲ್ಲ, ಕುಡೇರವಡ್ಡು- ಬಟ್ರಪ್ಪಾಡಿಯ 2 ಕಿಲೋ ಮೀಟರ್ ರಸ್ತೆಯಂತೂ ನಡೆದಾಡಲೂ ಕಷ್ಟಪಡುವ ಸ್ಥಿತಿಯ ಲ್ಲಿದೆ. ಕೊಡಿಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯನ್ನು ಅಭಿವೃದ್ಧಿಯಲ್ಲಿ ನಿರ್ಲಕ್ಷಿಸಲಾಗಿದೆ ಎಂದು ಆರೋಪಿಸಿದರು.

ರೂ.25 ಲಕ್ಷ ಅನುದಾನ

ಕೊಡಿಪ್ಪಾಡಿ-ಅರ್ಕ ರಸ್ತೆ ಅಭಿವೃದ್ಧಿಗೆ ರೂ.25 ಲಕ್ಷ ಅನುದಾನ ಒದಗಿಸಲಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ರೈ ಸಹಿತ ಹಲವರಿಗೆ ಅಭಿನಂದನೆ ಸಲ್ಲಿಸಿ ಡಿಸೆಂಬರ್ ತಿಂಗಳಲ್ಲಿ ಬ್ಯಾನರ್ ಅಳವಡಿಸಲಾಗಿದೆ. ಹಿಂದೆ ಕಬಕ-ಕುಂಡಡ್ಕ ರಸ್ತೆಗೆ ರೂಪಾಯಿ 3 ಕೋಟಿ ಬಿಡುಗಡೆಯಾಗಿದೆ ಎಂದೂ ಪ್ರಚಾರ ಮಾಡಲಾಗಿತ್ತು. ಇಂಜಿನಿಯರ್ ಓರ್ವರು ಆಗಮಿಸಿ ಅಳತೆ ಮಾಡಿ ಒಂದೂವರೆ ವರ್ಷ ಕಳೆದಿದೆ. ಅನುದಾನ ಮಂಜೂರುಗೊಂಡಿದೆ ಎಂದು ಅಳವಡಿಸಿದ ಬ್ಯಾನರ್ ಹರಿದು ಹೋಗಿದೆ. ಒಟ್ಟಿನಲ್ಲಿ ಸಾರ್ವಜನಿಕರ ಜೀವನದಲ್ಲಿ ಚೆಲ್ಲಾಟವಾಡುವ ಕೆಲಸವಾಗುತ್ತಿದೆ ಎಂದು ಆರೋಪಿಸಿದರು.

ನಿತ್ಯ ಸಂಚಾರ ಸಂಕಷ್ಟ

ಈ ರಸ್ತೆಗಳಲ್ಲಿ ತುರ್ತು ಸಂದರ್ಭ ಸಂಚರಿಸಲು ವಾಹನ ಚಾಲಕರು ನಿರಾಕರಿಸುತ್ತಿದ್ದಾರೆ. ಮಂಜಲ್ಪಡ್ಪು ಮೂಲಕ ಈ ರಸ್ತೆಯಲ್ಲಿ ಬರುತ್ತಿರುವ ಸರಕಾರಿ ಬಸ್ಸಿನವರೂ ಸಂಚರಿಸಲು ನಿರಾಕರಿಸುವ ಘಟನೆಗಳು ನಡೆದಿವೆ. ಸುಮಾರು 4 ಸಾವಿರ ಜನಸಂಖ್ಯೆ ಹೊಂದಿರುವ ಈ ಭಾಗದ ಜನತೆ ನಿತ್ಯ ಸಂಚಾರ ಸಂಕಷ್ಟ ಅನುಭವಿಸುತ್ತಿದ್ದಾರೆ. ಹಲವು ವರ್ಷಗಳಿಂದ ಸ್ಥಳೀಯಾಡಳಿತದ ಮೂಲಕ ಪ್ಯಾಚ್ ವರ್ಕ್ ಕೆಲಸ ಮಾತ್ರ ಮಾಡಲಾಗುತ್ತಿದೆ ಎಂದು ಚಂದ್ರಶೇಕರ್ ಕೊಡಿಪ್ಪಾಡಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಬಕ ಜೈ ಹಿಂದ್ ರಿಕ್ಷಾ ಚಾಲಕ-ಮಾಲಕರ ಸಂಘದ ಅಧ್ಯಕ್ಷ ಧನಂಜಯ ಗೌಡ, ಸದಸ್ಯ ಮುರಳೀಧರ ಗೌಡ, ಹರೀಶ್ ನ್ಯಾಕ್ ಕೊಡಿಪ್ಪಾಡಿ, ಕೊಡಿಪಾಡಿ ಗ್ರಾ.ಪಂ. ಮಾಜಿ ಸದಸ್ಯರಾದ ಗಿರಿಧರ್ ಗೋಮುಖ, ಸ್ಮಿತಾ ಉಪಸ್ಥಿತರಿದ್ದರು.

> **ಬ್ಯಾನರ್ ಪ್ರಿಯರು**
>
> ಈ ಭಾಗದ ಅಭಿವೃದ್ಧಿಗೆ ಸಂಬಂಧಿಸಿದಂತೆ 'ಬ್ಯಾನರ್ ಪ್ರಿಯರು' ಪ್ರಚಾರ ಮಾತ್ರ ಪಡೆದುಕೊಳ್ಳುತ್ತಿದ್ದಾರೆ. ಬಿಜೆಪಿ ಬೆಂಬಲಿತರು ಇರುವಲ್ಲಿಗೆ ಶಾಸಕರ ಅನುದಾನ ಸಿಗುತ್ತಿಲ್ಲ, ಹೋರಾಟ ಮಾಡಿದರೆ ರಸ್ತೆ ಮಾಡುವುದಿಲ್ಲ ಎಂದು ಕಾಂಗ್ರೆಸ್‌ನ ಸ್ಥಳೀಯ ಮುಖಂಡರು ಹೇಳುತ್ತಾರೆ. ರಸ್ತೆ ಅಭಿವೃದ್ಧಿಗಾಗಿ ಈಗಾಗಲೇ ಜಿಲ್ಲಾಧಿಕಾರಿ, ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಿ.ಪಂ. ಇಂಜಿನಿಯರಿಂಗ್ ವಿಭಾಗಕ್ಕೆ ಮನವಿ ಸಲ್ಲಿಸಲಾಗಿದೆ. ಸ್ಥಳೀಯರು ಶಾಸಕರಿಗೂ ಮನವಿ ಸಲ್ಲಿಸಿದ್ದಾರೆ. ಸಾವಿರಾರು ಕೋಟಿ ಅನುದಾನ ಬಂದಿದೆ ಎಂದು ಹೇಳುವವರು ನಗರಕ್ಕೆ ಮಾತ್ರ ಗಮನಹರಿಸದೆ ಗ್ರಾಮಾಂತರ ಭಾಗಗಳ ಅಭಿವೃದ್ಧಿಗೂ ಅನುದಾನ ಒದಗಿಸಬೇಕು.
>
> • ಚಂದ್ರಶೇಖರ್ ಕೊಡಿಪ್ಪಾಡಿ

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಕಾಶಿ ಮಠಾಧೀಶರ ಭೇಟಿ, ಪಾದಪೂಜೆ



ಮೂಲ್ಕಿ: ನಿರಂತರ ಅಧ್ಯಯನ ಮತ್ತು ಅಧ್ಯಾಪನವು ಮಹಾಯಜ್ಞಕ್ಕೆ ಸಮನಾಗಿದೆ. ನಮ್ಮ ಸನಾತನ ಸುಸಂಸ್ಕೃತ ಸಂಸ್ಕೃತಿಯನ್ನು ಆಚಾರ ವಿಚಾರಗಳನ್ನು ಯುವ ಪೀಳಿಗೆಗೆ ಮುಟ್ಟಿಸುವ ಕಾರ್ಯ ದೇವರ ಸೇವೆಗೆ ಸಮನಾಗಿದೆ ಎಂದು ಶ್ರೀ ಕಾಶೀ ಮಠಾದೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನ ಶುಕ್ರವಾರ ಆಗಮಿಸಿ ಶ್ರೀ ದೇವರ ಭೇಟಿಯ ಬಳಿಕ ದೇವಳದ ಶ್ರೀ ವ್ಯಾಸಮಹರ್ಷಿ ಸಂಸ್ಕೃತ ವೇದ ಪಾಠ ಶಾಲೆಗೆ ಭೇಟಿ ನೀಡಿ ದೇವರಿಗೆ ಪೂಜೆ ಸಲ್ಲಿಸಿ ಬಳಿಕ ಆಶೀರ್ವಚನ ನೀಡಿದರು.

ಸಾಧಕರಿಗೆ ಸನ್ಮಾನ

ಈ ಸಂದರ್ಭ ಶ್ರೀ ವ್ಯಾಸಮಹರ್ಷಿ ವಿದ್ಯಾಪೀಠದ ಆಡಳಿತ ಸಮಿತಿಯಿಂದ ಸ್ವಾಮೀಜಿ ಅವರಿಗೆ ಪಾದಪೂಜೆ ನಡೆಯಿತು. ಬಳಿಕ ಸಾಧಕರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಶ್ರೀ ಕ್ಷೇತ್ರದ ಅರ್ಚಕವೃಂದ, ಆಡಳಿತ ಸಮಿತಿ, ಭಜಕವೃಂದ ಈ ಸಂದರ್ಭದಲ್ಲಿ ಹಾಜರಿದ್ದರು. ಶ್ರೀ ಕ್ಷೇತ್ರದ ಮೊಕ್ತೇಸರ ಅತುಲ್ ಕುಡ್ವಾ ಸ್ವಾಗತಿಸಿದರು.

> **ಸುಸಂಸ್ಕೃತ ಸಮಾಜ ಬೆಳೆಯಬೇಕು**
>
> ಗೌಡ ಸಾರಸ್ವತ ಬ್ರಾಹ್ಮಣ ಸಮಾಜವು ಅತ್ಯಂತ ಸುಸಂಸ್ಕೃತ ತಳಹದಿಯನ್ನು ಹೊಂದಿದೆ. ಅದನ್ನು ಮುಂದಿನ ಪೀಳಿಗೆಗೆ ಯಥಾವತ್ತಾಗಿ ನೀಡುವ ಕಾರ್ಯ ನಡೆಯಬೇಕು ಮೂಲ್ಕಿಯ ಶ್ರೀ ವ್ಯಾಸಮಹರ್ಷಿ ವಿದ್ಯಾಪೀಠದಿಂದ ವಿದ್ಯಾರ್ಥಿಗಳಿಗೆ ಉತ್ತಮ ಜ್ಞಾನ ನೀಡುವ ಮೂಲಕ ಸುಸಂಸ್ಕೃತ ಸಮಾಜ ಬೆಳೆಯಬೇಕು.
>
> • ಸಂಯಮೀಂದ್ರ ಸ್ವಾಮೀಜಿ

ಹಕ್ಕುಪತ್ರಕ್ಕಾಗಿ ಆಡಳಿತ ಸೌಧದ ಮುಂದೆ ಮುಂದುವರಿದ ಧರಣಿ!



ಬಂಟ್ವಾಳ: ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ಬಂಟ್ವಾಳ ತಾಲೂಕಿನ ಪುಣಚ ಗ್ರಾಮದ ಪ.ಪಂ. ಸಮುದಾಯದ ಮೂರು ಕುಟುಂಬಗಳು ಹಕ್ಕುಪತ್ರಕ್ಕಾಗಿ ನಡೆಸುತ್ತಿರುವ ಧರಣಿ ಮುಂದುವರಿದಿದ್ದು, ಇದುವರೆಗೆ ಗೇಟ್‌ನ ಒಳಭಾಗದಲ್ಲಿ ಆಡಳಿತ ಸೌಧದ ಮೆಟ್ಟಲಲ್ಲಿ ಧರಣಿ ಕುಳಿತಿದ್ದ ಫಲಾನುಭವಿ ಕುಟುಂಬ ಶುಕ್ರವಾರ ಆಡಳಿತ ಸೌಧದ ಗೇಟ್‌ನ ಹೊರಭಾಗಕ್ಕೆ ಧರಣಿ ಕುಳಿತಿದ್ದಾರೆ.

ಗೇಟ್‌ನ ಒಳಗಡೆ ಪ್ರತಿಭಟನೆ, ಬ್ಯಾನರ್, ಧ್ವಜ ಅಳವಡಿಸಲು ಇತ್ತೀಚೆಗೆ ನಿರ್ಬಂಧಿಸಿರುವ ಹಿನ್ನಲೆಯಲ್ಲಿ ಮೂರು ಕುಟುಂಬವು ಹಕ್ಕುಪತ್ರಕ್ಕಾಗಿ ಗೇಟ್‌ನ ಹೊರಭಾಗದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್ .ಅಂಬೇಡ್ಕರ್ ಅವರ ಭಾವಚಿತ್ರವನ್ನಿರಿಸಿ ನೀಲಿ ಬಣ್ಣದ ಧ್ವಜ ಅಳವಡಿಸಿ ಧರಣಿ ಕುಳಿತಿದ್ದಾರೆ.

ಗುರುವಾರ ಸರಕಾರಿ ರಜೆ ಇದ್ದ ಕಾರಣದಿಂದ ಮೂರು ಕುಟುಂಬಗಳು ಧರಣಿ ನಡೆಸಿರಲಿಲ್ಲ, ಶುಕ್ರವಾರ ಮತ್ತೆ ಧರಣಿ ಮುಂದುವರಿಸಿದ್ದಾರೆ. ಈ ಮೂರು ಕುಟುಂಬದ ಮನೆ ಯಜಮಾನಿ ಸಹಿತ ಎಲ್ಲಾ ಸದಸ್ಯರು ಕೂಡ ಗಿರಿಧರ ನಾಯ್ಕ್ ಅವರ ನೇತೃತ್ವದಲ್ಲಿ ಧರಣಿಕುಳಿತಿದ್ದಾರೆ.

ಕಳೆದ ವಾರ 4 ದಿನಗಳ ಕಾಲ ನಡೆಸಿದ ಧರಣಿ ವೇಳೆ ಪುತ್ತೂರು ಮತ್ತು ಬಂಟ್ವಾಳ ಮಂಡಲ ಬಿಜೆಪಿ ನಾಯಕರು, ಕಾರ್ಯಕರ್ತರೂ ಸಾಥ್ ನೀಡಿದ್ದರು. ಆದರೆ ಕಳೆದೆರಡು ದಿನಗಳ ಧರಣಿ ವೇಳೆ ಈ ನಾಯಕರು ಯಾರು ಧರಣಿಯಲ್ಲಿ ಪಾಲ್ಗೊಂಡಿಲ್ಲ, ಪ.ಪಂ.ದ ಮೂರು ಕುಟುಂಬ ಕಳೆದ 1 ವಾರದಿಂದ ಬಿ.ಸಿ.ರೋಡ್ ತಾಲೂಕು ಆಡಳಿತ ಸೌಧದ ಮುಂಭಾಗ ಧರಣಿ ಕುಳಿತರೂ ರಾಜಕೀಯ ಒಣಪ್ರತಿಷ್ಠೆಗಾಗಿ ಇನ್ನು ಕೂಡ ಈ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಮುಂದಾಗದಿರುವುದು ವಿಪರ್ಯಾಸವಾಗಿದೆ ಎಂಬ ಟೀಕೆ ಸಾರ್ವಜನಿಕ ವಲಯದಿಂದ ಕೇಳಿಬಂದಿದೆ.

ಬಿಳಿನೆಲೆಯಲ್ಲಿ ಕಬಡ್ಡಿ ತರಬೇತಿ ಶಿಬಿರದ ಸಮಾರೋಪ ಸಮಾರಂಭ



ಕಡಬ: ಕ್ರೀಡಾಳುಗಳಲ್ಲಿ ದೈಹಿಕ ಮತ್ತು ಮಾನಸಿಕ ಸ್ಥಿರತೆ ಅಗತ್ಯ. ನಿರಂತರ ವ್ಯಾಯಾಮ,ತರಬೇತಿ ಇತ್ಯಾದಿಗಳಿಂದ ದೈಹಿಕ ಸಾಮರ್ಥ ವೃದ್ಧಿಯಾಗುತ್ತದೆ ಮತ್ತು ಓದುವಿಕೆಯಿಂದ ಜ್ಞಾನ ಸಂಪತ್ತು ವೃದ್ಧಿಯಾಗುತ್ತದೆ ಎಂದು ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿ ಶ್ರೀಕೃಷ್ಣ ಶರ್ಮ ಹೇಳಿದರು.

ಬಿಳಿನೆಲೆಯ ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆ ಮತ್ತು ನವನೀತ ಕ್ರೀಡಾ ಸಂಘ ಆಯೋಜಿಸಿದ 15 ದಿವಸಗಳ ಕಬಡ್ಡಿ ತರಬೇತಿ ಶಿಬಿರದ ಸಮಾರೋಪದ ಅಧ್ಯಕ್ಷತೆ ವಹಿಸಿ ಅವರು ಮಾತಾಡಿದರು.

ಶಾಲಾ ಪ್ರಾಕ್ತನ ವಿದ್ಯಾರ್ಥಿ ಸಂಘದ ಅಧ್ಯಕ್ಷ, ಹೆಬ್ರಿ ವಲಯ ಅರಣ್ಯಾಧಿಕಾರಿ ಜಯಕುಮಾರ್ ಹಾಗೂ ವೇದವ್ಯಾಸ ವಿದ್ಯಾಲಯದ ಮುಖ್ಯ ಶಿಕ್ಷಕ ಪ್ರಶಾಂತ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

> **ಸನ್ಮಾನ**
>
> ತರಬೇತುದಾರ ಅಲಂಕಾರ ಶ್ರೀ ದುರ್ಗಾಂಬಾ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಶ್ರೇಯಸ್ ರೈ ಅವರನ್ನು ಸನ್ಮಾನಿಸಲಾಯಿತು.

ಪ್ರಮಾಣ ಪತ್ರ ವಿತರಣೆ

ತರಬೇತು ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಶಾಲಾ ಮುಖ್ಯ ಶಿಕ್ಷಕ ಸತ್ಯಶಂಕರ ಭಟ್, ಸ್ವಾಗತಿಸಿ, ದೈಹಿಕ ಶಿಕ್ಷಣ ಶಿಕ್ಷಕ ವಿನಯ ಕೊಂಬಾರು ವಂದಿಸಿದರು. ಚಿತ್ರಕಲಾ ಶಿಕ್ಷಕ ದಿನೇಶ್ ಕುಂದರ್ ಕಾರ್ಯಕ್ರಮ ನಿರ್ವಹಿಸಿದರು.

ಕುಸಿಯುವ ಭೀತಿಯಲ್ಲಿದೆ ಒಟ್ಟೆಕಾಯೆರ್ ರಸ್ತೆ: ಕ್ರಮಕೈಗೊಳ್ಳಲು ಬಾಳ ಗ್ರಾಮ ಸಭೆಯಲ್ಲಿ ಆಗ್ರಹ



ಸುರತ್ಕಲ್: ಐಒಸಿಎಲ್ ಪೈಪ್‌ಲೈನ್ ಕಾಮಗಾರಿಯಿಂದ ಒಟ್ಟೆಕಾಯೆರ್ ರಸ್ತೆ ಕುಸಿಯುವ ಭೀತಿಯಿದ್ದು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಬಾಳ ಗ್ರಾಮಸಭೆಯಲ್ಲಿ ಗ್ರಾಮಸ್ಥರು ಆಗ್ರಹಿಸಿದರು. ಪಂಚಾಯಿತಿ ಸಭಾಂಗಣದಲ್ಲಿ 2026-27ನೇ ಸಾಲಿನ ಪ್ರಥಮ ಹಂತದ ಗ್ರಾಮಸಭೆ ನಡೆಯಿತು.

ಪಂಚಾಯಿತಿ ಆಡಳಿತಾಧಿಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸುರೇಶ್ ಅಡಿಗ ನೋಡಲ್ ಅಧಿಕಾರಿಯಾಗಿ ಭಾಗವಹಿಸಿದ್ದರು.

ರಸ್ತೆ ಕುಸಿತ

ಮಾಜಿ ಸದಸ್ಯೆ ರೇಖಾ ಶೆಟ್ಟಿ ವಿಷಯ ಪ್ರಸ್ತಾಪಿಸಿ, ಒಟ್ಟೆಕಾಯೆರ್ ರಸ್ತೆ ಪೈಪ್‌ಲೈನ್ ಕಾಮಗಾರಿಯಿಂದ ಈಗಾಗಲೇ ಕುಸಿದಿದೆ. ಹಿಂದಿನ ಜಿಲ್ಲಾಧಿಕಾರಿಗಳು ನೀಡಿದ್ದ ಸೂಚನೆ ಜಾರಿಯಾಗಿಲ್ಲ, ಮಳೆಗಾಲದಲ್ಲಿ ಮತ್ತೆ ರಸ್ತೆ ಕುಸಿಯುವ ಅಪಾಯವಿದೆ. ವಾರದಲ್ಲಿ ಸಮಸ್ಯೆ ಬಗೆಹರಿಸದಿದ್ದರೆ ಪಂಚಾಯತ್ ಎದುರು ಗ್ರಾಮಸ್ಥರು ಧರಣಿ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಎಸ್‌ಸಿ/ಎಸ್‌ಟಿ ನಿವೇಶನ ಸರಿಯಾಗಿ ವಿತರಣೆಯಾಗಿಲ್ಲ ಎಂದು ಶಾರದಾನಗರದ ಕಿರಣ್ ರೈ ದೂರಿದರು. ಕಳುವಾರಿನಲ್ಲಿ 3.6 ಎಕರೆ ಸರ್ವೆಗೆ ಬರೆದಿದ್ದರೂ ಯಾಕೆ ವಿಳಂಬವಾಗುತ್ತಿದೆ ಎಂದು ನಿ.ಪೂ. ಅಧ್ಯಕ್ಷ ಶಂಕರ್ ಜೋಗಿ ಪ್ರಶ್ನಿಸಿದರು.

ರಸ್ತೆಯಲ್ಲಿ ಟ್ಯಾಂಕರ್ ನಿಲುಗಡೆ ಸಮಸ್ಯೆ

ರಸ್ತೆಯಲ್ಲಿ ಟ್ಯಾಂಕರ್ ನಿಲುಗಡೆಯಿಂದ ಸಮಸ್ಯೆಯಾಗುತ್ತಿದ್ದು, ಪತ್ರಿಕೆಯಲ್ಲಿ ವರದಿ ಬಂದರೂ ಸ್ಪಂದನೆ ಇಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು. ಪ್ಲಾಸ್ಟಿಕ್ ತ್ಯಾಜ್ಯ ನಿವಾರಣೆಗೆ ಸೂಕ್ತ ಸ್ಪಂದನೆ ಸಿಗುತ್ತಿಲ್ಲ ಎಂದು ಪಿಡಿಒ ವೆಂಕಟ್ರಮಣ ಪ್ರಕಾಶ್ ತಿಳಿಸಿದರು. ಚರ್ಚೆಯಲ್ಲಿ ನಿ.ಪೂ. ಸದಸ್ಯರಾದ ಪದ್ಮನಾಭ ಸಾಲ್ಯಾನ್, ಸರ್ಫರಾಜ್ ಭಾಗವಹಿಸಿದ್ದರು. ಲೋಕನಾಥ ಭಂಡಾರಿ ಸ್ವಾಗತಿಸಿದರು.

ವಕ್ವಾಡಿಯ ಗುರುಕುಲ ಪಬ್ಲಿಕ್ ಸ್ಕೂಲ್: ಶಿಕ್ಷಕರಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮ



ಕುಂದಾಪುರ: ಶೈಕ್ಷಣಿಕ ಹಂತದಲ್ಲಿ ಬೋಧನೆಯ ಜೊತೆಗೆ ವಿದ್ಯಾರ್ಥಿಗಳ ಸಮಗ್ರ ಮೌಲ್ಯಮಾಪನ ಮತ್ತು ಪ್ರಗತಿಪತ್ರಿಕೆ ಮಹತ್ವದ್ದಾಗಿರುತ್ತದೆ. ಕಲಿಕಾ ಫಲಿತಾಂಶಗಳನ್ನು ಪರಿಣಾಮಕಾರಿಯಾಗಿ ಸಾಧಿಸುವುದಕ್ಕೆ ನವೀನ ರೀತಿಯ ಬೋಧನಾ ತಂತ್ರಗಳನ್ನು ನಾವು ಹೆಚ್ಚು ಹೆಚ್ಚು ಬಳಸಿಕೊಂಡು ಚಟುವಟಿಕೆ ಆಧಾರಿತ ಪಾಠ ಕ್ರಮದ ಮೂಲಕ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟವನ್ನು ಹೆಚ್ಚಿಸಲು ಶಿಕ್ಷಕರು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಎಂ.ವಿ.ಜೆ ಇಂಟರ್‌ನ್ಯಾಷನಲ್ ಸ್ಕೂಲ್‌ನ ಪ್ರಾಂಶುಪಾಲೆ ಹಾಗೂ ಸಿಬಿಎಸ್‌ಸಿ ಮಾಸ್ಟರ್ ಟ್ರೈನರ್ ವಂಶಿಪ್ರಿಯ ಅಮರ್ ಹೇಳಿದ್ದಾರೆ.

ವಕ್ವಾಡಿಯ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕರಿಗಾಗಿ ಆಯೋಜಿಸಲಾದ 'ಸಮಗ್ರ ಪ್ರಗತಿ ಪತ್ರಿಕೆಯ ಮೂಲ ಹಾಗೂ ಕಲಿಕಾ ಫಲಿತಾಂಶ ಮತ್ತು ಬೋಧನಾ ವಿಧಾನಗಳು' ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ವಹಿಸಿದ್ದರು. ಪ್ರಾಂಶುಪಾಲೆ ಡಾ. ರೂಪ ಶೆಣೈ ಶುಭ ಕೋರಿದರು. ಶಿಕ್ಷಕಿ ಮಮತಾ ಕುಮಾರಿ ನಿರ್ವಹಿಸಿದರು.

> **ಅಭಿವೃದ್ಧಿಗೆ ಪೂರಕರಾಗಬೇಕು**
>
> ಶಿಕ್ಷಕರು ವಿದ್ಯಾರ್ಥಿಗಳ ರೂಪಿಸಲು ಅಧ್ಯಯನ ಮತ್ತು ಅನುಭವಾತ್ಮಕ ವಿಚಾರಗಳನ್ನು ಹೆಚ್ಚು ಬಳಸಿಕೊಂಡು ತಮ್ಮ ಬೋಧನಾ ವಿಧಾನದಿಂದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕರಾಗಬೇಕು.
>
> • ಅನುಪಮಾ ಎಸ್. ಶೆಟ್ಟಿ



ಮಂಜೇಶ್ವರ ತಾ.ಕುಂಬಳೆ ವಲಯದ ಮುಂಡಪಳ್ಳ ನಿವಾಸಿ, ಅನಾರೋಗ್ಯದಿಂದಿರುವ ಅಶೋಕ ಅವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯಿಂದ ಸಹಾಯಧನ ಮೊತ್ತದ ಮಂಜೂರಾತಿ ಪತ್ರ ನೀಡಲಾಯಿತು. ಯೋಜನಾಧಿಕಾರಿ ಶಶಿಕಲಾ ಸುವರ್ಣ, ಮೇಲ್ವಿಚಾರಕ ಅಭಿಷೇಕ್, ಸ್ವರ್ಣಲತಾ ಉಪಸ್ಥಿತರಿದ್ದರು.



ಮಂಗಲ್ಪಾಡಿ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿನಿ ಅಲೀಮತ್ ಸುಂಶೀನ ಅವರು ಕೇರಳ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ 'ಎ' ಪ್ಲಸ್ ಗ್ರೇಡ್ ಪಡೆದಿದ್ದಾರೆ. ಈಕೆಯನ್ನು ಉಪ್ಪಳ ಕುರ್ಚಿಪಳ್ಳ ಎಂ.ಕೆ.ಬ್ರದರ್ಸ್ ಆಶ್ರಯದಲ್ಲಿ ಪುರಸ್ಕರಿಸಿ ಗೌರವಿಸಲಾಯಿತು. ಮಂಗಲ್ಪಾಡಿ ಗ್ರಾ.ಪಂ. ಉಪಾಧ್ಯಾಕ್ಷೆ ಸಮೀನ ಟೀಚರ್ ಶಾಲು ಹೊದೆಸಿ ಗೌರವಿಸಿದರು. ನೀಲ್‌ಕಮಲ್, ಮೆಹಮೂದ್ ಹಾಜಿ, ಶೇಕ್ ಪರ್ವೀಸ್, ಮುಬೀನ್ ಶೇಕ್ ಹಾಗೂ ಎಲ್ಲಾ ಸದಸ್ಯರು ಸ್ಮರಣಿಕೆ ನೀಡಿದರು. ಇದೇ ವೇಳೆ ಕ್ಲಬ್ ವತಿಯಿಂದ ಅನಾರೋಗ್ಯ ಬಾಧಿಸಿದವರಿಗೆ ಮಂಚ ಹಾಗೂ ವೀಲ್‌ಚೇರ್ ವಿತರಣೆಯ ಉದ್ಘಾಟನಾ ಕಾರ್ಯಕ್ರಮ ಜರಗಿತು.

ಪುತ್ತೂರು ಕೋಆಪರೇಟಿವ್ ಟೌನ್ ಬ್ಯಾಂಕ್ ಸಿಬ್ಬಂದಿಗಳ 'ನೂತನ ತಂತ್ರಜ್ಞಾನ ಮಾಹಿತಿ' ಶಿಬಿರ ಸಮಾರೋಪ

ಗ್ರಾಹಕರಿಗೆ ಕ್ಷಿಪ್ರ ಸೇವೆ ನೀಡಲು ತಂತ್ರಜ್ಞಾನದ ಅಳವಡಿಕೆ ಅತ್ಯಗತ್ಯ

ಪುತ್ತೂರು: ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಂತ್ರಜ್ಞಾನವು ದಿನದಿಂದ ದಿನಕ್ಕೆ ವೇಗವಾಗಿ ಬದಲಾಗುತ್ತಿದೆ. ಗ್ರಾಹಕರಿಗೆ ಅತ್ಯುತ್ತಮ ಹಾಗೂ ಅತ್ಯಂತ ಕ್ಷಿಪ್ರವಾದ ಸೇವೆ ಒದಗಿಸುವ ನಿಟ್ಟಿನಲ್ಲಿ ಬ್ಯಾಂಕಿಂಗ್ ತಂತ್ರಜ್ಞಾನದಲ್ಲಿ ಅನೇಕ ನೂತನ ಬದಲಾವಣೆಗಳನ್ನು ತರಲಾಗಿದೆ. ಬ್ಯಾಂಕಿನ ಸಿಬ್ಬಂದಿ ಇಂತಹ ಕಾರ್ಯಾಗಾರಗಳಲ್ಲಿ ಪಡೆಯುವ ಮಾಹಿತಿ ಸದುಪಯೋಗ ಪಡಿಸಿಕೊಂಡು ಗ್ರಾಹಕರಿಗೆ ನಿರಂತರ ಮತ್ತು ಗುಣಮಟ್ಟದ ಸೇವೆ ನೀಡಬೇಕು ಎಂದು ಪುತ್ತೂರು ಕೋ ಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ ಹೇಳಿದ್ದಾರೆ.

ಅವರು ಪುತ್ತೂರು ಕೋಆಪರೇಟಿವ್ ಟೌನ್ ಬ್ಯಾಂಕ್ ವತಿಯಿಂದ ಬ್ಯಾಂಕಿನ ಸಿಬ್ಬಂದಿಗಾಗಿ ಆಯೋಜಿಸಲಾಗಿದ್ದ ಮೂರು ದಿನಗಳ ನೂತನ ತಂತ್ರಜ್ಞಾನ ಮಾಹಿತಿ ಶಿಬಿರದ ಸಮಾರೋಪದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಬ್ಯಾಂಕ್ ಸದಾ ಸಿದ್ಧವಿದೆ

ಕಲಿಕೆ ಎಂಬುದು ನಿರಂತರ ಪ್ರಕ್ರಿಯೆ. ನಮ್ಮ ಬ್ಯಾಂಕಿನ ವತಿಯಿಂದ ಸಿಬ್ಬಂದಿಗೆ ಅಗತ್ಯವಿರುವ ತರಬೇತಿ ಹಾಗೂ ತಾಂತ್ರಿಕ ವ್ಯವಸ್ಥೆಗಳನ್ನು ಕಾಲಕಾಲಕ್ಕೆ ಮಾಡಿಕೊಡಲು ಬ್ಯಾಂಕ್ ಸದಾ ಸಿದ್ಧವಿದೆ. ತಂತ್ರಜ್ಞಾನ ಬದಲಾದಂತೆ ಸಿಬ್ಬಂದಿ ಕೂಡ ಸ್ವಯಂ ಪ್ರೇರಿತರಾಗಿ ಹೊಸ ಮಾಹಿತಿ ಪಡೆದುಕೊಂಡು ಅಪ್‌ಡೇಟ್ ಆಗಬೇಕು ಎಂದರು.

ಅನುಷ್ಠಾನದ ಕುರಿತು ಸವಿಸ್ತಾರವಾದ ಮಾಹಿತಿ

ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ. ಶೇಖರ ಶೆಟ್ಟಿ , ಪ್ರಸ್ತುತ ತಂತ್ರಜ್ಞಾನ ಅಭಿವೃದ್ಧಿ ಹಾಗೂ ಡಿಜಿಟಲೀಕರಣದ ನಿಟ್ಟಿನಲ್ಲಿ ಬ್ಯಾಂಕು ಕೈಗೊಂಡಿರುವ ವಿವಿಧ ಯೋಜನೆಗಳು, ಅವುಗಳ ಅನುಷ್ಠಾನದ ಕುರಿತು ಸವಿಸ್ತಾರವಾದ ಮಾಹಿತಿ ನೀಡಿದರು.

> **ಸನ್ಮಾನ**
>
> ತರಬೇತುದಾರರಾಗಿ ಆಗಮಿಸಿದ್ದ ವಿ-ಸಾಫ್ಟ್ ಟೆಕ್ನಾಲಜಿ ಕಂಪೆನಿಯ ಚೀಫ್ ಇಂಜಿನಿಯರ್ ಮಧುಸೂದನ್ ಸಕಲೇಶಪುರ ಅವರನ್ನು ಬ್ಯಾಂಕಿನ ವತಿಯಿಂದ ಸನ್ಮಾನಿಸಲಾಯಿತು.

ಬ್ಯಾಂಕಿನ ಉಪಾಧ್ಯಕ್ಷ ಶ್ರೀಧರ ಗೌಡ, ನಿರ್ದೇಶಕರಾದ ಚಂದ್ರಶೇಖರ ರಾವ್ ಬಪ್ಪಳಿಗೆ, ಮಲ್ಲೇಶ ಕುಮಾರ, ಸುಜೀಂದ್ರ ಪ್ರಭು, ಶ್ರೀಧರ ಪಟ್ಲ, ಗಣೇಶ ಕೌಕ್ರಾಡಿ, ಹರೀಶ್ ಭಿಜತ್ರೆ, ವೀಣಾ, ಕೆ. ವಿಶ್ವಾಸ ಶೆಣೈ ಉಪಸ್ಥಿತರಿದ್ದರು. ಪುತ್ತೂರು ಶಾಖಾಧಿಕಾರಿ ಚಿದಂಬರ ಸ್ವಾಗತಿಸಿ, ವಿಟ್ಲ ಶಾಖೆ ಶಾಖಾಧಿಕಾರಿ ಜ್ಯೋತಿ ಎನ್.ಎಸ್. ವಂದಿಸಿದರು.

ವಿವಿಧೆಡೆ ಶಿಕ್ಷಕರ ಹುದ್ದೆಗಳಿಗೆ ಸಂದರ್ಶನ

ಕಾಸರಗೋಡು: ಕಾರಡ್ಕ ಜಿವಿಎಚ್‌ಎಸ್ ಶಾಲೆಯ ವಿಎಚ್‌ಎಸ್‌ಇ ವಿಭಾಗದಲ್ಲಿ ವೃತ್ತಿಪರೇತರ ಶಿಕ್ಷಕರ ಜೂನಿಯರ್ ಕೆಮಿಸ್ಟ್ರಿ ಇ.ಡಿ. ವಿಭಾಗಗಳ ಶಿಕ್ಷಕರ ನೇಮಕಾತಿಗಾಗಿ ಜೂನ್ 2 ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

ಪೈವಳಿಕೆ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಭೂವಿಜ್ಞಾನ ಸೀನಿಯರ್ ಮತ್ತು ಅರೇಬಿಕ್ ಜೂನಿಯರ್ ಶಿಕ್ಷಕರ ನೇಮಕಾತಿಗೆ ಸಂದರ್ಶನ ಜೂನ್ 1 ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ವಿವರಗಳಿಗೆ 9495494840 ಕರೆ ಮಾಡಬಹುದು.

ಕಾಸರಗೋಡು ಸರಕಾರಿ ಬಾಲಕಿಯರ ವೃತ್ತಿಪರ ಪ್ರೌಢಶಾಲೆ ವಿಎಚ್‌ಎಸ್‌ಇ ವಿಭಾಗದಲ್ಲಿ ಇ.ಡಿ. ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಜೂನ್ 2 ರಂದು ಮಧ್ಯಾಹ್ನ 2 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ಜರಗಲಿದೆ. ಮಾಹಿತಿಗೆ 8156875046 ಸಂಪರ್ಕಿಸಬಹುದು. ಕಾಸರಗೋಡು ಸರಕಾರಿಹೈಯರ್ ಸೆಕೆಂಡರಿ ಶಾಲೆ ಎಚ್‌ಎಸ್‌ಟಿ ಭೌತ ವಿಜ್ಞಾನ- ಇಂಗ್ಲಿಷ್ ಶಿಕ್ಷಕರ ನೇಮಕಾತಿ ಗಾಗಿ ಜೂನ್ 1 ರಂದು ಮಧ್ಯಾಹ್ನ 2 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ಏರ್ಪಡಿಸಲಾಗಿದೆ.

ದೇಲಂಪಾಡಿ ಜಿವಿಎಚ್‌ಎಸ್ ಶಾಲೆ ವಿಎಚ್‌ಎಸ್‌ಇ ವಿಭಾಗದಲ್ಲಿ ತಾತ್ಕಾಲಿಕ ಶಿಕ್ಷಕರ ನೇಮಕಾತಿಗೆ ಸಂದರ್ಶನ ಜೂ.2ರಂದು ಬೆಳಿಗ್ಗೆ 11ಕ್ಕೆ ಶಾಲಾ ಕಚೇರಿಯಲ್ಲಿ ನಡೆಯಲಿದೆ.

ಮೊಗ್ರಾಲ್ ಜಿವಿಎಚ್‌ಎಸ್ ಶಾಲೆ ವಿಎಚ್‌ಎಸ್‌ಇ ವಿಭಾಗದಲ್ಲಿ ವೃತ್ತಿಪರ ಶಿಕ್ಷಕರನ್ನು (ಎಫ಼ ಟಿಸಿಪಿ ಆ್ಯಂಡ್ ಡಿಎನ್‌ಎಲ್) ನೇಮಿಸಲಾಗುವುದು. ಗಣಿತ, ರಸಾಯನಶಾಸ್ತ್ರ- ಜೂನಿಯರ್, ಉದ್ಯಮಶೀಲತಾ ಅಭಿವೃದ್ಧಿ ಹುದ್ದೆಗಳ ನೇಮಕಾತಿಗೆ ಸಂದರ್ಶನ ಜೂನ್1 ರಂದು ಮಧ್ಯಾಹ್ನ1 ಗಂಟೆಗೆ ನಡೆಯಲಿದೆ. ಮಾಹಿತಿಗೆ 9946985775 ಸಂಪರ್ಕಿಸಬಹುದು.

ಸುತ್ತ ಮುತ್ತ

ಪಾಣೆಮಂಗಳೂರು-ಆಲಡ್ಕ ಮಸೀದಿಯಲ್ಲಿ ಬಕ್ರೀದ್ ಹಬ್ಬ

ಬಂಟ್ವಾಳ: ಪ್ರವಾದಿ ಹಝ್ರತ್ ಇಬ್ರಾಹಿಂ ನೆಬಿ ಅಲೈಹಿಸ್ಸಲಾಂ ಹಾಗೂ ಅವರ ಕುಟುಂಬ ದೇವನ ಸಂಪ್ರೀತಿಗಾಗಿ ಮಾಡಿದ ತ್ಯಾಗ, ಸಹಿಸಿದ ಕಷ್ಟ-ಸಂಕಷ್ಟಗಳು ನಮಗೆ ಮಾದರಿಯಾಗಿ ಆಧ್ಯಾತ್ಮಿಕ ನೆಲೆಯಲ್ಲಿ ಜೀವಿಸಲು ಪವಿತ್ರ ಬಕ್ರೀದ್ ಹಬ್ಬ ಪ್ರೇರಣೆಯಾಗಲಿ ಎಂದು ಪಾಣೆಮಂಗಳೂರು-ಆಲಡ್ಕ ಮುಹಿಯುದ್ದೀನ್ ಜುಮಾ ಮಸೀದಿ ಮುದರ್ರಿಸ್ ಹಾಜಿ ಬಿ.ಎಚ್. ಅಬೂಸ್ವಾಲಿಹ್ ಉಸ್ತಾದ್ ಹೇಳಿದರು.

ಬಕ್ರೀದ್ ಹಬ್ಬದ ಪ್ರಯುಕ್ತ ಪಾಣೆಮಂಗಳೂರು-ಆಲಡ್ಕ ಮುಹಿಯುದ್ದೀನ್ ಜುಮಾ ಮಸೀದಿಯಲ್ಲಿ ಗುರುವಾರ ನಡೆದ ಈದ್ ನಮಾಝ್ ಬಳಿಕ ಈದ್ ಸಂದೇಶ ನೀಡಿದ ಅವರು, ಬಕ್ರೀದ್ ಆಚರಣೆಯು ಅಲ್ಲಾಹುವಿನ ನಾಮಸ್ಮರಣೆಯ ಮೂಲಕ ಧನ್ಯಗೊಳಿಸಬೇಕಾಗಿದೆ ಎಂದರು. ಹಬ್ಬದ ಸಂಭ್ರಮದ ಜೊತೆಗೆ ಅಧಿಕಾರಿಗಳು ಬಡವರೊಂದಿಗೆ ಬಂಧುಗಳೊಂದಿಗೆ ಜೊತೆ ಪರಸ್ಪರ ಸಹಕಾರ ಮನೋಭಾವ ತೋರುವ ಮೂಲಕ ಕಾರುಣ್ಯದ ಜೀವನ ನಡೆಸಬೇಕಾಗಿದೆ ಎಂದು ಉಸ್ತಾದ್ ಇದೇ ವೇಳೆ ಕರೆ ನೀಡಿದರು. ವಿಶೇಷ ಪ್ರಾರ್ಥನೆ ಬಳಿಕ ಜಮಾಅತ್ ಬಾಂಧವರು ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಮೈಸೂರು ಕಾಫಿ ಸಂಸ್ಕರಣಾ ಮಾರಾಟ ಸಹಕಾರ ಸಂಘದ ಸಭೆ

ಮಡಿಕೇರಿ: ಮೈಸೂರು ಕಾಫಿ ಸಂಸ್ಕರಣಾ ಮಾರಾಟ ಮತ್ತು ಉಗ್ರಾಣ ಸಹಕಾರ ಸಂಘದ ಸಭೆ ಸೋಮವಾರಪೇಟೆಯ ಹಾನಗಲ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಕಾಫಿ ಸಂಸ್ಕರಣ ಮಾರಾಟ ಮತ್ತು ಉಗ್ರಾಣ ಸಹಕಾರ ಸಂಘವು ಪುನಶ್ಚೇತನಗೊಂಡಿರುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಕಾಫಿ ಮತ್ತು ಇತರೆ ಪ್ಲಾಂಟೇಷನ್ ಬೆಳೆ ಉತ್ಪನ್ನಗಳ ಮೌಲ್ಯ ವೃದ್ಧೀಕರಣದಲ್ಲಿ ಸಂಘದ ಪಾತ್ರ ಮತ್ತು ಚಟುವಟಿಕೆಗಳನ್ನು ನಿರ್ಧರಿಸುವ ಬಗ್ಗೆ ವಿಚಾರ ಸಂಕಿರಣ ನಡೆಸುವ ಬಗ್ಗೆ ತೀರ್ಮಾನ ಕೈಗೊಂಡು, ಇಂದಿನ ದಿನಗಳಲ್ಲಿ ಸಂಘವು ಮತ್ತಷ್ಟು ಲಾಭ ಹಾಗೂ ಯಶಸ್ವಿಯಾಗಿ ಮುಂದುವರೆಯಲು ಕಾರ್ಯತಂತ್ರ ಹಾಗೂ ಯೋಜನೆಗಳನ್ನು ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸಂಘದ ಉಪಾಧ್ಯಕ್ಷ ಪ್ರಭುದೇವ, ಸದಸ್ಯ, ನಿರ್ದೇಶಕ, ವಿಚಾರ ಸಂಕಿರಣದ ವೇದಿಕೆ ಅಧ್ಯಕ್ಷ ಎನ್. ಬೋಸ್ ಮಂದಣ್ಣ ಪ್ರಮುಖರಾದ ಕೆ.ಪಿ. ಚಂದ್ರಕಲಾ, ಕೆ.ಎ.ಯಾಕೂಬ್, ಕಾಫಿ ಬೆಳೆಗಾರರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಕುಕ್ಕೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುವುದು ಭಾಗ್ಯ. ಭಗವಂತನ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಜನೆ ಮಾಡುವ ಶ್ರೇಷ್ಠ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಎಸ್‌ಎಸ್‌ಪಿಯು ಕಾಲೇಜಿನ ಪ್ರಾಚಾರ್ಯ ಸೋಮಶೇಖರ್ ನಾಯಕ್ ಹೇಳಿದರು.

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಎಸ್‌ಎಸ್‌ಪಿಯು ಕಾಲೇಜಿನಲ್ಲಿ ನಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಕ ರಕ್ಷಕ ಸಂಘದ ಉಪಾಧ್ಯಕ್ಷ ಗುಣವರ್ಧನ ಕೆದಿಲ ಮುಖ್ಯ ಅತಿಥಿಗಳಾಗಿದ್ದರು. ಸಾಂಸ್ಕೃತಿಕ ಸಂಘದ ಸಂಚಾಲಕ ರೇಖಾರಾಣಿ ಸೋಮಶೇಖರ್, ವಿದ್ಯಾರ್ಥಿ ಸಂಘದ ಸಂಚಾಲಕ ಜಯಪ್ರಕಾಶ್ ಆರ್., ದೈಹಿಕ ಶಿಕ್ಷಣ ಉಪನ್ಯಾಸಕ ರಾಧಾಕೃಷ್ಣ ಚಿದ್ಗಲ್, ಉಪನ್ಯಾಸಕರಾದ ಜಯಶ್ರೀ ವಿ. ದಂಬೆಕೋಡಿ, ಗಿರೀಶ್, ಜಯಪ್ರಕಾಶ್ ಆರ್., ಶ್ರೀಧರ್ ಪುತ್ತಿಲ, ಮನೋಜ್ ಕುಮಾರ್ ಬಿ.ಎಸ್., ಜ್ಯೋತಿ ಪಿ. ರೈ, ಯೋಗಣ್ಣ ಎಂ.ಎಸ್., ಸವಿತಾ ಕೈಲಾಸ್, ಸುಧಾ, ಪೂರ್ಣಿಮಾ, ಪ್ರವೀಣ್ ಎಮ್ಮೆಯಲ್, ಸೌಮ್ಯ ದಿನೇಶ್, ಶ್ರುತಿ ಅಕ್ಷಿತಾ, ಭವ್ಯಶ್ರೀ ಕಲ್ಲೂಂದ, ಸೌಮ್ಯಶ್ರೀ, ಮಾನಸ ಭಟ್ ವೇದಿಕೆಯಲ್ಲಿದ್ದರು. ಉಪನ್ಯಾಸಕ ರತ್ನಾಕರ ಸುಬ್ರಹ್ಮಣ್ಯ, ಸಿಬ್ಬಂದಿಗಳಾದ ಮಹೇಶ್ ಕೆ.ಎಚ್., ಹನುಮಂತಪ್ಪ ಗಡದವರ್ ಉಪಸ್ಥಿತರಿದ್ದರು. ಆರಂಭದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳನ್ನು ಪುಷ್ಪಾರ್ಚನೆ ಮೂಲಕ ವಿದ್ಯಾ ಸಂಸ್ಥೆಗೆ ಸ್ವಾಗತಿಸಲಾಯಿತು

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷ ಸಾಹಿತಿ ಅಬ್ದುಲ್ ರಶೀದ್ ಪ್ರತಿಪಾದನೆ

ಕೊಡಗಿಗೆ ಪ್ರತ್ಯೇಕ ಸಾಂಸ್ಕೃತಿಕ, ಶೈಕ್ಷಣಿಕ ಭಾಷಾ ಸೂತ್ರ ಅಗತ್ಯ

ಕವಿಶಿಷ್ಯ ಮಂಗೇಶರಾಯರ ವೇದಿಕೆ (ಸುಂಟಿಕೊಪ್ಪ): ಒಂದು ಕಾಲದಲ್ಲಿ ಕೊಡಗು ಸಂಸ್ಥಾನವಾಗಿದ್ದ ಅನಂತರ ಮದರಾಸು ಪ್ರಾಂತ್ಯಕ್ಕೆ ಸೇರಿದ್ದ ಬಳಿಕ ಕೊಡಗು ರಾಜ್ಯವಾಗಿದ್ದ ಈಗ ಕರ್ನಾಟಕ ರಾಜ್ಯದ ಮೋಹಕ ಜಿಲ್ಲೆಯಾಗಿರುವ ಕೊಡಗು ಜಿಲ್ಲೆಗೆ ಬೇರೆಯದೇ ರೀತಿಯ ಸಾಂಸ್ಕೃತಿಕ ನೀತಿ ಮತ್ತು ಶೈಕ್ಷಣಿಕ ಭಾಷಾ ಸೂತ್ರ ಅಗತ್ಯವಿದೆ ಎಂದು ಕವಿ, ಸಾಹಿತಿ ಅಬ್ದುಲ್ ರಶೀದ್ ಪ್ರತಿಪಾದಿಸಿದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಇಲ್ಲಿ ಆಯೋಜಿಸಲಾಗಿದ್ದ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೊಡಗಿನಲ್ಲಿರುವ ಕೊಡವ, ಅರೆಭಾಷೆ, ಜೇನುಕುರುಬ, ಬೆಟ್ಟಕುರುಬ, ಎರವ, ಮೇದ, ಅಡಿಯ, ಪಣಿಯ, ದೇವಸೋಳಿಗ, ಜೇನುಮಲೆ ಕುಡಿಯ, ಪೂಮಲೆ ಕುಡಿಯ ಇತ್ಯಾದಿ ಭಾಷೆಗಳನ್ನು ಕೊಡಗಿನಲ್ಲಿ ಅಲ್ಲದೆ ಬೇರೆಲ್ಲೂ ಬಳಸಲು ಮತ್ತು ಉಳಿಸಲು ಸಾಧ್ಯವಿಲ್ಲ. ಕಲಿಕೆಯ ಮಾಧ್ಯಮವಾಗಿ ಈ ಭಾಷೆಗಳನ್ನು ಬಳಸುವುದೂ ಅಸಾಧ್ಯ. ಆದರೆ ಈ ಭಾಷೆಗಳನ್ನು ಬಳಸುವ ಸಮುದಾಯದ ಮಕ್ಕಳಲ್ಲಿ ಈ ಭಾಷೆಗಳ ಕುರಿತು ಕುತೂಹಲ ಆಸಕ್ತಿ ಮತ್ತು ಹೆಮ್ಮೆಯನ್ನು ಮೂಡಿಸುವ ಕೆಲಸವಾಗಬೇಕು. ಆದರಲ್ಲೂ ಕೊಡಗಿನ ಈ ಆದಿವಾಸಿ ಮಕ್ಕಳು ಕಲಿಯುವ ಆಶ್ರಮ ಶಾಲೆಗಳಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಂದ ಈ ಭಾಷೆಗಳ ಕುರಿತ ಮಾಹಿತಿ ಮತ್ತು ಕಲಿಕೆ ಕೊಡಿಸಬೇಕು ಎಂದರು.

ಕನ್ನಡ ಉಳಿಸುವುದೆಂದರೆ ಇಲ್ಲಿನ ಈ ಸಣ್ಣಪುಟ್ಟ ಭಾಷೆಗಳನ್ನು ಉಳಿಸುವುದು. ಈ ಸಣ್ಣಪುಟ್ಟ ಭಾಷೆಗಳನ್ನು ಉಳಿಸುವುದೆಂದರೆ ಅಳಿವಿನ ಅಂಚಿನಲ್ಲಿರುವ ಈ ಭಾಷೆಗಳನ್ನಾಡುವ ಜನರ ಜೀವನಗಳನ್ನು ಕಾಪಾಡುವುದಾಗಿದೆ. ಸರಕಾರದ ಭಾಷಾ ನೀತಿ ಈ ಜನರ ಬದುಕನ್ನು ಬಿಟ್ಟಿರಲು ಆಗುವುದಿಲ್ಲ, ಹಸಿವು, ಕುಡಿತ ಮತ್ತು ಅನಾರೋಗ್ಯಗಳ ಸುಳಿಯಲ್ಲಿ ಸಿಲುಕಿ ಅಳಿವಿನತ್ತ ಸಾಗುತ್ತಿರುವ ಮೂಲನಿವಾಸಿಗಳ ಹಿತವನ್ನು ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಕೆನಡಾ ಮತ್ತು ಅಮೇರಿಕಾಗಳಲ್ಲಿ ಮೊದಲ ಆದ್ಯತೆಯನ್ನಾಗಿ ಪರಿಗಣಿಸುತ್ತವೆ. ಇವರ ಆಡುನುಡಿಯ ಆರೈಕೆಗಾಗಿ ನೀತಿ ನಿಯಮಾವಳಿಗಳನ್ನು ರೂಪಿಸಿವೆ. ಕೊಡಗಿನ ಜನಪ್ರತಿನಿಧಿಗಳು ಮತ್ತು ಜವಾಬ್ದಾರಿಯ ಸ್ಥಾನದಲ್ಲಿರುವವರು ಈ ಕುರಿತು ಯೋಚಿಸಿ ಕೊಡಗು ಕೇಂದ್ರೀಕೃತವಾದ ಮಾದರಿ ಸೂತ್ರಗಳನ್ನು ನಿರೂಪಿಸಬೇಕೆಂದು ಅಬ್ದುಲ್ ರಶೀದ್ ಮನವಿ ಮಾಡಿದರು.



> ಅಳಿವಿನತ್ತ ಸಾಗುತ್ತಿರುವ ಈ ಭಾಷಾ ವೈವಿಧ್ಯ ಪ್ರದೇಶದ ಮಾತು, ಹಾಡು, ಕುಣಿತ, ಬಡಿತಗಳು ಈ ಜನಾಂಗಗಳ ಮಕ್ಕಳ ನಾಲಿಗೆಯಲ್ಲಿ ನಲಿಯುವಂತೆ ಮಾಡಬೇಕು. ಆಧುನಿಕ ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಬಳಸಿ ಈ ಅಪರೂಪದ ಕಲಾ ಮಾಧ್ಯಮಗಳನ್ನು ಡಿಜಿಟಲೀಕರಣಗೊಳಿಸುವ ಮತ್ತು ಪ್ರಚುರಪಡಿಸುವ ಕೆಲಸ ಮಾಡಬಹುದಾಗಿದೆ.
> ● ಅಬ್ದುಲ್ ರಶೀದ್

ಕೊಡಗಿನ ಭಾಷಾ ಅಕಾಡೆಮಿಗಳು, ಸಾಹಿತ್ಯ ಪರಿಷತ್ತು, ಮಾಧ್ಯಮಗಳು ಮತ್ತು ಶಿಕ್ಷಣ ಇಲಾಖೆ ಆಧುನಿಕ ಅಕ್ಷರ ಸಾಹಿತ್ಯವನ್ನು ಕೇಂದ್ರೀಕರಿಸುವ ಜೊತೆಯಲ್ಲೇ ಕಾಡಿನ ಮಕ್ಕಳ ಸಾಹಿತ್ಯ ಸಿರಿಯನ್ನು ಗೌರವಿಸುವ ಕೆಲಸ ಮಾಡಿದ್ದರೆ, ಕೊಡಗಿನ ನೂರಾರು ತಾಯಂದಿರ ಜಾನಪದ ಹಾಡುಗಳು ಜನರ ಬಳಿ ಇರುತ್ತಿದ್ದವು ಎಂದು ಅಬ್ದುಲ್ ರಶೀದ್ ನುಡಿದರು. ಸಣ್ಣ ಮಿಲಿ ಸೆಕೆಂಡಿನಲ್ಲಿ ನಾವು ಜಾತಿಯ ಹೆಸರಿನಲ್ಲಿ ,ಭಾಷೆಯ ಹೆಸರಿನಲ್ಲಿ, ಬಡವ, ಶ್ರೀಮಂತ, ಸಾಹುಕಾರರು ಕೂಲಿಯಾಳುಗಳು ಎಂಬ ಹೆಸರಿನಲ್ಲಿ ಹೊಸಕಿ ಹಾಕಲು ನೋಡುತ್ತೇವೆ. ಇನ್ನೊಬ್ಬರ ನಾಗರಿಕತೆಯನ್ನೇ ಹೊಸಕಿ ಬಿಡುತ್ತೇವೆ ಎಂದು ಹೂಂಕರಿಸುತ್ತೇವೆ. ಆದರೆ ಸಾಹಿತ್ಯದ ಕೆಲಸ ಹೊಸಕುವುದಲ್ಲ, ಅರಳಿಸುವುದು. ತೃಣದಲ್ಲೂ ಗಹನವಾದುದನ್ನು ಕಾಣುವುದು ಮತ್ತು ಅದನ್ನು ಉಳಿದವರಿಗೆ ಕಾಣಿಸುವುದೇ ಸಾಹಿತ್ಯ ಸಮ್ಮೇಳನದ ಉದ್ದೇಶವಾಗಿದೆ ಹೇಳಿದ್ದಾರೆ.

ಸಮ್ಮೇಳನವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಉದ್ಘಾಟಿಸಿದರೆ, ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವಕಾಮತ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಡಾ. ತೀತಿರ ರೇಖಾ ವಸಂತ್ ಅವರು ಪರಿಷತ್ತು ಧ್ವಜವನ್ನು ಹಾಲಿ ಸಮ್ಮೇಳನಾಧ್ಯಕ್ಷರಿಗೆ ಹಸ್ತಾಂತರಿಸಿ, ಮಾತೃಭಾಷೆಯ ಬಗ್ಗೆ ಅಭಿಮಾನವಿಲ್ಲದವರು ಇದ್ದೂ ಸತ್ತಂತೆ. ಮಾತೃಭಾಷೆಯ ಬಗ್ಗೆ ಅಭಿಮಾನ ಇರುವವರೆಗೆ ಕನ್ನಡ ನಾಡು, ನುಡಿಯ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಹಿರಿಯ ಸಾಹಿತಿ, ಸಂಶೋಧಕ ಡಾ. ಎಂ.ಜಿ. ನಾಗರಾಜ್, ಕುಶಾಲನಗರ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಪರಿಷತ್ತಿನ ನಿಕಟಪೂರ್ವ ಜಿಲ್ಲಾಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ವಿಶಾಲ್ ಶಿವಪ್ಪ ಕೊಡಗು ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿಗಳಾದ ಎಸ್.ಐ.ಮುನೀರ್ ಅಹಮದ್, ಪುದಿಯನೆರವನ ರೇವತಿ ರಮೇಶ್, ಸಂಘಟನಾ ಕಾರ್ಯದರ್ಶಿ ಬಿ.ಎಂ.ವಾಸು ರೈ, ಸಹ ಕಾರ್ಯದರ್ಶಿಗಳಾದ ಜಲಜಾ ಶೇಖರ್, ಎ.ಪಿ. ಮಂಜುನಾಥ್, ತಾಲೂಕು ಅಧ್ಯಕ್ಷರುಗಳಾದ ಕಡ್ಲೇರ ತುಳಸಿ ಮೋಹನ್ (ಮಡಿಕೇರಿ), ಎಸ್. ಡಿ.ವಿಜೇತ್ (ಸೋಮವಾರಪೇಟೆ) ಕೆ.ಎಸ್. ನಾಗೇಶ್ (ಕುಶಾಲನಗರ), ಕೋಳೇರ ದಯಾ ಚಂಗಪ್ಪ (ಪೊನ್ನಂಪೇಟೆ), ಸುಂಟಿಕೊಪ್ಪ ಹೋಬಳಿ ಅಧ್ಯಕ್ಷ ಹಾಗೂ ಸಮ್ಮೇಳನ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ಎಫ್ ಸಬಾಸ್ಟಿನ್, ಮಡಿಕೇರಿ ತಾಲೂಕು ಸಾಹಿತ್ಯ ಸಮ್ಮೇಳನದ ಹಣಕಾಸು ಸಮಿತಿ ಅಧ್ಯಕ್ಷ ಕೋಡಿರ ವಿನೋದ್ ನಾಣಯ್ಯ ಮತ್ತಿತರರು ಉಪಸ್ಥಿತರಿದ್ದರು. ಸಮ್ಮೇಳನ ಸ್ವಾಗತ ಸಮಿತಿ ಉಪಾಧ್ಯಕ್ಷ ಹಾಗೂ ಹಣಕಾಸು ಸಮಿತಿ ಅಧ್ಯಕ್ಷ ಎ.ಲೋಕೇಶ್ ಕುಮಾರ್ ಸ್ವಾಗತಿಸಿದರೆ, ಸುಂಟಿಕೊಪ್ಪ ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿಯರು ನಾಡಗೀತೆ ಹಾಡಿದರು. ಕುಶಾಲನಗರ ನಂಜುಂಡಸ್ವಾಮಿ ಮತ್ತು ತಂಡದವರು ರೈತಗೀತೆ ಪ್ರಸ್ತುತಪಡಿಸಿದರು. ಇದೇ ಸಂದರ್ಭ ವಿವಿಧ ಸಾಹಿತಿಗಳ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.ಮತ್ತು ಕೃತಿ ಕರ್ತೃಗಳನ್ನು ಗೌರವಿಸಲಾಯಿತು.

ಸಮ್ಮೇಳನಾಧ್ಯಕ್ಷರ ಮೆರವಣಿಗೆ

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಸರಕಾರಿ ಪ್ರಾಥಮಿಕ ಶಾಲಾ ಆವರಣದಿಂದ ಅಯ್ಯಪ್ಪ ದೇವಾಲಯ, ಮುಖ್ಯರಸ್ತೆಗಾಗಿ ಗದ್ದೆಹಳ್ಳದ ಗುಂಡುಕುಟ್ಟಿ ಮಂಜುನಾಥಯ್ಯ ಸಭಾಂಗಣದವರೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಮಂಗಳ ವಾದ್ಯ, ಚಂಡೆ ವಾದ್ಯ, ಕಳಸ ಹೊತ್ತ ಮಹಿಳೆಯರು, ಸ್ತಬ್ಧಚಿತ್ರಗಳು, ಗೊಂಬೆಗಳು, ಪೂಜಾ ಕುಣಿತ, ಡೊಳ್ಳು ಕುಣಿತ, ವೀರಗಾಸೆ, ಕೊಡಗಿನ ವಾಲಗ, ಬ್ಯಾಂಡ್ ಸೆಟ್, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಂಜೀವಿನಿ ಮಹಿಳಾ ಒಕ್ಕೂಟ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ, ಅಂಗನವಾಡಿ ಸಂಘಟನೆ, ಸ್ತ್ರೀಶಕ್ತಿ ಒಕ್ಕೂಟ, ಆಶಾ ಕಾರ್ಯಕರ್ತೆಯರು, ಶಿಕ್ಷಕರುಗಳು, ಸಂಘ ಸಂಸ್ಥೆಗಳ ಮತ್ತು ವಿವಿಧ ಸಮಾಜಗಳ ಪ್ರತಿನಿಧಿಗಳು, ಆಟೋ ಮತ್ತು ವಾಹನ ಚಾಲಕರ ಸಂಘದವರು, ಎನ್.ಸಿ.ಸಿ ತಂಡ ಸೌಟ್ಸ್ ಮತ್ತು ಗೈಡ್ಸ್ ತಂಡಗಳು ಗಮನಸೆಳೆದವು. ಮೆರವಣಿಗೆ ಸಾಗಿದ ಮಾರ್ಗದುದ್ದಕ್ಕೂ ಸುಂಟಿಕೊಪ್ಪ ಹೋಬಳಿಯ ವಿವಿಧ ಗಣ್ಯರ ಹೆಸರಿನಲ್ಲಿ ನಿರ್ಮಿಸಲಾಗಿದ್ದ 19 ಪ್ರವೇಶದ್ವಾರಗಳನ್ನು ಅತಿಥಿಗಣ್ಯರು ಉದ್ಘಾಟಿಸಿದರು.

ಮಾಣಿ ಅರಿವು ಕೇಂದ್ರ: ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ



ಬಂಟ್ವಾಳ: ಮಕ್ಕಳ ಸುಪ್ತ ಪ್ರತಿಭೆಗಳನ್ನು ಪ್ರಕಟಿಸುವುದಕ್ಕೆ ಬೇಸಿಗೆ ಶಿಬಿರವು ಸಹಕಾರಿಯಾಗಿದೆ. ಮಕ್ಕಳ ಸೃಜನ ಶೀಲತೆ, ಕೌಶಲ್ಯ ವರ್ಧನೆಗೆ ಪೂರಕವಾಗಿದೆ ಎಂದು ಎಸ್.ವಿ.ಎಸ್. ದೇವಳ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಜಯಾನಂದ ಪೆರಾಜೆ ಹೇಳಿದರು.

ಮಾಣಿ ಗ್ರಾ.ಪಂ.ಕೇಂದ್ರದ ಅರಿವು ಕೇಂದ್ರದಲ್ಲಿ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಸುಜಿತ್ ಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಾಣಿ ಗ್ರಾ.ಪಂ.ನ ಮಾಜಿ ಸದಸ್ಯರಾದ ಬಾಲಕೃಷ್ಣ ಆಳ್ವ ಕೊಡಾಜೆ, ಮೆಲ್ವಿನ್ ಕಿಶೋರ್ ಮಾರ್ಟಿಸ್, ಪ್ರೀತಿ ಡಿನ್ನಾ ಪಿರೇರಾ, ಅಭಿವೃದ್ಧಿ ಅಧಿಕಾರಿ ಗಿರಿಜಾ ಪಿ., ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ರಾಜೇಂದ್ರ ವೈ ಬಿಳಿಯೂರು, ಆಪ್ತಸಮಾಲೋಚಕಿ ವಿದ್ಯಾ ಭಾಗವಹಿಸಿದ್ದರು.

ಲೈಲಾ ಸ್ವಾಗತಿಸಿ, ಗ್ರಂಥಪಾಲಕಿ ಗೀತಾಕ್ಷಿನಿ ವಂದಿಸಿದರು. 45 ವಿದ್ಯಾರ್ಥಿಗಳು ಶಿಬಿರದ ಪ್ರಯೋಜನ ಪಡೆದುಕೊಂಡರು.

29,175, ಫಲಾನುಭವಿಗಳಿಗೆ ಸಂಪೂರ್ಣ ಸುರಕ್ಷಾ ಕಾರ್ಡ್ ವಿತರಣೆ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪಾಲುದಾರ ಕುಟುಂಬಗಳ ಆರೋಗ್ಯ ಹಾಗೂ ಮತ್ತಿತರ ಸಮಸ್ಯೆ ಗಳಿಗೆ ಸ್ಪಂದನೆ ನೀಡುವ ಉದ್ದೇಶದಿಂದ ಸಂಪೂರ್ಣ ಸುರಕ್ಷಾ ಕಾರ್ಡ್ ವಿತರಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯನಂದ ಪಿ. ಅವರು ಸಂಪೂರ್ಣ ಸುರಕ್ಷಾ ಕಾರ್ಡ್ ವಿತರಿಸಿ ಮಾತನಾಡಿ,ಬಂಟ್ವಾಳತಾಲೂಕಿನಲ್ಲಿ ಪ್ರಸ್ತುತ ವರ್ಷ 8,965 ಕುಟುಂಬದ 29,175, ಫಲಾನುಭವಿಗಳಿಗೆ ಸಂಪೂರ್ಣ ಸುರಕ್ಷಾ ನೋಂದಣಿ ಮಾಡಲಾಗಿದ್ದು, ನೊಂದಣಿ ಮಾಡಿದ ಸದಸ್ಯ ಕುಟುಂಬಗಳಿಗೆ ಸಂಪೂರ್ಣ ಸುರಕ್ಷಾ ಕಾರ್ಡ್ ವಿತರಿಸಲಾಗುತ್ತಿದೆ ಎಂದರು. ತಾಲೂಕಿನ ತುಂಬೆ ವಲಯದ, ಪರಂಗಿಪೇಟೆ ಕಾರ್ಯಕ್ಷೇತ್ರದ ಸೀತಾರಾಮ ತಂಡಕ್ಕೆ ವಿತರಿಸಲಾಯಿತು.

ಈ ಸಂದರ್ಭದಲ್ಲಿ ತುಂಬೆ ವಲಯ ಮೇಲ್ವಿಚಾರಕಿ ಮಮತಾ, ಸೇವಾಪ್ರತಿನಿಧಿ ಅಮಿತಾ ಉಪಸ್ಥಿತರಿದ್ದರು.

ಫಾರ್ಮಸ್ಯುಟಿಕಲ್ ಕೆಮಿಸ್ಟ್ರಿ ಸರ್ಟಿಫಿಕೇಟ್ ಕೋರ್ಸ್‌ಗಳ ಸಮಾರೋಪ ಕಾರ್ಯಕ್ರಮ



ಪುತ್ತೂರು: ಸಂತ ಫಿಲೋಮಿನಾ ಕಾಲೇಜ್ (ಸ್ವಾಯತ್ತ)ನ ರಸಾಯನಶಾಸ್ತ್ರ ವಿಭಾಗ ಆಯೋಜಿಸಿದ್ದ ಫಾರ್ಮಸ್ಯುಟಿಕಲ್ ಕೆಮಿಸ್ಟ್ರಿ ಕೋರ್ಸ್‌ನ ಸಮಾರೋಪ ಕಾರ್ಯಕ್ರಮ ನಡೆಯಿತು. ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ರೆ.ಡಾ. ಆಂಟನಿ ಪ್ರಕಾಶ್ ಮೊಂತೆರೋ, ಉದ್ಯಮೋನ್ಮುಖಿ ಶಿಕ್ಷಣ ಮತ್ತು ಪ್ರಾಯೋಗಿಕ ಅನುಭವದ ಮಹತ್ವವನ್ನು ತಿಳಿಸಿದರು. ಜೆನಿಷಾ ಅವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಅಪರ್ಣಾ ಮತ್ತು ತಂಡ ಪ್ರಾರ್ಥಿಸಿದರು. ಕೋರ್ಸ್ ಸಂಯೋಜಕರಾದ ಡಾ. ಎಡ್ವಿನ್ ಎಸ್. ಡಿ'ಸೋಜ ಸ್ವಾಗತಿಸಿ, ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ. ಮಾಲಿನಿ ಕೆ. ವಂದಿಸಿದರು. ವಿದ್ಯಾರ್ಥಿನಿ ಶ್ರೀವಿದ್ಯಾ ಕಾರ್ಯಕ್ರಮ ನಿರ್ವಹಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ನೆರವು ಹಸ್ತಾಂತರ



ಕುಂದಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಕುಂದಾಪುರ-2 ಯೋಜನ ಕಚೇರಿ ವ್ಯಾಪ್ತಿಯ ಕೋಟೇಶ್ವರ ವಲಯದ ಬೀಜಾಡಿ 'ಬಿ' ಕಾರ್ಯಕ್ಷೇತ್ರದ ಸ್ಫೂರ್ತಿ ತಂಡದ ಸದಸ್ಯರಾದ ಗೋವಿಂದ ದೇವಾಡಿಗ ಅವರ 6 ತಿಂಗಳ ಮಗುವಿಗೆ ಮೂತ್ರಕೋಶದ ಶಸ್ತ್ರಚಿಕಿತ್ಸೆ ಆಗಿದ್ದು, ಮಗುವಿನ ವೈದಕೀಯ ನೆರವಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮಂಜೂರು ಮಾಡಿದ 25 ಸಾವಿರ ರೂ.ಗಳ ಪರಿಹಾರದ ಮೊತ್ತವನ್ನು ಕುಂದಾಪುರ-2 ಯೋಜನಾಧಿಕಾರಿ ಸುಧೀರ್ ಫಲಾನುಭವಿ ಕುಟುಂಬದ ಗೋವಿಂದ ದೇವಾಡಿಗ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಸದಸ್ಯೆ ಆಶಾ, ಒಕ್ಕೂಟದ ಉಪಾಧ್ಯಕ್ಷೆ ಪ್ರೇಮ, ಜ್ಞಾನವಿಕಾಸ ಸಮನ್ವಯಾಧಿಕಾರಿ ಕವಿತ, ಸೇವಾ ಪ್ರತಿನಿಧಿ ಮಾಲತಿ, ಶೋಭಾ, ಸಂಘದ ಸದಸ್ಯರುಗಳು ಉಪಸ್ಥಿತರಿದ್ದರು.

ಅಂಬಿಕಾ ಪಿಯು ವಿದ್ಯಾರ್ಥಿಗಳ ಯೋಗ ತರಬೇತಿ ತರಗತಿ ಉದ್ಘಾಟನೆ



ಪುತ್ತೂರು: ಭಾರತವು ಯೋಗವನ್ನು ಜಗತ್ತಿಗೆ ಪರಿಚಯಿಸುವ ಕೆಲಸ ಮಾಡಿದೆ. ಭಾರತೀಯ ಸಂಸ್ಕೃತಿಯಲ್ಲಿ ಯೋಗ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದು ಜೀವನಕ್ಕೆ ಪುಷ್ಟಿ ನೀಡುತ್ತದೆ. ಅಂಬಿಕಾ ವಿದ್ಯಾಲಯ ವಿದ್ಯಾರ್ಥಿಗಳಿಗೆ ಸಂಸ್ಕಾರದ ಜೊತೆಗೆ ಯೋಗಾಭ್ಯಾಸ ಮಾಡಿಸುವ ಮೂಲಕ ಅಧ್ಯಯನಪ್ರಕ್ರಿಯೆಗೆಹೊಸಆಯಾಮ ನೀಡುತ್ತಿದೆ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ತಿಳಿಸಿದರು.

ಅವರು ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಮುನ್ನಡೆಸುತ್ತಿರುವ ಬಪ್ಪಳಿಗೆಯಲ್ಲಿನ ಶ್ರೀ ಶಂಕರಾ ಸಭಾಭವನದಲ್ಲಿ ಅಂಬಿಕಾ ಪದವಿ ಪೂರ್ವ ವಿದ್ಯಾಲಯದ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಯೋಗ ತರಬೇತಿ ತರಗತಿ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯೋಗದ ಸಂಕಲ್ಪ ಮಾಡಿ

ಯೋಗ ಹಾಗೂ ಧ್ಯಾನದ ಮೂಲಕ ಇಡೀ ಜಗತ್ತನ್ನೇ ಗೆಲ್ಲಬಹುದು, ಯಶಸ್ಸು ಸಾಧಿಸಬಹುದು. ನಿರಂತರ ಅಭ್ಯಾಸದಿಂದ ಮಾತ್ರ ಜೀವನದಲ್ಲಿ ಸಫಲತೆಯನ್ನು ಪಡೆಯಲು ಸಾಧ್ಯ. ವ್ಯಕ್ತಿಯ ದೇಹಕ್ಕೆ ಸಂಸ್ಕಾರ ಕೊಡುವುದೇ ಯೋಗ. ಆದುದರಿಂದ ಯೋಗವನ್ನು ಕಲಿಯುವ ಮೂಲಕ ದೇಹಕ್ಕೆ ಶಾಂತಿ, ನೆಮ್ಮದಿ ಹಾಗೂ ಆರೋಗ್ಯವನ್ನು ಪಡೆಯಬಹುದು. ಪ್ರತಿಯೊಬ್ಬರೂ ದಿನಂಪ್ರತಿ ಯೋಗಾಭ್ಯಾಸ ಮಾಡುವ ಸಂಕಲ್ಪ ಮಾಡಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಎಂದರು.

ಆರ್ಟ್ ಆಫ್ ಲಿವಿಂಗ್‌ನ ಶಿಕ್ಷಕಿ ಶರಾವತಿ ರವಿ ನಾರಾಯಣ ಯೋಗ ತರಬೇತಿ ನೀಡಿದರು. ಯೋಗ ಶಿಕ್ಷಕಿಯರಾದ ದೀಪಿಕಾ, ದಿವ್ಯ ಜ್ಯೋತಿ, ವಿದ್ಯಾರಾಜ್, ಮೇಘಶ್ರೀ ಸಹಕರಿಸಿದರು. ವೇದಿಕೆಯಲ್ಲಿ ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯದ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ರಕ್ಷಾ ಎಸ್.ಎಸ್. ಪ್ರಾರ್ಥಿಸಿದರು. ಕನ್ನಡ ಉಪನ್ಯಾಸಕ ಸತೀಶ್ ಇರ್ದೆ ಕಾರ್ಯಕ್ರಮ ನಿರ್ವಹಿಸಿದರು.



ಬಿಜೆಪಿಯ ಸಕ್ರಿಯ ಕಾರ್ಯಕರ್ತ ಬಂಟ್ವಾಳ ತಾಲೂಕಿನ ಬೋಳಂತೂರಿನ ಈಶ್ವರ್ ಭಟ್ ರಾಕೋಡಿ ಅವರು ಪಕ್ಷ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಮಾಜಿ ಸಚಿವ ಬಿ.ರಮಾನಾಥ ರೈ ಅವರ ನಿವಾಸದಲ್ಲಿ ಗುರುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಅವರನ್ನು ಪಕ್ಷದ ಶಾಲು ಹಾಕಿ ಸ್ವಾಗತಿಸಲಾಯಿತು. ಈ ಸಂದರ್ಭ ಪಾಣೆಮಂಗಳೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಭಂಡಾರಿ ಸಹಿತ ಮತ್ತಿತರರಿದ್ದರು.

ಯಕ್ಷಗಾನ ಕಲಾವಿದ ವಸಂತ ಗೌಡ ಕಾಯರ್ತಡ್ಕ ಅವರ ಕಲಾಯಾನದ ಸ್ವರ್ಣ ಸಂಭ್ರಮದಲ್ಲಿ ಎಡನೀರು ಸಚ್ಚಿದಾನಂದ ಭಾರತಿ ಶ್ರೀ ಅಭಿಪ್ರಾಯ

ಕಲಾವಿದ ಒಂದೇ ಮೇಳದಲ್ಲಿ 50ಕ್ಕೂ ಹೆಚ್ಚು ವರ್ಷ ಸೇವೆ ಸಲ್ಲಿಸುವುದು ಸುಲಭದ ಮಾತಲ್ಲ

ಉಜಿರೆ: ಯಕ್ಷಗಾನ ಕಲಾವಿದ ಒಂದೇ ಮೇಳದಲ್ಲಿ 50ಕ್ಕೂ ಹೆಚ್ಚು ವರ್ಷ ವ್ಯವಸಾಯ ಮಾಡುತ್ತಿರುವುದು ಸುಲಭದ ಮಾತಲ್ಲ, ಮೇಳ ಹಾಗೂ ಯಜಮಾನರಿಗೆ ಬದ್ಧರಾಗಿ ನಿಷ್ಠೆಯಿಂದ ಯಕ್ಷ ಕಲಾ ಜೀವನ ನಡೆಸುತ್ತಿರುವ ವಸಂತ ಗೌಡ ಕಾಯರ್ತಡ್ಕ ಅವರ ಕಲಾಯಾನದ ಸ್ವರ್ಣ ಸಂಭ್ರಮ ಔಚಿತ್ಯಪೂರ್ಣ ಎಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಶ್ರೀಗಳವರು ನುಡಿದರು.



ಅವರು ಮೇ 28ರಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಅಮೃತವರ್ಷಿಣಿ ಸಭಾಂಗಣದಲ್ಲಿ ಧರ್ಮಸ್ಥಳ ಮೇಳದ ಯಕ್ಷಗಾನ ಕಲಾವಿದ ವಸಂತ ಗೌಡ ಕಾಯರ್ತಡ್ಕ ಅವರ ಕಲಾಯಾನದ ಸ್ವರ್ಣ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಯುವ ಕಲಾವಿದರು ಅವರಿಂದ ಕಲಿಯಬೇಕಾದ ಬಹಳಷ್ಟು ವಿಷಯಗಳಿವೆ. ಮುಂದಿನ ವ್ಯವಸಾಯಿ ಕಲಾವಿದರಿಗೆ ಅವರ ಆದರ್ಶ ಅನುಕರಣೀಯ, ಅನುಸರಣೀಯ. ತೆಂಕುತಿಟ್ಟು ಯಕ್ಷಗಾನಕ್ಕೆ ಎರಡು ಶತಮಾನಗಳ ಸುದೀರ್ಘ ಇತಿಹಾಸವಿದ್ದು,ಧರ್ಮಸ್ಥಳ ಮೇಳ ಹೆಗ್ಗಡೆಯವರ ದೂರದರ್ಶಿತ್ವದಿಂದ ವ್ಯವಸ್ಥಿತ, ಅಚ್ಚುಕಟ್ಟುತನದಿಂದ ಪ್ರವರ್ಧಮಾನಕ್ಕೆ ಬರುತ್ತಿದೆ. ಯಾರ ಬಳಿಯೂ ನಿಷ್ಠುರವಿಲ್ಲದೆ ಎಲ್ಲರೊಂದಿಗೆ ಬೆರೆತು ಯಾವುದೇ ಪಾತ್ರ ನಿರ್ವಹಣೆ ಮಾಡುವುದರಲ್ಲಿ ವಸಂತ ಗೌಡರ ಮುಂದಿನ ಕಲಾ ಜೀವನ ಯಶಸ್ವಿಯಾಗಿ ಮುನ್ನಡೆಯಲಿ. ಯುವ ಜನಾಂಗ ಅನ್ಯಪ್ರಭಾವಗಳಿಗೊಳಗಾಗದೆ ಯಕ್ಷಗಾನ ಕಲೆಯಲ್ಲಿ ಆಸಕ್ತಿ ಬೆಳೆಸಿ,ಸಂಸ್ಕಾರ ಪಡೆದರೆ ಒಳ್ಳೆಯ ಪ್ರಜೆಯಾಗಿ ಬೆಳೆಯಲು ಸಾಧ್ಯ ಎಂದರು.

> ಕಲಾವಿದರು ಮೇಳದ ಆಸ್ತಿ. ಕಲಾವಿದರಿಗೆ ಜವಾಬ್ದಾರಿ ಬೇಕು. ಯಕ್ಷಗಾನ ಮೇಳ ಬೆಳೆಸಲು ಕಲಾವಿದರ ಪರಿಶ್ರಮ, ಕೊಡುಗೆ ಅಪಾರ. ವೇಷಗಾರಿಕೆಯಲ್ಲಿ ಸುಧಾರಿಸುವ ಪ್ರವೃತ್ತಿ ಕಡಿಮೆಯಾಗಿದೆ. ವಸಂತ ಗೌಡ ಯಾವ ವೇಷ ಮಾಡಲೂ ಸಿದ್ಧ. ಮೇಳದಲ್ಲಿ ಕಲಾವಿದರನ್ನು ಸುಧಾರಿಸುವುದು ಬಹಳ ಕಷ್ಟದ ಕೆಲಸ. ಯಕ್ಷಗಾನದ ಅಭಿಮಾನಿಯಾಗಿ ಬಹಳಷ್ಟು ಸವಾಲು ಎದುರಿಸಿದ್ದೇನೆ. ವಸಂತ ಗೌಡ ಇನ್ನಷ್ಟು ವರ್ಷ ಕಲಾ ಸೇವೆ ಮಾಡುವಂತಾಗಲಿ.
> ● ಡಿ.ಹರ್ಷೇಂದ್ರ ಕುಮಾರ್

ಅವರು ಶ್ರೀ ಮಠದ ಪರ ವಸಂತ ಗೌಡ ಕಾಯರ್ತಡ್ಕ ದಂಪತಿಯನ್ನು ಸನ್ಮಾನಿಸಿ,ಗೌರವಿಸಿದರು. ಧರ್ಮಸ್ಥಳ ಮೇಳದ ಯಜಮಾನ ಡಿ.ಹರ್ಷೇಂದ್ರ ಕುಮಾರ್ ಮಾತನಾಡಿದರು. ಮುಖ್ಯ ಅತಿಥಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಮ ಭಟ್ ಮಾತನಾಡಿ, ಧರ್ಮಸ್ಥಳ ಮೇಳ ಅತ್ಯಂತ ಬಲಿಷ್ಠ ಶಿಸ್ತುಬದ್ಧ ತಂಡದ ಮೇಳ. ವಸಂತ ಗೌಡ ಮೇಳದ ಪುಂಡುವೇಷಕ್ಕೆ ಕೊರತೆಯಾಗದಂತೆ ನಿಗರ್ವಿಯಾಗಿ, ಉತ್ತಮ ಕಲಾವಿದನಾಗಿ ಯಾವುದೇ ಪಾತ್ರ ನಿರ್ವಹಿಸಬಲ್ಲವರು. ಯಕ್ಷಗಾನಕ್ಕೆ ಉಜ್ವಲ ಭವಿಷ್ಯವಿದೆ ಎಂದು ನುಡಿದರು.

ಹೈದರಾಬಾದಿನ ಸುಪ್ರಭಾತ ಹೋಟೆಲ್ ಸಮೂಹದ ಕೃಷ್ಣಮೂರ್ತಿ ಮಂಜ ಮಾತನಾಡಿದರು. ಇದೇ ಸಂದರ್ಭ ಕಲಾವಿದ ವಸಂತ ಗೌಡ ಮತ್ತು ಗೀತಾ ದಂಪತಿಯನ್ನು ಧರ್ಮಸ್ಥಳ ಮೇಳ ಹಾಗೂ ಸರ್ವ ಕಲಾವಿದರ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಮೇಳದ ಹಿರಿಯ ಭಾಗವತ ಪುತ್ತಿಗೆ ರಘುರಾಮ ಹೊಳ್ಳ, ನಿಡ್ಲೆ ಗೋವಿಂದ ಭಟ್ ಮತ್ತು ಉಷಾ ಶ್ರೀಧರ ಭಂಡಾರಿ ಅವರಿಗೆ ವಸಂತ ಗೌಡ ದಂಪತಿಗಳು ಕಲಾ ಗೌರವ ಸಮರ್ಪಿಸಿದರು. ವಸಂತ ಗೌಡ ಅವರ ಶಿಷ್ಯವೃಂದ, ಸಾಧನ ಕಲಾ ತಂಡ,ಲಾಯಿಲ, ಸಂಗಮೇಶ್ವರ ಯಕ್ಷ ಕಲಾ ತಂಡ ಹಾಗೂ ಕನ್ಯಾಡಿಯ ಯಕ್ಷಭಾರತಿ ವತಿಯಿಂದ ವಸಂತ ಗೌಡ ದಂಪತಿಯನ್ನು ಗೌರವಿಸಲಾಯಿತು. ಕಲಾವಿದ ಉಜಿರೆ ಅಶೋಕ ಭಟ್ ನಿರೂಪಿಸಿದರು. ಮೇಳದ ಮ್ಯಾನೇಜರ್ ಗಿರೀಶ್ ಹೆಗ್ಡೆ ವಂದಿಸಿದರು. ಬಳಿಕ ಯಕ್ಷಗಾನ ಪ್ರದರ್ಶನ, ಶ್ರೀಕೃಷ್ಣ ಒಡ್ಡೋಲಗ ಹಾಗೂ ವಸಂತ ಗೌಡ ಕಾಯರ್ತಡ್ಕ ಅವರಿಂದ ಯಕ್ಷಗಾನ ಪ್ರಾತ್ಯಕ್ಷಿಕೆ ನಡೆಯಿತು.

ಸುತ್ತ ಮುತ್ತ

ಇಂದು ವಿಹಿಂಪದಿಂದ ಪಂಜಿನ ಮೆರವಣಿಗೆ

ಕಾಸರಗೋಡು: ಕುಂಬಳೆ ಸೀಮೆಯ ಪ್ರಸಿದ್ಧ ದೇವಸ್ಥಾನವಾದ ಅಡೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಚಿತ್ರಣವನ್ನು ತಿರುಚಿ ಯಾವುದೋ ಕಟ್ಟಡದ ಸ್ವರೂಪವಿರುವ ಒಂದು ಪೋಸ್ಟರ್‌ನ್ನು ಎಸ್ ಎಸ್‌ಎಫ್ ಪಳ್ಳಂಗೋಡು ಸೆಕ್ಟರ್‌ನ ಸಮ್ಮೇಳನದ ಆಮಂತ್ರಣ ಪತ್ರಿಕೆಯ ಮುಂಭಾಗದಲ್ಲಿ ಅಳವಡಿಸಲಾಗಿದೆ. ಈ ರೀತಿಯ ವರ್ತನೆ ಇಡೀ ಹಿಂದು ಸಮಾಜಕ್ಕೆ ನೋವು ಉಂಟು ಮಾಡಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಸಮಾಜದಲ್ಲಿ ಅಶಾಂತಿ ಕೆಡಿಸುವ ಇಂತಹ ಕೃತ್ಯಗಳು ನಡೆಯದಂತೆ ಮತ್ತು ಮುನ್ನೆಚ್ಚರಿಕೆ ವಹಿಸುವ ಸಲುವಾಗಿ ಮೇ 30 ರಂದು ಸಂಜೆ 6 ಗಂಟೆಗೆ ವಿಹಿಂಪ, ಬಜರಂಗದಳ ಇವುಗಳ ಅಡೂರು ಘಟಕದ ನೇತೃತ್ವ ದಲ್ಲಿ ಬೃಹತ್ ಪಂಜಿನ ಮೆರವಣಿಗೆ ಆಯೋಜಿಸಲಾಗಿದೆ.
ಅಡೂರು ದೇವಸ್ಥಾನದ ಮುಂಭಾಗದಿಂದ ಆರಂಭಗೊಳ್ಳುವ ಪಂಜಿನ ಮೆರವಣಿಗೆಯು ಗ್ರಾಮ ಪಂಚಾಯತ್ ಕಚೇರಿ ಪರಿಸರ ಮೂಲಕ ಸಾಗಿ ದೇವಸ್ಥಾನದ ವಠಾರದಲ್ಲಿ ವಿವಿಧ ಹಿಂದು ಸಂಘಟನೆಗಳ ಪ್ರಮುಖರ ಹಾಗೂ ಕಾರ್ಯಕರ್ತರ ಉಪಸ್ಥಿತಿಯಲ್ಲಿ ಸಂಪನ್ನಗೊಳ್ಳಲಿದೆ.

ಜೂ.1: ರಾಜ್ಯ ದಿವ್ಯಾಂಗ ವಿಭಾಗ ಆಯುಕ್ತರ ಅದಾಲತ್

ಕಾಸರಗೋಡು: ದಿವ್ಯಾಂಗ ರಾಜ್ಯ ಆಯುಕ್ತಾಲಯವು ಕಾಸರಗೋಡು ಜಿಲ್ಲೆಯಲ್ಲಿ ದಿವ್ಯಾಂಗರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ದೂರುಗಳಿಗೆ ಸಂಬಂಽಸಿದಂತೆ ದೂರುದಾರರನ್ನು ಮುಖತಾ ಭೇಟಿಯಾಗಲು ಅದಾಲತ್ ಆಯೋಜಿಸಿದೆ. ಜೂ.1ರಂದು ಬೆಳಿಗ್ಗೆ 10.30ಕ್ಕೆ ಕಾಞಂಗಾಡು ಮಿನಿ ಸಿವಿಲ್ ಸ್ಟೇಷನ್ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಅದಾಲತ್‌ನಲ್ಲಿ ದಿವ್ಯಾಂಗರು, ಅವರೊಂದಿಗೆ ಸಂಬಂಧ ಹೊಂದಿರು ವವರು ಪಾಲ್ಗೊಳ್ಳಬಹುದು. ಮಾಹಿತಿಗೆ 04994 255074, ಜಿಲ್ಲಾ ಸಾಮಾಜಿಕ ನ್ಯಾಯ ಇಲಾಖೆ ಕಚೇರಿ, ಸಿವಿಲ್ ಸ್ಟೇಷನ್, ವಿದ್ಯಾನಗರ ಸಂಪರ್ಕಿಸಬಹುದು.

ಜೂ.13: ವಿದ್ಯುತ್ ಲೈನ್‌ಮೆನ್ ಪರೀಕ್ಷೆ

ಕಾಸರಗೋಡು: ಜಿಲ್ಲೆಯ ಸ್ವಾಮಿ ನಿತ್ಯಾನಂದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ಲೈನ್ ಮೆನ್ ಪರೀಕ್ಷೆ ಜೂನ್ 13ರಂದು ನಡೆಯಲಿದ್ದು, ಈ ನಿಟ್ಟಿನಲ್ಲಿ ಜೂನ್ 6 ರಿಂದ ಸಂರಕ್ಷಾ ಪ್ರೊಫೈಲ್ ಮೂಉಲಕ ಹಾಲ್ ಟಿಕೆಟ್ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾಹಿತಿಗೆ 0471 2339233 ಅಥವಾ 9020205635 ಕರೆ ಮಾಡಬಹುದು.

ಆಸ್ಪತ್ರೆ ಆಡಳಿತ ಕೋರ್ಸ್

ಕಾಸರಗೋಡು: ತಿರುವನಂತಪುರದ ಆಟ್ಟಿಂಗಾಲ್‌ನಲ್ಲಿ ಅನುಮೋದಿತ ಅಧ್ಯಯನ ಕೇಂದ್ರಗಳಲ್ಲಿ ಇಂಟರ್ನ್‌ಶಿಪ್‌ನೊಂದಿಗೆ 1 ವರ್ಷದ ವೃತ್ತಿಪರ ಡಿಪ್ಲೊಮಾ ಇನ್ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ಕೋರ್ಸ್‌ಗೆ ಕೇರಳ ರಾಜ್ಯ ರುಟ್ರಾನಿಕ್ಸ್ ಪ್ರಮಾಣಪತ್ರ ಹೊಂದಿರುವ ಪ್ಲಸ್ ಟು ಉತ್ತೀರ್ಣ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ 8086066137 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಕಾಸರಗೋಡು: ಇರಿಯಣ್ಣಿ ಸರಕಾರಿ ವೃತ್ತಿಪರ ಹೈಯರ್ ಸೆಕೆಂಡರಿ ಶಾಲೆಯಲ್ಲಿ ವಿಎಚ್‌ಎಸ್‌ಇ ತರಗತಿ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಡೈರಿ ಫಾರ್ಮರ್ ಉದ್ಯಮಿ (ವಿಜ್ಞಾನ), ಕಚೇರಿ ಕಾರ್ಯಾಚರಣೆ ಕಾರ್ಯನಿರ್ವಾಹಕ ಮತ್ತು ಖಾತೆ ಸಹಾಯಕ (ವಾಣಿಜ್ಯ) ಕೋರ್ಸ್‌ಗಳಿಗೆ ಪ್ರವೇಶವಿದೆ. ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಜೂನ್ 3 ಆಗಿದೆ. ವಿವರಗಳಿಗೆ 9747300145 ಕರೆ ಮಾಡಬಹುದು.




ಕೆಜಿಟಿಇ ಮುದ್ರಣ ತಂತ್ರಜ್ಞಾನ ಕೋರ್ಸ್‌ಗಳು

ಕಾಸರಗೋಡು: ಕೇರಳ ಸರಕಾರಿ ಸಂಸ್ಥೆಯಾದ ಸಿ-ಎಪಿಟಿ, ಸಿ-ಎಪಿಟಿಯ ಕೋಝಿಕ್ಕೋಡ್ ಉಪಕೇಂದ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯೊಂದಿಗೆ ಜಂಟಿಯಾಗಿ ನಡೆಸುವ ಒಂದು ವರ್ಷದ ಪಿಎಸ್‌ಸಿ ಅನುಮೋದಿತ ಕೆಜಿಟಿಇ ಪ್ರಿ-ಪ್ರೆಸ್ ಆಪರೇಷನ್, ಕೆಜಿಟಿಇ ಪ್ರೆಸ್ ವರ್ಕ್ ಮತ್ತು ಕೆಜಿಟಿಇ ಪೋಸ್ಟ್ ಪ್ರೆಸ್ ಆಪರೇಷನ್ ಮತ್ತು ಫಿನಿಶಿಂಗ್ ಕೋರ್ಸ್‌ಗಳಿಗೆ ಎಸ್‌ಎಸ್‌ಎಲ್‌ಸಿ ಪಾಸಾದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಇಸಿ ವರ್ಗಗಳಿಗೆ ಕಾನೂನುಬದ್ಧ ಶುಲ್ಕ ರಿಯಾಯಿತಿಗಳು ಮತ್ತು ಸ್ಟೈಫಂಡ್ ಲಭಿಸುತ್ತದೆ. ವಿವರಳಿಗೆ 0495 2723666 , 0495 2356591 ಅಥವಾ 9496882366 ಕರೆ ಮಾಡಬಹುದು.

ನಾಗರಿಕ ಸೇವಾ ಪರೀಕ್ಷಾ ತರಬೇತಿಗೆ ಅರ್ಜಿ ಆಹ್ವಾನ

ಕಾಸರಗೋಡು: ಕೈಲೆ ಐಎಎಸ್ ಅಕಾಡೆಮಿಯಲ್ಲಿ ನಾಗರಿಕ ಸೇವಾ ಪೂರ್ವಭಾವಿ, ಮುಖ್ಯ ಪರೀಕ್ಷಾ ತರಬೇತಿಗಾಗಿ ಕೇರಳ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಲಾದ ಕಾರ್ಮಿಕರ ಪದವೀಧರ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ 0467 2206737 ಕರೆ ಮಾಡಬಹುದು.

ಸ್ಕಾಲರ್‌ಶಿಪ್‌ಗೆ ಅರ್ಹತೆ ಪಡೆದವರು

ಕಾಸರಗೋಡು: ಜಿಲ್ಲೆಯ ಬಾನಂ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪಿ.ನಿಹಾರ ಯುಎಸ್ ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸ್ಕಾಲರ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ. ಅಲ್ಲದೆ ಇದೇ ಶಾಲೆಯ ವಿದ್ಯಾರ್ಥಿನಿಯರಾದ ತನ್ವಿಯ ವಿ.ವಿ. , ಸಿಯಾ ಸಾನ್ವಿ ಎಲ್‌ಎಸ್‌ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸ್ಕಾಲರ್‌ಶಿಪ್‌ಗೆ ಅರ್ಹರಾಗಿದ್ದಾರೆ.

ಕಾಸರಗೋಡು ಜಿಲ್ಲೆಯ ಸಮಗ್ರ ಚಿತ್ರಣ ಬದಲಾಯಿಸುವ ಪ್ರಮುಖ ಉದ್ದೇಶ

100 ಕೋ.ರೂ.ಅಭಿವೃದ್ಧಿ ಪ್ಯಾಕೇಜ್‌ಗೆ ಕರಡು ಯೋಜನೆ ಸಲ್ಲಿಕೆ

ಕಾಸರಗೋಡು: ಪ್ರಸಕ್ತ ಹಣಕಾಸು ವರ್ಷದಲ್ಲಿ ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಡಿ 100 ಕೋಟಿ ರೂಪಾಯಿಗಳ ವಾರ್ಷಿಕ ಯೋಜನೆ ಜಾರಿಗೊಳಿಸುವ ಅಂಗವಾಗಿ ಕೇರಳ ಸರಕಾರಕ್ಕೆ ಕರಡು ಯೋಜನೆ ಸಲ್ಲಿಸಲಾಗಿದೆ.
ಈ ಸಮಗ್ರ ಕರಡು ಯೋಜನೆ ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಪ್ರವಾಸೋದ್ಯಮ, ಕೃಷಿ, ಕೈಗಾರಿಕೆ, ಮೀನುಗಾರಿಕೆ ಮತ್ತು ಇತರ ಪ್ರಮುಖ ವಲಯಗಳಲ್ಲಿ ಮಹತ್ತರ ಪ್ರಗತಿ ಸಾಧಿಸುವ ಗುರಿಯನ್ನು ಹೊಂದಿರುವ 27 ಪ್ರಧಾನ ಯೋಜನೆಗಳನ್ನು ಒಳಗೊಂಡಿದೆ. ಜಿಲ್ಲೆಯ ದೀರ್ಘಕಾಲೀನ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ಈ ಯೋಜನೆಗಳನ್ನು ರೂಪಿಸಲಾಗಿದೆ.
ಪ್ರಸ್ತುತ ಯೋಜನೆಯಲ್ಲಿ ಆರೋಗ್ಯ ಕ್ಷೇತ್ರ ಮತ್ತು ಎಂಡೋಸಲ್ಫಾನ್ ಸಂತ್ರಸ್ತರಿಗೆ ಹೆಚ್ಚಿನ ಪರಿಗಣನೆ ನೀಡಲಾಗಿದೆ. ಕರಡು ವಾರ್ಷಿಕ ಯೋಜನೆಯಲ್ಲಿ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ಹೆಚ್ಚಿನ ಸೌಲಭ್ಯ ಒದಗಿಸಲು 10 ಕೋ. ರೂ. ಮತ್ತು ಹೊಸ ಅಪಘಾತ – ಆಘಾತ ಆರೈಕೆ ಸೌಲಭ್ಯಕ್ಕಾಗಿ



5 ಕೋಟಿ ರೂ.ಗಳ ನಿಗದಿಪಡಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯತ್ತ ಗಮನಹರಿಸುವುದು ಮತ್ತೊಂದು ಪ್ರಮುಖ ಅಂಶವಾಗಿದೆ. ಕಾಂಕ್ರೀಟ್ ಛಾವಣಿಗಳಿಲ್ಲದ ಸರಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳ ನವೀಕರಣಕ್ಕೆ 11 ಕೋಟಿ ರೂ., ಸ್ಮಾರ್ಟ್ ಅಂಗನವಾಡಿಗಳು ಮತ್ತು ಸಾಮಾಜಿಕ ಸಂಪನ್ಮೂಲ ಕೇಂದ್ರಗಳಿಗೆ 6 ಕೋಟಿ ರೂ. ಮೀಸಲಿಡಲಾಗಿದೆ. ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕಶಾಲೆಗಳಲ್ಲಿಮೂಲಸೌಕರ್ಯ ಅಭಿವೃದ್ಧಿಗೆ 12 ಕೋ.ರೂ., ಆಧುನಿಕ ಪ್ರಯೋಗಾಲಯಗಳಿಗೆ 2 ಕೋ.ರೂ. ಮತ್ತು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಹೊಸ ಭೂವಿಜ್ಞಾನ ಬ್ಲಾಕ್‌ಗೆ 3 ಕೋಟಿ ರೂ., ತಾಂತ್ರಿಕ ಶಿಕ್ಷಣದ ನವೀಕರಣಕ್ಕೆ 3 ಕೋಟಿ ರೂ. ಮತ್ತು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಯೋಜನೆಯಾದ ಮುನ್ನೋಟ್ಟಿಗೆ 35 ಲಕ್ಷ ರೂ. ತೆಗೆದಿರಿಸಲಾಗಿದೆ. ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ಕಾಸರಗೋಡು ನಗರಸಭಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ 3 ಕೋಟಿ ರೂ. ನೀಡಲು ನಿರ್ಧರಿಸಲಾಗಿದೆ.

ಎಂಡೋಸಲ್ಫಾನ್ ಸಂತ್ರಸ್ತರಿಗೆ 10 ಕೋ.ರೂ.ಮೀಸಲು

ಎಂಡೋಸಲ್ಫಾನ್ ಸಂತ್ರಸ್ತರ ಆರೋಗ್ಯ ರಕ್ಷಣೆ – ಜೀವನೋಪಾಯಕ್ಕಾಗಿ ವೈದ್ಯಕೀಯ ಕಾಲೇಜಿನಲ್ಲಿ ಸಮಗ್ರ ಕ್ಲಿನಿಕಲ್ ಬ್ಲಾಕ್ ಸ್ಥಾಪಿಸಲು 10 ಕೋ. ರೂ.ಗಳ ಮೀಸಲಿಡಲಾಗಿದೆ. ಇದರ ಜೊತೆಗೆ ಸಾಮಾಜಿಕ ನ್ಯಾಯ ಇಲಾಖೆಯಡಿ ವೃದ್ಧಾಪ್ಯರ ಆಸ್ಪತ್ರೆ ಬ್ಲಾಕ್ ನಿರ್ಮಿಸಲು ಕರಡು ಯೋಜನೆಯಲ್ಲಿ 2.65 ಕೋಟಿ ರೂ. ಒದಗಿಸಲಾಗಿದೆ.

ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ

ಕಾಸರಗೋಡು ಜಿಲ್ಲೆಯಲ್ಲಿ ಸಾರ್ವಜನಿಕ ಸೌಲಭ್ಯಗಳು ಮತ್ತು ಸುರಕ್ಷತೆ ಹೆಚ್ಚಿಸುವ ಭಾಗವಾಗಿ ಆಧುನಿಕ ರಸ್ತೆಬದಿಯ ವಿಶ್ರಾಂತಿ ಪ್ರದೇಶಗಳ ಸ್ಥಾಪನೆ, ಕಾಸರಗೋಡು ಅಗ್ನಿಶಾಮಕ ಠಾಣೆಯ 2ನೇ ಹಂತ ಮತ್ತು ಅನಂತಪುರ ಕೈಗಾರಿಕಾ ಎಸ್ಟೇಟ್‌ನಲ್ಲಿ ಕೈಗಾರಿಕಾ ತ್ಯಾಜ್ಯ ಸಂಸ್ಕರಣಾ ಘಟಕಕ್ಕಾಗಿ ತಲಾ 2 ಕೋ.ರೂ. ಗಳನ್ನು ನೀಡಲು ನಿರ್ಧರಿಸ ಲಾಗಿದೆ. ಇದರ ಜೊತೆಗೆ ತುರ್ತು ರಕ್ಷಣಾ ಕಾರ್ಯಾಚರಣೆಗಳಿಗೆ ಸ್ಪೀಡ್ ಬೋಟ್ –ಜೀವ ರಕ್ಷಕ ಉಪಕರಣಗಳ ಖರೀದಿಗಾಗಿ ಯೋಜನೆಯಡಿ 50 ಲಕ್ಷ ರೂ. ಪ್ರಸ್ತಾಪಿಸಲಾಗಿದೆ.

ಸಾರಿಗೆ ಸೌಲಭ್ಯ ಸುಧಾರಿಸುವ ಭಾಗವಾಗಿ ಹೊಸ ಸೇತುವೆಗಳು, ರಸ್ತೆಗಳ ಬಗ್ಗೆ ಉಲ್ಲೇಖಿಸಲಾಗಿದೆ. ಉದಯಪುರಂ – ಮುನ್ನಾಡು ರಸ್ತೆಯ ಪಿಂಡಿಕ್ಕಡವು ಸೇತುವೆ ನಿರ್ಮಾಣಕ್ಕೆ 4 ಕೋಟಿ ರೂ., ಬೇಡಡ್ಕದ ಪಯಂ – ಪಯಂಗಾಡು ಸೇತುವೆಗೆ 3.5 ಕೋ.ರೂ. ಹಂಚಿಕೆ ಮಾಡಲಾಗಿದೆ. ಕಾಸರಗೋಡು ನಗರ ಸಹಿತ ವಿವಿಧ ನಗರಗಳಲ್ಲಿ ಬೈಪಾಸ್‌ಗಳ ಅಭಿವೃದ್ಧಿಗೆ 3 ಕೋಟಿ ರೂ. , ವಿದ್ಯಾನಗರದ ಸಿವಿಲ್ ಸ್ಟೇಷನ್ ಸೇರಿದಂತೆ ವೃತ್ತಾಕಾರದ ರಸ್ತೆಗಳು, ಸಂಚಾರ ಜಂಕ್ಷನ್‌ಗಳ ನವೀಕರಣಕ್ಕೆ ತಲಾ 2 ಕೋ. ರೂ. ಒದಗಿಸಲಾಗಿದೆ.

ಜಿಲ್ಲೆಯ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿ

ಕರಡು ಅಭಿವೃದ್ಧಿ ಯೋಜನೆಯಂತೆ ಕರಾವಳಿ ಪ್ರವಾಸೋದ್ಯಮ–ಮಲೆನಾಡು ಹಾಗೂ ಗುಡ್ಡಗಾಡು ಪ್ರವಾಸಿ ತಾಣಗಳ ನವೀಕರಣಕ್ಕೂ ಹಣವನ್ನು ಹಂಚಿಕೆ ಮಾಡಲಾಗಿದೆ. ತೈಕಡಪ್ಪುರಂ ಮತ್ತು ವಲಿಯಪರಂಬ ಕಡಲತೀರಗಳ ಅಭಿವೃದ್ಧಿಗೆ ತಲಾ 2 ಕೋ. ರೂ. ಮತ್ತು ಮಂಜಂಪೊಟಿಕುನ್ನು ಬೆಟ್ಟದ ಪ್ರವಾಸೋದ್ಯಮಕ್ಕೆ 1 ಕೋಟಿ ರೂ. ಮೀಸಲಿಡಲಾಗಿದೆ. ಕೃಷಿ ಮತ್ತು ಪ್ರಾಣಿ ಸಂರಕ್ಷಣಾ ವಲಯಗಳಲ್ಲಿ ನೀಲೇಶ್ವರ ಪಾಲಾಯಿ ಭತ್ತದ ಗದ್ದೆಗಳಲ್ಲಿ ನೀರಾವರಿ ಸೌಲಭ್ಯಗಳಿಗೆ 3 ಕೋಟಿ ರೂ., ಪ್ರಾಣಿ ಸಂರಕ್ಷಣಾ ಪ್ರಯೋಗಾಲಯಗಳು, ಆಸ್ಪತ್ರೆಗಳ ಬಲಪಡಿಸಲು 2 ಕೋಟಿ ರೂ. , ಜನವಸತಿ ಪ್ರದೇಶಗಳಿಗೆ ವನ್ಯಜೀವಿಗಳ ಪ್ರವೇಶ ವೈಜ್ಞಾನಿಕವಾಗಿ ತಡೆಗಟ್ಟಲು 1 ಕೋ.ರೂ. ಮೊತ್ತ ನಿಗದಿಪಡಿಸಲಾಗಿದೆ.

ಮಧೂರು ದೇವಳದಲ್ಲಿ ವೇದಪಾಠ ಶಿಬಿರದ ಸಮಾರೋಪ ಸಮಾರಂಭ



ಕಾಸರಗೋಡು: ವೇದಗಳು ಎಂದರೆ ಜ್ಞಾನ. ಇದರ ಉಚ್ಚಾರಣೆಯಿಂದ ಮನಸ್ಸಿಗೆ ಶಾಂತಿ, ಏಕಾಗ್ರತೆ ಉಂಟಾಗುತ್ತದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ವಿದ್ವಾಂಸರೂ ಆಗಿರುವ ಶ್ಯಾಮ್ ಪ್ರಸಾದ್ ಕುಳಮರ್ವ ಅಭಿಪ್ರಾಯ ವ್ಯಕ್ತಪಡಿಸಿದರು.
ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವೇದಪಾಠ ಶಿಬಿರದ ಸಮಾರೋಪದಲ್ಲಿ ಅತಿಥಿಯಾಗಿ ಅವರು ಮಾತನಾಡಿದರು.
ಮಧೂರು ದೇವಳ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಟಿ. ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಶ್ರೀ ದೇವಳ ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಜಯದೇವ ಖಂಡಿಗೆ, ಕೆ. ನಾರಾಯಣಯ್ಯ, ಶ್ರೀ ಕ್ಷೇತ್ರದ ಪವಿತ್ರಪ್ರಾಣಿ ರತನ್ ಕುಮಾರ್ ಕಾಮಡ, ಸಹಾಯಕ ಅರ್ಚಕ ಕೃಷ್ಣಮೂರ್ತಿ, ವಿಷ್ಣುಮೂರ್ತಿ ಕಕ್ಕಿಲ್ಲಾಯ, ಮುರಳೀಧರ ಎಡಪ್ಪಾಡಿ, ದೇವಸ್ಥಾನದ ಸಿಬ್ಬಂದಿ ಕೆ.ಎಸ್. ಮಧ್ಯಸ್ಥ ಮತ್ತಿತರರಿದ್ದರು.
ವೇದಪಾಠ ಶಿಬಿರದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಶಾಲು, ಭಗವದ್ಗೀತಾ ಪುಸ್ತಕ , ಇತರ ಪುಸ್ತಕಗಳನ್ನು ವಿತರಿಸಲಾಯಿತು.

ಕೃಷ್ಣ ಮಯ್ಯರಿಗೆ ಸನ್ಮಾನ

ವೇದ ಪಾಠಶಾಲೆ ಗುರು ಕೃಷ್ಣ ಮಯ್ಯ ಅವರನ್ನು ಕಾರ್ಯನಿರ್ವಹಣಾಧಿಕಾರಿ , ವೇದಿಕೆಯಲ್ಲಿದ್ದ ಗಣ್ಯರು ಶಾಲು ಹೊದಿಸಿ ಗುರುದಕ್ಷಿಣೆ ನೀಡಿ ಗೌರವಿಸಿದರು.
ಸಹಾಯಕ ಗುರುಗಳಾಗಿ ಸಹಕರಿಸಿದ ರಾಮ್ ಪ್ರಸಾದ್ ಕೂಡ್ಲು, ವಸಂತ ಕಲ್ಲೂರಾಯ, ಆದಿತ್ಯ ಕಾರಂತ ಅವರಿಗೂ ಗುರುವಂದನೆ ಸಲ್ಲಿಸಲಾಯಿತು. ವೇದಪಾಠ ಶಾಲೆ ವಿದ್ಯಾರ್ಥಿಗಳು ವೇದ ಪ್ರದರ್ಶನ ನಡೆಸಿದರು. ದೇವಳ ವ್ಯವಸ್ಥಾಪಕ, ಶಿಬಿರದ ಸಂಚಾಲಕ ಬಿ.ಎನ್.ಸುಬ್ರಹ್ಮಣ್ಯ ರಂಗಾ ಭಟ್ ಸ್ವಾಗತಿಸಿ, ನಿವೃತ್ತ ಅಧ್ಯಾಪಕ ಕೃಷ್ಣ ಕಾರಂತ ವಂದಿಸಿದರು. ನಿವೃತ್ತ ಅಧ್ಯಾಪಕ ನರಸಿಂಹ ಮಯ್ಯ ಎಂ. ಮಧೂರು ನಿರೂಪಿಸಿದರು.

ಬೇಡಡ್ಕ ಸಮಿತಿಯಿಂದ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿ: ಕೃಷಿಕರಿಗೆ ಮಾದರಿ ಗ್ರೂಪ್‌ನ ಸ್ಥಾಪನೆ



ಕಾಸರಗೋಡು: ಬೇಡಡ್ಕ ಕೃಷಿ ಕ್ರಿಯಾ ಸಮಿತಿಯ ಆಶ್ರಯದಲ್ಲಿ ಬೇಡಡ್ಕ ಗ್ರಾ.ಪಂ., ಕಾಸರಗೋಡು ಜಿಲ್ಲೆಯ ಕೃಷಿ ಪ್ರಗತಿ ಮೇಲೆ ನಿರ್ಣಾಯಕ ಪರಿಣಾಮ ಬೀರುವ ಮಾದರಿ ಯೋಜನೆ ಕಾರ್ಯಗತಗೊಳಿಸಲಾಗುತ್ತಿದೆ. ಬೇಡಡ್ಕ ಗ್ರಾ.ಪಂ.ನ ಸಹಯೋಗದೊಂದಿಗೆ ಕೃಷಿ ಭವನದ ಅಧೀನದಲ್ಲಿ ಕಾರ್ಯನಿರ್ವಹಿಸುವ ಕೃಷಿ ಕ್ರಿಯಾ ತಂಡ ನಾಡಿನ ಕೃಷಿ ಕನಸುಗಳಿಗೆ ಹೊಸ ಭರವಸೆಯಾಗಿ ರೂಪುಗೊಂಡಿದೆ.
ಈ ತಂಡವು 2019 ರಲ್ಲಿ ಪ್ರಾರಂಭವಾದಾಗಿನಿಂದ ರೈತರಿಗೆ ಯೋಜನೆ ಒದಗಿಸುತ್ತಿದೆ. ಕೃಷಿ ಕ್ರಿಯಾ ಸಮಿತಿ ನೇತೃತ್ವದಲ್ಲಿ 40 ಎಕರೆಗಳಿಗೂ ಹೆಚ್ಚು ಪಾಳು ಬಿದ್ದ ಹೊಲಗಳಲ್ಲಿ ಭತ್ತದ ಕೃಷ್ಣಿ ಯಶಸ್ವಿಯಾಗಿ ಪ್ರಾರಂಭಿಸಲಾಗಿದೆ. ಭೂಮಿಯ ಉಳುಮೆ, ನಾಟಿ ಮಾಡು ವುದು, ಆರೈಕೆ ಕ್ರಮ, ಕೊಯ್ಲು ನಡೆಸುವುದು, ಅಂತಿಮವಾಗಿ ಭತ್ತ ಕುದಿಸಿ ಒಣಗಿಸುವುದು ಜೊತೆಗೆ ಅಕ್ಕಿ ಮಾಡುವುದು ಮುಂತಾದ ಎಲ್ಲಾ ಕೆಲಸಗಳನ್ನು ಕೃಷಿ ಕ್ರಿಯಾ ಸಮಿತಿ ನೇರವಾಗಿ ಕೈಗೊಳ್ಳುತ್ತಿದೆ.
ಎಟಿಎಂಎ ಯೋಜನೆ ಮೂಲಕ ಪಡೆದ ಮಿನಿ ಅಕ್ಕಿ ಗಿರಣಿಗಳ ಬಳಸಿಕೊಂಡು ರೈತರಿಂದ ಭತ್ತ ಸಂಗ್ರಹಿಸಿ ಬೇಡಡ್ಕ ಅಕ್ಕಿ ಎಂಬ ಬ್ರಾಂಡ್ ಹೆಸರಿನಲ್ಲಿ ಶುದ್ಧ ಅಕ್ಕಿ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಇದಲ್ಲದೆ ಕೃಷಿಕ ರಿಗೆ ಹೆಚ್ಚಿನ ಮೌಲ್ಯವರ್ಧಿತ ಉತ್ಪನ್ನಗಳ ಒದಗಿಸುವ ಗುರಿಯೊಂದಿಗೆ 2023–24ನೇ ಬೇಡಡ್ಕ ಗ್ರಾ.ಪಂ.ಯೋಜನೆ ಮೂಲಕ ಹಿಟ್ಟು ಯಂತ್ರ ಸ್ಥಾಪಿಸಲಾಗಿದೆ.

ಪ್ರಮುಖ ಗುರಿ

ಕಾರ್ಮಿಕರ ಕೊರತೆ , ಅಧಿಕ ವೆಚ್ಚಗ ಳಿಂದ ಕೃಷಿ ವಲಯ ಎದುರಿ ಸುತ್ತಿರುವ ಸವಾಲುಗಳ ನಿವಾರಿಸಲು ಕೃಷಿಕರಿಗೆ ಸಹಾಯ ಮಾಡುವುದು ಈ ಗ್ರೂಪ್‌ನ ಪ್ರಮುಖ ಗುರಿಯಾಗಿದೆ.

ಅನುಪಮಾ ನಿರಂಜನ ಕಥಾ ಸ್ಪರ್ಧೆ: ಜ್ಯೋತಿರ್ಲಕ್ಷ್ಮೀಗೆ ಪ್ರಥಮ ಸ್ಥಾನ



ಕಾಸರಗೋಡು: ಬೆಂಗಳೂರಿನ ಕನ್ನಡ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಕಥೆಗಾರ್ತಿ ಅನುಪಮಾ ನಿರಂಜನ ಅವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ 2026ನೇ ಸಾಲಿನ ರಾಜ್ಯಮಟ್ಟದ ಮಹಿಳಾ ಕಥಾಸ್ಪರ್ಧೆಯಲ್ಲಿ ಕಾಸರಗೋಡು ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪಿಎಚ್‌ಡಿ ಸಂಶೋಧನಾರ್ಥಿ ಜ್ಯೋತಿ ರ್ಲಕ್ಷ್ಮಿ ಅವರ ನೀರವ ಧ್ಯಾನ ವಧೂ.. ಕಥೆಯು ಪ್ರಥಮ ಬಹುಮಾನಕ್ಕೆ ಭಾಜನವಾಗಿದೆ.
ಈ ವರೆಗೆ ಒಂದು ಕೂಡಾ ಕಥಾ ಸಂಕಲನ ಪ್ರಕಟಿಸದಿರುವ ಮಹಿಳಾ ಬರಹಗಾರ್ತಿಯರಿಗಾಗಿ ಅನುಪಮಾ ನಿರಂಜನ ಮಹಿಳಾ ಕಥಾಸ್ಪರ್ಧೆ ಆಯೋಜಿಸಲಾಗಿತ್ತು. ಬಹುಮಾನ ಪಡೆದ ಕಥೆಗಳಿಗೆ ನಗದು ಬಹುಮಾನವಿದ್ದು ಪ್ರಶಸ್ತಿಪ್ರದಾನಸಮಾರಂಭದ ದಿನಾಂಕ ಮತ್ತು ವಿವರಗಳನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು ಎಂದು ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷ ಎ.ಎಸ್ .ನಾಗರಾಜಸ್ವಾಮಿ ತಿಳಿಸಿದ್ದಾರೆ.

ಅನಂತಪುರ ತೈಲ ಮರುಬಳಕೆ ಘಟಕ: ಅಪಾಯವಿಲ್ಲದ್ದಿರೆ ಮಾತ್ರ ಅನುಮತಿ

ಕಾಸರಗೋಡು: ಮಂಜೇಶ್ವರ ತಾಲೂಕಿನ ಕುಂಬಳೆ ಸಮೀಪದ ಅನಂತಪುರ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೆಸ್ಸರ್ಸ್ ಕೊಂಬನ್ ಲ್ಯೂಬ್ಸ್ ಎಂಬ ತೈಲ ಮರುಬಳಕೆ ಕಾರ್ಖಾನೆಯ ವಿರುದ್ಧದ ದೂರಿನ ಕುರಿತು ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಕಟ್ಟುನಿಟ್ಟಿನ ನಿಲುವು ಕೈಗೊಂಡಿದ್ದಾರೆ.



ಕಾರ್ಖಾನೆ ಸ್ಥಾಪನೆಯಲ್ಲಿನ ನ್ಯೂನತೆಗಳನ್ನು ಸಂಪೂರ್ಣವಾಗಿ ಪರಿಹರಿಸಲಾಗಿದೆ ಮತ್ತು ಮಾಲಿನ್ಯ ನಿಯಂತ್ರಣ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ ಎಂದು ಖಚಿತಪಡಿಸಿಕೊಂಡ ಬಳಿಕವೇ ಘಟಕವು ಕಾರ್ಯನಿರ್ವಹಿಸಲು ಅನುಮತಿ ನೀಡಬೇಕು ಎಂದು ಜಿಲ್ಲಾಧಿ ಕಾರಿಗಳು ಮಾಲಿನ್ಯ ನಿಯಂತ್ರಣ ಮಂಡಳಿಯ (ಪಿಸಿಬಿ) ಪರಿಸರ ಇಂಜಿನಿಯರ್‌ಗೆ ಸೂಚನೆ ನೀಡಿದ್ದಾರೆ.
ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಸಂಸ್ಥೆಯಲ್ಲಿ ನಡೆಸಿದ ತಪಾಸಣೆ ಮತ್ತು ಸಲ್ಲಿಸಿದ ವರದಿಯನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ.
ಯಾವುದೇ ಅಪಾಯವಿಲ್ಲದಿದ್ದರೆ ಸಂಸ್ಥೆಯನ್ನು ಕಾರ್ಯನಿರ್ವಹಿಸಲು ಅನುಮತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದ್ದಾರೆ.

ವರದಿ ಆಧರಿಸಿ ಅನುಮತಿ : ಡೀಸಿ

ಸ್ಥಳೀಯ ನಿವಾಸಿಗಳ ಆರೋಗ್ಯಕ್ಕೆ ಯಾವುದೇ ಅಪಾಯ ಮಾಡುವುದಿಲ್ಲ, ಆ ಪ್ರದೇಶದಲ್ಲಿ ಮಾಲಿನ್ಯ ಹರಡುವುದಿಲ್ಲ ಎಂದು ವರದಿಯಲ್ಲಿ ಖಚಿತಗೊಂಡರೆ ಮಾತ್ರ ಸಂಸ್ಥೆ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕುಂಬ್ಡಾಜೆ ಪಂ.ನಲ್ಲಿ ಮಲೆಯಾಳ ಮಾಧ್ಯಮ ಪ್ರೌಢಶಾಲೆಗೆ ಅನುಮತಿ ನೀಡಲು ಮನವಿ



ಕಾಸರಗೋಡು: ಕುಂಬ್ಡಾಜೆ ಪಂಚಾಯತ್ ಜಿಜೆಬಿಎಸ್ ಸರಕಾರಿ ಶಾಲೆಯನ್ನು ಪ್ರೌಢಶಾಲೆಯನ್ನಾಗಿ ಮೇಲ್ದರ್ಜೆಗೇರಿಸಬೇಕೆಂದು ಒತ್ತಾಯಿಸಿ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಅವರು ರಾಜ್ಯ ಶಿಕ್ಷಣ ಖಾತೆ ಸಚಿವ ಎನ್. ಶಂಸುದೀನ್ ಅವರಿಗೆ ತಿರುವನಂತಪುರದಲ್ಲಿ ಮನವಿ ಸಲ್ಲಿಸಿದ್ದಾರೆ.

ದುರದೃಷ್ಟಕರ

ಶ್ರೇಷ್ಠ ಭಾಷಾ ಸ್ಥಾನಮಾನ ನೀಡಿದ್ದರೂ ಎಲ್‌ಪಿ ಹಂತದ ನಂತರ ಮಲೆಯಾಳ ಮಾಧ್ಯಮದಲ್ಲಿ ಅಧ್ಯಯನ ಮುಂದುವರಿಸಲು ಸರಕಾರಿ ಶಾಲೆಗಳಿಲ್ಲದ ರಾಜ್ಯದ ಪಂಚಾಯತ್ ಇರುವುದು ದುರದೃಷ್ಟಕರ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.
ಪ್ರಸ್ತುತ ಈ ಪ್ರದೇಶದ ಎಲ್ಲಾ ಅನುದಾನಿತ ಶಾಲೆಗಳು ಕನ್ನಡ ಮಾಧ್ಯಮ ದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದು ಮಲೆಯಾಳ ಮಾಧ್ಯಮದಲ್ಲಿ ಕಲಿಯುವ ವಿದ್ಯಾರ್ಥಿಗಳ ಮುಂದಿನ ಅಧ್ಯಯನಕ್ಕೆ ಸಮಸ್ಯೆಯಾಗುತ್ತಿದೆ. ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಮತ್ತು ಸಾರ್ವಜನಿಕ ಸಾರಿಗೆ ಸೌಲಭ್ಯಗಳು ತೀರಾ ಕಳಪೆಯಾಗಿರುವ ಈ ಪ್ರದೇಶದ ವಿದ್ಯಾರ್ಥಿಗಳು ಶಾಲಾ ಶಿಕ್ಷಣವನ್ನು ಮುಗಿಸಿದ ನಂತರ ಕಿಲೋ ಮೀಟರ್‌ಗಳಷ್ಟು ಪ್ರಯಾಣಿಸಿ ಇತರ ಪಂಚಾಯತ್‌ಗಳ ಶಾಲೆಗಳನ್ನು ಅವಲಂಬಿಸಬೇಕಾಗಿದೆ.

ಸಕಾರಾತ್ಮಕ ಕ್ರಮಕೈಗೊಳ್ಳಲು ಆಗ್ರಹ

ಈ ದುಃಸ್ಥಿತಿಗೆ ತಕ್ಷಣದ ಪರಿಹಾರವಾಗಿ ಕುಂಬ್ಡಾಜೆ ಜಿಜೆಬಿಎಸ್ ಶಾಲೆಯಲ್ಲಿ ಅಗತ್ಯ ಮೂಲಸೌಕರ್ಯ ಸೌಲಭ್ಯಗಳ ಹೆಚ್ಚಿಸಲು ಮತ್ತು ಅದನ್ನು ಪ್ರೌಢಶಾಲೆಯಾಗಿ ಮೇಲ್ದರ್ಜೆಗೇರಿಸಲು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಶಾಸಕರು ಒತ್ತಾಯಿಸಿದರು.

ಪೈವಳಿಕೆಯಲ್ಲಿ ಮಾಜಿ ಪ್ರಧಾನಿ ನೆಹರೂ ಸಂಸ್ಮರಣಾ ಕಾರ್ಯಕ್ರಮ



ಉಪ್ಪಳ: ಸಮಕಾಲೀನ ರಾಜಕೀಯ ಪರಿಸ್ಥಿತಿಯಲ್ಲಿ ದೇಶದ ಮಾಜಿ ಪ್ರಧಾನಮಂತ್ರಿಯಾಗಿದ್ದ ಜವಾಹರ್ ಲಾಲ್ ನೆಹರೂ ಅವರ ಸದಾ ಸ್ಮರಣೆ ಅತ್ಯಗತ್ಯವಾಗಿದೆ ಎಂದುಪೈವಳಿಕೆ ಮಂಡಲ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಸಂತ ಕುಮಾರ್ ಮಾಸ್ತರ್ ಅಭಿಪ್ರಾಯ ವ್ಯಕ್ತಪಡಿಸಿದರು.
ಪೈವಳಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರೂ ಅವರ ಸಂಸ್ಮರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೆಹರೂ ಚಿಂತನೆ ಬಲಪಡಿಸಲು ಕಾಂಗ್ರೆಸ್ ಪಕ್ಷ ಸಿದ್ಧವಾಗಬೇಕು

ಭಾರತದ ಪ್ರಜಾಪ್ರಭುತ್ವ ಹಾಗೂ ಸಂವಿಧಾನವು ದುರ್ಬಲಗೊಳಿಸಲು ಹಾಗೂ ಗಾಂಧಿ, ನೆಹರೂ ಚಿಂತನೆಗಳನ್ನು ಅಪ್ರಸ್ತುತಗೊಳಿಸುತ್ತಿರುವ ಫ್ಯಾಸಿಸ್ಟ್ ಆಡಳಿತದ ಈ ಕಾಲದಲ್ಲಿ ನೆಹರೂ ಚಿಂತನೆಗಳನ್ನು ಬಲಪಡಿಸಲು ಕಾಂಗ್ರೆಸ್ ಪಕ್ಷ ಸಿದ್ಧವಾಗಬೇಕು ಎಂದರು.

ಪುಷ್ಪಾರ್ಚನೆ

ಪೈವಳಿಕೆ ಮಂಡಲ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಜರಗಿದ ಕಾರ್ಯಕ್ರಮದಲ್ಲಿ ನೆಹರೂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಡೆಸಲಾಯಿತು.
ಕುಂಬಳೆ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ನಾರಾಯಣ ಏದಾರು, ಅಬ್ದುಲ್ಲ ಹಾಜಿ, ರವಿಚಂದ್ರ ಬಲ್ಲಾಳ್, ರಜಾಕ್ ಚೇರಾಲು ಮೊದಲಾದವರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು. ಶಿವರಾಮ ಶೆಟ್ಟಿ ಸ್ವಾಗತಿಸಿ, ಎಡ್ವರ್ಡ್ ಡಿಸೋಜ ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.
ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಕಾರ್ಯಕರ್ತರೂ ನೆಹರೂ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.



ಕಾರಡ್ಕ ಗ್ರಾ.ಪಂ.ನ ನಾಲ್ಕನೇ ಆಲಂತಡ್ಕ ವಾರ್ಡ್‌ನ ಜಯನಗರದಲ್ಲಿ ಪತ್ತೆಯಾಗಿ ಕಾಣಿಸಿಕೊಂಡಿದ್ದ ಚಿರತೆಯನ್ನು ಹಿಡಿಯಲು ಅರಣ್ಯ ಇಲಾಖೆಯ ಅಧಿಕಾರಿಗಳು ಬೋನು ಸ್ಥಾಪಿಸಿದ್ದಾರೆ. ಈ ನಿಟ್ಟಿನಲ್ಲಿ ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಪ್ರಮುಖರಾದ ಶಿವಕೃಷ್ಣ ಭಟ್, ಎಂ.ಜನನಿ, ದಾಮೋದರ ರಾವ್, ವಸಂತ ಕೆ., ವಸಂತಿ ಎ., ಬಾಲಕೃಷ್ಣನ್ ಎ., ಸವಿತಾಕುಮಾರಿ ಪಿ., ಪ್ರಶಾಂತ್ ಎಂ., ಪೂರ್ಣಿಮಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು.

ನಾಳೆ ತಂಬಾಕು ರಹಿತ ದಿನಾಚರಣೆ | ಕಾಸರಗೋಡು ಜಿಲ್ಲಾ ಮಟ್ಟದ ತಂಬಾಕು ವಿರೋಧಿ ಸಮನ್ವಯ ಸಮಿತಿ ಸಭೆ

ಶಾಲಾರಂಭದ ಮೊದಲ ವಾರದಲ್ಲೇ ತಂಬಾಕು ವಿರೋಧಿ ಪ್ರತಿಜ್ಞೆ ನಡೆಸಲು ನಿರ್ಧಾರ

ಕಾಸರಗೋಡು: ವಿಶ್ವ ತಂಬಾಕು ರಹಿತ ದಿನವನ್ನು ಮೇ 31ರಂದು ಹಮ್ಮಿಕೊಳ್ಳಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲಾ ಮಟ್ಟದ ತಂಬಾಕು ವಿರೋಧಿ ಸಮನ್ವಯ ಸಮಿತಿಯ ಸಭೆ ಎಡಿಎಂ ಕೆ.ವಿ.ಶ್ರುತಿ ಅವರ ನೇತೃತ್ವದಲ್ಲಿ ಕಲೆಕ್ಟರೇಟ್‌ನ ಎಡಿಎಂ ಕಚೇರಿಯಲ್ಲಿ ಶುಕ್ರವಾರ ಜರಗಿತು.
ತಂಬಾಕು ವಿರೋಧಿ ದಿನದ ಅಂಗವಾಗಿ ಶಾಲೆಗಳು ಪುನರಾರಂಭಗೊಂಡ ಮೊದಲ ವಾರದಲ್ಲಿ ತರಗತಿಗಳಲ್ಲಿ ತಂಬಾಕು ವಿರೋಧಿ ಪ್ರತಿಜ್ಞೆಯನ್ನು ಆಯೋಜಿಸಲು ನಿರ್ಧರಿಸಲಾಗಿದೆ.

ತಂಬಾಕು ವಿರೋಧಿ ರ್‍ಯಾಲಿ

ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯ ಆಶ್ರಯದಲ್ಲಿ ತಂಬಾಕು ವಿರೋಧಿ ರ್‍ಯಾಲಿಗಳು ಮತ್ತು ತರಗತಿಗಳನ್ನು ಹಮ್ಮಿಕೊಳ್ಳಲಾಗುವುದು. ಪೊಲೀಸ್



ಇಲಾಖೆ ಮದ್ಯ, ಮಾದಕ ದ್ರವ್ಯ ಮತ್ತು ತಂಬಾಕು ವಿರುದ್ಧ ಆಪರೇಷನ್ ತೂಫಾನ್ ಹೆಸರಿನಲ್ಲಿ ಜಿಲ್ಲೆಯಲ್ಲಿ ಚಟುವಟಿಕೆಗಳ ನಡೆಸಲಿದೆ.
ವಿಶ್ವ ಆರೋಗ್ಯ ಸಂಸ್ಥೆ ಮತ್ತು ಕೇಂದ್ರ ಸರಕಾರದ ಅಂಕಿ ಅಂಶಗಳ ಪ್ರಕಾರ ಮಕ್ಕಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ ಹೆಚ್ಚುತ್ತಿದೆ ಎಂದು ಸೂಚಿಸುತ್ತಿರುವುದರಿಂದ ಜಿಲ್ಲೆಯಲ್ಲಿ ತಂಬಾಕು ವಿರೋಧಿ ಚಟುವಟಿಕೆ ತ್ವರಿತಗೊಳಿಸಲು ಸಭೆ ಸೂಚಿಸಿದೆ.

ತಂಬಾಕು ಜಾಗೃತಿಗೆ ಸಭೆ

ಜಿಲ್ಲೆಯ 171 ಶಿಕ್ಷಣ ಸಂಸ್ಥೆಗಳು ತಂಬಾಕು ಮುಕ್ತವಾಗಿವೆ. ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೆ ತರಬೇಕಾದ ತಂಬಾಕು ಜಾಗೃತಿ ಏರ್ಪಡಿಸಲು ಸ್ಥಳೀಯಾಡಳಿತ ಸಂಸ್ಥೆಗಳ ಮಟ್ಟದಲ್ಲಿ ಅಧ್ಯಕ್ಷರು, ಇತರ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಭೆ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು.

ಸಮಾಲೋಚನೆ

ತಂಬಾಕು ನಿಯಂತ್ರಣ ಕಾಯ್ದೆ 2003ರಡಿ ಸ್ಥಾಪಿಸಬೇಕಾದ ಶಾಲೆಗಳು ಮತ್ತು ಮಂಡಳಿಗಳಲ್ಲಿ ರಚಿಸಬೇ ಕಾದ ಸಮಿತಿಗಳು , ಜಿಲ್ಲೆಯಲ್ಲಿ ತಂಬಾಕು ನಿಯಂತ್ರಣ ಕಾಯ್ದೆ 2003ರ ಅನುಷ್ಠಾನದ ಬಗ್ಗೆ ಚರ್ಚಿಸಲಾಯಿತು. ಮೇ 31ರಿಂದ ಜೂನ್ 26ರವರೆಗೆ ಜಾರಿಗೆ ತರಬೇಕಾದ ತಂಬಾಕು ವಿರೋಧಿ ಕಾರ್ಯಚಟುವಟಿಕೆಗಳ ಕುರಿತು ಸಮಾಲೋಚನೆ ನಡೆಸಿದರು.

ತಂಬಾಕು ವಿರೋಧಿ ಸೂಚನಾ ಫಲಕ ಅಳವಡಿಸಿ

ಕೇರಳದಲ್ಲಿ ಒಟ್ಟು ತಂಬಾಕು ಸೇವನೆ ಶೇ.21.4 ರಿಂದ 12.7ಕ್ಕೆ ಇಳಿದಿದ್ದರೂ, 12-15 ವರ್ಷದೊಳಗಿನ ಮಕ್ಕಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ ಹೆಚ್ಚುತ್ತಿರುವ ಕಾರಣ ಶಾಲೆಗಳು , ಪ್ರಮುಖ ಕೇಂದ್ರಗಳಲ್ಲಿ ತಂಬಾಕು ವಿರೋಧಿ ಸೂಚನಾ ಫಲಕ ಅಳವಡಿಸಲು ಸಭೆಯಲ್ಲಿ ನಿರ್ಣಯಿಸಲಾಗಿದೆ. ಶಾಲಾ ನೀತಿಯಲ್ಲಿ ತಂಬಾಕು ಉತ್ಪನ್ನಗಳ ನಿಷೇಧ ಸೇರಿಸುವುದು ಸಹಿತ ಆರೋಗ್ಯ ಇಲಾಖೆ ಸಲಹೆ ಸೂಚನೆಗಳನ್ನು ಶಿಕ್ಷಣ ಇಲಾಖೆಗೆ ನೀಡಲಾಯಿತು.

ಸುತ್ತಮುತ್ತ

ಮೇ 31ರಂದು ಗುರುಪಾದುಕಾ ಪೂಜೆ, ಯಾಗ, ಪ್ರವಚನ

ಕಾಪು: ಪಡುಕುತ್ಯಾರು ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠ ಪರಮಪೂಜ್ಯ ಜಗದ್ಗುರು ಅನಂತಶ್ರೀ ವಿಭೂಷಿತ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಜನ್ಮವರ್ಧಂತಿಯ ಸುವರ್ಣ ಮಹೋತ್ಸವ ವರ್ಷಾಚರಣೆ ಸುಸಂದರ್ಭದಲ್ಲಿ, ವಿಶ್ವಬ್ರಾಹ್ಮಣ ಪ್ರತಿಷ್ಠಾನ, ಹುಬ್ಬಳ್ಳಿ ಇವರ ವತಿಯಿಂದ ಶ್ರೀ ಪುರುಷೋತ್ತಮ ಯಾಗ ಹಾಗೂ ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ ಮೇ 31ರಂದು ಶ್ರೀ ಮಠದ ಶ್ರೀ ಸರಸ್ವತೀ ಯಾಗಶಾಲೆಯಲ್ಲಿ ಜರಗಲಿದೆ. ವಿಶೇಷ ಧಾರ್ಮಿಕ ಕಾರ್ಯಕ್ರಮಗಳಡಿ ಶ್ರೀ ಗುರುಪಾದುಕಾ ಪೂಜೆ, 108 ದಂಪತಿ ಪೂಜೆ, ವಾಯನ ದಾನ, ಅಪೂಪಾದಿ ದಾನ, ಕಾರ್ಯಾಕ್ರಮ ಜರಗಲಿದೆ. ಅಧಿಕಮಾಸ ಹಾಗೂ ಶ್ರೀ ಪುರುಷೋತ್ತಮ ಯಾಗದ ಮಹತ್ವ ವೇ.ಬ್ರ. ಶ್ರೀ ಶಂಕರಾಚಾರ್ಯ ಗುರುನಾಥ ಆಚಾರ್ಯ ಪಂಡಿತ್ ಕಡ್ಲಾಸ್ಕರ್, ಹುಬ್ಬಳ್ಳಿ ಅವರು ಧಾರ್ಮಿಕ ಪ್ರವಚನಗೈಯಲಿರುವರು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ವಿಠಲ ರುಕುಮಾಯಿ ದೇವರಿಗೆ ಗಂಧ ಲೇಪನ ಸೇವೆ, ವಿಶೇಷ ಪೂಜೆ

ಕುಂದಾಪುರ: ಗಂಗೊಳ್ಳಿಯ ಪೇಟೆ ಶ್ರೀ ವಿಠಲ ರುಕುಮಾಯಿ ತಥಾ ಮುಖ್ಯಪ್ರಾಣ ದೇವಸ್ಥಾನದಲ್ಲಿ



ಪುರುಷೋತ್ತಮ ಮಾಸ (ಅಧಿಕ ಜೇಷ್ಠ ಮಾಸ)ದ ಪ್ರಯುಕ್ತ ಶ್ರೀ ವಿಠಲ ರುಕುಮಾಯಿ ದೇವರಿಗೆ ಗಂಧ ಲೇಪನ ಸೇವೆ ಶುಕ್ರವಾರ ನಡೆಯಿತು. ದೇವಸ್ಥಾನದ ಪ್ರಧಾನ ಅರ್ಚಕ ಜಿ.ಮೋಹನದಾಸ್ ಭಟ್ ಮತ್ತು ಜಿ. ಪ್ರದೀಪ್ ಭಟ್ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆಯಿತು. ದೇವಸ್ಥಾನದ ಆಡಳಿತ ಮೊಕ್ತೇಸರರು, ಸಮಿತಿ ಸದಸ್ಯರು, ಪುರೋಹಿತರು, ಊರಿನ ಹತ್ತು ಸಮಸ್ತರು, ಸಮಾಜಬಾಂಧವರು ಉಪಸ್ಥಿತರಿದ್ದರು.

ಪ್ರವೇಶಾತಿ: ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಗಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ -1, 2ಎ, 2ಬಿ, 3ಎ, 3ಬಿ, ಪ.ಜಾತಿ ಮತ್ತು ಪ.ವರ್ಗದ ಪಿ.ಯು.ಸಿ ಸಮಾನಾಂತರ ಡಿಪ್ಲೋಮಾ, ಐ,.ಟಿ.ಐ ಕೋರ್ಸಿನಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಉಡುಪಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಪಡಿಪಾಟಲು

ರಜಾ ದಿನವಾದರೂ ಮಾಸಾಂತ್ಯವಾಗಿದ್ದರಿಂದ ಪಡಿತರ ವಿತರಣೆಗೆ ಸೂಚಿಸಲಾಗಿತ್ತು. ಗುರುವಾರ ಉಡುಪಿ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಕಾದರೂ ಒಂದೇ ಒಂದು ಕಾರ್ಡ್‌ದಾರರಿಗೆ ಅಕ್ಕಿ ವಿತರಿಸಲು ಸಾಧ್ಯವಾಗಿಲ್ಲ, ಮಧ್ಯಾಹ್ನದ ಬಳಿಕ ಸ್ವಲ್ಪಮಟ್ಟಿಗೆ ಸರ್ವರ್ ಸಮಸ್ಯೆ ಬಗೆಹರಿದಿದೆ. ತ್ರಾಸಿಯ ನ್ಯಾಯಬೆಲೆ ಅಂಗಡಿಯಲ್ಲಿ ಬೆಳಗ್ಗೆ ಬೇಗನೆ ಜನ ಬಂದು ಕುಳಿತರೂ ವೆಬ್‌ಸೈಟ್ 9.30ರಿಂದ ತೆರೆದರೂ ಸರ್ವರ್ ಸಮಸ್ಯೆಯಿಂದ ಆಗುತ್ತಿಲ್ಲ, ಒಬ್ಬರ ಕಾರ್ಡ್ ಥಂಬ್ ಕೊಡಲು ಕನಿಷ್ಠ 20 ನಿಮಿಷಕ್ಕೂ ಹೆಚ್ಚು ಸಮಯ ಬೇಕು. ಒಂದು ಥಂಬ್ ತೆಗೆದುಕೊಮಡರೂ ಇನ್ನೊಂದು ಥಂಬ್ ತೆಗೆದುಕೊಳ್ಳದೇ ಸಮಸ್ಯೆಯಾಗುತ್ತಿದೆ. ಮೊದಲೆಲ್ಲ ದಿನಕ್ಕೆ 150ರಿಂದ 170ರವರೆಗೆ ಪಡಿತರ ಕಾರ್ಡ್‌ದಾರರಿಗೆ ಅಕ್ಕಿ ವಿತರಿಸಲಾಗುತ್ತಿತ್ತು. ಆದರೆ ಈಗ ದಿನಕ್ಕೆ ಕನಿಷ್ಠ 60 ಜನರಿಗೂ ಕೊಡಲು ಸಾಧ್ಯವಾಗುತ್ತಿಲ್ಲ, ಮಧ್ಯಾಹ್ನ ಸಂಜೆ 6ರ ಬಳಿಕ, ರಾತ್ರಿ 8.30ರ ಬಳಿಕ ಸ್ವಲ್ಪ ವೇಗದಲ್ಲಿ ಆಗುತ್ತದೆ ಎನ್ನುತ್ತಾರೆ ಇಲ್ಲಿನ ನ್ಯಾಯಬೆಲೆ ಅಂಗಡಿಯ ಸಿಬ್ಬಂದಿ.

ಆಸಕ್ತ ಪರಿಸರ ಪ್ರೇಮಿಗಳಿಗೆ ಸಾಥ್ ನೀಡಲಿದೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ | ದರದಲ್ಲೂ ರಿಯಾಯಿತಿ

ಅರಣ್ಯ ಇಲಾಖೆಯಿಂದ 10,39,548 ಸಸಿಗಳು ವಿತರಣೆಗೆ ರೆಡಿ

■ ಸುದೀಪ್ ರಾಜ್ ಸುಳ್ಯ

ಉಡುಪಿ: ಮುಂಗಾರು ಮಳೆಯ ಆರಂಭದ ಮುನ್ಸೂಚನೆ ಸಿಗುತ್ತಿದ್ದಂತೆಯೇ ಉಡುಪಿ ಜಿಲ್ಲಾ ಅರಣ್ಯ ಇಲಾಖೆಯು ಜಿಲ್ಲಾದ್ಯಂತ ವ್ಯಾಪಕವಾಗಿ ಸಸಿ ನೆಡುವ ಮತ್ತು ವಿತರಿಸುವ ಬೃಹತ್ ಹಸಿರು ಯೋಜನೆಗೆ ಚಾಲನೆ ನೀಡಿದೆ.

ಉಡುಪಿ, ಬೈಂದೂರು, ಕುಂದಾಪುರ, ಹೆಬ್ರಿ, ಕಾರ್ಕಳ, ಮೂಡಬಿದಿರೆ ಹಾಗೂ ವೇಣೂರು ಸೇರಿದಂತೆ ಕರಾವಳಿಯಾದ್ಯಂತ 2026-27ನೇ ಸಾಲಿಗೆ ಅತ್ಯಂತ ವ್ಯವಸ್ಥಿತವಾದ ಕಾರ್ಯಸೂಚಿಯನ್ನು ರೂಪಿಸಿದೆ.

ಪ್ರಸ್ತುತ ಸಾಲಿನಲ್ಲಿ ವಿವಿಧ ತಾಲೂಕುಗಳ ಅರಣ್ಯೀಕರಣಕ್ಕಾಗಿ ಇಲಾಖಾ ಮಟ್ಟದಲ್ಲಿ ಒಟ್ಟು 10,39,548 ಸಸಿಗಳನ್ನು ನೆಡಲು ಸಜ್ಜುಗೊಳಿಸಲಾಗಿದ್ದು, ಸಾರ್ವಜನಿಕರಿಗೆ ಹಾಗೂ ರೈತರಿಗೆ ಹೆಚ್ಚುವರಿಯಾಗಿ 50,000 ಸಸಿ ವಿತರಿಸಲಾಗುತ್ತದೆ.

ತಾಲೂಕುವಾರು ಸಸಿಗಳ ವಿವರ

ಬೈಂದೂರು ತಾಲೂಕು

ಇಲಾಖಾ ಪ್ಲಾಂಟಿಂಗ್‌ಗೆ 4,58,307 ಸಸಿಗಳು ಹಾಗೂ ಸಾರ್ವಜನಿಕ ವಿತರಣೆಗೆ 6,250,?ಕುಂದಾಪುರ: ಇಲಾಖೆಯಿಂದ 3,07,963 ಸಸಿ, ಸಾರ್ವಜನಿಕರಿಗೆ 12,500 ಸಸಿಗಳನ್ನು ವಿತರಿಸಲಾಗುತ್ತಿದೆ.



ಕಾರ್ಕಳ, ಮೂಡುಬಿದಿರೆ ತಾಲೂಕು

ಇಲಾಖಾ ಮಟ್ಟದಲ್ಲಿ 80,532 ಸಸಿಗಳು ಹಾಗೂ ಸಾರ್ವಜನಿಕ ವಿತರಣೆಗೆ 6,250 ಸಸಿಗಳು ಲಭ್ಯವಿವೆ. ಮೂಡಬಿದಿರೆ ಇಲಾಖೆಯಿಂದ 80,674 ಸಸಿಗಳ ನಾಟಿ ಹಾಗೂ ಸಾರ್ವಜನಿಕರಿಗೆ 6,250 ಸಸಿಗಳನ್ನು ನೀಡಲಾಗುತ್ತಿದೆ.

ಹೆಬ್ರಿ ಮತ್ತು ಉಡುಪಿ

ಹೆಬ್ರಿಯಲ್ಲಿ 41,887 ಸಸಿಗಳು ಹಾಗೂ ಉಡುಪಿಯಲ್ಲಿ 17,812 ಸಸಿಗಳನ್ನು ಇಲಾಖಾ ಪ್ಲಾಂಟಿಂಗ್‌ಗೆ ಬಳಸಲಾಗುತ್ತಿದ್ದು, ಇವೆರಡೂ ವಲಯಗಳಲ್ಲಿ ತಲಾ 6,250 ಸಸಿಗಳನ್ನು ಸಾರ್ವಜನಿಕ ವಿತರಣೆಗೆ ಕಾಯ್ದಿರಿಸಲಾಗಿದೆ. ವೇಣೂರು ಇಲಾಖಾ ಪ್ಲಾಂಟಿಂಗ್‌ಗಾಗಿ 52,374 ಸಸಿಗಳನ್ನು ಇಲ್ಲಿ ಸಿದ್ಧಪಡಿಸಲಾಗಿದೆ.

ಹಸಿರು ಸಂಕಲ್ಪ

ಉಡುಪಿ ಜಿಲ್ಲೆಯ ಸಾಮಾಜಿಕ ಅರಣ್ಯ ವಿಭಾಗವು ಕಾರ್ಕಳ, ಉಡುಪಿ ಮತ್ತು ಕುಂದಾಪುರ ವಲಯಗಳ ವ್ಯಾಪ್ತಿಯಲ್ಲಿ ಇಲಾಖೆಯ ವತಿಯಿಂದಲೇ ನೇರವಾಗಿ 11,500ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪೋಷಿಸುವ ಜವಾಬ್ದಾರಿ ತೆಗೆದುಕೊಳ್ಳಲಾಗಿದೆ. ಇದರ ಜೊತೆಗೆ, ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರೈತರ ಸ್ವಂತ ಬಳಕೆಗೆಂದೇ ಒಟ್ಟು 83,500 ಕೃಷಿ ಮತ್ತು ವಾಣಿಜ್ಯ ಆಧಾರಿತ ಸಸಿಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲು ನಿರ್ಧರಿಸಲಾಗಿದೆ.

'ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ'

ರೈತರು ಕೃಷಿ ಭೂಮಿಯ ಬದುಗಳಲ್ಲಿ ಹಾಗೂ ಖಾಲಿ ಜಾಗಗಳಲ್ಲಿ ಅರಣ್ಯ ತಳಿಗಳನ್ನು ಬೆಳೆಸುವುದನ್ನು ಉತ್ತೇಜಿಸಲು ಸರ್ಕಾರವು 'ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ'ಯಡಿ ಆಕರ್ಷಕ ಆರ್ಥಿಕ ಆಸರೆಯನ್ನು ನೀಡುತ್ತಿದೆ. ರೈತರು ನೆಡುವ ಶ್ರೀಗಂಧ, ರಕ್ತಚಂದನ, ದಾಲ್ಚಿನ್ನಿ, ತೇಗ, ಮಾವು, ಹಲಸು ಸೇರಿದಂತೆ ಪ್ರತಿಯೊಂದು ಗಿಡದ ಯಶಸ್ವಿ ಪೋಷಣೆಗಾಗಿ ಒಟ್ಟು 125 ರೂಪಾಯಿಗಳ ಪ್ರೋತ್ಸಾಹಧನ ಸಿಗಲಿದೆ. ಈ ಮೊತ್ತವನ್ನು ಮೂರು ವರ್ಷಗಳ ಅವಧಿಗೆ ಹಂಚಿಕೆ ಮಾಡಲಾಗುತ್ತಿದ್ದು, ಮೊದಲ ವರ್ಷದಲ್ಲಿ 35 ರೂ., ಎರಡನೇ ವರ್ಷದಲ್ಲಿ 40 ರೂ. ಹಾಗೂ ಮೂರನೇ ವರ್ಷದಲ್ಲಿ 50 ರೂ.ಗಳನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡಲಾಗುತ್ತದೆ. ಸಸಿಗಳನ್ನು ಪಡೆದುಕೊಳ್ಳಲು ಇಚ್ಛಿಸುವ ಸಾರ್ವಜನಿಕರು ಅಥವಾ ರೈತರು ತಮ್ಮ ಜಮೀನಿನ ಪಹಣಿ ಪತ್ರ ಹಾಗೂ ಆಧಾರ್ ಕಾರ್ಡ್ ಮಾಹಿತಿ ನೀಡುವುದು ಕಡ್ಡಾಯವಾಗಿದೆ.

ಇನ್ನುಳಿದಂತೆ ಸರ್ಕಾರಿ ಸ್ಥಳಗಳು ಹಾಗೂ ಅರಣ್ಯ ಭಾಗದಲ್ಲಿ ನೆಡುವ ಸಸಿಗಳನ್ನು ಅರಣ್ಯ ಇಲಾಖೆಯ ಗಾರ್ಡ್‌ಗಳು ನಿರ್ವಹಣೆ ಮಾಡಲಿದ್ದಾರೆ.

ಕಾಪು ಹಳೇ ಮಾರಿಗುಡಿ ಪರಿಸರದಲ್ಲಿ ಆಯೋಜನೆ | 70ಕ್ಕೂ ಅಧಿಕ ಮಳಿಗೆ

ಜೂ.12ರಿಂದ 14: 'ಹಲಸು-ಮಾವು ಮೇಳ'

ಶಿರ್ವ: ನಮ್ಮ ಮಣ್ಣಿನ ಬೆಳೆಗಳಾದ ಹಲಸು ಮತ್ತು ಮಾವಿಗೆ ಜಾಗತಿಕ ಮಟ್ಟದ ಬೇಡಿಕೆ ಇದೆ. ಸ್ಥಳೀಯ ರೈತರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವುದು ಮತ್ತು ಯುವಕರಿಗೆ ಕೃಷಿ ಆಧಾರಿತ ಉದ್ಯಮಗಳಲ್ಲಿ ಹೊಸ ದಾರಿ ತೋರಿಸುವುದು, ಸ್ಥಳೀಯ ರೈತರಿಗೆ ಪ್ರೋತ್ಸಾಹ ಯುವಕರಿಗೆ ಉದ್ಯೋಗಾವಕಾಶ ಒದಗಿಸುವ ಸದುದ್ದೇಶದಿಂದ ಕಾಪು ಹಳೇ ಮಾರಿಗುಡಿ ಪರಿಸರದಲ್ಲಿ ಜೂನ್ 12 ರಿಂದ 14ರ ವರೆಗೆ ಸ್ವಾದ ಮತ್ತು ಸಂಭ್ರಮದ ಉತ್ಸವ ಬೃಹತ್ 'ಹಲಸು-ಮಾವು ಮೇಳ' ಏರ್ಪಡಿಸಲಾಗಿದೆ ಎಂದು ಕಾಪು ಕ್ಷೇತ್ರದ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಹೇಳಿದರು.



ಅವರು ಶುಕ್ರವಾರ ಕಾಪು ಮಯೂರ ಹೊಟೇಲ್‌ನ ಸಭಾಂಗಣದಲ್ಲಿ ಶಾಸಕರ ವಿಶೇಷ ಮುತುವರ್ಜಿ ಹಾಗೂ 'ಶಕ್ತಿ ಈವೆಂಟ್ಸ್' ಇದರ ನೇತೃತ್ವದಲ್ಲಿ ಏರ್ಪಡಿದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡುತ್ತಾ, ರೈತರಿಗೆ ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರ ಮಾರುಕಟ್ಟೆ ಒದಗಿ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು ಅವಕಾಶ ಮಾಡಲಾಗಿದೆ ಎಂದು ಶಾಸಕರು ತಿಳಿಸಿದರು.

ಕೃಷಿ, ತಂತ್ರಜ್ಞಾನದ ಮಾಹಿತಿ

ಹಲಸು,ಮಾವಿನಿಂದ ತಯಾರಿಸಬಹುದಾದ ವೈವಿಧ್ಯಮಯ ಖಾದ್ಯಗಳು, ಹಪ್ಪಳ, ಉಪ್ಪಿನಕಾಯಿ, ಜ್ಯೂಸ್ ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ನವಪೀಳಿಗೆಗೆ ಸ್ವ-ದ್ಯೋಗ ಕಂಡುಕೊಳ್ಳಲು ಮಾರ್ಗದರ್ಶನ ನೀಡಲಾಗುತ್ತಿದೆ. ರಾಜ್ಯದ ವಿವಿಧ ಭಾಗಗಳಿಂದ 70ಕ್ಕೂ ಅಧಿಕ ಮಳಿಗೆಗಳು ಬರಲಿವೆ. ಕೃಷಿ ತಜ್ಞರಿಂದ ಆಧುನಿಕ ಕೃಷಿ ಪದ್ಧತಿ,ಮತ್ತು ತಂತ್ರಜ್ಞಾನದ ಮಾಹಿತಿ ನೀಡುವ ವ್ಯವಸ್ಥೆಯೂ ಇದೆ.,ಸಾರ್ವಜನಿಕರು, ಕೃಷಿ ಆಸಕ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಕೃಷಿಕರನ್ನು ಪ್ರೋತ್ಸಾಹಿಸಬೇಕು ಎಂದರು.

ಉತ್ಪನ್ನಗಳಿಗೆ ಮಾರುಕಟ್ಟೆ

ಮೇಳಗಳ ಆಯೋಜನೆಯಿಂದ ಯುವ ಉದ್ಯಮಿಗಳಿಗೆ ಉದ್ಯೋಗ ಲಭಿಸಲಿದೆ. ಅಲ್ಲದೇ ಅವರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿಸಿದಂತೆ ಆಗುತ್ತದೆ. ಹಲಸು ಮೇಳ ಕೇವಲ ವ್ಯಾಪಾರದ ದೃಷ್ಟಿಯಿಂದ ಹಮ್ಮಿಕೊಳ್ಳಲಾಗುತ್ತಿಲ್ಲ.

● **ಗುರ್ಮೆ ಸುರೇಶ್ ಶೆಟ್ಟಿ**, ಕಾಪು ಕ್ಷೇತ್ರದ ಶಾಸಕ

ಪೋಸ್ಟರ್ ಬಿಡುಗಡೆ

ಈ ಸಂದರ್ಭದಲ್ಲಿ ಹಲಸು-ಮಾವು ಮೇಳದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಶಕ್ತಿ ಈವೆಂಟ್ಸ್ ಇದರ ಸಂಚಾಲಕ ಗುರುಪ್ರಸಾದ್ ಪೂರಕ ಮಾಹಿತಿ ನೀಡಿದರು.

ಪರಿಸರ ಸಂಘಟನೆಯ ಕಾರ್ಯವೈಖರಿಗೆ ಮುಂದಿನ ಸಿಎಂರಿಂದ ಶ್ಲಾಘನೆ

ಡಿಕೆಶಿಗೆ ತೋನ್ಸೆ ಜಯಕೃಷ್ಣ ಶೆಟ್ಟಿ ಅಭಿನಂದನೆ

ಉಡುಪಿ: ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಜವಾಬ್ದಾರಿ ವಹಿಸಿಕೊಳ್ಳಲಿರುವ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರಿಗೆ ಅವರ ಆತ್ಮೀಯ ಮಿತ್ರರು, ಖ್ಯಾತ ಉದ್ಯಮಿ ಹಾಗೂ 'ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ'ಯ ಸ್ಥಾಪಕರಾದ ತೋನ್ಸೆ ಜಯಕೃಷ್ಣ ಶೆಟ್ಟಿ ಮತ್ತು ಸಂಘಟನೆಯ ರಾಜ್ಯ ಸಂಚಾಲಕರಾದ ಕೆ.ಪಿ. ಜಗದೀಶ್ ಅಧಿಕಾರಿ ಅವರು ಹೃತ್ಪೂರ್ವಕ ಶುಭಾಶಯಗಳನ್ನು ಕೋರಿದ್ದಾರೆ.



ಮೇ 23ರಂದು ಬೆಂಗಳೂರಿನಲ್ಲಿರುವ ಡಿ.ಕೆ. ಶಿವಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿದ ತೋನ್ಸೆ ಜಯಕೃಷ್ಣ ಎ. ಶೆಟ್ಟಿ ಅವರು, ಭಾವಿ ಮುಖ್ಯಮಂತ್ರಿಗಳಿಗೆ ಶಾಲು ಹೊದಿಸಿ, ಸಿಹಿ ನೀಡಿ ಆತ್ಮೀಯವಾಗಿ ಅಭಿನಂದಿಸಿದರು. ಈ ಸೌಹಾರ್ದಯುತ ಭೇಟಿಯ ಸಂದರ್ಭದಲ್ಲಿ ಇಬ್ಬರು ನಾಯಕರ ನಡುವೆ ರಾಜ್ಯದ ಅಭಿವೃದ್ಧಿ ಹಾಗೂ ಸಾಮಾಜಿಕ ಒಳಿತಿನ ಕುರಿತು ಸುದೀರ್ಘ ಮಾತುಕತೆ ನಡೆಯಿತು. ವಿಶೇಷವಾಗಿ, ಕರಾವಳಿ ಸೇರಿದಂತೆ ರಾಜ್ಯಾದ್ಯಂತ 'ಜಯಶ್ರೀ ಕೃಷ್ಣ ಪರಿಸರ ಪ್ರೇಮಿ ಸಮಿತಿ'ಯು ಹಮ್ಮಿಕೊಂಡಿರುವ ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ ಹಾಗೂ ಸಾಮಾಜಿಕ ಜಾಗೃತಿ ಚಟುವಟಿಕೆಗಳ ಕುರಿತು ಡಿ.ಕೆ. ಶಿವಕುಮಾರ್ ಅವರಿಗೆ ಈ ವೇಳೆ ಸವಿಸ್ತಾರವಾಗಿ ವಿವರಣೆ ನೀಡಲಾಯಿತು. ಅದರೊಂದಿಗೆ, ಸಮಿತಿಯು ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕೈಗೊಳ್ಳಲಿರುವ ವಿನೂತನ ಯೋಜನೆಗಳು ಮತ್ತು ಪರಿಸರ ಪೂರಕ ಕ್ರಮಗಳ ಬಗ್ಗೆಯೂ ಮಹತ್ವದ ಚರ್ಚೆಗಳು ನಡೆದವು.

ಡಿಕೆಶಿ ಮೆಚ್ಚುಗೆ

ಡಿ.ಕೆ. ಶಿವಕುಮಾರ್ ಅವರಿಗೆ ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ' ಕೈಗೊಂಡ ಕಾರ್ಯಗಳ ಬಗ್ಗೆ ವಿವರಿಸಲಾಯಿತು. ಇದಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಮತ್ತಷ್ಟು ಕಾರ್ಯ ಕೈಗೊಳ್ಳುವಂತೆ ಹುರಿದುಂಬಿಸಿದರು.

ಸಂಘಟನೆಯ ಸಮಾಜಮುಖಿ ಕಾರ್ಯಗಳು ಮತ್ತು ದೂರದೃಷ್ಟಿಯ ಯೋಜನೆಗಳನ್ನು ಆಲಿಸಿದ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಮಿತಿಯ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಕೃತಿಯನ್ನು ಉಳಿಸುತ್ತಲೇ ಪ್ರಗತಿ ಸಾಧಿಸುವ ಇಂತಹ ಸಂಘಟನೆಗಳ ಶ್ರಮ ಸಮಾಜಕ್ಕೆ ಅತ್ಯಗತ್ಯ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದ ಅವರು, ಸಮಿತಿಯ ಮುಂದಿನ ಎಲ್ಲಾ ಸತ್ಕಾರ್ಯಗಳಿಗೂ ಹಾಗೂ ಪರಿಸರ ಪೂರಕ ಯೋಜನೆಗಳಿಗೂ ತಮ್ಮ ಸಂಪೂರ್ಣ ಬೆಂಬಲ ಮತ್ತು ಸಹಕಾರ ಇರಲಿದೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರು, ಹಿತೈಷಿಗಳು ಉಪಸ್ಥಿತರಿದ್ದರು.

ಕೊಲ್ಲೂರು-ಬೈಂದೂರು ಹೆದ್ದಾರಿಯ ಸೂಕ್ಷ್ಮ ಸ್ಥಳಕ್ಕೆ ಸಂಸದ ರಾಘವೇಂದ್ರ ಭೇಟಿ



ಬೈಂದೂರು: ಕಳೆದ ಭಾನುವಾರ ಸಂಪರ್ಕ ಕಡಿತಗೊಂಡು ನಂತರ ತ್ವರಿತ ಕ್ರಮದಿಂದ ದುರಸ್ತಿಗೊಂಡು ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗಿದ್ದ ಕೊಲ್ಲೂರು-ಬೈಂದೂರು ರಾಷ್ಟ್ರೀಯ ಹೆದ್ದಾರಿ (766ಸಿ) ಸೂಕ್ಷ್ಮ ಪ್ರದೇಶಗಳಿಗೆ ಸಂಸದ ಬಿ. ವೈ. ರಾಘವೇಂದ್ರ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು.

ಬೈಂದೂರಿನಿಂದ ಕೊಲ್ಲೂರುವರೆಗೆ ಹೆದ್ದಾರಿ ಕಾಮಗಾರಿ ನಡೆಯುತ್ತಿರುವ ಸೂಕ್ಷ್ಮ ಜಾಗಗಳನ್ನು ವೀಕ್ಷಿಸಿ, ಮುಂಬರುವ ದಿನಗಳಲ್ಲಿ ವಾಹನ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗದಂತೆ ಶಾಶ್ವತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ರಾಷ್ಟ್ರೀಯ ಹೆದ್ದಾರಿ ಇಂಜಿನಿಯರ್‌ಗಳು ಹಾಗೂ ಅಧಿಕಾರಿಗಳಿಗೆ ಸ್ಥಳದಲ್ಲೇ ಕಟ್ಟುನಿಟ್ಟಿನ ಸೂಚನೆ ನೀಡಿದರು. ಶಾಸಕ ಗುರುರಾಜ ಗಂಟಿಹೊಳೆ, ಮಂಡಲ ಅಧ್ಯಕ್ಷೆ ಅನಿತಾ ಆರ್. ಕೆ., ಇಲಾಖಾ ಅಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಇದ್ದರು.

ಜೂ.5: ವಿಶ್ವ ಪರಿಸರ ದಿನಾಚರಣೆ, ಜಾಥಾ

ಉಡುಪಿ: ಉಡುಪಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ವತಿಯಿಂದ ವಿಶ್ವ ಪರಿಸರ ದಿನಾಚರಣೆಯಂಗವಾಗಿ ಜೂ.5ಕ್ಕೆ ಮಣಿಪಾಲದ ಜ್ಞಾನಸುಧಾ ಪಿಯು ಕಾಲೇಜು ಮೈದಾನದಿಂದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದವರೆಗೆ ಪರಿಸರ ಜಾಥಾ ನಡೆಯಲಿದೆ. ಅಂದು ಬೆಳಗ್ಗೆ 8.30ಕ್ಕೆ ಚಾಲನೆ ನೀಡಲಾಗುವುದು. ನಂತರ ಸಭಾಂಗಣದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಕ.ರಾ.ಮಾ.ನಿ.ಮಂಡಳಿಯ ಪರಿಸರ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಪೋಷಕರಿಗೆ ವಿದ್ಯಾರ್ಥಿಗಳ ಸಾಧನೆಯೇ ಉಡುಗೊರೆ: ಸುಧಾಕರ



ಕಾರ್ಕಳ: ಮಣಿಪಾಲ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಈ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ಗುರುವಾರ ನಡೆಯಿತು.


ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಉದ್ದೇಶಿಸಿ ಮಾತನಾಡಿದ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಸುಧಾಕರ ಶೆಟ್ಟಿ ಅವರು ವಿದ್ಯಾರ್ಥಿಗಳ ಶೈಕ್ಷಣಿಕ ಕಲಿಕೆಯಲ್ಲಿ ಪೋಷಕರು, ಶಿಕ್ಷಕರು ಹಾಗೂ ಉತ್ತಮ ಸ್ನೇಹಿತರ ಪಾತ್ರ ಮಹತ್ವವಾದುದು, ಜ್ಞಾನಸುಧಾ ಕೊಡಮಾಡುವ ಮೌಲ್ಯಯುತ ಶಿಕ್ಷಣದ ಸದ್ಬಳಕೆ ಮಾಡಿ ವಿದ್ಯಾರ್ಥಿಗಳು ಪೋಷಕರಿಗೆ ಶೈಕ್ಷಣಿಕ ಸಾಧನೆಯ ಉಡುಗೊರೆ ಕೊಡಿ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಡೀನ್ ಅಕಾಡೆಮಿಕ್ ಡಾ. ಮಿಥುನ್ ಯು. ಮಾತನಾಡಿ, ಎರಡು ವರ್ಷಗಳ ಶೈಕ್ಷಣಿಕ ಚಟುವಟಿಕೆಗಳು ಸಾಗುವ ಬಗೆಯನ್ನು ವಿವರಿಸಿದರು. ಜ್ಞಾನ ಸುಧಾ ಎಂಟ್ರೆನ್ಸ್ ಅಕಾಡೆಮಿಯ ಕೋ ಆರ್ಡಿನೇಟರ್ ಆಗಿರುವ ಸಂದೀಪ್ ಮಾತನಾಡಿ, ವಿವಿಧ ಪ್ರವೇಶ ಪರೀಕ್ಷೆಗಳ ತರಬೇತಿಯ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಮಣಿಪಾಲ ಜ್ಞಾನಸುಧಾ ಕಾಲೇಜಿಗೆ ದಾಖಲಾತಿ ಹೊಂದಿದ ಅರ್ಹ 73 ವಿದ್ಯಾರ್ಥಿಗಳಿಗೆ 29.88 ಲಕ್ಷ ವಿದ್ಯಾರ್ಥಿ ವೇತನ ನೀಡಲಾಯಿತು. ಮಣಿಪಾಲ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಗಣೇಶ್ ಶೆಟ್ಟಿಯವರು ವಿದ್ಯಾರ್ಥಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು. ಉಪಪ್ರಾಂಶುಪಾಲರಾದ ರವಿ ಜಿ., ಹೇಮಂತ್ ಇದ್ದರು. ಆಂಗ್ಲ ಭಾಷಾ ಉಪನ್ಯಾಸಕಿ ಶಮಿತಾ ನಿರೂಪಿಸಿದರು.



1 ಕೋ.ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಬೈಂದೂರು ಕ್ಷೇತ್ರದ ಕೊಂಡ್ಲೆ ಸಂಪರ್ಕ ಸೇತುವೆ ಕಾಮಗಾರಿಗೆ ಶುಕ್ರವಾರ ಸಂಸದ ಬಿ. ವೈ. ರಾಘವೇಂದ್ರ ಅವರು ಶಾಸಕ ಗುರುರಾಜ್ ಗಂಟಿಹೊಳೆ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿಸಿದರು. ಈ ನೂತನ ಸೇತುವೆ ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಸುಗಮ ಸಂಚಾರ ಕಲ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಗ್ರಾಮಸ್ಥರು, ಪಕ್ಷದ ಪದಾಧಿಕಾರಿಗಳು ಇದ್ದರು.



70 ಲ.ರೂ. ಅನುದಾನದಡಿ ಕಾರ್ಕಳ ತಾಲೂಕಿನ ಕುಕ್ಕುಂದೂರು ಗ್ರಾಮದ ಆನಂದಿ ಮೈದಾನ ನಕ್ರೆ ಪೊಸನೆಟ್ಟು ಸಂಪರ್ಕ ರಸ್ತೆ ದುರಸ್ತಿ ಕಾಮಗಾರಿಗೆ ಶಾಸಕ ವಿ. ಸುನೀಲ್ ಕುಮಾರ್ ಬುಧವಾರ ಚಾಲನೆ ನೀಡಿದರು. ಇದೇ ವೇಳೆ 55 ಲ.ರೂ. ವೆಚ್ಚದ ಜ್ಯೋತಿ ನಗರ ಕೊಂಡೇನಾಕ್ಯಾರು ಗುಳಿಗ ಸ್ಥಾನ ರಸ್ತೆ ಕಾಮಗಾರಿಗೂ ಚಾಲನೆ ನೀಡಲಾಯಿತು. ತಾ.ಪಂ. ಮಾಜಿ ಉಪಾಧ್ಯಕ್ಷ ರವೀಂದ್ರ ಕುಮಾರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಆಂಟೋನಿ ಡಿಸೋಜಾ, ಗ್ರಾ.ಪಂ. ಮಾಜಿ ಅಧ್ಯಕ್ಷ ಶಶಿಮಣಿ ಸಂಪತ್, ಪ್ರಶಾಂತ್ ಶೆಟ್ಟಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಶೆಟ್ಟಿ ಯೋಗೀಶ್ ಸಾಲ್ಯಾನ್, ಶೇಖರ್ ಸುವರ್ಣ, ಪ್ರಸಾದ್, ಪ್ರಾಣೇಶ್ ಶೆಟ್ಟಿ ಹರೀಶ್ ಕುಂದರ್, ಜಯಕರ ಮಡಿವಾಳ ಮಧುಕರ ಸುವರ್ಣ ಮೊದಲಾದವರಿದ್ದರು.

ಪ್ರತಿಭಟನಾ ಸ್ಥಳಕ್ಕೆ ಕಾರ್ಕಳ ಪೊಲೀಸರ ಭೇಟಿ ನೀಡಿ ಬೆಂಬಲ | ಜಾಲತಾಣದಲ್ಲಿ ದೃಶ್ಯ ವೈರಲ್ ಆಗುತ್ತಿದ್ದಂತೆ ಹೊಂಡ ಮುಚ್ಚಿದ ಖಾಸಗಿ ಸಂಸ್ಥೆ

ರಸ್ತೆಯ ಹೊಂಡ ಮುಚ್ಚಿಸಲು ಆಗ್ರಹಿಸಿ ಬಿಸಿಲು ಲೆಕ್ಕಿಸದೇ ಧರಣಿ ಕುಳಿತ ಮಾಜಿ ಪುರಸಭೆ ಸದಸ್ಯ

ಕಾರ್ಕಳ: ಪುರಸಭೆಯ ವ್ಯಾಪ್ತಿಯ ಐತಿಹಾಸಿಕ ಅನಂತಶಯನ ದೇವಸ್ಥಾನದ ವೃತ್ತದ ಬಳಿ 15 ದಿನದ ಹಿಂದೆ ಬೃಹತ್ ಹೊಂಡ ಸೃಷ್ಟಿಯಾಗಿದ್ದು, ಈ ಬಗ್ಗೆ ಪುರಸಭೆಯ ಆಡಳಿತ ವರ್ಗಕ್ಕೆ ತಿಳಿಸಿದ್ದರೂ ಯಾವುದೇ ಪ್ರತಿಕ್ರಿಯೆ ನೀಡದೆ ಮೌನಕ್ಕೆ ಶರಣಾಗಿತ್ತು. ಇದರ ವಿರುದ್ಧ ಮಾಜಿ ಸದಸ್ಯ ಪ್ರಕಾಶ್ ರಾವ್ ಎಂಬವರು ಬಿಸಿಲು ಲೆಕ್ಕಿಸದೇ ದಿನವಿಡೀ ಧರಣಿ ಕುಳಿತು ಆಡಳಿತಕ್ಕೆ ಬಿಸಿ ಮುಟ್ಟಿಸಿದ್ದಾರೆ.

ಶಾಲಾ ಕಾಲೇಜುಗಳು ಆರಂಭವಾಗಿದ್ದು ಈ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಮಕ್ಕಳಿಗೂ ಈ ಬಾವಿಯಿಂದ ತೊಂದರೆ ಅನುಭವಿಸುವಂತಾಗಿದೆ. ಅದಲ್ಲದೇ ಮಕ್ಕಳು ಕೈಕಾಲುಮೂಳೆ ಮುರಿದುಕೊಂಡು ಬೀಳುವಂತ ಪರಿಸ್ಥಿತಿ ಎದುರಾಗಿದ್ದರೂ ಪುರಸಭೆ ಯಾವುದೇ ಗಮನ ಹರಿಸಿಲ್ಲ.



ಮಾಜಿ ಸದಸ್ಯನ ಧರಣಿ ಸತ್ಯಾಗ್ರಹ

ಕಾರ್ಕಳದ ಇತಿಹಾಸ ಪ್ರಸಿದ್ಧ ಅನಂತ ಪದ್ಮನಾಭ ದೇವಸ್ಥಾನದ ರಸ್ತೆಯಲ್ಲಿ ಸಾರ್ವಜನಿಕರ ಜೀವಕ್ಕೆ ಕುತ್ತು ತರುತ್ತಿದ್ದ ಬೃಹತ್ ಹೊಂಡದ ವಿರುದ್ಧ ಶುಕ್ರವಾರ ಬೆಳಿಗ್ಗೆ 10:30ರಿಂದ ಮಧ್ಯಾಹ್ನ 3:00 ಗಂಟೆಯವರೆಗೆ ಕಾರ್ಕಳ ಪುರಸಭಾ ಮಾಜಿ ಸದಸ್ಯ ಪ್ರಕಾಶ್ ರಾವ್ ಅವರು ಹೊಂಡದ ಪಕ್ಕದಲ್ಲೇ ಕುಳಿತು ಒಂಟಿಯಾಗಿ ಧರಣಿ ಸತ್ಯಾಗ್ರಹ ನಡೆಸಿದರು.

ಬಾವಿಯಂತೆ ಇತ್ತು ಈ ಅಪಾಯಕಾರಿ ಹೊಂಡ!

ಅನಂತಶಯನ ರಸ್ತೆಯ ವೃತ್ತದ ಬದಿಯಲ್ಲಿದ್ದ ಈ ಬೃಹತ್ ಹೊಂಡವು ಸಾರ್ವಜನಿಕ ಹಾಗೂ ಶಾಲಾ ಮಕ್ಕಳ ಸಂಚಾರಕ್ಕೆ ತೀವ್ರ ಅಪಾಯಕಾರಿಯಾಗಿತ್ತು. ಇದು ಕೇವಲ ರಸ್ತೆ ಹೊಂಡವಾಗಿರದೆ, ಖಾಸಗಿ ಟೆಲಿಕಾಂ ಸಂಸ್ಥೆಯ ನೆಟ್‌ವರ್ಕ್ ಚೇಂಬರ್ ಆಗಿದ್ದು ಅದರ ಮೇಲ್ಭಾಗದ ಮುಚ್ಚಳ ತೆರೆದುಕೊಂಡು ಬಾವಿಯಂತಾಗಿತ್ತು. ಮಳೆಗಾಲ ಆರಂಭವಾಗಿರುವುದರಿಂದ ಯಾವುದೇ ಕ್ಷಣದಲ್ಲೂ ಇಲ್ಲಿ ದೊಡ್ಡ ದುರಂತ ಸಂಭವಿಸುವ ಸಾಧ್ಯತೆಯಿತ್ತು.

ಹಲವರ ಬೆಂಬಲ

ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಜನಸಾಮಾನ್ಯರ ಜೀವ ರಕ್ಷಣೆಗಾಗಿ ನನ್ನ ಈ ಹೋರಾಟಕ್ಕೆ ಧ್ವನಿಯಾದ ಕಾರ್ಕಳದ ಸಮಸ್ತ ಸಾರ್ವಜನಿಕ ಬಂಧುಗಳಿಗೆ, ಮಾಧ್ಯಮ ಮಿತ್ರರಿಗೆ ಹಾಗೂ ಪೊಲೀಸ್ ಇಲಾಖೆಗೆ ಮತ್ತೊಮ್ಮೆ ತಲೆಬಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಾರ್ವಜನಿಕರ ಸುರಕ್ಷತೆಗಾಗಿ ನಮ್ಮ ಹೋರಾಟ ಸದಾ ಮುಂದುವರಿಯುತ್ತದೆ.

● **ಪ್ರಕಾಶ್ ರಾವ್**, ಮಾಜಿ ಪುರಸಭಾ ಸದಸ್ಯ ಕಾರ್ಕಳ

ಪುರಸಭೆಯ ಬೇಜವಾಬ್ದಾರಿತನ

ಅತ್ಯಂತ ಖೇದಕರ ಸಂಗತಿಯೆಂದರೆ, ಇಷ್ಟು ಗಂಭೀರವಾದ ಸಮಸ್ಯೆಯಿದ್ದರೂ ನಾನು ಧರಣಿ ಕುಳಿತಿದ್ದರೂ ಕಾರ್ಕಳ ಪುರಸಭೆಯ ಯಾವುದೇ ಒಬ್ಬ ಅಧಿಕಾರಿಯಾಗಲಿ ಅಥವಾ ಇಂಜಿನಿಯರ್ ಆಗಲಿ ಸ್ಥಳಕ್ಕೆ ಭೇಟಿ ನೀಡುವ ಸೌಜನ್ಯ ತೋರಿಸಲಿಲ್ಲ, ಅಷ್ಟು ಮಾತ್ರವಲ್ಲದೆ, ಪುರಸಭೆಯ ಅಧಿಕಾರಿಗಳು ಈ ಸಮಸ್ಯೆಯ ಕುರಿತು ಸಂಬಂಧಪಟ್ಟ ಖಾಸಗಿ ಟೆಲಿಕಾಂ ಇಲಾಖೆಗೆ ಮಾಹಿತಿಯನ್ನೂ ನೀಡಿರಲಿಲ್ಲ, ಅಧಿಕಾರಿಗಳ ಇಂತಹ ಸಂಪೂರ್ಣ ನಿರ್ಲಕ್ಷ್ಯ ಧೋರಣೆ ಅತ್ಯಂತ ಖಂಡನೀಯ ಎಂದು ಪ್ರಕಾಶ್ ರಾವ್ ಖೇದ ವ್ಯಕ್ತಪಡಿಸಿದರು.

ಸಾಮಾಜಿಕ ಜಾಲತಾಣದ ಶಕ್ತಿ

ಹೋರಾಟದ ದೃಶ್ಯಗಳು ಮತ್ತು ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ನಂತರವಷ್ಟೇ ಎಚ್ಚೆತ್ತ ಖಾಸಗಿ ಟೆಲಿಕಾಂ ಸಂಸ್ಥೆಯ ಅಧಿಕಾರಿಗಳು, ತಕ್ಷಣವೇ ಸ್ಥಳಕ್ಕೆ ಬಂದು ತೆರೆದಿದ್ದ ಚೇಂಬರ್ ಮುಚ್ಚುವ ಮೂಲಕ ಸಮಸ್ಯೆ ಬಗೆಹರಿಸಿದ್ದಾರೆ. ಧರಣಿ ಸ್ಥಳಕ್ಕೆ ಭೇಟಿ ನೀಡಿದ ಕಾರ್ಕಳದ ಪೊಲೀಸ್ ಅಧಿಕಾರಿಗಳು ನೈತಿಕ ಬೆಂಬಲ ನೀಡಿದರು. ಅಷ್ಟೇ ಅಲ್ಲದೆ, ಅವರು ಪುರಸಭೆಯ ಮುಖ್ಯಾಧಿಕಾರಿ ಮತ್ತು ಇಂಜಿನಿಯರ್‌ಗೆ ಕರೆ ಮಾಡಿ ಸಂಪರ್ಕಿಸಲು ಪ್ರಯತ್ನಿಸಿದರೂ, ಪುರಸಭೆಯ ಅಧಿಕಾರಿಗಳು ಪೊಲೀಸರ ಕರೆಯನ್ನು ಸ್ವೀಕರಿಸದೆ ಬೇಜವಾಬ್ದಾರಿತನ ಮೆರೆದಿದ್ದಾರೆ.